## ಸೋಮವಾರ, ೨೧ನೇ ಜುಲೈ, ೧೯೪೭

ಸನ್ಮಾನ್ಯ ಅಧ್ಯಕ್ಷರ (ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್) ಅಧ್ಯಕ್ಷತೆಯಲ್ಲಿ ಹತ್ತು ಗಂಟೆಗೆ ನವದೆಹಲಿಯ ಸಂವಿಧಾನ ಭವನದಲ್ಲಿ ಭಾರತ ಸಂವಿಧಾನ ರಚನಾ ಸಭೆಯು ಸಮಾವೇಶಗೊಂಡಿತು.

### ಪರಿಚಯ ಪತ್ರಗಳನ್ನು ಹಾಜರುಪಡಿಸುವುದು ಮತ್ತು ರಿಜಿಸ್ಟರಿನಲ್ಲಿ ಸಹಿ ಹಾಕುವುದು

**ಸನ್ಮಾನ್ಯ ಅಧ್ಯಕ್ಷರು** : ಈ ದಿನ ಹಾಜರಾಗಿರುವ ಮೂವರು ಸದಸ್ಯರು ರಿಜಿಸ್ಟರಿನಲ್ಲಿ ಸಹಿ ಹಾಕದಿರುವುದು ನನ್ನ ಗಮನಕ್ಕೆ ಬಂದಿದೆ. ದಯಮಾಡಿ ಅವರುಗಳು ಸಹಿ ಮಾಡಬೇಕು.

ಈ ಮುಂದಿನ ಸದಸ್ಯರು ಅವರ ಪರಿಚಯ ಪತ್ರಗಳನ್ನು ಹಾಜರುಪಡಿಸಿ, ರಿಜಿಸ್ಟರಿನಲ್ಲಿ ಸಹಿ ಮಾಡಿದರು:

೧. ಡಾ. ಎಚ್.ಸಿ. ಮುಖರ್ಜಿ (ಪಶ್ಚಿಮ ಬಂಗಾಳ : ಸಾಮಾನ್ಯ)

೨. ಶ್ರೀ ಎಫ್.ಆರ್. ಅಂಥನಿ (ಸಿ.ಪಿ. ಮತ್ತು ಬಿಹಾರ್ : ಸಾಮಾನ್ಯ)

೩. ಕುಮಾರರಾಜ ಸರ್ ಎಮ್.ಎ. ಮುತ್ತಯ್ಯ ಚೆಟ್ಟಿಯಾರ್ (ಮದ್ರಾಸ್ : ಸಾಮಾನ್ಯ)

### ಬರ್ಮಾದಲ್ಲಿ ಜನರಲ್ ಆಂಗ್ ಸನ್ ಮತ್ತು ಅವರ ಸಂಗಡಿಗರ ಹತ್ಯೆ ಕುರಿತು ಸಂತಾಪ ಸೂಚನೆ

**ಸನ್ಮಾನ್ಯ ಅಧ್ಯಕ್ಷರು** : ಜನರಲ್ ಆಂಗ್ ಸನ್ ಮತ್ತು ಅವರ ಸಂಗಡಿಗರು, ಮೊನ್ನೆ ನಡೆದ ಹೇಯ ಹಿಂಸಾಚಾರದಲ್ಲಿ ತಮ್ಮ ಜೀವಗಳನ್ನು ಕಳೆದುಕೊಂಡಿರುವ ದುರಂತದ ದುಃಖಕರ ವಾರ್ತೆಯನ್ನು ಕೇಳಿದ ಮಾನ್ಯ ಸದಸ್ಯರು, ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಬರ್ಮಾ ದೇಶವು ಭಾರತ ದೇಶದಿಂದ ಪ್ರತ್ಯೇಕಗೊಂಡ ನಂತರವೂ, ನಮ್ಮ ಸಂಬಂಧವು ಬರ್ಮಾದೊಂದಿಗೆ ಅತ್ಯಂತ ಸ್ನೇಹಮಯವಾಗಿಯೇ ಇದ್ದುದರಿಂದ ಈ ಸುದ್ದಿಯು, ಭಾರತೀಯರಿಗೆ ವಿಶೇಷವಾಗಿ ಆಘಾತಕಾರಿಯಾಗಿದೆ. ಜನರಲ್ ಆಂಗ್ ಸನ್ ಅವರು ಬರ್ಮಾವನ್ನು ಸ್ವಾತಂತ್ರ್ಯದ ಹೊಸ್ತಿಲಿಗೆ ತಂದ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು ಮತ್ತು ಅವರು ಹಾಗೂ ಅವರ ಸಂಗಡಿಗರು ತಮ್ಮದೇ ದೇಶದ ಜನರಿಂದ ತಮ್ಮ ಪ್ರಾಣವನ್ನು ಕಳೆದುಕೊಂಡಿರುವುದನ್ನು ತಿಳಿಸಲು ಪದಗಳೆ ಇಲ್ಲ.

ಹಿಂಸೆಯ ಭೀಕರತೆಯನ್ನು ಹಾಗೂ ಈ ರೀತಿಯ ಹಿಂಸೆಯಿಂದ, ವಿಶ್ವದ ಯಾವುದೇ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ ಎಂಬುದನ್ನು ವಿಶ್ವವು ಯಾವಾಗ ಮನಗಾಣುವುದೋ ಎಂಬುದು ನನಗೆ ಗೊತ್ತಿಲ್ಲ. ಈ ಭೀಕರ ಹಿಂಸಾಚಾರವು, ಆಳವಾಗಿ ಬೇರೂರಿದ ಯಾವುದೋ ಸಂಚಿನ ಸೂಚನೆಯಾಗಿದ್ದರೆ, ಬರ್ಮಾ ದೇಶವು ಅತ್ಯಂತ ಕಷ್ಟಕರ ಸಮಯವನ್ನು ಎದುರಿಸುವುದು ಎಂದು ನನಗೆ ಆತಂಕವಾಗುತ್ತಿದೆ. ಆದರೆ, ಜನರ ಅತ್ಯಧಿಕ ಬೆಂಬಲದೊಂದಿಗೆ ಅಧಿಕಾರಕ್ಕೆ ತಂದಿರುವ ಅಲ್ಲಿನ ಸರ್ಕಾರವು, ಪರಿಸ್ಥಿತಿಯನ್ನು ನಿಯಂತ್ರಿಸಲು ಶಕ್ತವಾಗುವುದೆಂದು ಮತ್ತು ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವಗಳನ್ನು ಕಳೆದುಕೊಂಡ ಬರ್ಮಾ ಜನರು, ಹಾಗೆ ಗಳಿಸಿರುವ ಸ್ವಾತಂತ್ರ್ಯದ ಫಲವನ್ನು ಅನುಭವಿಸಲು ಶಕ್ತರಾಗುವರೆಂದು ನಾವು ಆಶಿಸುತ್ತೇವೆ.

ಬರ್ಮಾದ ಜನತೆಗೆ, ಅಲ್ಲಿನ ಸರ್ಕಾರದ ಸದಸ್ಯರಿಗೆ ಅಷ್ಟೇ ಅಲ್ಲದೆ ಮೃತರ ಕುಟುಂಬಗಳ ಸದಸ್ಯರಿಗೆ ಸಹ ನಮ್ಮ ಸಂತಾಪವನ್ನು ವ್ಯಕ್ತಪಡಿಸಲು ಸದನವು ಅನುಮತಿ ನೀಡುತ್ತದೆಂದು ನಾನು ನಂಬುತ್ತೇನೆ. ಮತ್ತು ಮಾನ್ಯ ಸದಸ್ಯರು ಅವರ ಆಸನಗಳಲ್ಲಿ ಎದ್ದುನಿಂತು ಶ್ರದ್ಧಾಂಜಲಿಯನ್ನು ವ್ಯಕ್ತಪಡಿಸಬೇಕೆಂದು ನಾನು ಆಶಿಸುತ್ತೇನೆ.

ಇದಕ್ಕೆ ಸಭೆಯು ಒಪ್ಪಿಕೊಂಡಿತು ಹಾಗೂ ಸದಸ್ಯರು ಅವರವರ ಸ್ಥಳಗಳಲ್ಲಿ ಎದ್ದು ನಿಂತರು.

**ಶ್ರೀ ಗೋಕುಲ್‌ಭಾಯ್ ಡಿ. ಭಟ್** (ಪೂರ್ವ ರಾಜ್‌ಪುತಾನ ರಾಜ್ಯಗಳು) : *[ಸನ್ಮಾನ್ಯ ಅಧ್ಯಕ್ಷರ ಅನುಮತಿಯೊಂದಿಗೆ, ನಾನು ಒಂದೆರಡು ಪ್ರಶ್ನೆಗಳನ್ನು ಕೇಳಬಯಸುತ್ತೇನೆ. ಇನ್ನೂ ಎಷ್ಟು ದಿನಗಳ ಕಾಲ ಸಭೆಯ ಈ ಅಧಿವೇಶನವು ಮುಂದುವರಿಯುತ್ತದೆ? ನಾವು ಪುನಃ ಆಗಸ್ಟ್‌ನಲ್ಲಿ ಸಭೆ ಸೇರಲಿದ್ದೇವೆಯೇ? ನನ್ನ ಕಾರ್ಯಕ್ರಮಕ್ಕೆ ಅನುಕೂಲ ಮಾಡಿಕೊಳ್ಳುವ ಸಲುವಾಗಿ ನಾನು ಇದನ್ನು ತಿಳಿದುಕೊಳ್ಳಬಯಸುತ್ತೇನೆ.]*

**ಸನ್ಮಾನ್ಯ ಅಧ್ಯಕ್ಷರು:** *[ಮತ್ತೊಂದು ಸಮಿತಿಯ ಇನ್ನೊಂದು ವರದಿಯು ನಮ್ಮ ಮುಂದಿರುವುದರಿಂದ, ಈ ತಿಂಗಳ ಒಳಗಾಗಿ ಸಭೆಯು ತನ್ನ ಅಧಿವೇಶನವನ್ನು ಮುಕ್ತಾಯಗೊಳಿಸುವುದೆಂಬ ಭರವಸೆ ಹೊಂದಿದ್ದೇನೆ. ಸಭೆಯು ಆ ವರದಿಯ ಮೇಲಿನ ಚರ್ಚೆಯನ್ನು ಕೊನೆಗೊಳಿಸಿದ ನಂತರ, ಸಮಿತಿಯ ವರದಿಯನ್ನು ನಾವು ಪೂರ್ಣಗೊಳಿಸಿದರೆ, ನಮ್ಮ ಮುಂದಿರುವ ಅತ್ಯಂತ ದೊಡ್ಡ ಗುರಿಯಾಗಿರುವ ಹಾಗೂ ನಮ್ಮ ಕಾಲದ ಅತ್ಯಂತ ಪ್ರಮುಖ ಭಾಗದ ಅಗತ್ಯವನ್ನು ಪೂರ್ಣಗೊಳಿಸಿದಂತಾಗುತ್ತದೆ. ಇದಲ್ಲದೆ, ಒಂದು ಅಥವಾ ಎರಡು ಗೊತ್ತುವಳಿಗಳನ್ನು ಸಹ ನಾವು ನಿರೀಕ್ಷಿಸಿದ್ದೇವೆ. ಅವು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲವೆಂದು ನಾನು ಭಾವಿಸುತ್ತೇನೆ. ಆದ್ದರಿಂದ, ಈ ಉಪವೇಶನದ ವ್ಯವಹಾರವು ಈ ತಿಂಗಳ ಕೊನೆಯಲ್ಲಿ ಪೂರ್ಣಗೊಳ್ಳುವುದೆಂಬುದು ನನ್ನ ಅನಿಸಿಕೆ. 'ಸದಸ್ಯರು ಆಗಸ್ಟ್ ೧೪ರಂದು ಪುನಃ ಬರಬೇಕಾಗಬಹುದಾದ' ಸಾಧ್ಯತೆ ಇದೆ.]*

## ಮುಂದುವರಿದ
## ಮಾದರಿ ಪ್ರಾಂತೀಯ ಸಂವಿಧಾನದ ತತ್ತ್ವಗಳಿಗೆ ಸಂಬಂಧಿಸಿದ ವರದಿ

### ಖಂಡ ೨೨

**ಸನ್ಮಾನ್ಯ ಅಧ್ಯಕ್ಷರು** : ನಾವು ಆ ದಿನ ಚರ್ಚಿಸಿದ ಖಂಡದ ಬಗೆಗಿನ ಚರ್ಚೆಯನ್ನು ನಾವು ಈಗ ಕೈಗೆತ್ತಿಕೊಳ್ಳಬೇಕಿದೆ. ತಿದ್ದುಪಡಿಗಳನ್ನು ಮಂಡಿಸಲಾಗಿದೆ ಮತ್ತು ಪ್ರಸ್ತಾವ ಹಾಗೂ ತಿದ್ದುಪಡಿಗಳು ಚರ್ಚೆಗೆ ಮುಕ್ತವಾಗಿವೆ.

ನೋಟೀಸನ್ನು ನೀಡಲಾಗಿರುವ, ಪ್ರಸ್ತಾವಿಸದ ಯಾವುದೇ ಇತರ ತಿದ್ದುಪಡಿ ಇದೆಯೇ ಎಂಬುದನ್ನು ನಾನು ತಿಳಿದುಕೊಳ್ಳಬಯಸುತ್ತೇನೆ. ಎಲ್ಲಾ ತಿದ್ದುಪಡಿಗಳನ್ನು ಪ್ರಸ್ತಾವಿಸಲಾಗಿದೆ ಎಂದು ನಾನು ಭಾವಿಸಿದ್ದೇನೆ.

ಮಾನ್ಯ ಅನೆ ಅವರೆ, ನೀವು ಈ ಬಗ್ಗೆ ಮಾತನಾಡ ಬಯಸುತ್ತೀರಾ?

**ಮಾನ್ಯ ಎಮ್.ಎಸ್. ಅನೆ** (ದಕ್ಷಿಣ ರಾಜ್ಯಗಳು) : ಸನ್ಮಾನ್ಯ ಅಧ್ಯಕ್ಷರೆ, ೨೨ನೇ ಖಂಡಕ್ಕೆ ಶ್ರೀ ಸಂತಾನಮ್ ಅವರು ಪ್ರಸ್ತಾವಿಸಿದ ಎರಡನೇ ತಿದ್ದುಪಡಿಗೆ ಸಂಬಂಧಿಸಿದಂತೆ, ಒಂದು ಅಭಿಪ್ರಾಯವನ್ನು ಮಾತ್ರ ನಾನು ಹೇಳಬಯಸುತ್ತೇನೆ, ಅದೇನೆಂದರೆ, ಅದು ಒಂದು ಅನಾವಶ್ಯಕ ತಿದ್ದುಪಡಿಯಾಗಿದೆ ಎಂಬುದು ನನ್ನ ಅಭಿಪ್ರಾಯ. ರಚಿಸಬಹುದಾದ ಯಾವುವೇ ನಿಯಮಗಳು ಈಗಾಗಲೇ ಸಾಬೀತಾದ, ಎಂದರೆ, ವಯಸ್ಕ ಮತದಾನದಂಥ ಪ್ರಾಥಮಿಕ ತತ್ತ್ವವನ್ನು ಉಲ್ಲಂಘಿಸುವುದಿಲ್ಲ ಎಂಬುದನ್ನು ಅವರು ಖಚಿತಪಡಿಸಿಕೊಳ್ಳ ಬಯಸುತ್ತಾರೆ. ಆದರೆ, ನಿಯಮ ರಚನಾಧಿಕಾರದ ಮೇರೆಗೆ, ನಿಯಮಗಳನ್ನು ರಚಿಸುವವರು ಶಾಸನದಲ್ಲಿ ಈಗಾಗಲೇ ಸೇರಿಸಲಾಗಿರುವ ತತ್ತ್ವಗಳಿಗೆ ಅಸಂಗತವಾಗಿರುವ ನಿಯಮಗಳನ್ನು ಪ್ರಸ್ತಾವಿಸಲಾಗದು ಎಂಬುದನ್ನು

ಗಮನಿಸಬೇಕೆಂಬುದು ಎಲ್ಲರಿಗೂ ತಿಳಿದ ತತ್ತ್ವವೆಂದು ನಾನು ನಂಬುತ್ತೇನೆ. ಈ ದೃಷ್ಟಿಯಿಂದ ಮತ್ತು ಶಾಸನದಲ್ಲಿನ ಸ್ಪಷ್ಟಉಪಬಂಧದ ಮೂಲಕ ವಯಸ್ಕ ಮತದಾನಕ್ಕೆ ಈಗಾಗಲೇ ಉಪಬಂಧ ಕಲ್ಪಿಸಲಾಗಿದೆ ಎಂಬ ವಾಸ್ತವಿಕ ದೃಷ್ಟಿಕೋನದಿಂದ ಅದನ್ನು ಅವರು ಪ್ರಸ್ತಾಪಿಸಿರುವುದು ಅನವಶ್ಯಕವೆಂದು ನನಗೆ ಕಂಡುಬರುತ್ತದೆ.

**ಶ್ರೀ ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ) : ಮಾನ್ಯರೇ, ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಎತ್ತಿದ ಆಕ್ಷೇಪಣೆಗೆ ಸಂಬಂಧಿಸಿದಂತೆ, ನಾನು ತಿದ್ದುಪಡಿಯ ನೋಟೀಸನ್ನು ನೀಡಿದ್ದು, ಅದನ್ನೂ ಸಹ ಇದರೊಂದಿಗೆ ತೆಗೆದುಕೊಳ್ಳಬಹುದಾಗಿದೆ. ಇದು ಹೊಸ ಪೂರಕ ಪಟ್ಟಿಯಲ್ಲಿದೆ. ಮೊದಲ ಚುನಾವಣೆಯನ್ನು 'ನಡೆಸಲು' ಯಾವುದೇ ಉಪಬಂಧವನ್ನು ರಚಿಸಿರುವುದಿಲ್ಲವೆಂದು ನಾನು ಹೇಳಬಯಸುತ್ತೇನೆ, ಏನನ್ನಾದರೂ ಮಾಡದ ಹೊರತು, ಆ ಖಂಡವನ್ನು ಅನ್ವಯಿಸುವುದು ಕಷ್ಟಸಾಧ್ಯ ಮತ್ತು ಅದರಿಂದ ನಾನು ತಿದ್ದುಪಡಿಯನ್ನು ಈ ಮುಂದಿನಂತೆ ಮಂಡಿಸಿದ್ದೇನೆ:

"ಈ ಮುಂದಿನದನ್ನು ೨೨ನೇ ಖಂಡದ ಪ್ರಾರಂಭದಲ್ಲಿ ಸೇರಿಸಲಾಗಿದೆ:

'ಈ ಸಂವಿಧಾನದ ಅಡಿಯಲ್ಲಿ ಪ್ರಾಂತೀಯ ವಿಧಾನಮಂಡಲಕ್ಕೆ ಮೊದಲ ಚುನಾವಣೆಗೆ ಸಂಬಂಧಿಸಿದಂತೆ, ಮತದಾರರ ಅರ್ಹತೆಗಳು ಮತ್ತು ಇತರ ವಿವರಗಳು, ಈ ಸಂವಿಧಾನದ ಅನುಸೂಚಿಯಲ್ಲಿ ನಿಯಮಿಸಬಹುದಾದಂತೆ ಇರತಕ್ಕದು" ಎಂದು.

ಆನಂತರ ಈ ಖಂಡದ ನಂತರ ನಾನು ಮಂಡಿಸಿದ ತಿದ್ದುಪಡಿಗಳು ಬರುವುವು. ಈ ತಿದ್ದುಪಡಿಯ ಬಗ್ಗೆ ಸ್ಪಷ್ಟೀಕರಿಸಬೇಕಾದ ಯಾವುದೇ ಅಂಶವಿಲ್ಲದಿರುವುದರಿಂದ, ಇದನ್ನು ನಾನು ಪ್ರಸ್ತಾಪಿಸುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು** : ಈ ಖಂಡದ ಬಗ್ಗೆ ಯಾರಾದರೂ ಮಾತನಾಡಬಯಸುತ್ತೀರಾ ಅಥವಾ ಪ್ರಸ್ತಾಪಿಸಲಾದಂಥ ಯಾವುವಾದರೂ ತಿದ್ದುಪಡಿಗಳಿವೆಯೇ?

ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ.

ಇದು ಶ್ರೀ ಸಂತಾನಮ್ ಅವರ ತಿದ್ದುಪಡಿ.

"ಈ ಮುಂದಿನದನ್ನು, ೨೨ನೇ ಖಂಡದ ಪ್ರಾರಂಭದಲ್ಲಿ ಸೇರಿಸಲಾಗಿದೆ:

'ಈ ಸಂವಿಧಾನದ ಅಡಿಯಲ್ಲಿ ಪ್ರಾಂತೀಯ ವಿಧಾನಮಂಡಲಕ್ಕೆ ಮೊದಲ ಚುನಾವಣೆ ನಡೆಸುವುದಕ್ಕಾಗಿ, ಮತದಾರರ ಅರ್ಹತೆಗಳು ಮತ್ತು ಇತರ ವಿವರಗಳು, ಈ ಸಂವಿಧಾನದ ಅನುಸೂಚಿಯಲ್ಲಿ ನಿಯಮಿಸಬಹುದಾದಂತೆ ಇರತಕ್ಕದ್ದು." ಎಂದು.

**ಮಾನ್ಯ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** (ಬಾಂಬೆ : ಸಾಮಾನ್ಯ): ನಾನು ಶ್ರೀ ಸಂತಾನಮ್ ಹಾಗೂ ಶ್ರೀ ಸೇಠ್ ಗೋವಿಂದ್ ದಾಸ್ ಅವರು ಸೂಚಿಸಿದ ತಿದ್ದುಪಡಿಯನ್ನು ಅಂಗೀಕರಿಸುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು** : ಶ್ರೀ ಸಂತಾನಮ್ ಅವರು ಸೂಚಿಸಿದ ತಿದ್ದುಪಡಿಯನ್ನು ನಾನು ಮತಕ್ಕೆ ಹಾಕುತ್ತೇನೆ.

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಸನ್ಮಾನ್ಯ ಅಧ್ಯಕ್ಷರು** : ಶ್ರೀ ಸಂತಾನಮ್ ಅವರ ಎರಡನೇ ತಿದ್ದುಪಡಿಯು ಈ ಮುಂದಿನಂತಿದೆ:

"೨೨ನೇ ಖಂಡದಲ್ಲಿ 'ಕಾಲ ಕಾಲಕ್ಕೆ' ಪದಗಳ ತರುವಾಯ ಈ ಮುಂದಿನದನ್ನು ಸೇರಿಸಬೇಕು:

'ತಿದ್ದುಪಡಿ ಪ್ರಕ್ರಿಯೆಗನುಸಾರವಾಗಿ, ಪ್ರಾಂತೀಯ ಸಂವಿಧಾನವು".

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಸನ್ಮಾನ್ಯ ಅಧ್ಯಕ್ಷರು** : ಶ್ರೀ ಸಂತಾನಮ್ ಅವರು ಸೂಚಿಸಿದ ಮತ್ತೊಂದು ತಿದ್ದುಪಡಿಯು ಈ ಮುಂದಿನಂತಿದೆ:

"೨೨ನೇ ಖಂಡದ (ಬಿ) ಬಾಬಿನಲ್ಲಿನ 'ಮತದಾರರಿಗೆ ಸಂಬಂಧಿಸಿದ ಅರ್ಹತೆಗಳು' ಪದಗಳಿಗೆ ಬದಲು ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು:

'ಅನಿವಾಸಿ ಅಥವಾ ಜ ನಾನೆ, ಜನಾಂಗ, ಮತ ಅಥವಾ ಸಮುದಾಯವನ್ನು ಆಧರಿಸಿರದ ವೈಯಕ್ತಿಕ ಅಸಮರ್ಥತೆಗಳ ಕಾರಣಗಳ ಆಧಾರದ ಮೇಲೆ ವಯಸ್ಕ ಮತದಾನಕ್ಕೆ ಇತಿಮಿತಿಗಳು'."

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಸನ್ಮಾನ್ಯ ಅಧ್ಯಕ್ಷರು:**ಶ್ರೀ ಮುನ್ಷಿಯವರು ಮತ್ತೊಂದು ತಿದ್ದುಪಡಿಯನ್ನು ಪ್ರಸ್ತಾಪಿಸಿದ್ದು, . . . ಅದು ಮುಂದಿನಂತಿದೆ:

"೨೨ನೇ ಖಂಡದ ಎರಡನೇ ಪರಂತುಕವನ್ನು ಬಿಡತಕ್ಕದು"

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಸನ್ಮಾನ್ಯ ಅಧ್ಯಕ್ಷರು:** ಸೇಠ್ ಗೋವಿಂದ್ ದಾಸ್ ಅವರು ಪ್ರಸ್ತಾವಿಸಿದ ಮತ್ತೊಂದು ತಿದ್ದುಪಡಿಯು ಈ ಮುಂದಿನಂತಿದೆ:

"೨೨ನೇ ಖಂಡದಲ್ಲಿನ (೨)ನೇ ಪರಂತುಕದ ತರುವಾಯ, ಈ ಮುಂದಿನ, ಪರಂತುಕವನ್ನು ಸೇರಿಸತಕ್ಕದ್ದು: (೩) ಖಂಡ ೨೨(ಎ)ಯಿಂದ (ಜೆ)ವರೆಗಿನ ಎಲ್ಲಾ ಉಪಬಂಧಗಳನ್ನು, ಭಾರತ ಒಕ್ಕೂಟದಾದ್ಯಂತ ಅದರ ವಿಷಯಗಳಲ್ಲಿ ಏಕರೂಪತೆಯನ್ನು ಕಾಪಾಡುವ ಸಲುವಾಗಿ ತತ್ತ್ವಗಳ ಆಧಾರದ ಮೇಲೆ ಮತ್ತು ಇದಕ್ಕೆ ಲಗತ್ತಿಸಿದ ಅನುಸೂಚಿಯಲ್ಲಿ ನಿರೂಪಿಸಿರುವ ಸೂಚನೆಗಳಿಗನುಸಾರವಾಗಿ ರಚಿಸಲಾಗುವುದು'."

ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಸನ್ಮಾನ್ಯ ಅಧ್ಯಕ್ಷರು:** ನಾನು ಈಗ ಈ ಖಂಡವನ್ನು ತಿದ್ದುಪಡಿಯಾಗಿ ಮತಕ್ಕೆ ಹಾಕುತ್ತೇನೆ.

ತಿದ್ದುಪಡಿಯಾದ ೨೨ನೇ ಖಂಡವನ್ನು ಅಂಗೀಕರಿಸಲಾಯಿತು.

## ಖಂಡ ೨೩

**ಸನ್ಮಾನ್ಯ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್:** ಮಾನ್ಯರೇ, ನಾನು ೨೩ನೇ ಖಂಡವನ್ನು ಪ್ರಸ್ತಾವಿಸುತ್ತೇನೆ:

"(೧) ಪ್ರಾಂತೀಯ ವಿಧಾನಮಂಡಲವು ಅಧಿವೇಶನದಲ್ಲಿ ಇಲ್ಲದಿರುವಾಗ, ಯಾವುದೇ ಸಮಯದಲ್ಲಿ, ತತ್‌ಕ್ಷಣ ಕ್ರಮ ತೆಗೆದುಕೊಳ್ಳುವುದು ರಾಜ್ಯಪಾಲರಿಗೆ ಅವಶ್ಯಕವೆನಿಸುವ ಸಂದರ್ಭಗಳು ಇವೆಯೆಂದು ಮನವರಿಕೆಯಾದರೆ, ಅವರಿಗೆ ಅಗತ್ಯವೆಂದು ಕಂಡುಬರುವ ಸಂದರ್ಭಗಳಿಗನುಸಾರ ಅಂಥ ಅಧ್ಯಾದೇಶವನ್ನು ಅವರು ಹೊರಡಿಸಬಹುದು.

(೨) ಈ ಖಂಡದ ಅಡಿಯಲ್ಲಿ ಹೊರಡಿಸಿದ ಅಧ್ಯಾದೇಶವು ಜಾರಿಯಲ್ಲಿರತಕ್ಕದ್ದು ಮತ್ತು ರಾಜ್ಯಪಾಲರು ಸಮ್ಮತಿಸಿದ ಪ್ರಾಂತೀಯ ವಿಧಾನಮಂಡಲದ ಅಧಿನಿಯಮವಾಗಿ ಪರಿಣಾಮ ಹೊಂದಿರತಕ್ಕದ್ದು, ಆದರೆ ಪ್ರತಿಯೊಂದು ಅಂಥ ಅಧ್ಯಾದೇಶವನ್ನು –

(ಎ) ಪ್ರಾಂತೀಯ ವಿಧಾನಮಂಡಲದ ಮುಂದೆ ಮಂಡಿಸತಕ್ಕುದು ಮತ್ತು ಪ್ರಾಂತೀಯ ವಿಧಾನದ ಮಂಡಲವು ಪುನಃ ಸಭೆ ಸೇರಿದಂದಿನಿಂದ ಆರು ತಿಂಗಳುಗಳ ಮುಕ್ತಾಯವಾಗುವ ಮೊದಲು ಅಥವಾ ಆ ಅವಧಿಯ ಮುಕ್ತಾಯಕ್ಕೆ ಮುಂಚೆ ವಿಧಾನಮಂಡಲವು ಅದನ್ನು ಅಂಗೀಕರಿಸದಿರುವ ಬಗ್ಗೆ ನಿರ್ಣಯಗಳನ್ನು ಅಂಗೀಕರಿಸಿದ್ದಲ್ಲಿ, ಆ ನಿರ್ಣಯಗಳ ಪೈಕಿ ಎರಡನೆಯ ನಿರ್ಣಯವನ್ನು ಅಂಗೀಕರಿಸುವುದರ ಆಧಾರದ ಮೇಲೆ ಕಾರ್ಯನಿರ್ವಹಣೆ ಕೊನೆಗೊಳ್ಳತಕ್ಕುದು; ಮತ್ತು

(ಬಿ) ರಾಜ್ಯಪಾಲರು ಅದನ್ನು ಯಾವುದೇ ಸಮಯದಲ್ಲಿ ಹಿಂತೆಗೆದುಕೊಳ್ಳಬಹುದು.

(೩) ಈ ಖಂಡದ ಅಡಿಯಲ್ಲಿ ಹೊರಡಿಸಿದ ಅಧ್ಯಾದೇಶದ ಮೇರೆಗೆ ಯಾವುದೇ ಉಪಬಂಧವನ್ನು

ರಚಿಸಿದ್ದರೆ ಮತ್ತು ಅಷ್ಟರಮಟ್ಟಿಗೆ, ಈ ಸಂವಿಧಾನದ ಅಡಿಯಲ್ಲಿ ಪ್ರಾಂತೀಯ ವಿಧಾನಮಂಡಲವು ಅಧಿನಿಯಮಿತಗೊಳಿಸಲು ಸಕ್ಷಮವಾಗಿರದ ಯಾವುದೇ ಉಪಬಂಧವು ಅಸಿಂಧುವಾಗತಕ್ಕದ್ದು."

ಅಧ್ಯಾದೇಶವನ್ನು ರಚಿಸುವ ಅಧಿಕಾರವು ಸಾಕಷ್ಟು ವಿಮರ್ಶೆಗೆ ಒಳಪಟ್ಟಿದೆ; ಆದರೆ ವಿಧಾನಮಂಡಲವು ಉಪವೇಶನದಲ್ಲಿ ಇಲ್ಲದಿರುವಾಗ ಮತ್ತು ವಿಧಾನಮಂಡಲವನ್ನು ಕರೆಯಲು ಹೆಚ್ಚು ಸಮಯಾವಕಾಶ ಇಲ್ಲದಿರುವಾಗ ಹಾಗೂ ತುರ್ತು ಶಾಸನವನ್ನು ಅಂಗೀಕರಿಸುವ ತತ್‌ಕ್ಷಣ ಅವಶ್ಯಕತೆ ಇದ್ದಾಗ, ತುರ್ತು ಸಂದರ್ಭದಲ್ಲಿ ಅಂಥ ಉಪಬಂಧವನ್ನು ತರುವುದು ಅವಶ್ಯಕವಾಗಿದೆಯೆಂದು ದೀರ್ಘಾವಧಿ ಅನುಭವದಿಂದ ಕಂಡುಬಂದಿದೆ.

ಈ ಖಂಡಕ್ಕೆ ಇನ್ನೂ ಹಲವಾರು ತಿದ್ದುಪಡಿಗಳು ಇವೆಯೆಂದು ನಾನು ಭಾವಿಸಿಲ್ಲ. ಈ ಸೂಚನೆಯನ್ನು ನಾನು ಸದನದ ಅಂಗೀಕಾರಕ್ಕಾಗಿ ಪ್ರಸ್ತಾಪಿಸುತ್ತೇನೆ.

(ಶ್ರೀಯುತರುಗಳಾದ ಅಜಿತ್ ಪ್ರಸಾದ್ ಜೈನ್, ಹೆಚ್.ವಿ. ಪಾಟಸ್ಕರ್, ಆರ್. ಕೆ. ಸಿಧ್ವಾ, ಶಿಬ್ಬನ್‌ಲಾಲ್ ಸಕ್ಸೇನಾ ಮತ್ತು ಎಂ. ಅನಂತಶಯನಮ್ ಅಯ್ಯಂಗಾರ್ ಇವರು ತಮ್ಮ ತಿದ್ದುಪಡಿಗಳನ್ನು ಪ್ರಸ್ತಾಪಿಸಲಿಲ್ಲ.)

**ಮಾನ್ಯ ನಜೀರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್): ಮಾನ್ಯರೇ, ಈ ಮುಂದಿನ ಹೊಸ ಖಂಡವನ್ನು, ೨೩ನೇ ಖಂಡದ ತರುವಾಯ ಸೇರಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ:

"೨೪. ಮೇಲಿನ ಖಂಡಗಳಿಗೆ ಪ್ರಾಸಂಗಿಕವಾದ ಅಥವಾ ಆನುಷಂಗಿಕವಾದ ಎಲ್ಲಾ ವಿಷಯಗಳು ಸದರಿ ಖಂಡಗಳ ಭಾಗಗಳಾಗಿರುತ್ತವೆ ಎಂದು ಪರಿಗಣಿಸಬೇಕು ಭಾವಿಸತಕ್ಕದ್ದು ಮತ್ತು ಸೇರಿಸಬೇಕು."

ಮಾನ್ಯರೇ, ಈ ತಿದ್ದುಪಡಿಯನ್ನು ಪ್ರಸ್ತಾವಿಸುವಲ್ಲಿ ನನ್ನ ಆಕ್ಷೇಪಣೆಯೇನೆಂದರೆ, ಅಂತಿಮವಾಗಿ ವಿಧೇಯಕದ ಕರಡನ್ನು ಸಿದ್ಧಪಡಿಸುವ ಸಮಯದಲ್ಲಿ ಉದ್ಭವಿಸಬಹುದಾದ ಎಲ್ಲ ತಾಂತ್ರಿಕ ತೊಂದರೆಗಳನ್ನು ನಿವಾರಿಸಬೇಕೆಂಬುದಾಗಿದೆ. ದೊಡ್ಡ ಸಂಖ್ಯೆಯಲ್ಲಿ ಮೂಲ ವರದಿಯಲ್ಲಿನ ತಿದ್ದುಪಡಿಗಳನ್ನು ಸದನದಲ್ಲಿ ನಾವು ಅಂಗೀಕರಿಸಿದ್ದೇವೆ ಮತ್ತು ಹಲವೆಡೆ ಕೆಲವು ವ್ಯತ್ಯಾಸಗಳು ಅಥವಾ ಲೋಪಗಳು ಇರವ ಸಾಧ್ಯತೆ ಇದೆ. ಅಂತಿಮ ಕರಡನ್ನು ಸಿದ್ಧಪಡಿಸುವ ಸಮಯದಲ್ಲಿ ಅವು ಕಂಡಿರಬಹುದು. ಆದ್ದರಿಂದ, ಅಂಥ ಯಾವುವೇ ತಾಂತ್ರಿಕ ತೊಂದರೆಗಳನ್ನು ನಿವಾರಿಸುವ ಸಲುವಾಗಿ ಈ ತಿದ್ದುಪಡಿಯನ್ನು ನಾನು ಸೂಚಿಸುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು** : ಮಾನ್ಯ ನಜೀರುದ್ದೀನ್, ನೀವು ಸೂಚಿಸಿರುವುದು ತಿದ್ದುಪಡಿಯಲ್ಲ, ಆದರೆ ಹೊಸ ಖಂಡದ ಸೇರ್ಪಡೆ ಎಂದು ನಾನು ಭಾವಿಸುತ್ತೇನೆ. ನಾವು, ೨೩ನೇ ಖಂಡವನ್ನು ವಿಲೆ ಮಾಡಿ, ಈ ಹೊಸ ಖಂಡವನ್ನು ಪರಿಶೀಲಿಸಲು ಮುಂದುವರಿಯುವುದು ಉತ್ತಮವೆಂದು ನಾನು ಭಾವಿಸುತ್ತೇನೆ.

ಈ ಖಂಡಕ್ಕೆ, ಎಂದರೆ ೨೩ನೇ ಖಂಡಕ್ಕೆ ಯಾವುದೇ ತಿದ್ದುಪಡಿಯನ್ನು ಸೂಚಿಸಿಲ್ಲ. ಯಾರೇ ಸದಸ್ಯರು ಈ ಬಗ್ಗೆ ಮಾತನಾಡುವುದಿದ್ದರೆ, ಈಗ ಅವರು ಮಾತನಾಡಬಹುದು.

(ಯಾವೊಬ್ಬ ಸದಸ್ಯರೂ ಮಾತನಾಡಲು ಎದ್ದು ನಿಲ್ಲಲಿಲ್ಲ)

ನಾನು ಈಗ ನಿರ್ಣಯವನ್ನು ಮತಕ್ಕೆ ಹಾಕುತ್ತಿದ್ದೇನೆ:

"೨೩. (೧) ಪ್ರಾಂತೀಯ ವಿಧಾನಮಂಡಲವು ಅಧಿವೇಶನದಲ್ಲಿ ಇಲ್ಲದಿರುವಾಗ, ಯಾವುದೇ ಸಮಯದಲ್ಲಿ, ಕೂಡಲೇ ಕ್ರಮ ತೆಗೆದುಕೊಳ್ಳುವುದು ಅವಶ್ಯಕವೆನಿಸುವ ಸಂದರ್ಭಗಳು ಇವೆಯೆಂದು ರಾಜ್ಯಪಾಲರಿಗೆ ಮನವರಿಕೆಯಾದರೆ, ಅವರಿಗೆ ಅಗತ್ಯವೆಂದು ಕಂಡುಬರುವ ಸಂದರ್ಭಗಳಿಗನುಸಾರ ಅಂಥ ಅಧ್ಯಾದೇಶವನ್ನು ಅವರು ಉದ್ಘೋಷಿಸಬಹುದು.

(೨) ಈ ಖಂಡದ ಅಡಿಯಲ್ಲಿ ಪ್ರಖ್ಯಾಪಿಸಿದ ಅಧ್ಯಾದೇಶವು ಜಾರಿಯಲ್ಲಿರತಕ್ಕದ್ದು ಮತ್ತು ರಾಜ್ಯಪಾಲರು ಒಪ್ಪಿಗೆ ನೀಡಿದ ಪ್ರಾಂತೀಯ ವಿಧಾನಮಂಡಲದ ಅಧಿನಿಯಮವಾಗಿ ಅದು ಜಾರಿಗೊಳ್ಳತಕ್ಕದ್ದು. ಆದರೆ ಅಂತಹ ಪ್ರತಿಯೊಂದು ಅಧ್ಯಾದೇಶವನ್ನು –

(ಎ) ಪ್ರಾಂತೀಯ ವಿಧಾನಮಂಡಲದ ಮುಂದೆ ಮಂಡಿಸತಕ್ಕದ್ದು ಮತ್ತು ಪ್ರಾಂತೀಯ ವಿಧಾನದ ಮಂಡಲವು ಪುನಃ ಸಭೆ ಸೇರಿದಂದಿನಿಂದ ಆರು ತಿಂಗಳುಗಳ ಮುಕ್ತಾಯವಾಗುವುದರೊಳಗೆ ಅಥವಾ ಆ ಅವಧಿಯ ಮುಕ್ತಾಯಕ್ಕೆ ಮುಂಚೆ, ವಿಧಾನಮಂಡಲವು ಅದನ್ನು ಅಂಗೀಕರಿಸದಿರುವ ನಿರ್ಣಯಗಳನ್ನು ಅಂಗೀಕರಿಸಿದಲ್ಲಿ, ಆ ನಿರ್ಣಯಗಳ ಪೈಕಿ ಎರಡನೆಯ ನಿರ್ಣಯವನ್ನು ಅಂಗೀಕರಿಸುವುದರ ಆಧಾರದ ಮೇಲೆ ಕಾರ್ಯನಿರ್ವಹಣೆ ಕೊನೆಗೊಳ್ಳತಕ್ಕದ್ದು; ಮತ್ತು

(ಬಿ) ರಾಜ್ಯಪಾಲರು ಯಾವುದೇ ಸಮಯದಲ್ಲಿ ಅದನ್ನು ಹಿಂತೆಗೆದುಕೊಳ್ಳಬಹುದು.

(೩) ಈ ಖಂಡದ ಅಡಿಯಲ್ಲಿ ಹೊರಡಿಸಿದ ಅಧ್ಯಾದೇಶದ ಮೇರೆಗೆ ಯಾವುದೇ ಉಪಬಂಧವನ್ನು ರಚಿಸಿದ್ದರೆ ಮತ್ತು ಅಷ್ಟರಮಟ್ಟಿಗೆ, ಈ ಸಂವಿಧಾನದ ಅಡಿಯಲ್ಲಿ ಪ್ರಾಂತೀಯ ವಿಧಾನಮಂಡಲವು ಅಧಿನಿಯಮಿತಗೊಳಿಸಲು ಸಕ್ಷಮವಾಗಿರದ ಯಾವುದೇ ಉಪಬಂಧವು ಅಸಿಂಧುವಾಗತಕ್ಕದ್ದು."

ನಿರ್ಣಯವನ್ನು ಅಂಗೀಕರಿಸಲಾಯಿತು

**ಸನ್ಮಾನ್ಯ ಅಧ್ಯಕ್ಷರು :** ಮಾನ್ಯ ನಜೀರುದ್ದೀನ್ ಅಹ್ಮದ್, ದಯವಿಟ್ಟು ತಮ್ಮ ಖಂಡವನ್ನು ಪ್ರಸ್ತಾಪಿಸಬೇಕು.

**ಮಾನ್ಯ ನಜೀರುದ್ದೀನ್ ಅಹ್ಮದ್ :** ಮಾನ್ಯರೆ, ಈ ಮುಂದಿನ ಹೊಸ ಖಂಡವನ್ನು ೨೩ನೇ ಖಂಡದ ತರುವಾಯ ಸೇರಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ:

"೨೪. ಮೇಲಿನ ಖಂಡಗಳಿಗೆ ಪ್ರಾಸಂಗಿಕವಾದ ಅಥವಾ ಆನುಷಂಗಿಕವಾದ ಎಲ್ಲಾ ವಿಷಯಗಳನ್ನು ಸದರಿ ಖಂಡಗಳ ಭಾಗವನ್ನಾಗಿ ಭಾವಿಸತಕ್ಕದ್ದು ಮತ್ತು ಸೇರಿಸತಕ್ಕದ್ದು."

ಮಾನ್ಯರೇ, ಕರಡನ್ನು ಸಿದ್ಧಪಡಿಸುವ ಸಮಯದಲ್ಲಿ ಉಂಟಾಗಬಹುದಾದ ತಾಂತ್ರಿಕ ತೊಂದರೆಗಳನ್ನು ನಿವಾರಿಸಲು ಈ ಖಂಡವು ಅವಶ್ಯಕವಾಗುವುದೆಂದು ನಾನು ನಿವೇದಿಸುತ್ತೇನೆ. ಬಹುಶಃ ಹೆಚ್ಚು ಗಮನ ನೀಡದೆ, ನಾವು ಈ ಸದನದಲ್ಲಿ ಕೆಲವು ಹೊಸ ತಿದ್ದುಪಡಿಗಳನ್ನು ಪ್ರಸ್ತಾವಿಸಿದ್ದೇವೆ. ಆದುದರಿಂದ, ಅಲ್ಲಲ್ಲಿ ವ್ಯತ್ಯಾಸಗಳಿರುವ ಸಾಧ್ಯತೆ ಇದೆ, ಎಂದರೆ, ನಾನು ಹೇಳುತ್ತಿರುವುದು, ಅನುದ್ದೇಶಿತವ್ಯತ್ಯಾಸಗಳು ಅಥವಾ ತಾಂತ್ರಿಕ ತೊಂದರೆಗಳು. ಹಾಗಾಗಿ, ಕರಡನ್ನು ಸಿದ್ಧಪಡಿಸುವ ಸಮಯದಲ್ಲಿ, ಕೆಲವು ನಿರ್ದಿಷ್ಟ ವಿಚಾರಗಳು ಉದ್ಭವಿಸಬಹುದು, ಎಂದರೆ, ಇಲ್ಲಿ ಅಂಗೀಕರಿಸಿದ ಕೆಲವು ತಿದ್ದುಪಡಿಗಳಿಗೆ ಪ್ರಾಸಂಗಿಕವಾದ ವಿಚಾರಗಳು ಅಥವಾ ಆ ತಿದ್ದುಪಡಿಗಳ ಆನುಷಂಗಿಕ ವಿಷಯಗಳು ವರದಿಯಲ್ಲಿ ಸೇರಿಸತಕ್ಕದ್ದು. ಈ ಕಾರಣಕ್ಕಾಗಿಯೇ ನಾನು ಈ ಹೊಸ ಖಂಡವನ್ನು ಸೇರಿಸಲು ಪ್ರಸ್ತಾಪಿಸಿದ್ದೇನೆ. ಪ್ರಸ್ತುತ ಯಾವುವೇ ವ್ಯತ್ಯಾಸಗಳು, ಸ್ಪಷ್ಟವಾಗಿ ಕಾಣುವ ವ್ಯತ್ಯಾಸಗಳ ಬಗ್ಗೆ ನನಗೆ ಗೊತ್ತಿಲ್ಲ, ಆದರೆ, ಯಾವುದೇ ವ್ಯತ್ಯಾಸ ಅಥವಾ ಲೋಪವಿದ್ದರೆ, ಅದನ್ನು ಸರಿಪಡಿಸಲು ಈ ಖಂಡವು ಕರಡನ್ನು ಸಿದ್ಧಪಡಿಸುವವರಿಗೆ ಸಹಾಯಕವಾಗಬಹುದು ಎಂಬ ಕಾರಣಕ್ಕಾಗಿ, ಇದನ್ನು ನಾನು ಸೇರಿಸಲು ಸದನದ ಮುಂದೆ ಮಂಡಿಸಿದ್ದೇನೆ. ಈ ಕೆಲವು ಮಾತುಗಳೊಂದಿಗೆ, ಸದನದ ಅಂಗೀಕಾರಕ್ಕಾಗಿ ಇದನ್ನು ನಾನು ಮುಂದಿಡುತ್ತಿದ್ದೇನೆ.

**ಸನ್ಮಾನ್ಯ ಅಧ್ಯಕ್ಷರು:** ಹೊಸ ಖಂಡ೨೪ನ್ನು ಇಲ್ಲಿ ಸೇರಿಸಬೇಕೆಂದು ಪ್ರಸ್ತಾವಿಸಲಾಗಿದೆ. ವೈಯಕ್ತಿಕವಾಗಿ ನಾನು ಈ ಹೆಚ್ಚಿನ ಖಂಡದ ಪರಿಣಾಮವನ್ನು ಸ್ವಲ್ಪಮಟ್ಟಿಗೆ ಅರ್ಥಮಾಡಿಕೊಳ್ಳಲು ಅಶಕ್ತನಾಗಿದ್ದೇನೆ. ಯಾರೇ ಸದಸ್ಯರು ಈ ಬಗ್ಗೆ ಮಾತನಾಡ ಬಯಸಿದಲ್ಲಿ, ಅವರು ಅದರ ಮೇಲೆ ಬೆಳಕು ಚಲ್ಲಿದರೆ ನಾನು ಅವರಿಗೆ ಕೃತಜ್ಞನಾಗಿರುತ್ತೇನೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಇಲ್ಲಿ ಈಗ ಸಾಮಾನ್ಯ ತತ್ವಗಳನ್ನು ಮಾತ್ರ ನಾವು ಅನುಮೋದಿಸಬೇಕಾಗಿರುವುದರಿಂದ, ಈ ಸಂದರ್ಭದಲ್ಲಿ ಅಂಥ ಯಾವುದೇ ಒಂದು ಹೊಸ ಖಂಡದ ಅವಶ್ಯಕತೆ ಇದೆ ಎಂದು ನಾನು ಭಾವಿಸುವುದಿಲ್ಲ, ಸಹಾಯಕ, ಪ್ರಾಸಂಗಿಕ, ಪೂರಕ, ಆನುಷಂಗಿಕ, ಇತ್ಯಾದಿ ವಿಚಾರಗಳನ್ನು ಅಂತಿಮ ಕರಡನ್ನು ಸಿದ್ಧಪಡಿಸಿದಾಗ

ಸಹಜವಾಗಿಯೇ ಸೇರಿಸಲಾಗಿರುತ್ತದೆ. ಈಗ ಪ್ರಸ್ತಾವಿಸಿರುವ ಈ ಖಂಡವು ಅಸ್ಪಷ್ಟವಾಗಿದೆ. ಅಷ್ಟೇ ಅಲ್ಲದೇ, ಇದು ಸನ್ನಿವೇಶಕ್ಕೆ ಸೂಕ್ತವಾಗಿರುವುದಿಲ್ಲ, ಇದಿಲ್ಲದೆ ನಾವು ಕಳೆದುಕೊಳ್ಳುವುದು ಏನೂ ಇಲ್ಲ. ಸಂದರ್ಭ ಏನೇ ಇರಲಿ, ಈಗ ಇದನ್ನು ಪರಿಗಣಿಸಬೇಕಾದ ಅಥವಾ ಅದನ್ನು ಮತಕ್ಕೆ ಹಾಕಬೇಕಾದ ಅವಶ್ಯಕತೆ ಇಲ್ಲ.

**ಸನ್ಮಾನ್ಯ ಅಧ್ಯಕ್ಷರು** : ಬೇರಾರೂ ಭಾಷಣಕಾರರಿಲ್ಲದಿರುವುದರಿಂದ, ನಾನು ನಿರ್ಣಯವನ್ನು ಸದನದ ಮುಂದಿಡುತ್ತೇನೆ.

೨೩ನೇ ಖಂಡದ ತರುವಾಯ ಈ ಮುಂದಿನ ಹೊಸ ಖಂಡವನ್ನು ಸೇರಿಸಬೇಕೆಂಬುದು ನಿರ್ಣಯವಾಗಿದೆ.

"೨೪. ಮೇಲಿನ ಖಂಡಗಳಿಗೆ ಆನುಷಂಗಿಕವಾಗಿರುವ ಅಥವಾ ಪ್ರಾಸಂಗಿಕವಾಗಿರುವ ಎಲ್ಲಾ ವಿಷಯಗಳು, ಸದರಿ ಖಂಡಗಳ ಚರ್ಚೆಯ ಭಾಗಗಳಾಗಿರತಕ್ಕದ್ದು ಮತ್ತು ಅವುಗಳನ್ನು ಅದರಲ್ಲಿ ಸೇರಿಸತಕ್ಕದ್ದು."

ನಿರ್ಣಯವನ್ನು ನಿರಾಕರಿಸಲಾಯಿತು

**ಸನ್ಮಾನ್ಯ ಅಧ್ಯಕ್ಷರು** : ಮಾನ್ಯ ಸಂತಾನಮ್ ಅವರು ಸೂಚನೆಯನ್ನು ಅಥವಾ ಮತ್ತೊಂದು ಹೆಚ್ಚಿನ ಖಂಡವನ್ನು ಮಂಡಿಸಿದ್ದಾರೆ. ಮಾನ್ಯ ಸಂತಾನಮ್ ಅವರು ದಯವಿಟ್ಟು ಅದನ್ನು ಪ್ರಸ್ತಾಪಿಸುವರೇ?

**ಶ್ರೀ ಕೆ. ಸಂತಾನಮ್** : ಮಾನ್ಯರೆ, ೨೩ನೇ ಖಂಡದ ತರುವಾಯ ಈ ಮುಂದಿನ ಹೊಸ ಖಂಡವನ್ನು ಸೇರಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ.

೨೪. ಯಾವ ಪ್ರಾಂತದಲ್ಲಿ ಒಂದೇ ಶಾಸನ ಸಭೆಯು ಇರುವ ವಿಧಾನಮಂಡಲವಿರುವುದೋ ಆ ಪ್ರಾಂತದ ರಾಜ್ಯಪಾಲರು, ವಿಧಾನಮಂಡಲವು ಅಂಗೀಕರಿಸಿದ ವಿಧೇಯಕವನ್ನು ರಾಜ್ಯಪಾಲರು ತನ್ನ ವಿವೇಚನಾನುಸಾರ ಮರುಪರ್ಯಾಲೋಚನೆಗಾಗಿ ಹಿಂತಿರುಗಿಸುವ ಹಕ್ಕನ್ನು ಹೊಂದಿರತಕ್ಕದ್ದು ಮತ್ತು ತಿದ್ದುಪಡಿಗಳನ್ನು ಸೂಚಿಸಬಹುದು. ಸ್ಪಷ್ಟ ಬಹುಮತದ ಮೂಲಕ ತಿದ್ದುಪಡಿಗಳ ಸಹಿತ ಅಥವಾ ತಿದ್ದುಪಡಿಗಳಿಲ್ಲದೆಯೇ ವಿಧಾನಮಂಡಲವು ಪುನಃ ಆ ವಿಧೇಯಕವನ್ನು ಅಂಗೀಕರಿಸಿದರೆ, ಅವರು ಅದಕ್ಕೆ ಸಮ್ಮತಿ ನೀಡತಕ್ಕದ್ದು."

ಇದು ಕೆಲವು ಮುಖ್ಯ ವಿಷಯಗಳನ್ನೊಳಗೊಂಡ ತಿದ್ದುಪಡಿಯಾಗಿದೆ. ಮಾದರಿ ಸಂವಿಧಾನದ ಕರಡಿನಲ್ಲಿ ಈ ವಿಷಯವು ಇರುವುದರಿಂದ, ವಿಧಾನಮಂಡಲವು ಒಂದು ಕಾನೂನನ್ನು, ಮತಗಳನ್ನು ಸೆಳೆದುಕೊಂಡು ಅಥವಾ ಕಡಿಮೆ ಅಂತರದ ಬಹುಮತದಿಂದ ಒಂದು ಕಾನೂನನ್ನು ಅಂಗೀಕರಿಸಿದರೆ, ರಾಜ್ಯಪಾಲರಲ್ಲಿ ಯಾವುದೇ ನಿಷೇಧಾಧಿಕಾರ ಅಥವಾ ಯಾವುದೇ ಇತರ ಅಧಿಕಾರ ನಿಹಿತವಾಗಿರುವುದಿಲ್ಲ ದಿರುವುದರಿಂದ, ಅದು ಕೂಡಲೇ ಕಾನೂನಾಗಿ ಜಾರಿಗೆ ಬರುತ್ತದೆ; ಮಾನ್ಯರೆ, ರಾಜ್ಯಪಾಲರಿಗೆ ಯಾವುದೇ ನಿಷೇಧಾಧಿಕಾರ ಇರಬೇಕೆಂದು ನಾನು ಹೇಳುವುದಿಲ್ಲ. ಪ್ರತಿಯೊಂದು ಪ್ರಾಂತದಲ್ಲಿ ಪೂರ್ಣ ಸ್ವಾಯತ್ತ ಹಾಗೂ ಜವಾಬ್ದಾರಿಯುತ ಸರ್ಕಾರ ಇರಬೇಕೆಂಬುದು ನನ್ನ ಅಭಿಪ್ರಾಯ. ಆದರೆ, ಪ್ರಾಂತೀಯ ಸಭೆಯು ಅಂಗೀಕರಿಸಿದ ವಿಧೇಯಕವನ್ನು ಮರುಪರ್ಯಾಲೋಚನೆಗಾಗಿ ಕಳುಹಿಸುವ ಅಧಿಕಾರವು ರಾಜ್ಯಪಾಲರಿಗೆ ಇರಬೇಕೆಂದು ನಾನು ಬಯಸುತ್ತೇನೆ. ಮರುಪರ್ಯಾಲೋಚನೆಯ ನಂತರ ಸ್ಪಷ್ಟಬಹುಮತದಿಂದ ಅದನ್ನು ಸಭೆಯು ಅಂಗೀಕರಿಸಿದರೆ, ಅವರಿಗೆ ನಿಷೇಧಾಧಿಕಾರವಿರುವುದಿಲ್ಲ. ಆದರೆ ಅವರು ಅದಕ್ಕೆ ಸಮ್ಮತಿಯನ್ನು ನೀಡಬೇಕಾಗುತ್ತದೆ.

ಮಾನ್ಯರೆ, ಏಕೈಕಸದನದ ವಿಧಾನಮಂಡಲ ಇರುವ ಪ್ರಾಂತಗಳಿಗೆ ಮಾತ್ರ ಈ ಅಧಿಕಾರವನ್ನು ಸೀಮಿತಗೊಳಿಸಲಾಗಿದೆ. ಏಕೆಂದರೆ, ಎಲ್ಲಿ ಎರಡು ಸದನಗಳು ಇರುವುವೋ ಅಲ್ಲಿ ಮರುಪರಿಶೀಲಿಸುವ ಪ್ರಕಾರ್ಯ ಮೇಲ್ಮನೆಯದ್ದಾಗಿರುತ್ತದೆ. ಈ ಅಧಿಕಾರವು ರಾಜ್ಯಪಾಲರ ವಿವೇಚನಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದೆಂಬುದು ನನ್ನ ಅಭಿಪ್ರಾಯ. ಸಹಜವಾಗಿಯೇ, ಕಡಿಮೆ ಅಂತರದ ಬಹುಮತದ ಮೂಲಕ

ವಿಧೇಯಕವನ್ನು ಅಂಗೀಕರಿಸಲು ಆತುರಪಡುವ ಮಂತ್ರಿಮಂಡಲವು ಮರುಪರ್ಯಾಲೋಚನೆಯ ಸಲಹೆಯ ಕಡೆಗೆ ಗಮನ ನೀಡುವುದಿಲ್ಲ. ಹಾಗಾಗಿ, ಇದು ರಾಜ್ಯಪಾಲರ ವಿವೇಚನೆಯಲ್ಲಿರುವ ಅಧಿಕಾರವಾಗಿರಬೇಕು.

ಮಾನ್ಯರೆ, ನಾನು ಈ ಮುಂದಿನ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ.

**ಪಂಡಿತ್ ಲಕ್ಷ್ಮೀಕಾಂತ್ ಮೈತ್ರ** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯರೆ, ಈ ಸಂವಿಧಾನದ ಆಧಾರವಾಗಿರುವ ಪ್ರಜಾಪ್ರಭುತ್ವ ತತ್ತ್ವದ ಮೂಲ ಬೇರನ್ನೇ ಈ ತಿದ್ದುಪಡಿಯು ಕತ್ತರಿಸುತ್ತದೆ ಎಂದು ನನಗೆ ಆತಂಕವಾಗುತ್ತಿದೆ. ಮಾನ್ಯ ಸಂತಾನಮ್ ಅವರು ಹೇಳಬಯಸುತ್ತಿರುವುದೇನನ್ನು? ಅದು ಯಾವುದೇ ಪ್ರಾಂತದಲ್ಲಿಯ ಒಂದೇ ಸದನ ಇರುವ ವಿಧಾನಮಂಡಲವು, ವಿಧೇಯಕವನ್ನು ಕಡಿಮೆ ಅಂತರದ ಬಹುಮತದಿಂದ ಅಂಗೀಕರಿಸಿದರೆ, ಇಡೀ ಪರಿಸ್ಥಿತಿಯನ್ನು ಮರುಪರ್ಯಾಲೋಚಿಸಲು ವಿಧಾನಮಂಡಲಕ್ಕೆ ಸಲಹೆಯನ್ನು ನೀಡುವ ರಾಜ್ಯಪಾಲರ ವಿವೇಚನೆಯನುಸಾರ ಅವರು ಚಲಾಯಿಸಬೇಕಾಗಿರುವ ಹೆಚ್ಚಿನ ಅಧಿಕಾರಗಳನ್ನು ಅವರಲ್ಲಿ ನಿಹಿತಗೊಳಿಸಬಹುದಾಗಿದೆ ಹಾಗೂ ತರುವಾಯ ಒಂದು ತೀರ್ಮಾನಕ್ಕೆ ಬರಬಹುದು ಎಂಬುದು. ಅಂಥ ಒಂದು ಪ್ರಕ್ರಿಯೆಯ ಫಲಿತಾಂಶವನ್ನು ಪರ್ಯಾಲೋಚಿಸಲು ನಾನು ಈ ಸದನವನ್ನು ಕೇಳುತ್ತೇನೆ. ರಾಜ್ಯಪಾಲರು, ಕಾರ್ಯನಿರ್ವಹಿಸುತ್ತಿರುವ ಜನಪ್ರಿಯ ಸರ್ಕಾರದ ವಿರೋಧ ಕಟ್ಟಿಕೊಂಡು, ನೇರವಾಗಿ ಅದರೊಂದಿಗೆ ಸಂಘರ್ಷಕ್ಕಿಳಿಯಬೇಕಾದ ಅನಿವಾರ್ಯತೆ ಉಂಟಾಗಬಹುದೆಂಬುದು ನನ್ನ ಅಭಿಪ್ರಾಯ. ಇಂಥ ಒಂದು ಅವಶ್ಯಕತೆ ಇದೆ ಎಂದು ನನಗೆ ಕಂಡುಬರುತ್ತಿಲ್ಲ; ಇದಕ್ಕೆ ಪ್ರತಿಯಾಗಿ, ಅತ್ಯಂತ ಆತುರದಲ್ಲಿ ಹಾಗೂ ಸೂಕ್ತ ಪರ್ಯಾಲೋಚನೆ ಮಾಡಿ ತಾರತಮ್ಯ ಮಾಡದೆ ಯಾವುದೇ ಕ್ರಮವನ್ನು ಅಂಗೀಕರಿಸಿದರೆ, ಪರಿಪಕ್ವ ಚರ್ಚೆಗಳನ್ನು ನಡೆಸಿ, ಕ್ರಮ ಕೈಗೊಳ್ಳದಿದ್ದರೆ, ಮುಂದಿನ ಅಧಿವೇಶನಗಳಲ್ಲಿ ಅಂಥ ಶಾಸನಾತ್ಮಕ ಕ್ರಮಗಳನ್ನು ನಿರಸನಗೊಳಿಸಿ ಅಥವಾ ತಿದ್ದುಪಡಿ ಮಾಡಿ ವಿಧಾನಮಂಡಲವು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗುತ್ತದೆ. ಆದ್ದರಿಂದ, ಈ ರೀತಿಯ ಅಧಿಕಾರಗಳನ್ನು ರಾಜ್ಯಪಾಲರಿಗೆ ವಹಿಸಿಕೊಡುವುದು, ನೇರವಾಗಿ ವಿಧಾನಮಂಡಲದ ಸ್ವಾತಂತ್ರ್ಯ ಮತ್ತು ಹೊಣೆಗಾರಿಕೆಯನ್ನು ಪ್ರಪಾತಕ್ಕೆ ತಳ್ಳಿದಂತೆ ಎಂದು ನಾನು ಭಾವಿಸುತ್ತೇನೆ. ಇದರಿಂದಾಗಿ ಅನಾವಶ್ಯಕವಾಗಿ ರಾಜ್ಯಪಾಲರನ್ನು ಸರ್ಕಾರದೊಂದಿಗೆ ಸಂಘರ್ಷಕ್ಕಿಳಿಸಿದಂತಾಗುತ್ತದೆಯಾದ್ದರಿಂದ ಈ ನಿರ್ಣಯವನ್ನು ಬೆಂಬಲಿಸಬಾರದೆಂದು ನಾನು ಅಭಿಪ್ರಾಯಪಡುತ್ತೇನೆ.

**ಮಾನ್ಯ ಎನ್.ವಿ. ಗಾಡ್ಗಿಳ್** (ಬಾಂಬೆ : ಸಾಮಾನ್ಯ) :ಮಾನ್ಯರೆ, ಇಲ್ಲಿ ಮತ್ತು ಈಗ ಸೇರಿಸಬೇಕಾದ ಅಗತ್ಯವಿಲ್ಲದಿರುವ ಮತ್ತು ನಂತರದ ಸೂಕ್ತ ಹಂತದಲ್ಲಿ ಪರಿಗಣಿಸಬಹುದಾದ ಒಂದು ಸಲಹೆಯನ್ನು ನೀಡಲು ನಾನು ಅಪೇಕ್ಷಿಸುತ್ತೇನೆ. ರಾಜ್ಯಪಾಲರು ತಿದ್ದುಪಡಿಗಳ ಸಹಿತ ಅಥವಾ ತಿದ್ದುಪಡಿಗಳಿಲ್ಲದೆ ವಿಧೇಯಕವನ್ನು ಹಿಂದಿರುಗಿಸಲು ಕಾಲಮಿತಿ ಇರಬೇಕೆಂದು, ಮತ್ತು ಅದಕ್ಕೆ ತಪ್ಪಿದಲ್ಲಿ, ವಿಧೇಯಕಕ್ಕೆ ಅವರು ಸಮ್ಮತಿ ನೀಡಿರುವರೆಂದು ಪರಿಗಣಿಸಬೇಕೆಂದು ನಾನು ಸಲಹೆ ನೀಡುತ್ತೇನೆ. ಅಮೇರಿಕಾದ ಸಂವಿಧಾನದಲ್ಲಿ ಈ ರೀತಿಯ ಉಪಬಂಧವಿದೆ ಮತ್ತು ಅದನ್ನು ಇಲ್ಲಿ ಸೇರಿಸಬೇಕು.

**ಪಂಡಿತ್ ಲಕ್ಷ್ಮೀನಾಥ್ ಮೈತ್ರ** : ಕಾಲಮಿತಿಯನ್ನು ವಿಧಿಸುವಾಗ, ರಾಜ್ಯಪಾಲರು, ವಿಧಾನಮಂಡಲದ ನಾಯಕರಿಗಿಂತ ಮೇಲೆ ಇಡೀ ಪರಿಸ್ಥಿತಿಯನ್ನು ಕುರಿತು ಪುನರ್ ಪರ್ಯಾಲೋಚಿಸುವ ಸ್ಥಾನದಲ್ಲಿ ಇರುವರೆಂಬ ತತ್ವವನ್ನು ಮಾನ್ಯ ಗಾಡ್ಗಿಳ್ ಅವರು ಒಪ್ಪುವರೇ?

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್**: ಮಾನ್ಯರೆ, ಇದು ಅತ್ಯಂತ ಅನುಕೂಲಕರವಾದ ಉಪಬಂಧ ಎಂಬುದಾಗಿ ನಾನು ಪರಿಗಣಿಸುತ್ತೇನೆ. ಈ ತಿದ್ದುಪಡಿಗೆ ಬೆಂಬಲ ಸೂಚಿಸುವಲ್ಲಿ ಮಾನ್ಯ ಗಾಡ್ಗಿಳ್ ಅವರ ಉದ್ದೇಶದ ಬಗ್ಗೆ ನನ್ನ ಮಿತ್ರರಾದ ಪಂಡಿತ್ ಮೈತ್ರ ಅವರು ಏಕೆ ಸಂಶಯವನ್ನು ವ್ಯಕ್ತಪಡಿಸುತ್ತಿದ್ದಾರೆಂಬುದು ನನಗೆ ತಿಳಿಯದು. ಅವರು ಈ ತತ್ತ್ವವನ್ನು ಒಪ್ಪಿಕೊಂಡು ಕಾಲಮಿತಿ ಇರಬೇಕೆಂದೂ ಹೇಳುತ್ತಾರೆ. ಅಮೇರಿಕಾದ ಸಂವಿಧಾನದಲ್ಲಿ ಹತ್ತು ದಿನಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ. ರಾಜ್ಯಪಾಲರು

ವಿಷಯವನ್ನು ಪರ್ಯಾಲೋಚಿಸಿ, ಸದನದ ಮರುಪರ್ಯಾಲೋಚನೆಗಾಗಿ ಅದನ್ನು ಹಿಂದಕ್ಕೆ ಕಳುಹಿಸುವುದಕ್ಕೆ ಕಾಲಾವಕಾಶ ಇರಲೇ ಬೇಕು. ಆಗ ಸಾಕಷ್ಟು ಸಂಖ್ಯೆಯ ಸದಸ್ಯರು ಹಾಜರಿರದಿರಬಹುದು, ವಿಧೇಯಕದ ಬಗ್ಗೆ ಸಾದ್ಯಂತ ಚರ್ಚಿಸುವುದಕ್ಕೆ ಬದಲಾಗಿ, ಅದಕ್ಕೆ ಸಂಬಂಧಿಸಿದಂತೆ ದೊಡ್ಡ ಪ್ರಮಾಣದಲ್ಲಿ ಪರ್ಯಾಲೋಚಿಸಬೇಕಾಗಿರುವ ಅಲ್ಪಸಂಖ್ಯಾತರು ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳಿರಬಹುದು. ಆದ್ದರಿಂದ ರಾಜ್ಯಪಾಲರು ಪ್ರತಿಯೊಂದು ಹಂತದಲ್ಲೂ ಎಚ್ಚರಿಕೆಯಿಂದಿರಬೇಕಾಗುತ್ತದೆ; ವಾಸ್ತವವಾಗಿ ಅವರು ಜನಪ್ರಿಯ ಸರ್ಕಾರದಲ್ಲಿ ಪ್ರತಿಯೊಂದು ಹಂತದಲ್ಲಿ ಮಧ್ಯಪ್ರವೇಶಿಸಲು ಪ್ರಯತ್ನಿಸಲಾಗದು. ಅವರು ತಮ್ಮ ಎಚ್ಚರಿಕೆಯಲ್ಲಿ ತಾವಿರಬೇಕಾಗುತ್ತದೆ; ಅವರು ಕಾಲಕಾಲಕ್ಕೆ ಮಂತ್ರಿಮಂಡಲದ ಅಧ್ಯಕ್ಷರಾಗಿ ಅನುಕೂಲಕರ ಪ್ರಭಾವ ಬೀರಬೇಕಾಗುತ್ತದೆ. ಈ ಎಲ್ಲ ಸನ್ನಿವೇಶಗಳ ಹೊರತಾಗಿಯೂ, ಒಂದು ನಿರ್ದಿಷ್ಟ ಸಂದರ್ಭದಲ್ಲಿ ರಾಜ್ಯಪಾಲರು ವಿಧೇಯಕದ ಜಾರಿಗೆ ತರಬೇಕಾದಂಥ ಸನ್ನಿವೇಶ ಹಠಾತ್ ಆಗಿ ಉದ್ಭವಿಸಿದರೆ ಅದಕ್ಕೆ ತಡೆಯೊಡ್ಡಿ, ವಿಧಾನಮಂಡಲದ ಆ ವಿಧೇಯಕವನ್ನು ಮರು ಪರ್ಯಾಲೋಚನೆಗೆ ಕಳುಹಿಸಲು ರಾಜ್ಯಪಾಲರಿಗೆ ಅವಕಾಶವಿರಬೇಕು. ಭಾರತ ಸರ್ಕಾರ ಅಧಿನಿಯಮದಲ್ಲಿ ಇಂಥವೇ ಉಪಬಂಧಗಳಿವೆ. ಅತ್ಯಂತ ವಿಶೇಷ ಸಂದರ್ಭಗಳ ಹೊರತಾಗಿ, ಜನಪ್ರಿಯ ಸರ್ಕಾರದ ಆಡಳಿತದಲ್ಲಿ ರಾಜ್ಯಪಾಲರು ಹಸ್ತಕ್ಷೇಪ ಮಾಡಲು ಪ್ರಯತ್ನಿಸುವಂತಿಲ್ಲವೆಂದು ನನ್ನ ಮಿತ್ರರಾದ ಪಂಡಿತ್ ಮೈತ್ರ ಅವರಿಗೆ ನಾನು ಭರವಸೆ ನೀಡುತ್ತೇನೆ. ನಾನು ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

**ಮಾನ್ಯ ತಾಜುಮಲ್ ಹುಸೇನ್** (ಬಿಹಾರ್ : ಮುಸ್ಲಿಮ್) : ಮಾನ್ಯರೆ, ನಾನು ಈ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ರಾಜ್ಯಪಾಲರ ಸಮ್ಮತಿಗಾಗಿ ವಿಧೇಯಕವನ್ನು ಸಲ್ಲಿಸಿದಾಗ ಮತ್ತು ಆ ವಿಧೇಯಕದ ಉಪಬಂಧಗಳು ಅವರಿಗೆ ಮನವರಿಕೆಯಾಗದಿದ್ದರೆ ಏನಾಗುತ್ತದೆ? ಸಾಮಾನ್ಯವಾಗಿ, ವಯಸ್ಕ ಮತದಾನದ ಆಧಾರದ ಮೇಲೆ ಆಯ್ಕೆಯಾಗಿರುವ ರಾಜ್ಯಪಾಲರು, ವಿಧಾನಮಂಡಲವು ಅಂಗೀಕರಿಸಿರುವ ಯಾವುದೇ ಕ್ರಮದಲ್ಲಿ ಮಧ್ಯಪ್ರವೇಶಿಸುವುದಿಲ್ಲ. ಆದರೆ, ಅವರಿಗೆ ವಿಧೇಯಕಕ್ಕೆ ಸಂಬಂಧಿಸಿದಂತೆ ಮನವರಿಕೆಯಾಗದಿದ್ದ ಸಂದರ್ಭದಲ್ಲಿ, ತಮ್ಮ ಆತ್ಮಸಾಕ್ಷಿಗೆ ವಿರುದ್ಧವಾಗಿ ಸಹಿ ಹಾಕಬೇಕೇ? ಅಥವಾ ಅವರು ಸೂಚಿಸಿದ ತಿದ್ದುಪಡಿಗಳೊಂದಿಗೆ ಅಥವಾ ಒಟ್ಟಾರೆ ತಿರಸ್ಕರಿಸಿ ಸದನಕ್ಕೆ ಅದನ್ನು ಹಿಂತಿರುಗಿಸುತ್ತಾರೆಯೇ? ಇಂಗ್ಲೆಂಡ್‌ನ ಸಂವಿಧಾನದ ಮೇರೆಗೆ, ವಿಧೇಯಕವು ಹೌಸ್ ಆಫ್ ಕಾಮನ್ಸ್ ಮುಖಾಂತರ ಅಂಗೀಕಾರಗೊಂಡು, ಅದು ಹೌಸ್ ಆಫ್ ಲಾರ್ಡ್ಸ್‌ಗೆ ಹೋಗುತ್ತದೆ; ಆನಂತರ ಅದನ್ನು ರಾಜನ ಸಮ್ಮತಿಗಾಗಿ ಕಳುಹಿಸಲಾಗುತ್ತದೆ. ರೂಢಿಯ ಪ್ರಕಾರ, ರಾಜನು ವಿಧೇಯಕವನ್ನು ತಿರಸ್ಕರಿಸುವ ಹಕ್ಕನ್ನು ಹೊಂದಿದ್ದರೂ, ಅದು ಸಂಸತ್ತಿನ ಸದನಗಳಿಗೆ ಪುನಃ ಹೋಗುತ್ತದೆ. ಅದನ್ನು ಯಾವುವೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿದರೆ ಮತ್ತೆ ಮರು ಸಮ್ಮತಿಗಾಗಿ ಅದನ್ನು ರಾಜನಿಗೆ ಕಳುಹಿಸಿದರೆ, ಆಗ ಅವರು ಅದಕ್ಕೆ ಸಹಿ ಮಾಡಲೇಬೇಕಾಗುತ್ತದೆ ಅಥವಾ ಅವರು ಪದತ್ಯಾಗ ಮಾಡಬೇಕಾಗುತ್ತದೆ. ಹಾಗೆಯೇ ರಾಜ್ಯಪಾಲರಿಗೆ ಸಮ್ಮತಿ ನೀಡುವ ಅಥವಾ ನಿರಾಕರಿಸುವ ಅಧಿಕಾರವನ್ನು ನೀಡಿದರೆ ಅಥವಾ ತನ್ನ ತಿದ್ದುಪಡಿಗಳೊಂದಿಗೆ ವಿಧೇಯಕವನ್ನು ಹಿಂದಕ್ಕೆ ಕಳುಹಿಸಿದರೆ, ರಾಜ್ಯಪಾಲರ ಸಲಹೆಗಳ ಹಿನ್ನಲೆಯಲ್ಲಿ ವಿಧೇಯಕವನ್ನು ಮರುಪರ್ಯಾಲೋಚಿಸುವುದು ಪ್ರಾಂತೀಯ ವಿಧಾನಮಂಡಲದ ಕರ್ತವ್ಯವಾಗಿರುತ್ತದೆ. ಅವರು ವಿಧೇಯಕವನ್ನು ಅದರ ಮೂಲ ರೂಪದಲ್ಲಿ ಪುನಃ ಅಂಗೀಕರಿಸಿದರೆ, ರಾಜ್ಯಪಾಲರು ಅದಕ್ಕೆ ಸಹಿ ಹಾಕಬೇಕಾಗುತ್ತದೆ ಅಥವಾ ಅವರು ಹೊರ ನಡೆಯಬೇಕಾಗುತ್ತದೆ. ಆದುದರಿಂದ, ರಾಜ್ಯಪಾಲರು ಕೇವಲ ನಾಮಮಾತ್ರ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸದೆ ಇರಲು ಅವರಿಗೂ ಒಂದು ಅವಕಾಶವನ್ನು ನೀಡಲೇಬೇಕು ಎಂಬ ಕಾರಣದಿಂದ ಮೇರೆಗೆ ನಾನು ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

**ಮಾನ್ಯ ರಾಮ್‌ನಾರಾಯಣ್ ಸಿಂಗ್** (ಬಿಹಾರ್ : ಸಾಮಾನ್ಯ) : ಮಾನ್ಯರೆ, ನಾನು ಈ ತಿದ್ದುಪಡಿಯನ್ನು ಪ್ರಬಲವಾಗಿ ಬೆಂಬಲಿಸುತ್ತೇನೆ, ಸಂವಿಧಾನದಲ್ಲಿ ನಾವು ಚುನಾಯಿತ ರಾಜ್ಯಪಾಲರಿಗೆ ಸಂಬಂಧಿಸಿದಂತೆ

ಒಂದು ಉಪಬಂಧವನ್ನು ರಚಿಸಿದ್ದೇವೆ ಮತ್ತು ಅವರಿಗೆ ಯಾವುವೇ ಅಧಿಕಾರಗಳನ್ನು ನೀಡಲು ಜನರು ಬಯಸುತ್ತಿಲ್ಲವೆಂದು ಅವರ ಬಗ್ಗೆ ಏಕೆ ಅಷ್ಟೊಂದು ಆತಂಕಪಡುತ್ತಿದ್ದಾರೆಂಬುದು ನನಗೆ ಗೊತ್ತಾಗುತ್ತಿಲ್ಲ. ಕಾಲ ಕಾಲಕ್ಕೆ ರಾಜ್ಯಪಾಲರು ಕ್ರಮಗಳನ್ನು ತೆಗೆದುಕೊಳ್ಳುವುದು ಅವಶ್ಯಕವಾಗುತ್ತದೆ ಹಾಗೂ ಯಾವುದೇ ಶಾಸನವನ್ನು ಮರುಪರ್ಯಾಲೋಚಿಸಿದರೆ, ಯಾವ ತೊಂದರೆಯೂ ಇರುವುದಿಲ್ಲ. ರಾಜ್ಯಪಾಲರು ಸಮಾಜಕ್ಕೆ ಉಪಯೋಗವಾಗಬಹುದಾದ ರೀತಿಯಲ್ಲಿ ಅವರಿಗೂ ಕೆಲವು ಅಧಿಕಾರಗಳನ್ನು ನೀಡಬೇಕೆಂದು ನಾನು ಸದನಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಅದಾಗದಿದ್ದರೆ ಒಟ್ಟಾರೆ ರಾಜ್ಯಪಾಲರ ಹುದ್ದೆಯನ್ನೆ ಬಿಟ್ಟುಬಿಡುವುದು ಉತ್ತಮ. ಮಾನ್ಯರೆ, ಈ ತಿದ್ದುಪಡಿಯನ್ನು ಸದನವು ಅಂಗೀಕರಿಸಬೇಕೆಂಬುದು ನನ್ನ ಭಾವನೆ.

**ಗೌರವಾನ್ವಿತ ಹುಸೇನ್ ಇಮಾಮ್** (ಬಿಹಾರ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ವಿಶ್ವಾದ್ಯಂತ ಅನುಷ್ಠಾನದಲ್ಲಿರುವ ಪದ್ಧತಿಯನ್ನು ಕುರಿತು ಚರ್ಚೆ ನಡೆಯುತ್ತಿರುವಾಗ, ನಮ್ಮಲ್ಲೊಂದು ಪದ್ಧತಿಯನ್ನು ರೂಢಿಗೆ ತರುವ ಸಲುವಾಗಿ ಸಂವಿಧಾನ ರಚನಾಸಭೆಗೆ ಸಲಹೆ ನೀಡುವ ಸಲುವಾಗಿ ನಾನು ಮಧ್ಯೆ ಪ್ರವೇಶಿಸುತ್ತಿದ್ದೇನೆ. ಮಾನ್ಯರೇ, ಈ ಕ್ಷಣದಲ್ಲಿ ನನ್ನ ಹಲವಾರು ಸಹೋದ್ಯೋಗಿಗಳು ತಮ್ಮ ಮುಂದೆ ವಿಶ್ವದ ಸಂವಿಧಾನಗಳನ್ನು ಇಟ್ಟುಕೊಂಡಿರುವುದಿಲ್ಲ ಎಂಬುದನ್ನು ತಿಳಿಸಲು ನನಗೆ ವಿಷಾದವೆನಿಸುತ್ತಿದೆ. ಸಂವಿಧಾನ ಸಲಹೆಗಾರರು, ವಿಷಯಕ್ಕೆ ಸಂಬಂಧಿಸಿದಂತೆ ಸಂವಿಧಾನ ರಚನಾ ಸಭೆಯ ಸಿಬ್ಬಂದಿಯ ಮೂಲಕ ಎಲ್ಲರಿಗೂ ಒದಗಿಸಿರುವ ಸಮಗ್ರ ಟಿಪ್ಪಣಿಗಳನ್ನು ಅವರು ಬಹುಶಃ ಓದಿದಂತಿಲ್ಲ.

ಒಂದೇ ಒಂದು ನಿದರ್ಶನವನ್ನು ನೀಡಬೇಕೆಂದರೆ, ಯು.ಎಸ್.ಎ.ದಲ್ಲಿ ಆಚರಣೆಯಲ್ಲಿರುವ ರಾಷ್ಟ್ರಪತಿಗಳ ಅಧಿಕಾರ – ಅಲ್ಲಿ ವಿಧೇಯಕಕ್ಕೆ ಮತ ನೀಡಲು ಸೆನೆಟ್ ಮತ್ತು ಹೌಸ್ ಆಫ್ ರೆಪ್ರೆಸೆಂಟೇಟಿವ್ ಎಂಬ ಎರಡು ಸದನಗಳು ಇದ್ದಾಗ್ಯೂ, ಎರಡು ಸದನಗಳು ವಿಧೇಯಕವನ್ನು ಮೂರನೇ ಎರಡರಷ್ಟು ಬಹುಮತದಿಂದ ನಿರಾಕರಿಸಿದರೆ, ನಿಷೇಧಾಧಿಕಾರದ ಮೂಲಕ ಅಧ್ಯಾರೋಹಣ ಮಾಡಲು (ಹೆಚ್ಚಿನ ಪ್ರಭಾವವುಳ್ಳದ್ದನ್ನಾಗಿ ಮಾಡಲು) ಸಾಧ್ಯವಿದೆ. ಇದರೊಂದಿಗೆ ಅವರಿಗೆ ಇನ್ನೊಂದು ನಿಷೇಧಾಧಿಕಾರವಿದೆ. ಅದು ಪೂರಕ ನಿಷೇಧಾಧಿಕಾರ. ಸದನದ ಉಪವೇಶನಗಳ ಹತ್ತು ದಿನಗಳ ಒಳಗಾಗಿ ಅದನ್ನು ಅಂಗೀಕರಿಸಿದ್ದರೆ, ನಿಷೇಧಾಧಿಕಾರದ ಅವರು ವಿಧೇಯಕವನ್ನು ತಿರಸ್ಕರಿಸಬಹುದು. ವಿಶ್ವದಲ್ಲಿ ಏನೇನು ನಡೆಯುತ್ತಿದೆ ಎಂಬ ಬಗ್ಗೆ ಎಷ್ಟು ಬೇಕಾದರೂ ನಿದರ್ಶನಗಳನ್ನು ನೀಡಬಹುದು. ವಿಶ್ವದ ಇತರ ಭಾಗಗಳಲ್ಲಿ ಏನು ಆಚರಣೆಯಲ್ಲಿವೆಯೋ ಅಂಥ ವಿವಾದಾತ್ಮಕ ವಿಷಯಗಳ ಬಗ್ಗೆ ಸಂವಿಧಾನಿಕ ಸಲಹೆಗಾರರ ಸಲಹೆಯನ್ನು ಪಡೆದು ಮಾನ್ಯ ಅಧ್ಯಕ್ಷರು ಅಂಥ ಪದ್ಧತಿಗಳನ್ನು ಸೆಳೆಗೊಳಿಸಿದರೆ ಅದು ಬಹಳ ಉಪಯುಕ್ತವಾಗುತ್ತದೆ. ಸಂವಿಧಾನದ ಸಲಹೆಗಾರರು, ನಮಗೆ ಪುಸ್ತಕವನ್ನು ನೀಡಿರುವ ಬಗ್ಗೆ ಸಂಶಯವೇ ಇಲ್ಲ. ಅದು ನಮಗೆ ಅತ್ಯಂತ ಉಪಯುಕ್ತವಾದುದು. ವಿಶ್ವದ ಆಚರಣೆಗಳ ಬಗ್ಗೆ ಮಾಹಿತಿ ಪಡೆಯಲೂ ಈಗಲು ಸಾಕಷ್ಟು ಅವಕಾಶವಿದೆ.

ಮಾನ್ಯ ಸಂತಾನಮ್ ಅವರ ತಿದ್ದುಪಡಿಯು ಅತ್ಯಂತ ಅವಶ್ಯಕವೆಂದು ನಾನು ಭಾವಿಸುತ್ತೇನೆ. ಒಂದೇ ಸದನವನ್ನು ಒಳಗೊಂಡಿರುವ ವಿಧಾನಮಂಡಲಗಳಿರುವಂಥ ಪ್ರಾಂತಗಳಲ್ಲಿ ಮಾತ್ರ ಅದು ಪರಿಣಾಮವನ್ನು ಹೊಂದಿರುತ್ತದೆಂದು ತಿಳಿಸುತ್ತ, ಈ ತಿದ್ದುಪಡಿ ಬಗ್ಗೆ ಅವರು ಒತ್ತಾಯಿಸುತ್ತಿದ್ದಾರೆ. ಎರಡನೇ ಸದನ ಇರುವ ಕಡೆಯಲ್ಲಿ, ಕೆಳ ಸದನದ ಕ್ರಮಗಳ ಮೇಲೆ ಅದು ತಡೆಯಾಗಿ ಕಾರ್ಯನಿರ್ವಹಿಸುತ್ತದೆಂದು ಪ್ರಸ್ತಾವಕರು ಭಾವಿಸಿದ್ದಾರೆ. ಮಾನ್ಯರೆ, ಆದರೆ, ನಮಗೆಲ್ಲ ತಿಳಿದಿರುವಂತೆ, ಎರಡು ಸದನಗಳ ನಡುವೆ ಯಾವುದೇ ವ್ಯತ್ಯಾಸವಿದ್ದರೆ, ಬೇರೆ ಬೇರೆ ದೇಶಗಳಲ್ಲಿ, ವ್ಯತ್ಯಾಸಗಳನ್ನು ಪರಿಹರಿಸುವ ಬೇರೆ ಬೇರೆ ವಿಧಾನಗಳಿದ್ದು, ಈ ಬಗ್ಗೆ ಹೆಚ್ಚಿನ ಸ್ಪಷ್ಟೀಕರಣದ ಅಗತ್ಯವಿದೆ. ಹಣಕಾಸು ವಿಧೇಯಕಕ್ಕೆ ಸಂಬಂಧಪಟ್ಟಂತೆ ಕೆಲವು ದೇಶಗಳಲ್ಲಿ ಎರಡನೇ ಸದನವನ್ನು, ಘಾಸಿಗೊಳಿಸಿ ನಿಷ್ಕ್ರಿಯಗೊಳಿಸಿರುವ ನಿದರ್ಶನವೂ ಇದೆ. ಅದಕ್ಕೆ ಯಾವುದೇ ಅಧಿಕಾರವಿಲ್ಲ. ಇತರ ವಿಧೇಯಕಗಳಿಗೆ ಸಂಬಂಧಿಸಿದಂತೆ, ಕೆಲವು ಸಂವಿಧಾನಗಳಲ್ಲಿ ಎರಡನೇ ಸದನವು

ಅಂತಿಮವಾಗಿ ಮತ ಚಲಾಯಿಸಬಹುದು, ಇನ್ನು ಇತರ ಸಂವಿಧಾನಗಳ ಪ್ರಕಾರ, ಎರಡೂ ಸದನಗಳು ಒಟ್ಟಾಗಿ ಸಭೆ ಸೇರಿ ನಿರ್ಣಯಕ್ಕೆ ಬರುತ್ತವೆ, ಎರಡನೇ ಸದನದ ನಿರ್ಣಯಗಳನ್ನು ಕೆಳ ಸದನದ ಬಹುಮತದ ಮೂಲಕ ಸಾಮಾನ್ಯವಾಗಿ ಅಧ್ಯಾರೋಹ ಮಾಡಲಾಗುತ್ತದೆ. ಆದರೆ, ಇನ್ನು ಮುಂಬರುವ ದಿನಗಳಲ್ಲಿ ಹೊರಗಡೆಯವರಿಂದ ರಾಜ್ಯಪಾಲರು ನೇಮಕಗೊಳ್ಳುವರೆಂದು ಈಗಲೇ ನಾವು ಕನಸು ಕಾಣುವುದು ತಪ್ಪಾಗುತ್ತದೆಂಬುದು ನನ್ನ ಭಾವನೆ. ಇನ್ನು ಮುಂದೆ, ರಾಜ್ಯಪಾಲರು ಹಿಂದೆ ಇದ್ದ ಅಧಿಕಾರಗಳಿಂದಲೇ ಉದ್ದೇಶಗಳನ್ನು ಈಡೇರಿಸಲು ಆಗುವುದಿಲ್ಲ. ರಾಜ್ಯಪಾಲರು ವಯಸ್ಕ ಮತದಾನದ ಮೂಲಕ ಆಯ್ಕೆಯಾದ ನಮ್ಮವರೆ ಆಗಿರುತ್ತಾರೆ. ಆದುದರಿಂದ, ನೀವು ಅವರಲ್ಲಿ ಸಂಪೂರ್ಣ ನಂಬಿಕೆ ಮತ್ತು ವಿಶ್ವಾಸವನ್ನು ಇಡಬೇಕಾದುದು ಅವಶ್ಯಕವಾಗಿದೆ. ನೀವು ಅವರಲ್ಲಿ ವಿಶ್ವಾಸವನ್ನಿಟ್ಟು ಮಾನ್ಯ ಸಂತಾನಮ್ ಅವರು ಸಲಹೆ ನೀಡಿದಂತೆ ಈ ನಿಯಂತ್ರಕ ಹಾಗೂ ಸಮತೋಲನ ಕ್ರಮಗಳಲ್ಲಿ ನಂಬಿಕೆ ಇಟ್ಟು ಆ ಬಗ್ಗೆ ಉಪಬಂಧ ರಚಿಸಿದರೆ, ಸದನವು ತಪ್ಪು ದಾರಿ ಹಿಡಿದರೆ, ಅದನ್ನು ಸರಿಪಡಿಸಲು ಇನ್ನೊಂದು ಸದನಕ್ಕೆ ಅವಕಾಶ ಇದ್ದು, ನೆಮ್ಮದಿಯ ಮಾರ್ಗದಲ್ಲಿ ಮುನ್ನಡೆಯಬಹುದು. ಇದು, ನಾವು ಅಪಾಯಗಳನ್ನು ತಪ್ಪಿಸಲು ಸಾಧ್ಯವಿರುವ ಏಕಮಾತ್ರ ವಿಧಾನವಾಗಿದೆ. ನಾನು ತಿದ್ದುಪಡಿಗೆ ಬೆಂಬಲ ಸೂಚಿಸುತ್ತೇನೆ.

**ಕುಮಾರರಾಜ ಸರ್ ಎಮ್.ಎ. ಮುತ್ತಯ್ಯ ಚೆಟ್ಟಿಯಾರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೇ, ಮಾನ್ಯ ಸಂತಾನಮ್ ಅವರು ಈ ತಿದ್ದುಪಡಿಯನ್ನು ಪ್ರಸ್ತಾಪಿಸಿರುವುದರಿಂದ ಮತ್ತು ಸದನವು ಇದನ್ನು ಅಂಗೀಕರಿಸುವ ನಿರೀಕ್ಷೆ ಇರುವುದರಿಂದ ನನಗೆ ಸಂತೋಷವಾಗುತ್ತಿದೆ. ಆದರೆ, ಎರಡನೇ ಸದನವು ಇಲ್ಲದಿರುವ ಪ್ರಾಂತಗಳಿಗೆ ತಿದ್ದುಪಡಿ ಅನ್ವಯಿಸುವುದನ್ನು ನಿರ್ಬಂಧಿಸಿರುವುದು ನನ್ನ ಸಂತೋಷಕ್ಕೆ ಭಂಗವನ್ನುಂಟು ಮಾಡುತ್ತಿದೆ.

ಮಾನ್ಯರೆ, ಎರಡು ಸದನಗಳು ಇರುವ ಕಡೆಗಳಲ್ಲಿ, ತರಾತುರಿಯ ಶಾಸನದ ವಿರುದ್ಧ ಅವು ಸಾಕಷ್ಟು ಅಡೆತಡೆಯನ್ನು ಒಡ್ಡುತ್ತ ಎಂದು ಖಚಿತವಾಗಿ ನಂಬಲು ಸಾಧ್ಯವಿಲ್ಲವೆಂಬುದು ನಮ್ಮ ಅನುಭವಕ್ಕೆ ಬಂದಿದೆ. ಕೆಲವು ವರ್ಷಗಳ ಹಿಂದೆ, ಕೆಳ ಸದನವು ತರಾತುರಿಯಿಂದ ಶಾಸನವನ್ನು ಅಂಗೀಕರಿಸಲು ಆತುರಪಟ್ಟಾಗ, ಆ ಶಾಸನಗಳಲ್ಲಿ ಅನೇಕ ತಪ್ಪುಗಳು ನುಸುಳಿದ್ದವು. ಆಗ, ಕೆಳಸದನದ ಮುಖಂಡರು ಸರಿಪಡಿಸುವಂತೆ ಮೇಲ್ಮನೆಯ ಸದಸ್ಯರನ್ನು ಕೋರಿರುವ ಹಾಗೂ ಕೆಳಸದನಕ್ಕೆ ಆ ವಿಧೇಯಕವನ್ನು ಹಿಂತಿರುಗಿಸಿದ ಅನೇಕ ಸಂದರ್ಭಗಳೂ ಇವೆ. ಕೆಳ ಸದನದ ವಿಷಯವನ್ನು ಮರುಪರ್ಯಾಲೋಚಿಸಲು ಒಂದು ಅವಕಾಶವನ್ನು ನೀಡಿದರೆ ಈ ಎಲ್ಲವನ್ನೂ ತಪ್ಪಿಸಬಹುದಾಗಿದೆ.

ಮರು ಪರ್ಯಾಲೋಚನೆಯನ್ನು ಅವಶ್ಯಕಗೊಳಿಸುವುದಕ್ಕೆ ಹಲವು ಕಾರಣಗಳು ಇವೆ. ಮಾನ್ಯರೆ, ಹಲವಾರು ಸಂದರ್ಭಗಳಲ್ಲಿ, ಎಲ್ಲ ಸ್ಥಾಯಿ ಆದೇಶಗಳನ್ನು ರದ್ದುಗೊಳಿಸಿ, ಹಿಂದಿನ ದಿನದ ಸಂಜೆ ರಾಜ್ಯಪತ್ರದಲ್ಲಿ ಪ್ರಕಟಿಸಿರುವ ಶಾಸನಾತ್ಮಕ ಕ್ರಮಗಳನ್ನು, ಕಣ್ಣು ಮಿಟುಕಿಸುವಷ್ಟರಲ್ಲಿ ಮಾರನೆ ದಿನ ಬೆಳಿಗ್ಗೆಯೇ ಶಾಸನದ ಮುಖಾಂತರ ಅದನ್ನು ಮುಂದುವರಿಸಲಾಯಿತು. ತುರ್ತು ಸಂದರ್ಭ ಉದ್ಭವಿಸಿತ್ತೆಂದು ಮತ್ತು ವಿಧಾನಮಂಡಲವು ಅಧಿವೇಶನದ ಮುಂದೂಡಿಕೆಗೆ ಮೊದಲು ಕ್ರಮಗಳನ್ನು ಅಂಗೀಕರಿಸದಿದ್ದರೆ, ರಾಜ್ಯಪಾಲರು ಅಧ್ಯಾದೇಶವನ್ನು ಹೊರಡಿಸಬೇಕಾಗುತ್ತಿತ್ತು ಎಂದು ಅವರು ಹೇಳಿಕೆ ನೀಡಿದ್ದರು.

ಈ ಕಾರಣಗಳಿಗಾಗಿಯೇ ನಾವು ಒಂದು ಹೆಜ್ಜೆ ಮುಂದಕ್ಕೆ ಹೋಗಬೇಕೆಂದು ಮತ್ತು ಪ್ರಾಂತಗಳಲ್ಲಿ ಒಂದೇ ಸದನ ಇರಬೇಕೆಂಬ ಉಲ್ಲೇಖವನ್ನು, ತಿದ್ದುಪಡಿಯಿಂದ ತೆಗೆದುಹಾಕಿ, ಎರಡು ಸದನಗಳಿರುವ ಪ್ರಾಂತಗಳಲ್ಲೂ ಸಹ ಇಂಥ ನಿಯಂತ್ರಣ ಇರುವ ಹಾಗೆ ಮಾಡಬೇಕೆಂದು ನಾನು ಸಲಹೆ ನೀಡುತ್ತೇನೆ.

ರಾಜ್ಯಪಾಲರಿಂದ ಅಧಿಕಾರದ ದುರ್ಬಳಕೆಯ ಸಾಧ್ಯತೆಗೆ ಸಂಬಂಧಿಸಿದಂತೆ, ಅವರು ಅಪರಿಚಿತರಾಗಿ ಉಳಿಯಬಾರದು ಎಂದು ತೋರಿಸಿಕೊಟ್ಟಿರುವ ನನ್ನ ಮಾನ್ಯ ಸ್ನೇಹಿತರಾದ ಮಾನ್ಯ ಹುಸೇನ್ ಇಮಾಮ್

ಅವರ ಬಗ್ಗೆ ನನಗೆ ಸಂತೋಷವಾಗುತ್ತಿದೆ. ಅವರು (ರಾಜ್ಯಪಾಲರು) ಪ್ರಾಂತೀಯ ವ್ಯಕ್ತಿಯಾಗಿ ಅಥವಾ ಇನ್ನೊಂದು ಪ್ರಾಂತದವರಾಗಿರದೆ ಭಾರತೀಯರಾಗಿ ನಡೆದುಕೊಳ್ಳಬೇಕು. ಅದನ್ನು ಕೆಲವರು ಸಾರ್ವಜನಿಕ ಅಭಿಪ್ರಾಯದಿಂದ ತೂಗಿ ನೋಡುತ್ತಿದ್ದಾರೆ. ಸಾರ್ವಜನಿಕರ ಅಭಿಪ್ರಾಯಕ್ಕೆ ವಿರುದ್ಧವಾಗಿ ವಿಧಾನಮಂಡಲವು ಕ್ರಮ ಕೈಗೊಳ್ಳಲು ತರಾತುರಿ ತೋರುತ್ತಿದೆ ಎಂದು ಅವರು ಭಾವಿಸಿದರೆ, ಅವರು ಅಂಥ ಕ್ರಮದ ಮರುಪರ್ಯಾಲೋಚನೆಗಾಗಿ ಅದನ್ನು ಹಿಂತಿರುಗಿಸುವರೆಂದು ನಿರೀಕ್ಷಿಸಬಹುದಾಗಿದೆ. ಶಾಸಕರ ಮುಂದೆ ತಂದಂಥ ಶಾಸನದ ಯಾವುದೇ ಭಾಗವನ್ನು ಕುರಿತು ಅಧ್ಯಯನ ಮಾಡಲು ಅವರಿಗೆ ಸಮಯದ ಅಭಾವವಿರುವ ಸಂದರ್ಭಗಳು ಇರಬಹುದು ಮತ್ತು ರಾಜ್ಯಪಾಲರ ಅಭಿಪ್ರಾಯಗಳನ್ನು ರೂಪಿಸುವಲ್ಲಿ ದೇಶದಲ್ಲಿನ ಪತ್ರಿಕಾ ಮಾಧ್ಯಮ ಮತ್ತು ಸಾರ್ವಜನಿಕ ಅಭಿಪ್ರಾಯವನ್ನು ಪುನಃ ಒಮ್ಮೆ ಅವಲೋಕಿಸುವ ಅವಕಾಶವನ್ನು ಪಡೆದಾಗ ಮಾತ್ರ ಅವರಿಗೆ ಸಂತೋಷ ಉಂಟಾಗಬಹುದು. ರಾಜ್ಯಪಾಲರು ತಪ್ಪಾಗಿ ನಡೆದುಕೊಂಡರೆ, ಹಾಗೆ ಮಾಡುವಂತೆ ಮಂತ್ರಿ ಮಂಡಲವು ಹೇಳಿತ್ತೆಂದು ಮತ್ತು ಸಾರ್ವಜನಿಕ ಅಭಿಪ್ರಾಯವಾಗಿತ್ತೆಂದು ಹೇಳಲಾಗುತ್ತದೆ. ಶಾಸನಾತ್ಮಕ ಕ್ರಮಗಳನ್ನು ಹಿಂತಿರುಗಿಸುವ ಅಧಿಕಾರವನ್ನು ರಾಜ್ಯಪಾಲರು ದುರ್ಬಳಕೆ ಮಾಡಿಕೊಳ್ಳುವರೆಂದು ನಾನು ಭಾವಿಸುವುದಿಲ್ಲ. ಪ್ರಸ್ತಾವಕರು ಮತ್ತು ಪಕ್ಷಗಳ ಮುಖಂಡರು, ಇದು ಒಂದೇ ಸದನ ಇದ್ದಲ್ಲಿ ಅನ್ವಯವಾಗುತ್ತದೆ ಎಂಬುದನ್ನು ತೆಗೆದುಹಾಕುವ ಸಾಧ್ಯತೆಯನ್ನು ಕಂಡುಕೊಳ್ಳುವರೆಂದು ಮತ್ತು ಈ ನಿಯಂತ್ರಣ ಕ್ರಮಕ್ಕೆ ಎರಡು ಸದನಗಳು ಇರುವಲ್ಲಿಯೂ ಸಹ ಅವಕಾಶ ಮಾಡಿಕೊಡುವರೆಂದು ನಾನು ಆಶಿಸುತ್ತೇನೆ.

**ಬಿ. ಪಾಕರ್ ಸಾಹಿಬ್ ಬಹಾದ್ದೂರ್** (ಮದ್ರಾಸ್ : ಮುಸ್ಲಿಮ್) : ಈ ತಿದ್ದುಪಡಿಗೆ ಬೆಂಬಲ ಸೂಚಿಸಲು ನನಗೆ ಅತೀವ ಸಂತೋಷವುಂಟಾಗುತ್ತಿದೆ. ಇದೆ ಸಮಯದಲ್ಲಿ, ಎರಡು ಸದನಗಳು ಇರುವ ವಿಧಾನಮಂಡಲಗಳಿಗೂ ಇದನ್ನು ವಿಸ್ತರಿಸಬೇಕೆಂದು ಹಿಂದಿನ ಭಾಷಣಕಾರರು ತಿಳಿಸಿರುವ ಅಭಿಪ್ರಾಯಕ್ಕೆ ನನ್ನ ಅಸಮ್ಮತಿಯನ್ನು ನಾನು ವ್ಯಕ್ತಪಡಿಸುತ್ತೇನೆ. ತರಾತುರಿಯ ಶಾಸನದ ವಿರುದ್ಧ ಮೇಲ್ಮನೆಯು ಸಾಕಷ್ಟು ಅಡ್ಡಿಯುಂಟುಮಾಡುತ್ತದೆ. ಆದುದರಿಂದ, ಮೇಲ್ಮನೆ ಇರುವ ಪ್ರಾಂತಗಳಲ್ಲಿ ಈ ಅಧಿಕಾರವನ್ನು ರಾಜ್ಯಪಾಲರಿಗೇ ನೀಡಬೇಕೆಂಬುದು ಅವಶ್ಯಕವಲ್ಲ. ನಾನು ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

**ಶ್ರೀ ನಝಿರುದ್ದೀನ್ ಅಹ್ಮದ್** : ತಿದ್ದುಪಡಿಗೆ ಬೆಂಬಲ ನೀಡಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಮಾನ್ಯರೇ, ಈ ಸಂಬಂಧದಲ್ಲಿ ಇಲ್ಲಿ ಮಾಡಿದ ಭಾಷಣಗಳಲ್ಲಿ, ವಿಷಯಕ್ಕೆ ಸಂಬಂಧಿಸಿದಂತೆ ಒಂದು ಅಂಶವನ್ನು ಯಾರೂ ತಿಳಿಸಿಲ್ಲ. ಇದಕ್ಕಾಗಿಯೇ ಕೆಲವು ಸಂದರ್ಭಗಳಲ್ಲಿ ಶಾಸನವು ಅಧಿಕಾರಾತೀತ ಹಾಗೂ ಅಕ್ರಮವಾಗಹುದು ಅಥವಾ ಕೆಲವು ವಿಷಯಗಳಿಗೆ ಸಂಬಂಧಪಟ್ಟಂತೆ ಕಾನೂನುಬಾಹಿರವಾಗಬಹುದು. ಅಂಥ ಸಂದರ್ಭಗಳಲ್ಲಿ, ಆ ರೀತಿಯ ಶಾಸನವನ್ನು ಪ್ರಾಯೋಜಿಸುವ ಸಚಿವರು ವಿಷಯವನ್ನು ಮರುಪರ್ಯಾಲೋಚಿಸಲು ಸ್ವತಃ ಅಪೇಕ್ಷಿಸಬಹುದು. ಸಾರ್ವಜನಿಕರ ಅಭಿಪ್ರಾಯವು, ಕ್ರಮಕ್ಕೆ ವಿರುದ್ಧವಾಗಿದೆ ಎಂದು ಅವರಿಗೆ ಕಂಡುಬಂದಾಗ, ಅವರ ನಡತೆಯನ್ನು ಮರುಪರ್ಯಾಲೋಚಿಸಲು ಅವರಿಗೆ ಒಂದು ಅವಕಾಶವನ್ನು ಇಂಥ ಒಂದು ಉಪಬಂಧವು ನೀಡುತ್ತದೆ. ಹೊಸ ಸಂವಿಧಾನದ ಅಡಿಯಲ್ಲಿ, ಒಬ್ಬರು ರಾಜ್ಯಪಾಲರು ತಪ್ಪಾದ ರೀತಿಯಲ್ಲಿ ವರ್ತಿಸುತ್ತಾರೆ ಎಂದು ಕಲ್ಪಿಸಿಕೊಳ್ಳಲಾಗುವುದಿಲ್ಲ. ಇಂಥ ಅಧಿಕಾರಕ್ಕೆ ಸಂಬಂಧಿಸಿದ ಸಂದರ್ಭಗಳನ್ನು ಸ್ವತಃ ಸಚಿವರುಗಳೇ ಬಹಳ ಹೆಚ್ಚಾಗಿ ಅಪೇಕ್ಷಿಸಬಹುದು. ೧೯೩೫ರ ಭಾರತ ಸರ್ಕಾರ ಅಧಿನಿಯಮದಲ್ಲಿ ಇರುವ ಈ ರೀತಿಯ ಅಧಿಕಾರವನ್ನು ಈ ವರದಿಯಲ್ಲಿ, ಬಹುತೇಕವಾಗಿ ಯಥಾರೂಪದಲ್ಲಿ ಪ್ರತಿ ಮಾಡಿಕೊಳ್ಳಲಾಗಿದೆ ಎಂದು ನಾನು ನಂಬುತ್ತೇನೆ. ೧೯೩೫ರ ಭಾರತ ಸರ್ಕಾರ ಅಧಿನಿಯಮವು ಮಾದರಿ ಶಾಸನವಾಗಬೇಕೆಂದು ಈಗ ಅಳವಡಿಸಿಕೊಳ್ಳಲಾಗಿದೆ. ನಾನು ಈಗಾಗಲೇ ಮನವಿ ಮಾಡಿಕೊಂಡಿರುವಂತೆ, ಎರಡನೇ ಸದನ ಇರದಿರುವ ಪ್ರಾಂತಗಳಲ್ಲಿ ರಾಜ್ಯಪಾಲರಿಗೆ ಈ ಅಧಿಕಾರವನ್ನು ನೀಡಬೇಕು ಮತ್ತು ಅವರು ಪ್ರಯೋಜನಕಾರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತಾರೆಂದು ನಿರೀಕ್ಷಿಸಬಹುದಾಗಿದೆ.

**ಮಹಬೂಬ್ ಅಲಿ ಬೇಗ್ ಸಾಹಿಬ್ ಬಹಾದ್ದೂರ್** (ಮದ್ರಾಸ್ : ಮುಸ್ಲಿಮ್) : ಸನ್ಮಾನ್ಯ ಅಧ್ಯಕ್ಷರೇ, ಪ್ರಾಂತಗಳು ಎರಡನೇ ಸದನವನ್ನು ಹೊಂದಿರಲಿ ಅಥವಾ ಹೊಂದಿರದಿರಲಿ, ಎರಡನೇ ಸದನವನ್ನು ಹೊಂದುವ ಆಯ್ಕೆಯನ್ನು ಮಾಡಿಕೊಂಡಿರುವಂಥ ಪ್ರಾಂತಗಳ ಸಂದರ್ಭದಲ್ಲಿ, ಎರಡನೇ ಸದನ ಇರಬೇಕೆಂಬ ವಿಷಯವನ್ನು ಈ ಸದನವು ಅಂಗೀಕರಿಸುವುದೆಂದು ಇದರಿಂದ ಇಂಗಿತವಾಗುವಂತೆ ಪ್ರಾಂತಗಳನ್ನು ಸಬಲೀಕರಿಸುವ ಖಂಡವನ್ನು ನಾವು ಹಿಂದೆ ಅಂಗೀಕರಿಸಿದೆವು. ಈ ಸಂದರ್ಭಗಳಲ್ಲಿ ನಾವು, ಏಕಮಾತ್ರ ಸದನ ಇರುವುದನ್ನು ಆಯ್ಕೆ ಮಾಡಿಕೊಂಡಿರುವ ಪ್ರಾಂತಗಳಿಗೆ, ಪ್ರತಿಬಂಧಕ ಪ್ರಭಾವದ ವಿಷಯವನ್ನು ಹೇಗೆ ನಿರಾಕರಿಸಲು ಸಾಧ್ಯ? ನೀವು ಪ್ರಾಂತಗಳಲ್ಲಿ ಎರಡನೇ ಸದನ ಇರುವುದಕ್ಕೆ ಅವಕಾಶ ಮಾಡಿಕೊಡಬೇಕು, ಇಲ್ಲವೇ ಏಕಮಾತ್ರ ಸದನ ಇರುವುದನ್ನು ಆಯ್ಕೆ ಮಾಡಿಕೊಂಡಿರುವ ಪ್ರಾಂತಗಳಲ್ಲಿ ವಿಧೇಯಕಗಳ ಮರುಪರ್ಯಾಲೋಚನೆಗಾಗಿ ರಾಜ್ಯಪಾಲರಿಗೆ "ಪ್ರತಿಬಂಧಕ ಪ್ರಭಾವ" ಇರುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಾನ್ಯರೆ, ಏಕಮಾತ್ರ ಸದನ ಇರಬೇಕೆಂದು ಆಯ್ಕೆ ಮಾಡಿಕೊಂಡಿರುವ ಪ್ರಾಂತಗಳಲ್ಲಿ, ತರಾತುರಿಯಾಗಿ ಸಿದ್ಧಪಡಿಸಿದ್ದ ಶಾಸನವನ್ನು ಪರಿಶೀಲಿಸಲು ರಾಜ್ಯಪಾಲರಿಗೆ ಈ "ಪ್ರತಿಬಂಧಕ ಪ್ರಭಾವ"ವು ಇರಲೇಬೇಕು ಮತ್ತು ನಾವು ಅಂಥ ಪ್ರಾಂತಗಳಿಗೆ ಈ ರೀತಿಯ ಅವಕಾಶ ಇರುವುದನ್ನು ನಿರಾಕರಿಸಲಾಗುವುದಿಲ್ಲ. ಆದುದರಿಂದ, ನಾನು ತಿದ್ದುಪಡಿಗೆ ಬೆಂಬಲ ನೀಡುತ್ತೇನೆ.

**ಕೆ.ಟಿ.ಎಮ್. ಅಹ್ಮದ್ ಇಬ್ರಾಹಿಮ್ ಸಾಹಿಬ್ ಬಹಾದುರ್** (ಮದ್ರಾಸ್ : ಮುಸ್ಲಿಮ್) : ಮಾನ್ಯ ಅಧ್ಯಕ್ಷರೆ, ತರಾತುರಿಯಾಗಿ ರೂಪಿಸಿದ ಶಾಸನವನ್ನು ತಡೆಯಲು ಈ ಅಧಿಕಾರವು ರಾಜ್ಯಪಾಲರಿಗೆ ಖಂಡಿತವಾಗಿಯೂ ಅವಶ್ಯಕ. ಈ ಅಧಿಕಾರವು ಪ್ರಜಾಪ್ರಭುತ್ವ ತತ್ತ್ವಗಳಿಗೆ ಅಸಂಗತವಾಗಿರುವುದಿಲ್ಲ ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ರಾಷ್ಟ್ರೀಯ ಸಭೆಯು ಅಂಗೀಕರಿಸಿರುವ ವಿಧೇಯಕವನ್ನು ಆರು ತಿಂಗಳ ಒಳಗಾಗಿ ಮರುಪರ್ಯಾಲೋಚನೆಗೆ ಹಿಂತಿರುಗಿಸುವ ಅಧಿಕಾರ ರಾಷ್ಟ್ರಪತಿಯವರಿಗೆ ಇರಬೇಕೆಂದು ಒಕ್ಕೂಟ ಸಂವಿಧಾನದಲ್ಲಿ, ಒಂದು ಉಪಬಂಧ ರಚಿಸಲಾಗಿದೆ. ಒಕ್ಕೂಟ ಸಂವಿಧಾನದಲ್ಲಿ ರಾಷ್ಟ್ರಪತಿಯವರಿಗೆ ಯಾವ ಅಧಿಕಾರ ನೀಡಿದೆಯೋ, ಅಂಥದೇ ಅಧಿಕಾರವನ್ನು ಪ್ರಾಂತಗಳ ರಾಜ್ಯಪಾಲರಿಗೆ ನೀಡಬೇಕಾದುದು ನ್ಯಾಯಸಮ್ಮತವಾಗಿದೆ. ಇದರಲ್ಲಿ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದುದೇನೂ ಇಲ್ಲ.

ಮಾನ್ಯರೆ, ಅಷ್ಟೇ ಅಲ್ಲದೆ, ಪ್ರಾಂತಗಳ ರಾಜ್ಯಪಾಲರಿಗೆ ಅತ್ಯಂತ ಮಹತ್ವದ ಅಧಿಕಾರಗಳನ್ನೂ ವಹಿಸಿಕೊಡಲಾಗಿದೆ, ಮತ್ತು ಅವರು ಚುನಾಯಿತ ರಾಜ್ಯಪಾಲರಾಗಿರುವುದರಿಂದ ಆ ಅಧಿಕಾರಗಳನ್ನು ದುರ್ಬಳಕೆ ಮಾಡಿಕೊಳ್ಳುವುದಿಲ್ಲವೆಂದು ಪ್ರಾಂತೀಯ ಸಮಿತಿಯು ತಿಳಿಸುತ್ತದೆ. ಮಾನ್ಯರೆ, ಆಗ, ಸೀಮಿತ ಮತದಾನದ ಮೂಲಕ ಆಯ್ಕೆಯಾಗಿರುವ ಒಕ್ಕೂಟದ ರಾಷ್ಟ್ರಪತಿಯವರಿಗೆ, ರಾಷ್ಟ್ರೀಯ ಸಭೆಗೆ ವಿಧೇಯಕಗಳನ್ನು ಮರುಪರ್ಯಾಲೋಚನೆಗಾಗಿ ವಾಪಸ್ಸು ಕಳುಹಿಸುವ ಅಧಿಕಾರವನ್ನು ನೀಡಲಾಗಿದ್ದರೆ, ವಯಸ್ಕ ಮತದಾನದ ಆಧಾರದ ಮೇಲೆ ಚುನಾಯಿತರಾಗುವ ರಾಜ್ಯಪಾಲರಿಗೆ ಅದೇ ಅಧಿಕಾರವನ್ನು ನೀಡಬೇಕು ಎಂಬುದು ಸೂಕ್ತ ಮತ್ತು ಸಹಜ. ಆದುದರಿಂದ ಮಾನ್ಯ ಸಂತಾನಮ್ ಅವರು ಪ್ರಸ್ತಾವಿಸಿದ ತಿದ್ದುಪಡಿಗೆ ಬೆಂಬಲ ಸೂಚಿಸಲು ನನಗೆ ಸಂತೋಷವೆನಿಸುತ್ತದೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲ್:** ಮಾನ್ಯರೇ, ಶ್ರೀ ಸಂತಾನಮ್ ಅವರು ಸೂಚಿಸಿದ ಈ ತಿದ್ದುಪಡಿಯನ್ನು ಒಂದು ಬದಲಾವಣೆಯೊಂದಿಗೆ ಅಂಗೀಕರಿಸಲು ಸಿದ್ಧನಿದ್ದೇನೆ. ಅದೆಂದರೆ, ಕೊನೆಯಲ್ಲಿರುವ "ಸ್ಪಷ್ಟ ಬಹುಮತದ ಮೂಲಕ" ಎಂಬ ಪದಗಳನ್ನು ಬಿಟ್ಟುಬಿಡಬೇಕೆಂದು ನಾನು ಸಲಹೆ ನೀಡುತ್ತೇನೆ.

ಎರಡು ಸದನಗಳು ಇರುವ ಪ್ರಾಂತಗಳಿಗೂ ಸಹ ಇದು ಅನ್ವಯವಾಗಬೇಕೆಂದು ಸಲಹೆ ನೀಡಲಾಗಿತ್ತು. ಎರಡು ಸದನಗಳು ಇರುವಲ್ಲಿ ಇದು ಅವಶ್ಯಕವಿಲ್ಲವೆಂದು ನಾನು ಭಾವಿಸುತ್ತೇನೆ. ಅವರಲ್ಲಿ ಭಿನ್ನಾಭಿಪ್ರಾಯವಿದ್ದರೆ, ಜಂಟಿ ಅಧಿವೇಶನದಲ್ಲಿ ಮರುಪರ್ಯಾಲೋಚನೆ ಮಾಡುವುದಕ್ಕಾಗಿ ಪ್ರಕರಣವನ್ನು ತರಬೇಕು. ಆದುದರಿಂದ ಇದು ಅವಶ್ಯವಲ್ಲ.

**ಸನ್ಮಾನ್ಯ ಅಧ್ಯಕ್ಷರು :** ಶ್ರೀ ಸಂತಾನಮ್, ಇದಕ್ಕೆ ಪ್ರತಿಯಾಗಿ ನೀವು ಏನನ್ನಾದರೂ ಹೇಳಬಯಸುತ್ತೀರಾ?

**ಮಾನ್ಯ ಕೆ. ಸಂತಾನಮ್ :** ಸರ್ದಾರ್ ಪಟೇಲ್ ಅವರು ನೀಡಿದ ಸಲಹೆಯನ್ನು ನಾನು ಒಪ್ಪುತ್ತೇನೆ, ಆದರೆ ನಾನು ಒಂದು ಅಭಿಪ್ರಾಯವನ್ನು ಮಾತ್ರ ತಿಳಿಸಬಯಸುತ್ತೇನೆ. ಒಂದು ವಿಧೇಯಕವನ್ನು ಮರುಪರ್ಯಾಲೋಚನೆಗಾಗಿ ಹಿಂತಿರುಗಿಸಿದಾಗ, ಎರಡು ಪಕ್ಷಗಳು ಅವುಗಳ ಬಲಾಬಲಗಳನ್ನು ಪ್ರದರ್ಶಿಸುತ್ತವೆ, ಮತ್ತು ಮಂತ್ರಿಮಂಡಲವು ಶೇಕಡ ೫೧ರಷ್ಟು ಮತಗಳನ್ನು ಪಡೆದ ಹೊರತು, ಅದು ಸೋತಂತೆಯೇ. "ಸ್ಪಷ್ಟ ಬಹುಮತದ ಮೂಲಕ" ಎಂಬ ಪದಗಳು ಇರಲಿ ಅಥವಾ ಇಲ್ಲದಿರಲಿ ಅದರಿಂದ ಏನೂ ಆಗುವುದಿಲ್ಲ. ಆಗಲೂ ಪರಿಣಾಮ ಒಂದೇ ಆಗಿರುತ್ತದೆ.

**ಪಂಡಿತ್ ಲಕ್ಷ್ಮಿಕಾಂತ ಮೈತ್ರ :** ಶ್ರೀ ಸಂತಾನಮ್ ಅವರು ಪ್ರಸ್ತಾವಿಸಿದ ತಿದ್ದುಪಡಿಯನ್ನು ಸದನವು ಅಂಗೀಕರಿಸುವುದೋ ಇಲ್ಲವೋ ನನಗೆ ಗೊತ್ತಿಲ್ಲ. "ಸ್ಪಷ್ಟ ಬಹುಮತದ ಮೂಲಕ" ಎಂಬ ಪದಗಳಿಗೆ ಸಂಬಂಧಿಸಿದಂತೆ ಸದನದ ನಿರ್ಣಯ ಏನು ಎಂಬುದರ ಬಗ್ಗೆ ನನಗೆ ಸ್ಪಷ್ಟವಾಗುತ್ತಿಲ್ಲ.... ಸದನದ ಹಲವು ಸದಸ್ಯರಿಗೂ ಇದು ಸ್ಪಷ್ಟವಾಗುತ್ತಿಲ್ಲವೆಂದು ನಾನು ಭಾವಿಸಿದ್ದೇನೆ.

**ಸನ್ಮಾನ್ಯ ಅಧ್ಯಕ್ಷರು :** ಶ್ರೀ ಮೈತ್ರರವರೇ ನೀವು ಏನು ಹೇಳುತ್ತಿರುವಿರಿ?

**ಪಂಡಿತ್ ಲಕ್ಷ್ಮಿಕಾಂತ ಮೈತ್ರ :** "ಸ್ಪಷ್ಟ ಬಹುಮತದ ಮೂಲಕ" ಎಂಬ ಪದಗಳನ್ನು ತೆಗೆದುಹಾಕಲು ನೀವು ಅದನ್ನು ಸದನದ ಮತಕ್ಕೆ ಹಾಕುವಿರಾ ಎಂಬುದನ್ನು ನಾನು ತಿಳಿಯಬಯಸುತ್ತೇನೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲ್ :** ಶ್ರೀ ಸಂತಾನಮ್ ತಿದ್ದುಪಡಿಯನ್ನು ಒಪ್ಪಿಕೊಂಡಿದ್ದಾರೆ.

**ಸನ್ಮಾನ್ಯ ಅಧ್ಯಕ್ಷರು :** ಈಗ ಅದು ಹೇಗಿರುತ್ತೆ?

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲ್ :** ಶ್ರೀ ಸಂತಾನಮ್ ಅವರು ತಿಳಿಸಿದ ಅಭಿಪ್ರಾಯವನ್ನು ಪರಾಮರ್ಶಿಸದೆ, ನಾನು ಅವರ ತಿದ್ದುಪಡಿಯನ್ನು ಸಮ್ಮತಿಸುತ್ತೇನೆ, ಆದರೆ "ಸ್ಪಷ್ಟ ಬಹುಮತದ ಮೂಲಕ" ಎಂಬ ಪದಗಳನ್ನು ತೆಗೆದುಹಾಕುವುದರೊಂದಿಗೆ ಸಮ್ಮತಿಸುತ್ತೇನೆ.

**ಡಾ. ಬಿ. ಆರ್. ಅಂಬೇಡ್ಕರ್** (ಬಾಂಬೆ: ಸಾಮಾನ್ಯ) : ಈ ವಾಕ್ಯವನ್ನು ಈಗ: "ವಿಧಾನಮಂಡಲವು ವಿಧೇಯಕವನ್ನು ತಿದ್ದುಪಡಿಗಳೊಂದಿಗೆ ಅಥವಾ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿದರೆ, ಅವರು ಅದಕ್ಕೆ ಸಮ್ಮತಿ ನೀಡತಕ್ಕದ್ದು" ಎಂಬುದಾಗಿ ಓದಲಾಗುವುದು.

**ಸನ್ಮಾನ್ಯ ಅಧ್ಯಕ್ಷರು:** ಹಾಗಿದ್ದಲ್ಲಿ ನಾನು ೨೪ನೇ ಖಂಡವನ್ನು ಮತಕ್ಕೆ ಹಾಕುತ್ತೇನೆ. ನಿರ್ಣಯವನ್ನು ಈಗ "ಸ್ಪಷ್ಟ ಬಹುಮತದ ಮೂಲಕ" ಎಂಬ ನಾಲ್ಕು ಪದಗಳನ್ನು ಬಿಟ್ಟು ತಿದ್ದುಪಡಿ ಮಾಡಲಾಗಿದ್ದು, ಅದು ಹೀಗಿದೆ:

"ಯಾವ ಪ್ರಾಂತದ ವಿಧಾನಮಂಡಲದಲ್ಲಿ ಒಂದೇ ಸದನ ಇರುವುದೋ ಆ ಪ್ರಾಂತದ ರಾಜ್ಯಪಾಲರು, ವಿಧಾನಮಂಡಲವು ಅಂಗೀಕರಿಸಿದ ವಿಧೇಯಕವನ್ನು ತಮ್ಮ ವಿವೇಚನಾನುಸಾರ ಮರುಪರ್ಯಾಲೋಚನೆಗಾಗಿ ಹಿಂತಿರುಗಿಸುವ ಹಕ್ಕನ್ನು ಹೊಂದಿರತಕ್ಕದ್ದು ಮತ್ತು ತಿದ್ದುಪಡಿಗಳನ್ನು ಸಲಹೆ ಮಾಡಬಹುದು. ತಿದ್ದುಪಡಿಗಳ ಸಹಿತ ಅಥವಾ ತಿದ್ದುಪಡಿಗಳಿಲ್ಲದೆ ವಿಧಾನಮಂಡಲವು ಪುನಃ ಈ ವಿಧೇಯಕವನ್ನು ಅಂಗೀಕರಿಸಿದರೆ, ಅವರು ಅದಕ್ಕೆ ಸಮ್ಮತಿ ನೀಡತಕ್ಕದ್ದು."

– ಎಂದು ಓದುತ್ತೇನೆ.

ನಿರ್ಣಯವನ್ನು ಅಂಗೀಕರಿಸಲಾಯಿತು.

**ಭಾಗ ೨ ಪ್ರಾಂತೀಯ ನ್ಯಾಯಾಂಗ**

**ಸನ್ಮಾನ್ಯ ಅಧ್ಯಕ್ಷರು :** ನಾವು ಭಾಗ–೨ ಪ್ರಾಂತೀಯ ನ್ಯಾಯಾಂಗ ವಿಷಯ ಕುರಿತು ಚರ್ಚಿಸೋಣ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಮಾನ್ಯರೆ, ನಾನು ಈ ಕೆಳಗಿನಂತೆ ಪ್ರಸ್ತಾಪಿಸುತ್ತೇನೆ:

೧. ಉಚ್ಚ ನ್ಯಾಯಾಲಯಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರ ಅಧಿನಿಯಮ, ೧೯೩೫ರ ಉಪಬಂಧಗಳನ್ನು ಯಥೋಚಿತ ವ್ಯತ್ಯಾಸಗಳೊಂದಿಗೆ ಅಂಗೀಕರಿಸತಕ್ಕದ್ದು; ಆದರೆ, ನ್ಯಾಯಾಧೀಶರುಗಳನ್ನು ಒಕ್ಕೂಟದ ರಾಷ್ಟ್ರಪತಿಯವರು, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಡನೆ, ಪ್ರಾಂತೀಯ ರಾಜ್ಯಪಾಲರೊಡನೆ ಮತ್ತು ಪ್ರಾಂತದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಡನೆ ಸಮಾಲೋಚಿಸಿ, (ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಸ್ವತಃ ನೇಮಕ ಮಾಡಬೇಕಾಗಿದ್ದುದನ್ನು ಹೊರತುಪಡಿಸಿ) ನೇಮಕ ಮಾಡತಕ್ಕದ್ದು.

೨. ಉಚ್ಚ ನ್ಯಾಯಾಲಯದ ನ್ಯಾಯಾಧೀಶರು, ಪ್ರಾಂತೀಯ ವಿಧಾನಮಂಡಲದ ಅಧಿನಿಯಮವು ನಿರ್ಧರಿಸಬಹುದಾದಂಥ ಉಪಲಬ್ಧಿಗಳನ್ನು ಮತ್ತು ಭತ್ಯೆಗಳನ್ನು ಸ್ವೀಕರಿಸತಕ್ಕದ್ದು ಮತ್ತು ಅಲ್ಲಿಯವರೆಗೆ ಅವು ಅನುಸೂಚಿ. .....ರಲ್ಲಿ ಗೊತ್ತುಪಡಿಸಿದಂತಿರುತ್ತವೆ.

೩. ನ್ಯಾಯಾಧೀಶರ ಉಪಲಬ್ಧಿಗಳು ಮತ್ತು ಭತ್ಯೆಗಳನ್ನು ಅವರ ಪದಾವಧಿಯಲ್ಲಿ ಕಡಿಮೆ ಮಾಡತಕ್ಕದ್ದಲ್ಲ."

ಈ ಖಂಡವು, ಉಚ್ಚ ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ೧೯೩೫ರ ಅಧಿನಿಯಮದ ಉಪಬಂಧಗಳನ್ನು ಸೇರಿಸಲು ಪ್ರಸ್ತಾಪಿಸುತ್ತದೆ, ಆದರೆ ನ್ಯಾಯಾಧೀಶರ ನೇಮಕಕ್ಕೆ ಸಂಬಂಧಿಸಿದಂತೆ ಇದು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಡನೆ ಮತ್ತು ಪ್ರಾಂತದ ರಾಜ್ಯಪಾಲರೊಡನೆ ಸಮಾಲೋಚಿಸಿ, ಒಕ್ಕೂಟ ವಿಧಾನಮಂಡಲದ ರಾಷ್ಟ್ರಪತಿಯವರು ನೇಮಕವನ್ನು ಮಾಡತಕ್ಕದ್ದೆಂದು ಉಪಬಂಧಿಸುತ್ತದೆ. ಇಷ್ಟೊಂದು ಪರಿಶೀಲನೆ ಮತ್ತು ಪ್ರತಿ ಪರಿಶೀಲನೆಗಳೊಂದಿಗೆ ಈ ನೇಮಕಾತಿಗಳನ್ನು ಮಾಡುವಾಗ, ಯಾವುವೇ ಪಕ್ಷಗಳ ಪ್ರಭಾವದಿಂದಾಚೆಗೆ ಮತ್ತು ನ್ಯಾಯಾಂಗದ ಯಾವುದೇ ಸಂಶಯಕ್ಕೆ ಅಥವಾ ಅನುಮಾನಕ್ಕೆ ಆಸ್ಪದ ಕೊಡದೆ ಉಚ್ಚ ನ್ಯಾಯಾಲಯದ ನ್ಯಾಯಧೀಶರುಗಳನ್ನು ನೇಮಕ ಮಾಡಲಾಗುತ್ತದೆ. ಉಳಿದೆರಡು ಖಂಡಗಳು ವೇತನ ಮತ್ತು ಭತ್ಯೆಗಳಿಗೆ ಸಂಬಂಧಿಸಿದಂತೆ ಕೇವಲ ಆನುಷಂಗಿಕವಾದವುಗಳಾಗಿದ್ದು, ಅವುಗಳನ್ನು ಕುರಿತಂತೆ ಯಾವುದೇ ತಿದ್ದುಪಡಿಗಳಿಲ್ಲವೆಂದು ನಾನು ನಂಬುತ್ತೇನೆ. ಆದುದರಿಂದ ನಾನು ಸದನದ ಅಂಗೀಕಾರಕ್ಕಾಗಿ ಈ ಸೂಚನೆಯನ್ನು ಪ್ರಸ್ತಾವಿಸುತ್ತೇನೆ.

(ಡಾ. ಸುಬ್ಬರಾಯನ್, ಶ್ರೀ ಮಲ್ಲಯ್ಯ, ಶ್ರೀ ರಾಮಲಿಂಗಂ, ಚೆಟ್ಟಿಯಾರ್ ಮತ್ತು ಸೇಠ್ ಗೋವಿಂದ ದಾಸ್ ಅವರು ತಿದ್ದುಪಡಿಗಳನ್ನು ಪ್ರಸ್ತಾಪಿಸಲಿಲ್ಲ)

**ಸನ್ಮಾನ್ಯ ಅಧ್ಯಕ್ಷರು** : ಹಾಗಿದ್ದಲ್ಲಿ, ಈ ಖಂಡಕ್ಕೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಯಿಲ್ಲ. ಈ ಖಂಡದ ಬಗ್ಗೆ ಯಾರಾದರೂ ಏನನ್ನಾದರೂ ಹೇಳಬಯಸುತ್ತೀರಾ?

**ಗೌರವಾನ್ವಿತ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** (ಮದ್ರಾಸ್ : ಸಾಮಾನ್ಯ) : ನನ್ನದೊಂದು ತಿದ್ದುಪಡಿ ಇದೆ.

**ಸನ್ಮಾನ್ಯ ಅಧ್ಯಕ್ಷರು:** ಈ ಹಂತದಲ್ಲಿ ನೀವು ಪ್ರಸ್ತಾವಿಸಬಹುದು.

**ಗೌರವಾನ್ವಿತ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** (ಮದ್ರಾಸ್ : ಸಾಮಾನ್ಯ) : ನಿಮ್ಮ ಅನುಮತಿಯೊಂದಿಗೆ, ನಾನು ಭಾಗ ೨ರಲ್ಲಿನ ೧ನೇ ಖಂಡಕ್ಕೆ ಈ ಮುಂದಿನ ತಿದ್ದುಪಡಿಯನ್ನು ಪ್ರಸ್ತಾವಿಸಲು ಉದ್ದೇಶಿಸಿದ್ದೇನೆ:

ಭಾಗ ೨ರಲ್ಲಿನ ೧ನೇ ಖಂಡದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು:

"ಪರಂತು –

(ಎ) ಭಾರತ ಒಕ್ಕೂಟದಲ್ಲಿರುವ ಎಲ್ಲಾ ಉಚ್ಚ ನ್ಯಾಯಾಲಯಗಳು, ಅಪೀಲು ವಿಚಾರಣೆಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟು, ಪ್ರದೇಶದಾದ್ಯಂತ ವಿಶಿಷ್ಟಾಧಿಕಾರದ (ಪ್ರಿರೋಗೇಟಿವ್) ರಿಟ್‌ಗಳನ್ನು ಅಥವಾ ಅದಕ್ಕಾಗಿ ಯಾವುವೇ ಪರ್ಯಾಯ ಪರಿಹಾರಗಳನ್ನು ನೀಡುವ ಹಕ್ಕನ್ನು ಹೊಂದಿರತಕ್ಕದ್ದು;

(ಬಿ) ಭಾರತ ಸರ್ಕಾರ ಅಧಿನಿಯಮ, ೧೯೩೫ರ ೨೨೬ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಕಂದಾಯ

ವಿಷಯಗಳಲ್ಲಿ ನ್ಯಾಯಾಂಗಕ್ಕೆ ಸಂಬಂಧಿಸಿದ ನಿರ್ಬಂಧವು ಇನ್ನು ಮುಂದೆ ಉಚ್ಚ ನ್ಯಾಯಾಲಯಗಳಿಗೆ ಅನ್ವಯವಾಗತಕ್ಕದ್ದಲ್ಲ; ಮತ್ತು

(ಸಿ) ಭಾರತ ಸರ್ಕಾರ ಅಧಿನಿಯಮ, ೧೯೩೫ರ ೨೨೪ನೇ ಪ್ರಕರಣದಲ್ಲಿ ನಿಹಿತಗೊಳಿಸಿರುವ ಅಧಿಕಾರಗಳಿಗೆ ಹೆಚ್ಚುವರಿಯಾಗಿ ಉಚ್ಚ ನ್ಯಾಯಾಲಯಗಳು ಭಾರತ ಸರ್ಕಾರ ಅಧಿನಿಯಮ, ೧೯೧೫ರ ೧೦೭ನೇ ಪ್ರಕರಣದ ಅಡಿಯಲ್ಲಿರುವಂತೆ ಅಧೀನ ನ್ಯಾಯಾಲಯಗಳ ಮೇಲೆ ಮೇಲ್ವಿಚಾರಣೆಯ ಅಧಿಕಾರಗಳನ್ನು ಹೊಂದಿರತಕ್ಕದ್ದು."

ಮೂಲಭೂತ ಹಕ್ಕುಗಳ ಜಾರಿಗಾಗಿ ಸಾಕಷ್ಟು ಮತ್ತು ಪರಿಣಾಮಕಾರಿ ಕಾರ್ಯವ್ಯವಸ್ಥೆಯನ್ನು ಒದಗಿಸಲು ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿರುವ ಕೆಲವು ಸುಚ್ಯಕ್ತ ವಿರೋಧಾಭಾಸಗಳನ್ನು ಮತ್ತು ಎದ್ದುಕಾಣುವ ಲೋಪಗಳನ್ನು ತೆಗೆದುಹಾಕುವುದು ಈ ತಿದ್ದುಪಡಿಗಳ ಉದ್ದೇಶವಾಗಿದೆ. ತಿದ್ದುಪಡಿಯ (ಎ) ಖಂಡವು, ವಿಶಿಷ್ಟಾಧಿಕಾರದ ರಿಟ್‌ಗಳಿಗೆ ಅಥವಾ ಅದರ ಯಾವುದೇ ಪರ್ಯಾಯ ಪರಿಹಾರಗಳಿಗೆ ಸಂಬಂಧಿಸಿದಂತೆ ತಿಳಿಸುತ್ತದೆ. ಪರ್ಯಾಯ ಪರಿಹಾರಗಳನ್ನು ಉಲ್ಲೇಖಿಸಿದ ಉದ್ದೇಶ, ಇಂಗ್ಲೆಂಡ್‌ನಲ್ಲಿ ಇತ್ತೀಚಿನ ಅಧಿನಿಯಮಗಳ ಮೇರೆಗೆ ಪಡೆದ ಕಾರ್ಯವಿಧಾನಕ್ಕನುಸಾರವಾಗಿ ರಿಟ್‌ಗಳಿಗೆ ಅರ್ಜಿಯನ್ನು ಸಲ್ಲಿಸಿ ಸರಳ ಪರಿಹಾರವನ್ನು ಸಾಧ್ಯಗೊಳಿಸುವುದಾಗಿದೆ. ಕಾನೂನಿನ ಮೇರೆಗೆ ಅದನ್ನು ಸಮರ್ಥಿಸುವಂತೆ ಕಲ್ಕತ್ತ, ಬಾಂಬೆ ಮತ್ತು ಮದ್ರಾಸ್ ಉಚ್ಚ ನ್ಯಾಯಲಯಗಳು ತಮ್ಮ ಮೂಲ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ವಿಶೇಷಾಧಿಕಾರ ರಿಟ್‌ಗಳನ್ನು ನೀಡುವ ಹಕ್ಕನ್ನು ಹೊಂದಿವೆ. ಅರ್ಜಿಯ ಮೂಲಕ ಪರಿಹಾರ ಪಡೆಯುವುದನ್ನು, ನಿರ್ದಿಷ್ಟ ಪರಿಹಾರ ಅಧಿನಿಯಮವು ನಿರೂಪ ರಿಟ್‌ಗೆ ಪರ್ಯಾಯವಾಗಿದೆ, ಆದರೆ ಪರಿಹಾರವನ್ನು ಪ್ರೆಸಿಡೆನ್ಸಿ ಪಟ್ಟಣಗಳಿಗೆ ನಿರ್ಬಂಧಿಸಲಾಗಿದೆ. ಪ್ರೆಸಿಡೆನ್ಸಿ ಪಟ್ಟಣದ ನಿವಾಸಿಗೆ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಪರಿಹಾರ ದೊರೆಯುವಂತಿದ್ದಲ್ಲಿ, ಅಧ್ಯಕ್ಷಾಡಳಿತ ಪಟ್ಟಣದ ಪರಿಮಿತಿಯ ಹೊರಗಿನ ಒಬ್ಬ ನಾಗರಿಕನ ಸಾಮಾನ್ಯ ದಾವೆಯಲ್ಲಿ ಆತ ನಿಧಾನಗತಿಯ ಪರಿಹಾರ ಪಡೆಯಲು ಏಕೆ ಬಿಡಬೇಕು? ಬಂದಿ ಹಾಜರಿಹುಕುಂ ವಿಶಿಷ್ಟಾಧಿಕಾರದ ರಿಟ್‌ಗೆ ಸಂಬಂಧಿಸಿದಂತೆ, ಅಪರಾಧ ಪ್ರಕ್ರಿಯಾ ಸಂಹಿತೆಯು, ಉಚ್ಚ ನ್ಯಾಯಾಲಯದ ಅಪೀಲು ಅಧಿಕಾರ ವ್ಯಾಪ್ತಿಯಾದ್ಯಂತ ಹೇಬಿಯಸ್ ಕಾರ್ಪಸ್‌ಗೆ ಸಂಬಂಧಿಸಿದಂತೆ ಪರ್ಯಾಯ ಪರಿಹಾರ ಅರ್ಜಿ ಸಲ್ಲಿಸಿ ಪಡೆಯಲು ಸಾಧ್ಯವಾಗುವಂತೆ ಮಾಡಲಾಗಿದೆ. ಅಧಿಕಾರ ವ್ಯಾಪ್ತಿ ಮೀರಿ ಕಾರ್ಯನಿರ್ವಹಿಸುವ ನ್ಯಾಯಿಕ ಮತ್ತು ಅರೆ-ನ್ಯಾಯಿಕ ಸಂಸ್ಥೆಗಳು ನೀಡುವ ಪರಿಹಾರ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯಕ್ಕೆ ಅಧಿಕಾರ ನೀಡಿ ಆಜ್ಞಾಪತ್ರದ (ಸರ್ಷಿಯೋರೇರೈ) ಮೂಲಕ ಪರಿಹಾರವನ್ನು ಒದಗಿಸುವ ವ್ಯವಸ್ಥೆ ಪ್ರೆಸಿಡೆನ್ಸಿ ಪಟ್ಟಣದೊಳಗೆ ಲಭ್ಯವಿದೆ ಎಂದು ಪ್ರಿವಿ ಕೌನ್ಸಿಲ್ ಇತ್ತೀಚೆಗೆ ನಿರ್ಣಯಿಸಿದೆ. (ಎ) ಖಂಡವನ್ನು ಅಂಗೀಕರಿಸಿದಾಗ, ಭಾರತ ಒಕ್ಕೂಟದಲ್ಲಿನ ಎಲ್ಲ ಉಚ್ಚ ನ್ಯಾಯಾಲಯಗಳು, ಅಪೀಲು ಅಧಿಕಾರ ವ್ಯಾಪ್ತಿಗೆ ಒಳಪಟ್ಟು ಆಯಾ ಪ್ರದೇಶದಾದ್ಯಂತ ಈ ವಿಷಯಗಳಿಗೆ ಸಂಬಂಧಿಸಿದಂತೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಲು ಅವುಗಳಿಗೆ ಅಧಿಕಾರ ನೀಡಲಾಗಿದೆ. ಸಂವಿಧಾನದ ಅಡಿಯಲ್ಲಿ ಖಾತರಿ ನೀಡಲಾದ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ಪರಿಣಾಮಕಾರಿ ಪರಿಹಾರವನ್ನು ಸಹ ಈ ಖಂಡವು ಒದಗಿಸುವುದು. ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿನ ವಿರೋಧಾಬಾಸಗಳಿಗೆ ಪರಿಹಾರ ಒದಗಿಸಲು (ಬಿ) ಖಂಡದಲ್ಲಿ ಉದ್ದೇಶಿಸಲಾಗಿದೆ. ವಿರೋಧಾಬಾಸದ ವಿಷಯವು ವಾರೆನ್ ಹೇಸ್ಟಿಂಗ್ಸ್ ದಿನಗಳನ್ನು ನೆನಪಿಸುತ್ತದೆ. ಈ ಕಾನೂನಿನಲ್ಲಿ ಅದು ಅನ್ವಯವಾಗುವಂತೆ, ಅಲ್ಲಿ ಜಿಲ್ಲಾ ಮುನ್ಸಿಸರು ಸಹ ಕಂದಾಯ ಹಕ್ಕನ್ನು ಒಳಗೊಂಡಿರುವ ದಾವೆಯನ್ನು ಪುರಸ್ಕರಿಸಲು ಯಾವುದೇ ತಡೆ ಇರುವುದಿಲ್ಲ, ಆದರೆ ಅಂಥ ದಾವೆಗಳನ್ನು ಪುರಸ್ಕರಿಸುವುದರಿಂದ ಉಚ್ಚ ನ್ಯಾಯಾಲಯಗಳನ್ನು ನಿರ್ಬಂಧಿಸುತ್ತದೆ. ಇನ್ನೊಂದು ದಿನ ಸಂಮಿತ್ರ ನ್ಯಾಯಾಲಯವು ಸರ್ವ ವಿಧದಲ್ಲೂ ವ್ಯಾಜ್ಯಕಾರನ ಹಕ್ಕನ್ನು ಎತ್ತಿಹಿಡಿಯುವಾಗ, ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ ದಾವೆಯು, ಭಾರತ

ಸರ್ಕಾರದ ಅಧಿನಿಯಮದ ೨೨೬ನೇ ಪ್ರಕರಣವನ್ನಾಧರಿಸಿ ತಾಂತ್ರಿಕ ಕಾರಣದ ಆಧಾರದ ಮೇಲೆ ವಜಾ ಆಗುವುದಕ್ಕೆ ಗುರಿಯಾಗುತ್ತಿತ್ತು. ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಆಧಾರದ ಮೇಲೆ ಈ ನಿರ್ಬಂಧವನ್ನು ತೆಗೆದುಹಾಕುವುದರ ಅಗತ್ಯತೆಯನ್ನು ಸಾರ್ವತ್ರಿಕವಾಗಿ ಒತ್ತಿ ಹೇಳಿ ಪರಿಭಾವಿಸಲಾಯಿತು. ಉಚ್ಚನ್ಯಾಯಾಲಯವನ್ನು, ಅಧೀನ ನ್ಯಾಯಾಲಯಗಳ ಮೇಲೆ ಕೆಲವು ವಿಷಯಗಳ ಸಂಬಂಧದಲ್ಲಿ ಮೇಲ್ವಿಚಾರಣೆಯ ಅಧಿಕಾರಗಳಿಂದ ತಪ್ಪಿಸಿರುವ, ೧೯೩೫ರ ಅಧಿನಿಯಮವು ಸೇರಿಸಿದ್ದ ಲೋಪಕ್ಕೆ ಪರಿಹಾರ ಒದಗಿಸುವ ಉದ್ದೇಶವನ್ನು, ಈ ಹಿಂದಿನ ಖಂಡದಲ್ಲಿ ತಿಳಿಸಲಾಗಿದೆ. ನಾನು ಹೇಳಬಯಸಿದ ಈ ಅಧಿನಿಯಮಕ್ಕೆ ಸಾರ್ವತ್ರಿಕ ಬೆಂಬಲ ಇದ್ದು, ನಿಮ್ಮ ಅಂಗೀಕಾರಕ್ಕೆ ನಾನು ಇದನ್ನು ಒಪ್ಪಿಸುತ್ತಿದ್ದೇನೆ.

**ಶ್ರೀಮತಿ ಜಿ. ದುರ್ಗಾಬಾಯಿ** (ಮದ್ರಾಸ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಪ್ರಾಂತೀಯ ನ್ಯಾಯಾಂಗಕ್ಕೆ ಸಂಬಂಧಿಸಿದಂತೆ ಭಾಗ ೨ರಲ್ಲಿನ ೧ನೇ ಖಂಡವನ್ನು ಬೆಂಬಲಿಸಲು ನಾನು ಇಲ್ಲಿ ನಿಂತಿದ್ದೇನೆ ಎಂದು ಮೊದಲಲ್ಲೆ ಸ್ಪಷ್ಟಪಡಿಸಬಯಸುತ್ತೇನೆ. ಮಾನ್ಯರೆ, ಪ್ರಾಂತೀಯ ನ್ಯಾಯ್ಲಾಲಯಗಳಿಗೆ ನ್ಯಾಯಾಧೀಶರ ನೇಮಕಕ್ಕೆ ಸಂಬಂಧಿಸಿದಂತೆ ಕಾರ್ಯವಿಧಾನವನ್ನು ನಿರೂಪಿಸುವ ಖಂಡದ ಆ ಭಾಗಕ್ಕೆ ನಾನು ಸಮ್ಮತಿ ನೀಡಬಯಸುತ್ತೇನೆ. ಈ ಖಂಡವು ಈ ಮುಂದಿನಂತೆ ಇದೆ:

"... ... . . . ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಡನೆ, ಪ್ರಾಂತದ ರಾಜ್ಯಪಾಲರೊಡನೆ ಮತ್ತು ಪ್ರಾಂತದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚಿಸಿ ಒಕ್ಕೂಟದ ರಾಷ್ಟ್ರಪತಿಗಳು ನ್ಯಾಯಾಧೀಶರನ್ನು ನೇಮಕ ಮಾಡತಕ್ಕದ್ದು (ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನೂ ಸ್ವತಃ ನೇಮಕ ಮಾಡಬೇಕಾದ ಸಂದರ್ಭವನ್ನು ಹೊರತುಪಡಿಸಿ)."

ಮಾನ್ಯರೆ, ಹಾಗಾಗಿ, ನಾವು ಮಂಡಿಸಿದ ಈ ಖಂಡದಲ್ಲಿ ಉಪಬಂಧಿಸಿದ ವಿಧಾನವು, ಪ್ರಾಂತಗಳಿಗೆ ಮತ್ತು ಪ್ರಾಂತೀಯ ಸರ್ಕಾರಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಬಾಹ್ಯ ಅಧಿಕೃತ ಸಂಸ್ಥೆಯು,ಒಂದು ರೀತಿಯ ಮಧ್ಯಪ್ರವೇಶಕ್ಕೆ ಅವಕಾಶ ಮಾಡಿಕೊಡುತ್ತದೆ ಎಂಬುದನ್ನು ನಾವು ಕಾಣಬಹುದು. ಬಾಹ್ಯ ಅವಶ್ಯಕತೆಗಾಗಿ ಕಲ್ಪಿಸಿದ ಏರ್ಪಾಡುಗಳಲ್ಲಿ ಮತ್ತು ಈ ರೀತಿಯಾಗಿ ರೂಪಿಸಿದ ಕಾರ್ಯವಿಧಾನದಲ್ಲಿ, ಬಾಹ್ಯ ಅಧಿಕೃತ ಸಂಸ್ಥೆಯು ಮಧ್ಯಪ್ರವೇಶಿಸುವುದು ಪ್ರಾಂತೀಯ ಸ್ವಾಯತ್ತತೆಯ ತತ್ತ್ವಗಳಿಗೆ ವಿರುದ್ಧವಾಗಿ ಪ್ರಾಂತೀಯ ಸರ್ಕಾರದ ಅಧಿಕಾರ ವ್ಯಾಪ್ತಿಯ ಮೇಲೆ ಒಂದು ವಿಧದ ಅತಿಕ್ರಮಣವಾಗುತ್ತದೆ ಎಂಬ ಆತಂಕವು, ಕನಿಷ್ಠಪಕ್ಷ ಕೆಲವು ಜನರ ಮನಸ್ಸಿನ್ನು ಪ್ರಚೋದಿಸಲು ಕಾರಣವಾಗಿರಬಹುದು. ಮಾನ್ಯರೆ ಆದರೆ, ಪ್ರಾಂತೀಯ ಸರ್ಕಾರಗಳ ವಿವೇಚನೆಗೆ ಎಂದರೆ, ತನ್ನ ಸಚಿವರ ಸಲಹೆಯ ಮೇರೆಗೆ ಕಾರ್ಯನಿರ್ವಹಿಸುವ ರಾಜ್ಯಪಾಲರಿಗೆ ಈ ವಿಷಯವನ್ನು ಬಿಡುವುದು ಅಪೇಕ್ಷಣೀಯವಲ್ಲವೆ ಎಂಬ ಈ ವಿಚಾರವು ಕೆಲವು ಕಾಲದ ಹಿಂದೆಯೇ ನನ್ನ ಮನಸ್ಸಿನಲ್ಲಿ ಇತ್ತೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ವಿಷಯವನ್ನು ಜಾಗರೂಕತೆಯಿಂದ ಪರಿಶೀಲಿಸಿದ ನಂತರ, ಈ ಖಂಡವನ್ನು ಮಂಡಿಸಿದವರು ಸಲಹೆ ನೀಡಿದ ವಿಧಾನವು ಇತರ ವಿಷಯಗಳಿಗೆ ಹೆಚ್ಚಿನ ಪ್ರಯೋಜನ ನೀಡುವುದೆಂದು ನನಗೆ ಕಂಡುಬಂದಿತು. ಇನ್ನು ಮುಂದೆ ಬರುವ ಹೊಸ ಪರಿಸ್ಥಿತಿಗಳು ವಿಭಿನ್ನವಾಗಿರುತ್ತವೆ ಮತ್ತು ಉಚ್ಚ ನ್ಯಾಯಾಲಯಗಳು, ಬೃಹತ್ ಗುರಿಗಳನ್ನು ಇರಿಸಿಕೊಂಡು ಹೆಚ್ಚಿನ ಜವಾಬ್ದಾರಿಗಳನ್ನು ಹೊರಬೇಕಾಗುತ್ತದೆ. ಅವು ಸಂವಿಧಾನ ವಿಷಯಗಳ ಭಂಡಾರಗಳಾಗಿ ನೀಡುವ ಸಂವಿಧಾನದ ಅರ್ಥವಿವರಣೆಯನ್ನು ನೀಡಬೇಕಾಗುತ್ತದೆ. ಅವು ಸಂವಿಧಾನದಲ್ಲಿ ಭರವಸೆ ನೀಡಿದ ಮೂಲಭೂತ ಹಕ್ಕುಗಳ ರಕ್ಷಕರಾಗಿರುತ್ತವೆ. ಪ್ರತಿಯೊಬ್ಬ ಶ್ರೀಸಾಮಾನ್ಯನು ಸಮಾನತೆ ಮತ್ತು ನ್ಯಾಯಕ್ಕಾಗಿ ಈ ನ್ಯಾಯಾಲಯಗಳೆಡೆ ನೋಡುತ್ತಾನೆ. ಶ್ರೀ ಸಾಮಾನ್ಯರು ತಮ್ಮ ಹಕ್ಕುಗಳನ್ನು ಸಂರಕ್ಷಿಸಲಾಗುತ್ತಿದೆಯೇ ಮತ್ತು ತಾವು ಶ್ರೀ ಸುರಕ್ಷಿತರೆ ಎಂಬುದನ್ನು ನಿರೀಕ್ಷಿಸುತ್ತಾರೆ. ಆದ್ದರಿಂದ, ನಾವು ಇದನ್ನು ಸಾಧಿಸಬೇಕಿದ್ದರೆ, ಉಚ್ಚ ನ್ಯಾಯಾಲಯಗಳ ಯಶಸ್ವಿ ಕಾರ್ಯನಿರ್ವಹಣೆಗೆ ಗಮನ ನೀಡಬೇಕಾಗುತ್ತದೆ ಮತ್ತು ಇದು ಬಹುಮಟ್ಟಿಗೆ ನ್ಯಾಯಾಂಗದ

ಗುಟಮಟ್ಟವನ್ನು ಮತ್ತು ಅದನ್ನು ಸಂಯೋಜಿಸಿದ ರೀತಿಯನ್ನು ಆಧರಿಸಿದೆ. ನ್ಯಾಯಾಂಗದ ಸ್ವತಂತ್ರ ಕಾರ್ಯನಿರ್ವಹಣೆಯು, ನಿರ್ಣಯಿಸಬೇಕಾಗಿರುವ ವಿಷಯವಾಗಿದ್ದು, ಇದು, ಈ ನ್ಯಾಯಾಧೀಶರನ್ನು ನೇಮಕ ಮಾಡುವ ರೀತಿಯನ್ನು ಬಹುತೇಕ ಅವಲಂಬಿಸಿದೆ. ಅವರು, ಈ ವ್ಯಕ್ತಿಗಾಗಲಿ, ಆ ವ್ಯಕ್ತಿಗಾಗಲಿ ಅಥವಾ ಈ ಪಕ್ಷಕ್ಕಾಗಲಿ, ಆ ಪಕ್ಷಕ್ಕಾಗಲಿ, ಅವರನ್ನು ನೇಮಕ ಮಾಡಬೇಕಾದ ದಾಕ್ಷಿಣ್ಯಕ್ಕೊಳಗಾಗುವ ಭಾವನೆ ಅವರಿಗೆ ಬರಬಾರದು. ಅವರು ತಾವು ಸ್ವತಂತ್ರರು ಎಂಬ ಭಾವನೆಯಿರಿಸಿಕೊಂಡಿರಬೇಕಾಗುತ್ತದೆ. ಇದು ನ್ಯಾಯಾಡಳಿತದಲ್ಲಿ ದಕ್ಷತೆಯನ್ನು ತರುವಂಥ ಏಕಮಾತ್ರ ಸಂದರ್ಭವಾಗಿದೆ. ಈ ರೀತಿಯ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಯಾವುದಾದರೂ ರೂಪದಲ್ಲಿ ಪರೀಕ್ಷೆ ಇರಬೇಕಾದುದು ಅವಶ್ಯಕವಾಗಿದೆ ಮತ್ತು ಈ ಖಂಡವನ್ನು ಪ್ರಸ್ತಾವಿಸಿದವರು, ಪ್ರಾಂತೀಯ ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ನೇಮಕಗಳ ವಿಷಯದಲ್ಲಿ, ಏನನ್ನಾದರೂ ಮಾಡಲು ಕೆಲವು ಬಾಹ್ಯ ಅಧಿಕೃತ ಸಂಸ್ಥೆಗಳಿಗೆ ಅವಕಾಶ ನೀಡಿ ಈ ಪರೀಕ್ಷೆಯನ್ನು ನಡೆಸಬೇಕೆಂದಿದ್ದಾರೆ. ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಸಹ ಈ ಚಿತ್ರಣದ ವ್ಯವಸ್ಥೆ ಒಳಗೆ ಏಕೆ ತಂದಿದ್ದಾರೆ ಎಂಬುದು ನಾವು ಹೇಳಬಹುದು, ಆದರೆ ನ್ಯಾಯ ಪರಿಪಾಲನೆಯ ಪರಿಶುದ್ಧತೆಯ ದೃಷ್ಟಿಯಿಂದ ಸರ್ವೋಚ್ಚ ನ್ಯಾಯಾಲಯವು ಇನ್ನು ಮುಂದೆ ವಹಿಸಬೇಕಾದ ಪಾತ್ರ ದೊಡ್ಡದಿದೆ. ಇದು ಭಾರತದ ಉಚ್ಚ ನ್ಯಾಯಾಲಯಗಳಿಗಿಂತ ಅತ್ಯುನ್ನತ ಸ್ಥಾನದಲ್ಲಿರುತ್ತದೆ ಮತ್ತು ಭಾರತೀಯ ಘಟಕಗಳಿಗೆ ಸಂಬಂಧಿಸಿದಂತೆ ಪ್ರಿವಿ ಕೌನ್ಸಿಲ್ ಈಗ ಚಲಾಯಿಸುತ್ತಿರುವಂಥ ಸಾಮಾನ್ಯ ಸಲಹಾ ಅಧಿಕಾರ ವ್ಯಾಪ್ತಿಯನ್ನು ಮತ್ತು ಸಾಮಾನ್ಯ ಅಪೀಲು ಅಧಿಕಾರ ವ್ಯಾಪ್ತಿಯನ್ನು ಇದು ಹೊಂದಲಿದೆ. ಆದುದರಿಂದ, ಅದು ಎಲ್ಲಾ ಉಚ್ಚ ನ್ಯಾಯಾಲಯಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸುತ್ತದೆ ಹಾಗೂ ಪ್ರಾಂತೀಯ ನ್ಯಾಯಾಂಗಕ್ಕೆ ಸಂಬಂಧಿಸಿದ ಹಲವಾರು ವಿಷಯಗಳಲ್ಲಿ, ಸಾಮಾನ್ಯ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣದ ಅಧಿಕಾರಗಳನ್ನು ಸಹ ಚಲಾಯಿಸುತ್ತದೆ ಮತ್ತು ಉಚ್ಚ ನ್ಯಾಯಾಲಯಗಳ ಹಲವಾರು ವಿಷಯಗಳು ಎಂದರೆ,– ಪುನರ್‌ಪರೀಶೀಲನೆ, ಪರಾಮರ್ಶನೆ ಮತ್ತು ಅಪೀಲು ವಿಧಾನಗಳು ಈ ನ್ಯಾಯಾಲಯದ ಮುಂದೆ ಒಂದೇ ರೀತಿ ಆಗಿರಬೇಕಾಗುತ್ತದೆ. ಆದುದರಿಂದ, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು, ಈ ನ್ಯಾಯಾಲಯಗಳೊಂದಿಗೆ ಹೆಚ್ಚಿನ ವ್ಯವಹಾರ ನಡೆಸಬೇಕಾಗುತ್ತದೆ; ಅಷ್ಟೇ ಅಲ್ಲದೆ, ನಮಗೆಲ್ಲ ಗೊತ್ತಿರುವಂತೆ, ಸರ್ವೋಚ್ಚ ನ್ಯಾಯಾಲಯದಲ್ಲಿಯೂ ಸಹ, ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರ ಪೈಕಿ ನೇಮಕಗೊಂಡ ನ್ಯಾಯಾಧಿಕರಣದ ನ್ಯಾಯಪೀಠಗಳು ರಚಿತವಾಗಿರುತ್ತವೆ. ಆದುದರಿಂದ, ಈ ಎಲ್ಲಾ ವಿಷಯಗಳನ್ನು ಪರಿಗಣಿಸಿದ ನಂತರ, ಪ್ರಾಂತೀಯ ನ್ಯಾಯಾಲಯಗಳಿಗೆ ನೇಮಕಗಳನ್ನು ಮಾಡುವಾಗ ಒಕ್ಕೂಟದ ರಾಷ್ಟ್ರಪತಿಯವರು, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚನೆ ನಡೆಸಬೇಕಾದುದು ಅತ್ಯಂತ ಅವಶ್ಯಕವೆಂದು ನಾನು ಭಾವಿಸುತ್ತೇನೆ. ಸಹಜವಾಗಿಯೇ, ಇದರಿಂದ ಪ್ರಾಂತಗಳ ಸ್ವಾತಂತ್ರ್ಯವನ್ನು ಬಹಳಷ್ಟು ಮಟ್ಟಿಗೆ ಮೊಟಕುಗೊಳಿಸಲಾಗಿದೆ ಎಂಬುದಾಗಿ ನಮ್ಮ ಮನಸ್ಸುಗಳಲ್ಲಿ ಒಂದು ಆತಂಕ ಉಳಿಯುವ ಅವಶ್ಯಕತೆಯೇ ಇಲ್ಲ. ಆದರೆ, ಈ ರೀತಿಯ ತಡೆಯನ್ನು ಕೇವಲ ಅತ್ಯಂತ ಅವಶ್ಯಕ ಸಂದರ್ಭಗಳಲ್ಲಿ ಮಾತ್ರ ಬಳಸಲಾಗುವುದು ಮತ್ತು ಸಾಮಾನ್ಯವಾಗಿ ರಾಜ್ಯಪಾಲರು ತಮ್ಮ ಸಚಿವರ ಸಲಹೆಯ ಮೇರೆಗೆ ಮತ್ತು ಉಚ್ಚ ನ್ಯಾಯಾಲಯಗಳ ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚಿಸಿ ಮಾಡಿದ ಶಿಫಾರಸ್ಸುಗಳನ್ನು, ಅವು ಸರಿ ಇರುವಷ್ಟು ಕಾಲ ಮತ್ತು ಒಕ್ಕೂಟ ಸರ್ಕಾರವು ಮಧ್ಯಪ್ರವೇಶ ಮಾಡಬೇಕಾದ ಅತ್ಯಂತ ಅಪರೂಪದ ಸಂದರ್ಭಗಳನ್ನು ಹೊರತುಪಡಿಸಿ, ಸಾಮಾನ್ಯವಾಗಿ, ಅವರ ಆಯ್ಕೆಯು ಉತ್ತಮವಾಗಿರುವುದಕ್ಕೆ ಬದ್ಧವಾಗಿರುವವರೆಗೆ ಒಪ್ಪಿಕೊಳ್ಳಬೇಕಾಗುತ್ತುದೆ.

ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾದ ಇನ್ನೊಂದು ಅಂಶವಿದೆ, ಅದೇನೆಂದರೆ, ನಾವು ರೂಢಿಯಲ್ಲಿಲ್ಲದುದನ್ನು ಮಾಡುತ್ತಿದ್ದೇವೆ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಒಕ್ಕೂಟ ಘಟಕಗಳ ಉಚ್ಚ

ನ್ಯಾಯಾಲಯಗಳ ನ್ಯಾಯಾಧೀಶರನ್ನು ನೇಮಕ ಮಾಡುವ ಅಧಿಕಾರವು ಯಾವಾಗಲೂ ಪ್ರಾಂತೀಯ ಸರ್ಕಾರಗಳಲ್ಲಿ ಮಾತ್ರ ನಿಹಿತವಾಗಿರಬೇಕು ಎಂಬ ಯಾವುದೇ ಒಂದು ತತ್ತ್ವವು, ವಿಶ್ವದ ಎಲ್ಲ ಒಕ್ಕೂಟ ಸಂವಿಧಾನಗಳಲ್ಲಿ ಏಕರೂಪವಾಗಿ ಇರುವುದಿಲ್ಲ, ಅದು ಅವಶ್ಯಕವೂ ಅಲ್ಲ. ಕೆನಡಾದ ಸಂವಿಧಾನದ ಪ್ರಕಾರ ನೇಮಕ ಮಾಡುವ ಅಧಿಕಾರವು ಗವರ್ನರ್ ಜನರಲ್‌ರಲ್ಲಿ ನಿಹಿತವಾಗಿದ್ದು, ಅವರೇ ನೇಮಕ ಮಾಡುತ್ತಾರೆ ಎಂದು ನಮಗೆ ತಿಳಿದುಬರುವ ಉದಾಹರಣೆ. ಆದುದರಿಂದ, ನಾವು ಈ ತತ್ತ್ವವನ್ನು ಯಾವುದೇ ಭಯ ಅಥವಾ ಪಕ್ಷಪಾತ ಇಲ್ಲದೆ ಒಪ್ಪಿಕೊಳ್ಳಬಹುದಾಗಿದೆ ಮತ್ತು ನಮ್ಮ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳಬಹುದಾಗಿದೆ.

ಮಾನ್ಯರೆ, ಈ ಕೆಲವು ಅಭಿಪ್ರಾಯಗಳನ್ನು ತಿಳಿಸುತ್ತ, ನಾನು ಈ ಖಂಡಕ್ಕೆ ಬೆಂಬಲ ಸೂಚಿಸುತ್ತೇನೆ ಮತ್ತು ಸದನದ ಅಂಗೀಕಾರಕ್ಕಾಗಿ ಇದನ್ನು ನಾನು ಒಪ್ಪಿಸುತ್ತೇನೆ.

**ಬಿ. ಪಾಕರ್ ಸಾಹಿಬ್ ಬಹಾದ್ದೂರ್ :** ಮಾನ್ಯ ಅಧ್ಯಕ್ಷರೆ, ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಪ್ರಸ್ತಾಪಿಸಿದ ತಿದ್ದುಪಡಿಗೆ ಬೆಂಬಲ ಸೂಚಿಸಲು ನನಗೆ ಅತ್ಯಂತ ಸಂತೋಷವಾಗುತ್ತಿದೆ. ೧೯೩೫ರ ಭಾರತ ಸರ್ಕಾರ ಅಧಿನಿಯಮದ ಪರಿಣಾಮವಾಗಿ ಮತ್ತು (ಆಜ್ಞಾಪತ್ರಕ್ಕೆ) ಸಂಬಂಧಿಸಿದಂತೆ ಪ್ರಿವಿ ಕೌನ್ಸಿಲ್‌ನ ಇತ್ತೀಚಿನ ನಿರ್ಣಯದಿಂದಲೂ ಸಹ ಜನರು ಅನುಭವಿಸುತ್ತಿರುವ ತೊಂದರೆಗಳನ್ನು ಗಮನಿಸಿದರೆ, ಆ ಖಂಡಗಳಲ್ಲಿ ಪ್ರತಿಯೊಂದು ಖಂಡವು, ಅತ್ಯಂತ ಅವಶ್ಯವಾಗಿದೆ. ಆದರೆ ಇತ್ತೀಚೆಗೆ ಪ್ರಿವಿ ಕೌನ್ಸಿಲ್ ನಿರ್ಣಯ ನೀಡುವವರೆಗೆ ಈ ಪರಿಹಾರವನ್ನು (ಆಜ್ಞಾಪತ್ರ) ರೂಪದಲ್ಲಿ ಗ್ರಾಮೀಣ ನಗರ ಪ್ರದೇಶಗಳು ಸಹ ಪಡೆದುಕೊಳ್ಳಬಹುದಾಗಿತ್ತು. ಆದರೆ, ಪ್ರಿವಿ ಕೌನ್ಸಿಲ್‌ನ ನಿರ್ಣಯದ ಪರಿಣಾಮವಾಗಿ ಕೇವಲ ಪ್ರೆಸಿಡೆನ್ಸಿ ಪಟ್ಟಣಗಳಿಗೆ ಮಾತ್ರ ಈ ಪರಿಹಾರವನ್ನು ಸೀಮಿತಗೊಳಿಸಲಾಯಿತು. ಅಂಥ ಪರಿಹಾರವು ಗ್ರಾಮೀಣ ನಗರ ಪ್ರದೇಶಗಳ ಜನರಿಗೂ ಲಭ್ಯವಾಗಬೇಕು ಎಂಬುದು ಅತ್ಯಂತ ಅವಶ್ಯವಾಗಿದೆ.

೧೯೩೫ರ ಭಾರತ ಸರ್ಕಾರ ಅಧಿನಿಯಮವನ್ನು ಅಂಗೀಕರಿಸುವುದಕ್ಕೆ ಮುಂಚೆ, ಉಚ್ಚ ನ್ಯಾಯಾಲಯಗಳಲ್ಲಿ ನಿಹಿತವಾಗಬೇಕಾದ ಮೇಲ್ವಿಚಾರಣೆಯ ಅಧಿಕಾರಕ್ಕೆ ಸಂಬಂಧಿಸಿದಂತೆ, ನಾವು ಪರಿಹಾರವನ್ನು ಪಡೆಯುತ್ತಿದ್ದೆವಾದರೂ, ಅಂಥ ಎಲ್ಲ ಪರಿಹಾರಗಳನ್ನು ೧೯೩೫ರ ಅಧಿನಿಯಮದ ಹೊಸ ಉಪಬಂಧಗಳ ಮೂಲಕ ಹೊರಗಿಡಲಾಯಿತು. ಎಲ್ಲ ವ್ಯಾಜ್ಯಕಾರ ಸಾರ್ವಜನಿಕರು, ಗ್ರಾಮಾಂತರ ನಗರ ಪ್ರದೇಶಗಳ (ಮೊಫ್ಯುಸಿಲ್) ನ್ಯಾಯಾಲಯಗಳಲ್ಲಿನ ವ್ಯವಹರಣೆಗಳಿಗೆ ಸಂಬಂಧಿಸಿದಂತೆ, ಉಚ್ಚ ನ್ಯಾಯಾಲಯಗಳ ಈ ಮೇಲ್ವಿಚಾರಣೆಯ ಹಕ್ಕು, ಇಲ್ಲದಿರುವುದರಿಂದ ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ. ಪರಿಣಾಮವೆಂದರೆ, ಈಗ ಸಿ.ಪಿ.ಸಿ.ಯ ೧೫ನೇ ಪ್ರಕರಣದ ಅಡಿಯಲ್ಲಿ ಜನರು ಪರಿಹಾರ ಕೋರಲು ನಿರ್ಬಂಧಿತರಾಗಿದ್ದು, ಅದು ಸಮರ್ಪಕವಾಗಿಲ್ಲ ಮತ್ತು ಪರಿಹಾರದ ಅವಶ್ಯಕತೆ ಇರುವ ಎಲ್ಲ ಮೊಕದ್ದಮೆಗಳನ್ನು ಅದು ಒಳಗೊಳ್ಳುತ್ತಿಲ್ಲ. ಮಾನ್ಯರೆ, ಆದುದರಿಂದ, ಈ ವಿಷಯಗಳನ್ನು ಅತ್ಯಂತ ಸ್ಪಷ್ಟಗೊಳಿಸಬೇಕಾಗಿದೆ, ನಿರ್ದಿಷ್ಟವಾಗಿ ಇನ್ನು ಮುಂದೆ ಆಂಗ್ಲರ ಪದ್ಧತಿಯನ್ನು ಮತ್ತು ಇಂಗ್ಲೆಂಡ್‌ನ ಪೂರ್ವನಿದರ್ಶನಗಳನ್ನು ನಾವು ಅವಲಂಬಿಸಲು ಸಾಧ್ಯವಿರದ ವಿಷಯಗಳನ್ನು ಸ್ಪಷ್ಟೀಕರಿಸುವ ಅವಶ್ಯಕತೆ ಇದೆ.

ನನ್ನ ಅಭಿಪ್ರಾಯ ಎಷ್ಟರಮಟ್ಟಿಗೆ ಸರಿಯಾಗಿದೆ ಎಂಬುದು ನನಗೆ ತಿಳಿಯದು; ಆದರೆ, ತತ್ಕಾಲಕ್ಕೆ ಆಂಗ್ಲರ ಪೂರ್ವನಿದರ್ಶನಗಳು ಮತ್ತು ಪದ್ಧತಿಗಳು ಇನ್ನು ಮುಂದೆ ಅಧಿಕೃತವಾಗಿ ನಮಗೆ ಲಭ್ಯವಿರುವುದಿಲ್ಲವೆಂದು ನಾನು ಭಾವಿಸುತ್ತೇನೆ. ಈ ಸಂದರ್ಭಗಳ ಹಿನ್ನಲೆಯಲ್ಲಿ, ನಾವು ಅಂಗೀಕರಿಸುತ್ತಿರುವಂಥ ಕ್ರಮಗಳಲ್ಲಿ ಈ ಖಂಡಗಳಿಗೆ ಅವಕಾಶವಿರಬೇಕಾದುದು ಅತ್ಯಂತ ಅವಶ್ಯವಾಗಿದೆ.

ಈ ಖಂಡಕ್ಕೆ ಸಂಬಂಧಪಟ್ಟ ಹಾಗೆ ನಾನು ಇನ್ನೂ ಒಂದು ಅಭಿಪ್ರಾಯವನ್ನು ತಿಳಿಸಬೇಕಿದೆ. ನಾನು ತಿದ್ದುಪಡಿಯ ನೋಟೀಸನ್ನು ನೀಡಿದ್ದು, ಅದರಲ್ಲಿ, ಸಂಬಂಧಪಟ್ಟ ಪ್ರಾಂತದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಬದಲಾಗಿ, ಸ್ವತಃ ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಬೇಕು ಎಂದು

ನಾನು ಸಲಹೆ ನೀಡುತ್ತೇನೆ. ಸಮಾಲೋಚನೆಯನ್ನು ಮುಖ್ಯ ನ್ಯಾಯಾಧೀಶರಿಗೆ ಸೀಮಿತಗೊಳಿಸುವುದಕ್ಕೆ ಬದಲಾಗಿ, ಸಮಾಲೋಚನೆಯು ಉಚ್ಚ ನ್ಯಾಯಾಲಯದೊಂದಿಗೆ ಇರಬೇಕು. ನನ್ನ ತಿದ್ದುಪಡಿಯು ಡಾ. ಸುಬ್ಬರಾಯನ್ ಅವರು ತಿದ್ದುಪಡಿಗೆ ನೀಡಿದ ನೋಟೀಸಿನ ಇನ್ನೊಂದು ತಿದ್ದುಪಡಿಗೆ ತಿದ್ದುಪಡಿಯಾಗಿದ್ದು, ಡಾ. ಸುಬ್ಬರಾಯನ್ ಅವರು ತಿದ್ದುಪಡಿಯನ್ನು ಮಂಡಿಸಲಿಲ್ಲ; ನನ್ನ ತಿದ್ದುಪಡಿಯು ವಿಫಲಗೊಂಡಿತು. ಆದಾಗ್ಯೂ, ವಿಷಯವನ್ನು ನ್ಯಾಯಾಧೀಶರ ಸಭೆಯಲ್ಲಿ, ಉಚ್ಚ ನ್ಯಾಯಾಲಯದ ಎಲ್ಲ ನ್ಯಾಯಾಧೀಶರು ಪರ್ಯಾಲೋಚಿಸುವಂತೆ, ಮತ್ತು ಫಲಿತಾಂಶವನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ತಿಳಿಸಲು ಸಾಧ್ಯವಾಗುವಂತೆ, ಸಮಾಲೋಚನೆಯಲ್ಲಿ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ನಿರ್ಬಂಧಿಸದೆ, ಉಚ್ಚ ನ್ಯಾಯಾಲಯದೊಂದಿಗೆ ನಡೆಸಬೇಕೆಂಬುದು ಅತ್ಯಂತ ಅಪೇಕ್ಷಣೀಯವಾಗಿದೆ ಎಂದು ಕರಡು (ಪ್ರಾರೂಪಣಾ) ಸಮಿತಿಗೆ ಈ ಅಭಿಪ್ರಾಯವನ್ನು ತಿಳಿಸಲು ನಾನು ಇಚ್ಛಿಸುತ್ತೇನೆ.

ಈ ಅಭಿಪ್ರಾಯಗಳೊಂದಿಗೆ, ಮಾನ್ಯ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್‌ರವರು ಪ್ರಸ್ತಾಪಿಸಿದ ತಿದ್ದುಪಡಿಯನ್ನು ನಾನು ಬೆಂಬಲಿಸುತ್ತೇನೆ.

**ಗೌರವಾನ್ವಿತ ಶ್ರೀ ಜೈಪಾಲ್ ಸಿಂಗ್** (ಬಿಹಾರ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನಾನು ಭಾಗ–೨ರ ೧ರಿಂದ ೩ರವರೆಗಿನ ಖಂಡಗಳನ್ನು ಬೆಂಬಲಿಸುತ್ತೇನೆ. ಇದರ ಜೊತೆಯಲ್ಲೆ, ಯಾವುದೇ ಚರ್ಚೆಯು ನಡೆದಿದೆಯೇ ಮತ್ತು ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವುದಕ್ಕೆ ಸಂಬಂಧಿಸಿದಂತೆ ಎಲ್ಲ ಪಕ್ಷಗಳು ಈ ದೇಶದಲ್ಲಿ ನಡೆಸಿದ ಚರ್ಚೆಯ ಯಾವುದೇ ಫಲಿತಾಂಶದ ಬಗ್ಗೆ ಏನಾದರೂ ಯಾವಾಗ ನಮಗೆ ತಿಳಿಯುತ್ತದೆಯೇ ಹಾಗೂ ಪಂಡಿತ್ ಜವಾಹರಲಾಲ್ ನೆಹರು ಅವರು ಕೇಂದ್ರ ಅಧಿಕಾರಗಳ ಸಮಿತಿಯ ಪರವಾಗಿ ಸಲ್ಲಿಸಲಿರುವ ವರದಿಯಲ್ಲಿ ಪರ್ಯಾಲೋಚಿಸಿದ ಈ ವಿಷಯವನ್ನು ನಾವು ಪಡೆದುಕೊಳ್ಳಲಿದ್ದೇವೆಯೇ ಎಂಬ ಬಗ್ಗೆ ಮಾನ್ಯ ಪ್ರಸ್ತಾವಕರಿಂದ ಕೆಲವು ಮಾಹಿತಿಯನ್ನು ನಾನು ಪಡೆಯಬಯಸುತ್ತೇನೆ. ನಾನು ಈ ಒಂದು ಪ್ರಶ್ನೆಯನ್ನು ಮಾತ್ರ ಕೇಳಲು ಇಚ್ಛಿಸುತ್ತೇನೆ ಮತ್ತು ಮಾನ್ಯ ಪ್ರಸ್ತಾವಕರು ಈ ಅಂಶದ ಮೇಲೆ ನಮಗೆ ಕೆಲವು ಮಾಹಿತಿಯನ್ನು ನೀಡುವರೆಂದು ಆಶಿಸುತ್ತೇನೆ.

**ರಾಯ್ ಬಹಾದ್ದೂರ್ ಶ್ಯಾಮನಂದನ್ ಸಹಾಯ್** (ಬಿಹಾರ್ : ಸಾಮಾನ್ಯ) : ಮಾನ್ಯರೆ, "ನ್ಯಾಯಾಧೀಶರ ಉಪಲಬ್ಧಿಗಳನ್ನು ಮತ್ತು ಭತ್ಯೆಗಳನ್ನು ಅವರ ಪದಾವಧಿಯಲ್ಲಿ ಕಡಿತಗೊಳಿಸತಕ್ಕದ್ದಲ್ಲ" ಎಂದು ವಿಧಿಸಿರುವ ಭಾಗ–೨ರ ೩ನೇ ಖಂಡದ ಬಗ್ಗೆ ಪ್ರಸ್ತಾವಕರ ಮತ್ತು ಸದನದ ಗಮನವನ್ನು ಸೆಳೆಯಬಯಸುತ್ತೇನೆ. ಮಾನ್ಯರೆ, "ಕಡಿತಗೊಳಿಸತಕ್ಕದ್ದಲ್ಲ" ಎಂಬ ಪದವು ಅಗತ್ಯತೆಯನ್ನು ಈಡೇರಿಸುತ್ತಿಲ್ಲವೆಂದು ಮತ್ತು ಇದನ್ನು "ಮಾರ್ಪಡಿಸತಕ್ಕದ್ದಲ್ಲ" ಎಂಬ ಪದದಿಂದ ಬದಲಾಯಿಬೇಕೆಂದು ನಾನು ಭಾವಿಸುತ್ತೇನೆ. ನಾನು ಈ ತಿದ್ದುಪಡಿಯನ್ನು ಮಂಡಿಸದೆ ಇದ್ದುದಕ್ಕೆ ನನಗೆ ವಿಷಾದವಾಗುತ್ತಿದೆ, ಆದರೆ ನಾನು ಪ್ರಸ್ತಾವಿಸಬೇಕೆಂದು ಭಾವಿಸಿದ್ದ ಇತರ ತಿದ್ದುಪಡಿಗಳೂ ಇದ್ದವು. ಯಾವುದೇ ಸಂದರ್ಭದಲ್ಲೂ, ಈ ವಿಷಯವು ಮುಖ್ಯವಾದುದಾಗಿದೆ ಹಾಗೂ ಅದರಿಂದಾಗಿ ಇದರ ಕಡೆಗೆ ಪ್ರಸ್ತಾವಕರ ಗಮನವನ್ನು ಸೆಳೆಯಬಯಸುತ್ತೇನೆ. ಬಹುಶಃ ಅದನ್ನು ಕರಡು ಸಿದ್ಧಪಡಿಸುವ ಹಂತದಲ್ಲಿ ನಿರ್ಬಂಧಿಸಿರಬಹುದು. ಉಪಲಬ್ಧಿಗಳನ್ನು ಅವರ ಪದಾವಧಿಯಲ್ಲಿ ಕಡಿತಗೊಳಿಸಬಾರದು ಎಂದು ನಿರೂಪಿಸಲು, ಪ್ರಾಂತೀಯ ಸಂವಿಧಾನ ಸಮಿತಿಯ ಸದಸ್ಯರಿಗೆ ಮಾರ್ಗದರ್ಶಕವಾಗಿದ್ದ ಕಾರಣಗಳು ಮತ್ತು ತತ್ತ್ವ, ಇವು ಅವರ ವೇತನವನ್ನು ಹೆಚ್ಚಿಸುವ ಸಂದರ್ಭದಲ್ಲಿ ಖಚಿತವಾಗಿ ಇದ್ದಂತಹುವೆ ಎನಿಸುತ್ತದೆ. ನ್ಯಾಯಾಧೀಶರು, ತಮ್ಮ ವೇತನವನ್ನು ಹೆಚ್ಚಿಸಲಾಗುವುದೆಂಬ ಅಥವಾ ವೇತನದಲ್ಲಿ ಇಳಿಕೆ ಮಾಡಲಾಗುವುದೆಂಬ ಗ್ರಹಿಕೆಯನ್ನು ಯಾವಾಗಲೂ ನಿರೀಕ್ಷಿಸುತ್ತಾರೆಂದು ನೀವು ಸಹಜವಾಗಿಯೇ ಬಯಸುವುದಿಲ್ಲ. ಇಂಥ ಸಂದರ್ಭಗಳಲ್ಲಿ, ಪ್ರಸ್ತಾವನೆಕಾರರ ಸಮ್ಮತಿ ಪಡೆದು "ಕಡಿತಗೊಳಿಸತಕ್ಕದ್ದಲ್ಲ" ಎಂಬ ಪದವನ್ನು "ಮಾರ್ಪಡಿಸತಕ್ಕದ್ದಲ್ಲ" ಎಂಬ ಪದದಿಂದ ಬದಲಾಯಿಸಬೇಕೆಂಬುದು

ಅಪೇಕ್ಷಣೀಯವಾದುದಾಗಿದೆ ಎಂಬುದು ನನ್ನ ಅಭಿಪ್ರಾಯ.

ಔಪಚಾರಿಕವಾಗಿ ನಾನು ತಿದ್ದುಪಡಿಯನ್ನು ಪ್ರಸ್ತಾವಿಸಿಲ್ಲ. ಆದರೆ, ವಿಷಯವನ್ನು ಸದನದ ಗಮನಕ್ಕೆ ತರುವುದು ಸೂಕ್ತವೆಂದು ನಾನು ಭಾವಿಸಿದ್ದೇನೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಮಾನ್ಯರೆ, ಈ ತಿದ್ದುಪಡಿಯು, ಎಲ್ಲ ಅಂಶಗಳಲ್ಲೂ, ಈ ಕಾರಣದಿಂದಾಗಿ ಗೊಂದಲ ಉಂಟು ಮಾಡಬಹುದೆಂದು ನನಗನಿಸುತ್ತದೆ. ಉಚ್ಚ ನ್ಯಾಯಾಲಯದ ಅಧಿಕಾರಗಳನ್ನು ಹೆಚ್ಚಿಸಬೇಕೆಂಬ ಮಾನ್ಯ ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ರಾಜಸ್ವ ವ್ಯಾಪ್ತಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದ ಅಧಿಕಾರಗಳ ಮೇಲೆ, ಭಾರತ ಸರ್ಕಾರ ಅಧಿನಿಯಮದ ಅಡಿಯಲ್ಲಿ ಈಗ ಕೆಲವು ನಿರ್ಬಂಧಗಳನ್ನು ವಿಧಿಸಲಾಗಿದೆ. ಈ ಅಧಿನಿಯಮವನ್ನು ಸರಿಪಡಿಸಲು ಬಯಸಿ ಅವರು ಮಾಡುತ್ತಿರುವ ಪ್ರಯತ್ನಗಳಲ್ಲಿ ಇದು ಮೊದಲನೆಯದಾಗಿದೆ. ತಿದ್ದುಪಡಿಯಲ್ಲಿ ಅವರು, ಭಾರತ ಸರ್ಕಾರ ಅಧಿನಿಯಮದಲ್ಲಿ ಒಳಗೊಂಡಿರುವ ಯಾವುವೇ ನಿರ್ಬಂಧಗಳಿಲ್ಲದೆ ಅಥವಾ ಪರಿಮಿತಿಗಳಿಲ್ಲದೆ ರಾಜಸ್ವದ ಎಲ್ಲಾ ವಿಷಯಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ಉಚ್ಚ ನ್ಯಾಯಾಲಯವು ಚಲಾಯಿಸಬೇಕೆಂದು ಹೇಳಲು ಅವರು ಬಯಸುತ್ತಿದ್ದಾರೆ. ಅವುಗಳಲ್ಲಿ ಒಂದು ೨೨೬ನೇ ಪ್ರಕರಣದ ಅಡಿಯಲ್ಲಿಯ ಅಧಿಕಾರದ ವಿಷಯವೂ ಒಂದು, ಅದು ಈ ಮುಂದಿನಂತಿದೆ:

"ಸಮುಚಿತ ವಿಧಾನಮಂಡಲದ ಅಧಿನಿಯಮವು ಅನ್ಯಥಾ ಉಪಬಂಧಿಸಿದ ಹೊರತು, ಯಾವುದೇ ಉಚ್ಚ ನ್ಯಾಯಾಲಯವು, ರಾಜಸ್ವಕ್ಕೆ ಸಂಬಂಧಿಸಿದ ಅಥವಾ ದೇಶದ ಪದ್ಧತಿ ಮತ್ತು ಆಚರಣೆಗನುಸಾರವಾಗಿ ಅದರ ಸಂಗ್ರಹಣೆಗಾಗಿ ಆದೇಶಿಸಿದ ಅಥವಾ ಮಾಡಿದ, ಯಾವುದೇ ಅಧಿನಿಯಮಕ್ಕೆ, ಸಂಬಂಧಿಸಿದ ಯಾವುದೇ ವಿಷಯದಲ್ಲಿ ಯಾವುದೇ ಮೂಲ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ. ......."

ಸಂವಿಧಾನ ಅಧಿನಿಯಮದ ಮೂಲಕ ರಾಜಸ್ವ ವಿಷಯಗಳಲ್ಲಿ ಅಥವಾ ಸಂಗ್ರಹಣೆಯ ವಿಷಯದಲ್ಲಿ ಮೂಲ ಅಧಿಕಾರ ವ್ಯಾಪ್ತಿಯನ್ನು ಪ್ರದಾನ ಮಾಡಲು ಅವರು ಬಯಸುತ್ತಿದ್ದಾರೆಯೇ? ಇವುಗಳನ್ನು ವಿನಾಯಿತಿಗೊಳಿಸಲಾಗಿದೆ. ಅಂಥ ಒಂದು ಅಧಿಕಾರವನ್ನು ಇಲ್ಲಿ ನೀಡಬೇಕು ಮತ್ತು ಸಂವಿಧಾನ ಅಧಿನಿಯಮದಲ್ಲಿಯೇ ಸೇರಿಸಬೇಕು, ಅನುಭವದಿಂದ ಅವಶ್ಯವೆನಿಸಬಹುದಾದಂಥ ಯಾವುದೇ ಬದಲಾವಣೆಯನ್ನು, ಸಂವಿಧಾನ ಅಧಿನಿಯಮಕ್ಕೆ ತಿದ್ದುಪಡಿ ಮಾಡಿ ಸೇರಿಸಬೇಕು. ವಿಧಾನಮಂಡಲವು,ಉಚ್ಚ ನ್ಯಾಯಾಲಯ ಅಧಿಕಾರಕ್ಕೆ ಸಂಬಂಧಿಸಿದ ನಿರ್ಬಂಧಗಳನ್ನು ತೆಗೆದುಹಾಕುವಲ್ಲಿ ಯಾವುವೇ ಆಕ್ಷೇಪಣೆಗಳು ಇರುವುದೇ ಇಲ್ಲ.

ರಿಟ್‌ಗಳ ವಿಷಯದಲ್ಲಿ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು ಸಂಬಂಧಪಡುವಷ್ಟರಮಟ್ಟಿಗೆ, ಅವು, ೨೨೩ನೇ ಪ್ರಕರಣದ ಅಡಿಯಲ್ಲಿ ಸರ್ಕಾರವು ಹೊರಡಿಸಬಹುದಾದಂಥ ಯಾವುದೇ ರಾಜಾಜ್ಞೆಗಳಿಗೆ (ಆರ್ಡರ್ ಇನ್ ಕೌನ್ಸಿಲ್) ಮಹಾಪ್ರಭು (ಹಿಸ್ ಮೆಜಸ್ಟಿ) ಅವರು ಅನ್ಯಥಾ ಹೊರಡಿಸಿದ ಆದೇಶಗಳಿಗೆ ಈಗ ಒಳಪಡುತ್ತವೆ. ಕೆಲವು ರಿಟ್‌ಗಳು ಬಳಕೆಯಲ್ಲಿ ಇಲ್ಲದಿರಬಹುದು, ಅವುಗಳಲ್ಲಿ ಕೆಲವು ಅವಶ್ಯಕವಾಗಿರಬಹುದು ಅಥವಾ ತರುವಾಯ ಬಳಕೆಯಲ್ಲಿಲ್ಲವೆಂದು ಕಂಡುಬರಬಹುದು. ನಾವು ಹೆಚ್ಚಿನ ವಿವರಗಳಿಗೆ ಹೋಗಬೇಕೇ? ಇದನ್ನು ಮಾರ್ಪಾಡು ಮಾಡುವ ಅವಶ್ಯಕತೆ ಉಂಟಾದ ಸಂದರ್ಭದಲ್ಲಿ, ಎರಡೂ ಸದನಗಳಲ್ಲಿ ಮೂರನೇ ಎರಡರಷ್ಟು ಬಹುಮತವಿರಬೇಕಾಗುತ್ತದೆ ಮತ್ತು ಇದಕ್ಕಾಗಿ, ಸಂವಿಧಾನವನ್ನು ಮಾರ್ಪಡಿಸುವುದಕ್ಕೆ ಸಂಬಂಧಿಸಿದ ಎಲ್ಲ ಪ್ರಕ್ರಿಯೆಗಳು ಮತ್ತು ಕಾರ್ಯವಿಧಾನಗಳು, ಇತರ ಮುಖ್ಯ ವಿಷಯಗಳಿಗೆ ಗೊತ್ತುಪಡಿಸಿದಂತೆಯೇ ನಡೆಯಬೇಕಾಗುತ್ತದೆ. ಪ್ರಾಂತೀಯ ವಿಧಾನಮಂಡಲವು, ಉಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಹೆಚ್ಚಿಸಲು ಅಥವಾ ಅದರ ಮೇಲೆ ನಿರ್ಬಂಧವನ್ನು ವಿಧಿಸಲು ಹಕ್ಕುಳ್ಳದ್ದಾಗಿರತಕ್ಕದ್ದು ಎಂದು ನಾವು ಸುಲಭವಾಗಿ ಹೇಳಬಹುದು. ಈ ಯಾವುವೇ ವಿಷಯಗಳನ್ನು ಈ ರೀತಿಯ ಸಂವಿಧಾನ ಅಧಿನಿಯಮದಲ್ಲಿ

ಸೇರಿಸಬೇಕಾದ ಅಗತ್ಯವಿಲ್ಲವೆಂದು ನಾನು ಭಾವಿಸುತ್ತೇನೆ.

ಪುನಃ, (ಸಿ) ಖಂಡವು, ಭಾರತ ಸರ್ಕಾರ ಅಧಿನಿಯಮ, ೧೯೩೫ರ ೨೨೪ನೇ ಪ್ರಕರಣದಲ್ಲಿ ನಮೂದಿಸಿದ ಅಧಿಕಾರಗಳಿಗೆ ಹೆಚ್ಚುವರಿಯಾಗಿ, ಉಚ್ಚ ನ್ಯಾಯಾಲಯಗಳು ಭಾರತ ಸರ್ಕಾರದ ಅಧಿನಿಯಮದ ೧೧೭ನೇ ಪ್ರಕರಣದ ಅಡಿಯಲ್ಲಿ ಅಧೀನ ನ್ಯಾಯಾಲಯಗಳ ಮೇಲೆ ಮೇಲ್ವಿಚಾರಣೆಯ ಅಧಿಕಾರಗಳನ್ನು ಹೊಂದಿರತಕ್ಕದ್ದು ಎಂದು ತಿಳಿಸುತ್ತದೆ. ಮಾನ್ಯ ಅಲ್ಲಾದಿಯವರು ತಮ್ಮ ತಿದ್ದುಪಡಿಯಲ್ಲಿ ಸಲಹೆ ನೀಡಿದ ರೀತಿಯಲ್ಲಿ, ಉಚ್ಚ ನ್ಯಾಯಾಲಯಗಳ ಅಧಿಕಾರಗಳನ್ನು ಹೆಚ್ಚಿಸಬೇಕೆಂಬುದನ್ನು ನಾನು ಅಲ್ಲಗಳೆಯುವುದಿಲ್ಲ, ಆದರೆ ಸ್ಥಳೀಯ ವಿಧಾನಮಂಡಲವು ಆ ಅಧಿಕಾರಗಳನ್ನು ನೀಡಲು ಸಕ್ಷಮವಾಗಿರುವುದಷ್ಟೇ ಅಲ್ಲದೆ, ಭಾರತ ಸರ್ಕಾರ ಅಧಿನಿಯಮದ ೧೧೭ನೇ ಪ್ರಕರಣದಲ್ಲಿ ಉದ್ದೇಶಿಸಿರದ ಹೆಚ್ಚುವರಿ ಅಧಿಕಾರಗಳನ್ನು ನೀಡಲು ಸಹ ಸಕ್ಷಮವಾಗಿದೆ. ನಾವು ಇದಕ್ಕಾಗಲಿ ಅಥವಾ ಅದಕ್ಕಾಗಲಿ ಏಕೆ ನಿರ್ಬಂಧಿಸಬೇಕು? ಮಾನ್ಯ ಅಲ್ಲಾದಿಯವರು ಸದನದ ಮುಂದೆ ಮಂಡಿಸಿರುವ, ಈಗ ನಾವು ಚರ್ಚಿಸುತ್ತಿರುವ ಕರಡು ಸಂವಿಧಾನವು, ಪ್ರಸ್ತುತ ಭಾರತ ಸರ್ಕಾರ ಅಧಿನಿಯಮದಲ್ಲಿರುವಂಥ ಎಲ್ಲ ಉಪಬಂಧಗಳನ್ನು ಒಳಗೊಳ್ಳಬೇಕು ಎಂಬುದು ಸ್ಪಷ್ಟವಾಗಿಯೇ ಇದೆ. ಆ ಉಪಬಂಧಗಳು ಉತ್ತಮವಾಗಿರಲಿ ಅಥವಾ ಉತ್ತಮವಾಗಿಲ್ಲದಿರಲಿ, ಅವುಗಳನ್ನು ವಸ್ತುಶಃ ನಾವು ಅಳವಡಿಸಿಕೊಳ್ಳಬಾರದೆಂಬುದನ್ನು ನಾನು ಒಪ್ಪುತ್ತೇನೆ. ಸಂವಿಧಾನ ರಚನಕಾರರು, ವಿವರವಾಗಿ ಮುಂದುವರಿದು, ಅವಶ್ಯಕ ವಿಷಯಗಳಲ್ಲಿ ಹಾಗೂ ಅವಶ್ಯವಿರುವ ಕಡೆಯಲ್ಲಿ ರಿಟ್‌ಗಳನ್ನು ನೀಡಲು, ಅವಶ್ಯವಿರುವ ವಿಷಯಗಳಲ್ಲಿ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸುವ ಸಲುವಾಗಿ ಕಾನೂನುಗಳನ್ನು ಹಾಗೂ ನಿಬಂಧನೆಗಳನ್ನು ಮಹಾಪ್ರಭುಗಳ (ಹಿಸ್ ಮೆಜಸ್ಟಿ ಇನ್ ಕೌನ್ಸಿಲ್) ಹಸ್ತಕ್ಷೇಪವಿಲ್ಲದೆ ಅಂಗೀಕರಿಸಲು ಸ್ಥಳೀಯ ವಿಧಾನಮಂಡಲಕ್ಕೆ ಅಧಿಕಾರ ನೀಡತಕ್ಕದ್ದು. ಇವು ಹೇಗೆ ಮತ್ತು ಯಾವ ರೀತಿಯಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸಬೇಕೆಂಬುದರ ಬಗ್ಗೆ ಸಮಿತಿಗೆ ಉಲ್ಲೇಖಿಸಬೇಕಾದ ವಿವರಗಳಾಗಿವೆ. ಇದಕ್ಕಾಗಿ, ಯಾವ ವಿಷಯದಲ್ಲಿ ಅಧಿಕಾರ ವ್ಯಾಪ್ತಿ ಇರಬೇಕೆಂದು ನಾವು ಪ್ರಸ್ತಾಪಿಸಿದ್ದೇವೆಯೋ, ಈ ವಿಷಯಗಳಲ್ಲಿ ಮುಂದುವರಿಯಲು ವಿಧಾನಮಂಡಲವು ಹಕ್ಕುಳ್ಳದ್ದಾಗಿರುತ್ತದೆ. ನಿಶ್ಚಯವಾಗಿಯೂ, ನನ್ನ ಸ್ನೇಹಿತರಾದ ಮಾನ್ಯ ಅಲ್ಲಾದಿಯವರು ಹೇಳಿರುವಂತೆ ಎಲ್ಲ ಜನರು ಒಂದೇ ಉಪವೇಶನದಲ್ಲಿ ಚರ್ಚಿಸಿ ವಿಲೆ ಮಾಡಬೇಕಾದ ವಿಷಯವಲ್ಲ; ವಿಧೇಯಕದೊಳಗೆ ಅದನ್ನು ಅಂತಿಮವಾಗಿ ಸೇರಿಸುವುದಕ್ಕೆ ಮುಂಚೆ ಈ ಖಂಡಗಳಲ್ಲಿ ಪ್ರತಿಯೊಂದನ್ನು ತಜ್ಞರ ಸಮಿತಿಯು, ಅವಲೋಕಿಸುವಂತೆ ಆ ಸಮಿತಿಗೆ ಒಪ್ಪಿಸಲೇಬೇಕು ಎಂಬುದನ್ನು ಹೇಳಿದ್ದಾರೆ; ನಮಗೆ ಅಂಥ ಅವಕಾಶ ಇಲ್ಲ; ಉಚ್ಚ ನ್ಯಾಯಾಲಯದ ಅಧಿಕಾರಗಳನ್ನು, ಅವು ಉತ್ತಮವಾಗಿರಲಿ ಅಥವಾ ಇಲ್ಲದಿರಲಿ, ನಿರ್ದಿಷ್ಟ ರೀತಿಯಲ್ಲಿಯೇ ಹೆಚ್ಚಿಸಬೇಕೆಂದು ಮಾತ್ರ ಅವರು ಹೇಳಿದ್ದಾರೆ. ನಾವು ಅದು ಉತ್ತಮವಾದುದೆಂದು ಒಪ್ಪಿಕೊಳ್ಳುತ್ತೇವೆ. ಕೆಲವು ಕಾಲದ ನಂತರ, ಅದು ಕೆಟ್ಟ ಅಥವಾ ದಮನಕಾರಿ ಅಥವಾ ಕಠಿಣ ಎಂದು ಕಂಡುಬರಬಹುದು. ವಿಕೇಂದ್ರೀಕರಿಸುವ ಅವಶ್ಯಕತೆಯೂ ಉಂಟಾಗಬಹುದು.

ಉಚ್ಚ ನ್ಯಾಯಾಲಯಗಳ ಮೇಲ್ವಿಚಾರಣಾ ಅಧಿಕಾರಗಳು, ಕೆಲವು ವಿಷಯಗಳಲ್ಲಿ ಅನಾವಶ್ಯಕವಾಗಿರಬಹುದು ಮತ್ತು ಸಮಯೋಚಿತವಾಗಿಲ್ಲದಿರಬಹುದು. ಆದುದರಿಂದ, ಪ್ರಾಂತೀಯ ಉಚ್ಚ ನ್ಯಾಯಾಲಯಗಳಿಗಿರುವ ಈ ಎಲ್ಲ ಅಧಿಕಾರಗಳನ್ನು ನಾವು ಹಿಂತೆಗೆದುಕೊಳ್ಳಲಾಗದಂತೆ ಪ್ರದಾನ ಮಾಡಿದರೆ, ಅದು ಅತ್ಯಂತ ಕಷ್ಟಕರ. ನಾವು ಆ ವಿವರಗಳನ್ನು ಏಕೆ ಮಂಡಿಸಬೇಕು? ಆದುದರಿಂದ, ಈ ನಿಟ್ಟಿನಲ್ಲಿ ಉಚ್ಚ ನ್ಯಾಯಾಲಯಗಳ ಅಧಿಕಾರಗಳನ್ನು ಹೆಚ್ಚಿಸುವುದಕ್ಕೆ ಇರುವ ಅಗತ್ಯತೆಯನ್ನು, ಈ ತಿದ್ದುಪಡಿಯನ್ನು ಮಂಡಿಸುವ ಮೂಲಕ, ನನ್ನ ಸ್ನೇಹಿರು ಗಮನಕ್ಕೆ ತರಲು ಮಾತ್ರ ಬಯಸುತ್ತಿದ್ದಾರೆಂದು ನಾನು ಹೇಳುತ್ತೇನೆ. ಅವರು ತಪ್ಪು ವಿಧಾನವನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ವಿಧಾನಮಂಡಲದ ಮುಂದೆ ಅದನ್ನು ಮಂಡಿಸುವುದೇ ಸರಿ. ರಾಜಸ್ವ ವಿಷಯಗಳಿಗೆ ಸಂಬಂಧಿಸಿದಂತೆ ಮೇಲ್ವಿಚಾರಣೆಯ

ವಿಷಯದಲ್ಲಿ ಉಚ್ಚ ನ್ಯಾಯಾಲಯದ ಅಧಿಕಾರಗಳನ್ನು ಹೆಚ್ಚಿಸಲು ಪ್ರಾಂತೀಯ ವಿಧಾನಮಂಡಲವು ಎಲ್ಲ ಅಧಿಕಾರಗಳನ್ನು ಹೊಂದಿದೆ ಎಂಬುದನ್ನು ನೋಡಬೇಕಾಗುತ್ತದೆ. ಆದ್ದರಿಂದ ತಮ್ಮ ತಿದ್ದುಪಡಿಯನ್ನು ಅದು ಅನಾವಶ್ಯಕ ಗೊಂದಲಗಳಿಗೆ ಎಡೆಮಾಡಿಕೊಡುತ್ತಿರುವುದರಿಂದ ಅದನ್ನು ಅವರು ಒತ್ತಾಯಪಡಿಸಬಾರದೆಂದು ನಾನು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಮಾನ್ಯ ಕೆ.ಎಮ್. ಮುನ್ಷಿ** (ಬಾಂಬೆ : ಸಾಮಾನ್ಯ) : ಸನ್ಮಾನ್ಯ ಅಧ್ಯಕ್ಷರೆ, ನನ್ನ ಮಿತ್ರ ಮಾನ್ಯ ಅನಂತಶಯನಮ್ ಅವರ ಷರಾಗಳು ಪ್ರಸ್ತುತ ಭಾರತ ಸರ್ಕಾರದ ಅಧಿನಿಯಮದ ಮೇಲೆ ಆಧಾರಿತವಾಗಿವೆ. ಆದರೆ, ಮಾನ್ಯ ಅಲ್ಲಾದಿಯವರ ತಿದ್ದುಪಡಿಯು ಏಕೆ ಅವಶ್ಯಕವೆಂಬ ಕಾರಣವನ್ನು ಸಂಪೂರ್ಣವಾಗಿ ಸದನದ ಮುಂದೆ ಇರಿಸಲಾಗಿದೆ. ವಿಶಿಷ್ಟಾಧಿಕಾರದ ಪ್ರಿರಾಕೇಟಿವ್ ರಿಟ್‌ಗಳಿಗೆ ಸಂಬಂಧಿಸಿದ ಸ್ಥಾನಮಾನವು, ತಾಂತ್ರಿಕ ವಿಷಯವಾಗಿರುವುದರಿಂದ ಸಹಜವಾಗಿಯೇ ಅದನ್ನು ಅರ್ಥ ಮಾಡಿಕೊಳ್ಳಲು ಸಾಮಾನ್ಯರಿಗೆ ಸ್ವಲ್ಪಮಟ್ಟಿನ ತೊಂದರೆಯಾಗಬಹುದು, ಆದರೆ, ನಾವು ಈ ದೇಶದ ಪ್ರಮುಖ ವಾಸ್ತವಾಂಶವನ್ನು, ಎಂದರೆ, ಕಿಂಗ್ಸ್ ಬೆಂಚ್ ಡಿವಿಷನ್‌ನ ಅಧಿಕಾರ ವ್ಯಾಪ್ತಿಯ ಉತ್ತರಾಧಿಕಾರವನ್ನು ಪಡೆದುಕೊಂಡಿರುವ ಕಲ್ಕತ್ತ, ಬಾಂಬೆ ಮತ್ತು ಮದ್ರಾಸ್ ಉಚ್ಚ ನ್ಯಾಯಾಲಯಗಳು ಮಾತ್ರ ಆ ನಗರಗಳ ಮೂಲ ವ್ಯಾಪ್ತಿಯೊಳಗೆ ವಿಶಿಷ್ಟಾಧಿಕಾರದ ಪ್ರಿರಾಕೇಟಿವ್ ರಿಟ್‌ಗಳನ್ನು ಹೊರಡಿಸುವ ಅಧಿಕಾರವನ್ನು ಹೊಂದಿವೆ. ಇತರ ಉಚ್ಚ ನ್ಯಾಯಾಲಯಗಳಿಗೆ ಆ ಅಧಿಕಾರ ಇರುವುದಿಲ್ಲ ಅಥವಾ ಈ ಮೂರು ಉಚ್ಚ ನ್ಯಾಯಾಲಯಗಳ ಅಧಿಕಾರವು ಸಂಬಂಧಪಟ್ಟ ಮೂರು ಪಟ್ಟಣಗಳ ಮೂಲ ವ್ಯಾಪ್ತಿಯನ್ನು ಮೀರಿ ವಿಸ್ತರಿಸಿಲ್ಲ. ಭಾರತದಲ್ಲಿನ ಪ್ರತಿಯೊಂದು ಉಚ್ಚ ನ್ಯಾಯಾಲಯವು ಇಂಗ್ಲೆಂಡಿನ ಕಿಂಗ್ಸ್ ಬೆಂಚ್ ಡಿವಿಷನ್ ಪಡೆದಿರುವಂತಹುದೇ ವಿಶಿಷ್ಟಾಧಿಕಾರದ ಪ್ರಿರಾಕೇಟಿವ್ ರಿಟ್‌ಗಳನ್ನು ಹೊರಡಿಸುವ ಅದೇ ರೀತಿಯ ಅಧಿಕಾರವನ್ನು ಹೊಂದಿರಬೇಕೆಂಬುದನ್ನು ನೋಡಿಕೊಳ್ಳುವುದು ಈ ಖಂಡದ ಉದ್ದೇಶವಾಗಿದೆ. ಈ ಅಂಶವನ್ನು ಭಾರತ ಸರ್ಕಾರ ಅಧಿನಿಯಮವು ಒಳಗೊಂಡಿರುವುದಿಲ್ಲ ಅಥವಾ ಬೇರೆ ಯಾವುದರಿಂದಲೂ ಪರಿವರ್ತಿಸಲಾಗಿಲ್ಲ. ಪ್ರಾಂತಗಳ ಉಚ್ಚ ನ್ಯಾಯಾಲಯಗಳು ಕಿಂಗ್ಸ್ ಬೆಂಚ್ ಡಿವಿಷನ್ ಹೊಂದಿರುವ ಅಧಿಕಾರಗಳೇ ಇರಬೇಕೆಂಬುದು ಈ ತಿದ್ದುಪಡಿಯ ಪ್ರಯತ್ನವಾಗಿದೆ. ಆ ವಿಶಿಷ್ಟಾಧಿಕಾರದ ಪ್ರಿರಾಕೇಟಿವ್ ರಿಟ್‌ಗಳು ಹಳೆಯವಾಗಿದ್ದು ಸಾಮಾನ್ಯ ಆಂಗ್ಲ ಕಾನೂನಿನಲ್ಲಿ ಪ್ರಸಿದ್ಧವಾಗಿವೆ, ಆದರೆ ಅವುಗಳಲ್ಲಿ ಬಹುತೇಕ ರಿಟ್‌ಗಳನ್ನು ಈಗ ಕಲ್ಕತ್ತ, ಮದ್ರಾಸ್ ಮತ್ತು ಬಾಂಬೆಯಲ್ಲಿ ಬಳಕೆಗೆ ತರಲಾಗಿತ್ತು ಹಾಗೂ ಭಾರತ ರಕ್ಷಣಾ ಅಧಿನಿಯಮವು ಜಾರಿಯಲ್ಲಿದ್ದಾಗ ೧೯೪೨ರಿಂದ ೧೯೪೫ನೇ ವರ್ಷಾವಧಿಯ ಕಷ್ಟದ ದಿನಗಳಲ್ಲಿ, ಈ ರಿಟ್‌ಗಳು ಅವುಗಳನ್ನು ಸಮರ್ಥಿಸುವಲ್ಲಿ ಬಹಳ ಬಳಸಿಕೊಳ್ಳಲಾಗಿತ್ತೆಂಬುದನ್ನು ಸದನದ ನ್ಯಾಯವಾದಿ ಸದಸ್ಯರು ಮನಗಂಡಿದ್ದಾರೆ.

ಅಲ್ಲದೆ, ಸ್ವತಂತ್ರ ಭಾರತದ ಸಂವಿಧಾನವು ಈ ರೀತಿಯ ಸನ್ನದು ಆಗಿರಬೇಕು ಎಂಬ ಈ ವಾಸ್ತವಾಂಶವನ್ನು ನಾವು ಪರಿಗಣಿಸಬೇಕಿದೆ. ಇದು ಮೂಲಭೂತ ಹಕ್ಕುಗಳನ್ನು ಒಳಗೊಂಡಿದೆ ಹಾಗೂ ಕೆಲವು ಮೂಲಭೂತ ಹಕ್ಕುಗಳಲ್ಲಿ ಮತ್ತು ಕೆಲವು ಬಾಧ್ಯತೆಗಳಲ್ಲಿ ಸರ್ಕಾರವು ನಾಗರಿಕರ ಹಕ್ಕುಗಳನ್ನು ಸಹ ಗುರುತಿಸಬೇಕಾಗಿದೆ. ಈಗ, ಆ ಎಲ್ಲವೂ ಕಿಂಗ್ಸ್ ಬೆಂಚ್ ಡಿವಿಷನ್‌ದಿಂದ ಬ್ರಿಟಿಷರು ಪಡೆದುಕೊಂಡಿರುವ ಪರಿಹಾರಗಳ ಸ್ವರೂಪದಲ್ಲಿ ಕೆಲವು ರೀತಿಯ ಪರಿಹಾರಗಳನ್ನು ಜಾರಿಗೊಳಿಸಬೇಕಿದೆ. ಒಕ್ಕೂಟದ ಸಂವಿಧಾನದ ಪ್ರಕಾರ ಅಂಥ ಸರ್ವೋಚ್ಚ ನ್ಯಾಯಾಲಯವನ್ನು ರಚಿಸಲಾಗಿದ್ದರೆ, ಅಂಥ ಸರ್ವೋಚ್ಚ ನ್ಯಾಯಾಲಯದಲ್ಲಿ ಈ ವಿಶಿಷ್ಟಾಧಿಕಾರದ ಪ್ರಿರಾಕೇಟಿವ್ ರಿಟ್‌ಗಳನ್ನು ಹೊರಡಿಸುವ ಅಧಿಕಾರವನ್ನು ನಿಹಿತಗೊಂಡಿರುವುದು. ಸಂವಿಧಾನಿಕ ಹಕ್ಕುಗಳು ಮತ್ತು ಇತರ ವಿವಿಧ ಹಕ್ಕುಗಳಿಗೆ ಸಂಬಂಧಿಸಿದ ಅಧಿಕಾರವು, ಸರ್ವೋಚ್ಚ ನ್ಯಾಯಾಲಯದಲ್ಲಿ ಮಾತ್ರ ನಿಹಿತವಾಗಿದ್ದರೆ ಮತ್ತು ಯಾವುದೇ ಇತರ ಉಚ್ಚ ನ್ಯಾಯಾಲಯಗಳಲ್ಲಿ ನಿಹಿತವಾಗಿರದಿದ್ದರೆ, ಪ್ರತಿಯೊಬ್ಬ ನಾಗರಿಕನು ತನ್ನ ಹಕ್ಕುಗಳನ್ನು ಸಮರ್ಥಿಸುವ ಸಲುವಾಗಿ ದೆಹಲಿಗೇ

ಬರಬೇಕಾಗುತ್ತದೆ. ಎಲ್ಲಾ ಉಚ್ಚ ನ್ಯಾಯಾಲಯಗಳು ಅವುಗಳ ಅಧಿಕಾರ ವ್ಯಾಪ್ತಿಯೊಳಗೆ ರಿಟ್‌ಗಳನ್ನು ಹೊರಡಿಸುವ ಅಂತಹುವೇ ಅಧಿಕಾರಗಳನ್ನು ಹೊಂದಬೇಕೆಂಬುದು ಮಾನ್ಯ ಶ್ರೀ ಅಲ್ಲಾಡಿಯವರು ಪ್ರಸ್ತಾವಿಸಿದ ತಿದ್ದುಪಡಿಯ ಉದ್ದೇಶವಾಗಿದೆ. ಈ ಖಂಡದ ಅರ್ಥವೂ ಅದೇ ಆಗಿದೆ. ಇದನ್ನು ಸಂವಿಧಾನದಲ್ಲಿ ಅಳವಡಿಸುವುದು ಅವಶ್ಯಕವಾಗಿದೆ, ಏಕೆಂದರೆ, ಅನ್ಯಥಾ ವಿಧಾನಮಂಡಲವು ಉಚ್ಚ ನ್ಯಾಯಾಲಯದ ಕೆಲವು ಅಧಿಕಾರಗಳನ್ನು ತೆಗೆದುಕೊಳ್ಳಬಹುದಾಗಿದೆ ಅಥವಾ ತೆಗೆದುಕೊಳ್ಳಲು ಪ್ರಯತ್ನಿಸಬಹುದಾಗಿದೆ. ಭಾರತ ಸರ್ಕಾರ ಅಧಿನಿಯಮದ ಯಾವುದೇ ಅನುರೂಪತೆಯು ಅನ್ವಯವಾಗುವುದಿಲ್ಲ. ಇದೇ ಉದ್ದೇಶದಿಂದ, ಈ ತಿದ್ದುಪಡಿ ಅಲ್ಲಿರುವುದು ಅವಶ್ಯವಾಗಿದೆ.

ವಿಶಿಷ್ಟಾಧಿಕಾರದ ಪ್ರಿರಾಕೇಟಿವ್ ರಿಟ್‌ಗಳು' ಎಂಬ ಪದವು ಬಹಳ ಅಸ್ಪಷ್ಟವಾಗಿದೆ ಎಂಬುದು ನನಗೆ ಗೊತ್ತಿದೆ. ಆ ಕಾರಣದಿಂದಾಗಿಯೇ ಮಾನ್ಯ ಅಲ್ಲಾದಿಯವರ ತಿದ್ದುಪಡಿಯಲ್ಲಿ– "ಅದರ ಯಾವುದೇ ಪರ್ಯಾಯ ಪರಿಹಾರಗಳು" ಎಂಬ ಪದಗಳನ್ನು ಬಳಸಲಾಗಿದೆ. ಸಂವಿಧಾನವು ಪರಿಭಾಷಿಸಿದ ರೂಪದಲ್ಲಾಗಲಿ ಅಥವಾ ಸಂವಿಧಾನದ ಅಧಿಕಾರದ ಅಡಿಯಲ್ಲಿ ರಚಿಸಲಾದ ಯಾವುದೇ ಕಾನೂನಿನ ಮೂಲಕವಾಗಲಿ, ಆ ರಿಟ್‌ಗಳನ್ನು ಸಂರಕ್ಷಿಸಲಾಗುವುದು. ಇದರ ಬಗ್ಗೆ ಯಾವುದೇ ಸಂಶಯವಿಲ್ಲ.

ವಿಶಿಷ್ಟಾಧಿಕಾರದ ಪ್ರಿರಾಕೇಟಿವ್ ರಿಟ್‌ಗಳು ಬಹುತೇಕ ಇಂಗ್ಲೆಂಡಿನ ಸಾಮಾನ್ಯ ಕಾನೂನಿನಲ್ಲಿ ಸೃಷ್ಟಿಯಾಗಿದ್ದವು. ಆದರೆ, ನಿರ್ದಿಷ್ಟ ರೂಪದಲ್ಲಿ ಶಾಸನ ಪುಸ್ತಕದಲ್ಲಿ ಅವುಗಳನ್ನು ಸೇರಿಸಲು ಇಂಗ್ಲೆಂಡಿನಲ್ಲಿ ಪ್ರಯತ್ನಗಳನ್ನು ಮಾಡಲಾಗಿತ್ತು. ಪ್ರಸ್ತುತ ಪ್ರಸ್ತಾವಗಳಲ್ಲಿ, ಸಾಮಾನ್ಯ ಕಾನೂನು ನಮೂನೆಯನ್ನು ಅದರ ಅಸ್ಪಷ್ಟತೆ ಸಹಿತ ಉಳಿಸಲು ನಾವು ಈಗ ಏಕೆ ಅವಕಾಶ ಮಾಡಿಕೊಡಬೇಕು ಎಂಬುದಕ್ಕೆ ಯಾವುದೇ ಕಾರಣವಿಲ್ಲ. ಸೂಕ್ತ ವಿಧೇಯಕದಲ್ಲಿ ಆ ರಿಟ್‌ಗಳನ್ನು ಪರಿಭಾಷಿಸಲು ತರುವಾಯ ಕೆಲವು ಪ್ರಯತ್ನಗಳನ್ನು ಮಾಡಬೇಕಿದೆ. ಪ್ರಾಂತಗಳ ಉಚ್ಚ ನ್ಯಾಯಾಲಯಗಳು ವಿಶಿಷ್ಟಾಧಿಕಾರದ ಪ್ರಿರಾಕೇಟಿವ್ ರಿಟ್‌ಗಳನ್ನು ಅಥವಾ ಕೆಲವು ವಿಧದ ಪರಿಹಾರಗಳನ್ನು ನೀಡುವ ಅಧಿಕಾರಗಳನ್ನು ಹೊಂದಿರಬೇಕೆಂಬುದು ತಿದ್ದುಪಡಿಯಲ್ಲಿ ಸೇರಿಸಿದ ತತ್ತ್ವವಾಗಿದೆ. ಹಾಗಾಗಿ, ನನ್ನ ಮಿತ್ರರಾದ ಶ್ರೀಅನಂತಶಯನಮ್ ಅವರು ಎತ್ತಿದ ಆಕ್ಷೇಪಣೆಗಳು ಸಿಂಧುವಲ್ಲ.

(ಬಿ) ಖಂಡಕ್ಕೆ ಸಂಬಂಧಿಸಿದಂತೆ, ರಾಜಸ್ವ ವಿಷಯಗಳಲ್ಲಿನ ಅಧಿಕಾರವ್ಯಾಪ್ತಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ಅಧಿನಿಯಮವು ವಿಧಿಸಿದ ನಿರ್ಬಂಧಗಳಿವೆ. ಇದು ಕೇವಲ ಇತಿಹಾಸದ ವಿಷಯ. ರಾಜಸ್ವದ ವಿಷಯಗಳೂ ಸಹ ಕಾನೂನಿನ ವ್ಯಾಪ್ತಿಗೆ ಒಳಪಡುತ್ತವೆ ಎಂಬ ತತ್ತ್ವವನ್ನು ಈ ತಿದ್ದುಪಡಿಯು ಗುರುತಿಸಿದೆ. (ಸಿ) ಖಂಡವು ಸಾಮಾನ್ಯ ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯಗಳು, ಎಲ್ಲ ಅಧೀನ ನ್ಯಾಯಾಲಯಗಳ ಮೇಲೆ ಮೇಲ್ವಿಚಾರಣೆಯ ಅಧಿಕಾರವನ್ನು ಹೊಂದಿರುತ್ತವೆ ಮತ್ತು ಈ ಖಂಡವನ್ನು ಮತ್ತಷ್ಟು ವಿಸ್ತರಿಸುವ ಅಗತ್ಯವಿಲ್ಲ.

ಸಂವಿಧಾನದಲ್ಲಿ ಈ ತತ್ತ್ವವನ್ನು ಸೇರಿಸಬೇಕು ಎಂಬುದು ಇದರ ಉದ್ದೇಶವಾಗಿದೆ. ಪ್ರಾಂತೀಯ ವಿಧಾನ ಮಂಡಲವು ಉಚ್ಚ ನ್ಯಾಯಾಲಯದ ಅಧಿಕಾರಗಳನ್ನು ಸರಿಪಡಿಸುವ ಅಧಿಕಾರವನ್ನು ಹೊಂದಿರಬೇಕು. ವಿಧಾನಮಂಡಲದಲ್ಲಿ ಬಹುಮತದ ಮೂಲಕ ನಾಗರಿಕರ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಮೊಟಕುಗೊಳಿಸದಿರುವಂತೆ ನೋಡಿಕೊಳ್ಳುವ ಸಲುವಾಗಿ ಈ ವಿಷಯಗಳಲ್ಲಿ ಉಚ್ಚ ನ್ಯಾಯಾಲಯಗಳ ವಾಸ್ತವಿಕ ಅಧಿಕಾರ ಮತ್ತು ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ನಾಗರಿಕ ಸ್ವಾತಂತ್ರ್ಯದ ರಕ್ಷಣೆಯಲ್ಲಿ ಮತ್ತು ಪ್ರಜಾಪ್ರಭುತ್ವದ ಹಿತಾಸಕ್ತಿಯಲ್ಲಿ ಈ ಅಧಿಕಾರಗಳು ಅತ್ಯಗತ್ಯವಾಗಿವೆ.

**ಮಾನ್ಯ ತಾಜುಮುಲ್ ಹುಸೇನ್:** ಪ್ರಾಂತೀಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ವೇತನವನ್ನು, ಅವರ ಪದಾವಧಿಯಲ್ಲಿ ಕಡಿತಗೊಳಿಸಲು ಸಾಧ್ಯವಿಲ್ಲವೆಂದು ಭಾಗ–೨ರ ೩ನೇ ಖಂಡದಲ್ಲಿ ತಿಳಿಸಲಾಗಿದೆ. ಆದರೆ, ಅದು ಎಲ್ಲಿಯೂ ಅದನ್ನು ಹೆಚ್ಚಿಸಬಾರದೆಂದು ಹೇಳಿರುವುದಿಲ್ಲ. ಮಾನ್ಯರೆ, ನಾವು, ಏನೇ ಆಗಲಿ

ಉಚ್ಚ ನ್ಯಾಯಾಲಯಗಳ ಘನತೆಯನ್ನು ಮತ್ತು ನಿಷ್ಪಕ್ಷಪಾತ ನಿಲುವನ್ನು ಕಾಪಾಡಿಕೊಳ್ಳಲೇಬೇಕು, ನಮ್ಮ ಅಧಿನಿಯಮದಲ್ಲಿ ನಾವು ಅವರ ವೇತನವನ್ನು ಹೆಚ್ಚಿಸುವುದನ್ನು ಅಥವಾ ಕಡಿಮೆಗೊಳಿಸುವುದನ್ನು ಹೇಳದಿದ್ದರೆ, ಅವರೂ ಸಹ ಮಾನವರೇ ಆಗಿರುವುದರಿಂದ, ಅವರ ವೇತನ ಬಡ್ತಿಗಾಗಿ ವಿಧಾನಮಂಡಲದೆಡೆಗೆ ನೋಡಬೇಕಾಗುತ್ತದೆ. ಇದು ಅತ್ಯಂತ ಪ್ರಮುಖ ವಿಷಯವಾಗಿದೆ. ನಾನು ಯಾವುದೇ ತಿದ್ದುಪಡಿಯ ನೋಟೀಸನ್ನು ನೀಡಿರುವುದಿಲ್ಲ. ಮಾನ್ಯರೆ, ನನ್ನ ಮಿತ್ರರಾದ ರಾಯ್ ಬಹಾದ್ದೂರ್ ಶ್ಯಾಮನಂದನ್ ಸಹಾಯ್ ಬದಲಾವಣೆಗೆ ಸಲಹೆ ಮಾಡಿದ್ದಾರೆ, ಅದನ್ನು ಮಾನ್ಯ ಪ್ರಸ್ತಾವಕರು ಒಪ್ಪುವರೆಂದು ಆಶಿಸುತ್ತೇನೆ. ಪ್ರಸ್ತುತ ಉಪಬಂಧವನ್ನು ಈ ಕೆಳಗಿನಂತೆ ಓದತಕ್ಕದ್ದು:

"ನ್ಯಾಯಾಧೀಶರ ಉಪಲಬ್ಧಿಗಳನ್ನು ಮತ್ತು ಭತ್ಯೆಗಳನ್ನು ಅವರ ಪದಾವಧಿಯಲ್ಲಿ ಕಡಿಮೆಗೊಳಿಸತಕ್ಕುದಲ್ಲ."

"ಕಡಿಮೆಗೊಳಿಸತಕ್ಕುದಲ್ಲ" ಎಂಬ ಪದಕ್ಕೆ ಬದಲು "ವ್ಯತ್ಯಾಸಗೊಳಿಸತಕ್ಕುದಲ್ಲ" ಎಂಬ ಪದವನ್ನು ಸೇರಿಸಲು ನಾನು ಸಲಹೆ ನೀಡುತ್ತೇನೆ; ಈ ಬದಲಾವಣೆಯೊಂದಿಗೆ,–

"ನ್ಯಾಯಾಧೀಶರ ಉಪಲಬ್ಧಿಗಳು ಮತ್ತು ಭತ್ಯೆಗಳನ್ನು ಅವರ ಪದಾವಧಿಯಲ್ಲಿ ವ್ಯತ್ಯಾಸಗೊಳಿಸತಕ್ಕದ್ದಲ್ಲ."

– ಎಂದು ಓದಿಕೊಳ್ಳತಕ್ಕದ್ದು.

ಸದನದ ಅಂಗೀಕಾರಕ್ಕಾಗಿ ಇದನ್ನು ಮಂಡಿಸಲಾಗಿದೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸ್ : ಸಾಮಾನ್ಯ) : ಮಾನ್ಯರೇ, ನಾನು ಭಾಗ–೨ರ ೧ನೇ ಖಂಡಕ್ಕೆ ಸಂಬಂಧಿಸಿದಂತೆ ಒಂದು ವಿಷಯವನ್ನು ಹೇಳಬಯಸುತ್ತೇನೆ. ಇದರ ಮೊದಲ ಭಾಗವನ್ನು,–

"ಉಚ್ಚ ನ್ಯಾಯಾಲಯಕ್ಕೆ ಸಂಬಂಧಿಸಿದಂತೆ, ಭಾರತ ಸರ್ಕಾರ ಅಧಿನಿಯಮ, ೧೯೩೫ರ ಉಪಬಂಧಗಳನ್ನು ಯಥೋಚಿತ ವ್ಯತ್ಯಾಸಗಳೊಂದಿಗೆ ಅಂಗೀಕರಿಸಬೇಕು, .. . .. . . ."

– ಎಂದು ಓದತಕ್ಕದ್ದು.

ಭಾರತ ಸರ್ಕಾರ ಅಧಿನಿಯಮದ ೨೧೯ರಿಂದ ೨೩೧ನೇ ಪ್ರಕರಣಗಳು ಉಚ್ಚ ನ್ಯಾಯಾಲಯಗಳಿಗೆ ಸಂಬಂಧಿಸಿದವು ಎಂದು ನನಗೆ ಕಂಡುಬಂದಿದೆ. ಈ ಅಧಿನಿಯಮದ ಮುಖ್ಯ ಉಪಬಂಧಗಳಲ್ಲಿ ಒಂದು ಉಪಬಂಧಕ್ಕೆ ಸಂಬಂಧಿಸಿದಂತೆ ಭಾಷೆಯ ಪ್ರಶ್ನೆ ಬರುತ್ತದೆಂದು ನನಗೆ ಕಂಡುಬಂದಿದೆ. ಅಧಿನಿಯಮದ ೨೨೭ನೇ ಪ್ರಕರಣವನ್ನು ಹೀಗೆ ಓದತಕ್ಕದ್ದು:

"ಪ್ರತಿಯೊಂದು ಉಚ್ಚ ನ್ಯಾಯಾಲಯದ ಎಲ್ಲ ವ್ಯವಹರಣೆಗಳು ಆಂಗ್ಲ ಭಾಷೆಯಲ್ಲಿರತಕ್ಕದ್ದು"

ವಿಷಯಕ್ಕೆ ಸಂಬಂಧಿಸಿದಂತೆ ಈ ಅಂಶಕ್ಕೆ ಸಾಕಷ್ಟು ಗಮನ ನೀಡಲಾಗಿದೆಯೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನೀಡಿಲ್ಲವೆಂದೇ ಭಾವಿಸುತ್ತೇನೆ, ಮಾನ್ಯರೆ, ಉಚ್ಚ ನ್ಯಾಯಾಲಯಗಳಲ್ಲಿನ ವ್ಯವಹರಣೆಗಳು ಆಂಗ್ಲ ಭಾಷೆಯಲ್ಲಿರತಕ್ಕದ್ದು ಎಂಬುದರ ಕಡೆಗೆ ಪ್ರಸ್ತಾವಕರ ಗಮನ ಸೆಳೆಯುವುದು ನನ್ನ ಉದ್ದೇಶವಾಗಿದೆ. ಈಗ ನಾವು ರಾಷ್ಟ್ರೀಯ ಭಾಷೆ ಅಥವಾ ಅಖಿಲ ಭಾರತ ಭಾಷೆಯ ಬಗ್ಗೆ ಮಾತನಾಡುತ್ತಿದ್ದೇವೆ. ಪ್ರತಿಯೊಂದು ಪ್ರಾಂತದಲ್ಲಿ, ಉಚ್ಚ ನ್ಯಾಯಾಲಯದ ವ್ಯವಹರಣೆಗಳು ಒಳಗೊಂಡಂತೆ, ಪ್ರಾಂತದ ಎಲ್ಲ ವ್ಯವಹರಣೆಗಳು ಪ್ರಾಂತೀಯ ಭಾಷೆಯಲ್ಲಿರಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ. ಕೆಲವು ಪರಿವರ್ತನೆಯ ಅವಧಿಯವರೆಗೆ, ಆಂಗ್ಲ ಭಾಷೆಯೇ ಮುಂದುವರಿಯಬಹುದು. ಆದರೆ, ಮುಂಬರುವ ಎಲ್ಲಾ ಕಾಲಕ್ಕೂ ನಮ್ಮ ಉಚ್ಚ ನ್ಯಾಯಾಲಯಗಳ ಭಾಷೆಯು ಆಂಗ್ಲ ಭಾಷೆಯಾಗಿರಲು ನಾವು ಅವಕಾಶ ಮಾಡಿಕೊಡಬೇಕು ಎಂದು ನಾನು ಭಾವಿಸುವುದಿಲ್ಲ. ಆದರೆ "ಯಥೋಚಿತ ವ್ಯತ್ಯಾಸಗಳೊಂದಿಗೆ" ಎಂಬ ಪದಗಳನ್ನು ಅದಿರುವಂತೆಯೇ ಈ ಖಂಡದ ಮೊದಲ ಭಾಗವಾಗಿ ನಾವು ಒಪ್ಪಿದರೆ, ನಾವು ಆಂಗ್ಲ ಭಾಷೆಯನ್ನು ಮುಂದುವರಿಸಲು ಬದ್ಧರಾಗಿರಬೇಕಾಗುತ್ತದೆ. ಆದುದರಿಂದ, ಆಂಗ್ಲ ಭಾಷೆಗೆ ಸಂಬಂಧಿಸಿದಂತೆ ಭಾರತ ಸರ್ಕಾರ ಅಧಿನಿಯಮದ ೨೨೭ನೇ ಪ್ರಕರಣವನ್ನು ಕೈಬಿಡುವುದಕ್ಕಾಗಿ ಈ ಖಂಡದಲ್ಲಿ ಕೆಲವು ಸೂಕ್ತ

ಉಪಬಂಧಗಳನ್ನು ರಚಿಸಬಹುದೆಂದು ನಾನು ಭಾವಿಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಮಾತನಾಡಲು ಯಾರೊಬ್ಬರು ಬಯಸುತ್ತಿಲ್ಲವಾದ್ದರಿಂದ, ನಿರ್ಣಯದ ಪ್ರಸ್ತಾವಕರು ಇಚ್ಛಿಸಿದಲ್ಲಿ ಈ ಚರ್ಚೆಗೆ ಉತ್ತರಿಸಬಹುದು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಮಾನ್ಯರೆ, ನಾನು ಮಾನ್ಯ ಶ್ರೀ ಅಲ್ಲಾದಿಯವರ ತಿದ್ದುಪಡಿಯನ್ನು ಅಂಗೀಕರಿಸುತ್ತೇನೆ.

ಮಂಡಿಸಲಾದ ಒಂದೆರಡು ಪ್ರಶ್ನೆಗಳಿಗೆ ಸಂಬಂಧಿಸಿದಂತೆ, ಕೆಲವು ಮಾತುಗಳನ್ನಾಡಲು ನಾನು ಇಚ್ಛಿಸುತ್ತೇನೆ. ಕಾರ್ಯಾಂಗದಿಂದ ನ್ಯಾಯಾಂಗದ ಬೇರ್ಪಡಿಸುವ ಕುರಿತು ಏನು ಮಾಡಬೇಕೆಂಬುದರ ಬಗ್ಗೆ ಶ್ರೀ ಜೈಪಾಲ್ ಸಿಂಗ್ ಅವರು ಎತ್ತಿದ ಪ್ರಶ್ನೆಗೆ ಸಂಬಂಧಿಸಿದಂತೆ, ಆ ವಿಷಯವನ್ನು ಮಂಡಿಸಲು ಈ ಸ್ಥಳವು ಸೂಕ್ತವಲ್ಲವೆಂದು ಮಾತ್ರ ನಾನು ಹೇಳಲು ಸಾಧ್ಯ. ಈಗ ನಾವು ಪರ್ಯಾಲೋಚಿಸುತ್ತಿರುವ ಈ ಖಂಡವು ಉಚ್ಚ ನ್ಯಾಯಾಲಯವನ್ನು ರೂಪಿಸುವುದಕ್ಕೆ, ಅದರ ರಚನೆಗೆ, ನ್ಯಾಯಾಧೀಶರ ನೇಮಕಮಾಡುವ ವಿಧಾನ ಮತ್ತು ಅಂತಹ ವಿಷಯಗಳನ್ನು ಕುರಿತು ಮಾತ್ರ ತಿಳಿಸುತ್ತದೆ. ಅವರು ಎತ್ತಿರುವ ನೈಜ ಪ್ರಶ್ನೆಗೆ ವಿಧಾನಮಂಡಲವು ನಿರ್ಧರಿಸಲು ಸಾಧ್ಯ. ಇದು ಅವರು ನಿರ್ಧರಿಸಬೇಕಾದ ನೀತಿ ಸಂಬಂಧಿತ ವಿಷಯವಾಗಿದೆ; ಮತ್ತು ಕಾರ್ಯಾಂಗವನ್ನು ನ್ಯಾಯಾಂಗದಿಂದ ಪ್ರತ್ಯೇಕಿಸಲು ಈಗ ಯಾವುದೆ ತೊಂದರೆ ಇಲ್ಲವೆಂದು ನಾನು ಭಾವಿಸುತ್ತೇನೆ.

'ಕಡಿಮೆಗೊಳಿಸತಕ್ಕುದಲ್ಲ' ಎಂಬ ಪದಗಳ ಬದಲು 'ವ್ಯತ್ಯಾಸಗೊಳಿಸತಕ್ಕುದಲ್ಲ' ಎಂಬ ಪದಗಳನ್ನು ಸೇರಿಸುವ ಬಗ್ಗೆ ಇನ್ನೊಂದು ಅಂಶವನ್ನು ಪ್ರಸ್ತಾವಿಸಲಾಗಿದೆ. ಉಪಲಬ್ಧಿಗಳು, ಮುಂತಾದವುಗಳನ್ನು ನ್ಯಾಯಾಧೀಶರಿಗೆ ಅನಾನುಕೂಲವಾಗುವಂತೆ ವ್ಯತ್ಯಾಸಗೊಳಿಸಬಾರದು ಎಂದು ಹೇಳುವ ಪ್ರಸ್ತುತ ಉಪಬಂಧಕ್ಕೆ ಬದಲಾವಣೆ ತರುವ ಅವಶ್ಯಕತೆ ಇದೆಯೆಂದು ನಾನು ಭಾವಿಸುವುದಿಲ್ಲ, ಮತ್ತು ಇದು ವಿಷಯವನ್ನು ಕುರಿತು ಸ್ಪಷ್ಟಪಡಿಸುತ್ತದೆ. ಹಾಗಾಗಿ ನಾನು, ಪದಗಳಲ್ಲಿ ಮಾಡಲಾಗುವ ಯಾವುವೇ ಬದಲಾವಣೆಗಳನ್ನು ತರಲು ಪ್ರಸ್ತಾವ ಸಲ್ಲಿಸುವುದಿಲ್ಲ.

ನಾನು ಹೇಳಿದಂತೆ, ಮಾನ್ಯ ಅಲ್ಲಾದಿಯವರ ತಿದ್ದುಪಡಿಯನ್ನು ಅಂಗೀಕರಿಸುತ್ತೇನೆ; ಮತ್ತು ಸದನದ ಅಂಗೀಕಾರಕ್ಕಾಗಿ ಪ್ರಸ್ತಾವವನ್ನು ಮಂಡಿಸುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು :** ನಿರ್ಣಯವನ್ನು ನಾನು ಈಗ ಸದನದನ ಮುಂದೆ ಮಂಡಿಸುತ್ತಿದ್ದೇನೆ.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಉಚ್ಚ ನ್ಯಾಯಾಲಯದಲ್ಲಿ ಭಾಷೆಗೆ ಸಂಬಂಧಿಸಿದಂತೆ ಉತ್ತರ ನೀಡಲಾಗಿಲ್ಲವೆಂಬುದು ನನ್ನ ಅಭಿಪ್ರಾಯ. ಇದು ಒಂದು ಮುಖ್ಯ ಅಂಶವಾಗಿದೆ.

**ಸನ್ಮಾನ್ಯ ಅಧ್ಯಕ್ಷರು :** ಖಂಡಿತವಾಗಿಯೂ ಇದು ಒಂದು ಪ್ರಮುಖ ವಿಷಯವಾಗಿದೆ; ಆದರೆ ನನಗನಿಸಿದಂತೆ ಇದನ್ನು ಕರಡು ಸಮಿತಿಯು ಬಗೆಹರಿಸುವುದು.

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ :** ಮಾನ್ಯರೆ, 'ಯಥೋಚಿತ ವ್ಯತ್ಯಾಸಗಳೊಂದಿಗೆ' ಎಂದರೆ ಪ್ರತಿಯೊಂದು ಅದು ಇದ್ದಂತೆಯೇ, ಇದರರ್ಥ ನಮ್ಮ ಉಪಬಂಧದ ಕರಡು ರಚನೆಯ ಸಮಯದಲ್ಲಿ ಭಾರತ ಸರ್ಕಾರದ ಅಧಿನಿಯಮದಲ್ಲಿರುವ ಉಪಬಂಧವನ್ನು ನೀವು ಬದಲಾಯಿಸಲು ಸಾಧ್ಯವಿಲ್ಲ. ನಾವು ಇದನ್ನು ಅದು ಇದ್ದಂತೆಯೇ ಅಂಗೀಕರಿಸಿದರೆ, ಕರಡು ಸಮಿತಿಯು, ಉಚ್ಚ ನ್ಯಾಯಾಲಯದ ಭಾಷೆಯೆಂದು ಆಂಗ್ಲ ಭಾಷೆಯನ್ನೇ ಉಳಿಸಿಕೊಳ್ಳಲು ಬದ್ಧವಾಗಿರಬೇಕಾಗುತ್ತದೆ.

**ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, 'ಯಥೋಚಿತ ವ್ಯತ್ಯಾಸಗಳೊಂದಿಗೆ' ಎಂದರೆ ಅವಶ್ಯಕ ಬದಲಾವಣೆಗಳೊಂದಿಗೆ ಎಂದು ನಾನು ಭಾವಿಸುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು :** ಹೌದು, ನನ್ನ ಅನಿಸಿಕೆಯು ಇದೇ ಆಗಿದೆ. ಕರಡು ಸಮಿತಿಯು ಅಂತಿಮವಾಗಿ

ಸಲಹೆ ಮಾಡುವ ಯಾವುವೇ ಬದಲಾವಣೆಗಳನ್ನು ಇದು ಒಳಗೊಳ್ಳುತ್ತದೆ.

ಮಾನ್ಯ ಅಲ್ಲಾದಿಯವರ ತಿದ್ದುಪಡಿಯನ್ನು ನಾನು ಮತಕ್ಕೆ ಹಾಕುತ್ತೇನೆ.

ಈ ಮುಂದಿನ ಪರಂತುಕವನ್ನು ೧ನೇ ಖಂಡದ ಕೊನೆಯಲ್ಲಿ ಸೇರಿಸತಕ್ಕದ್ದು:

"ಪರಂತು,-

(ಎ) ಭಾರತ ಒಕ್ಕೂಟದಲ್ಲಿನ ಎಲ್ಲಾ ಉಚ್ಚ ನ್ಯಾಯಾಲಯಗಳು ತಮ್ಮ ಅಪೀಲು ಅಧಿಕಾರ ವ್ಯಾಪ್ತಿಗೆ ಒಳಪಟ್ಟು ಪ್ರದೇಶದಾದ್ಯಂತ ವಿಶಿಷ್ಟಾಧಿಕಾರದ ಪ್ರಿರಾಕೇಟಿವ್ ರಿಟ್‌ಗಳನ್ನು ಅಥವಾ ಅದಕ್ಕಾಗಿ ಯಾವುವೇ ಪರ್ಯಾಯ ಪರಿಹಾರಗಳನ್ನು ನೀಡುವ ಹಕ್ಕನ್ನು ಹೊಂದಿರತಕ್ಕದ್ದು;-

(ಬಿ) ಭಾರತ ಸರ್ಕಾರ ಅಧಿನಿಯಮ, ೧೯೩೫ರ ೨೨೬ನೇ ಪ್ರಕರಣದಲ್ಲಿ ಉಲ್ಲೇಖಿಸಿದ ರಾಜಸ್ವ ವಿಷಯಗಳ ಅಧಿಕಾರವ್ಯಾಪ್ತಿಗೆ ಸಂಬಂಧಪಟ್ಟ ನಿರ್ಬಂಧಗಳು ಇನ್ನು ಮುಂದೆ ಉಚ್ಚ ನ್ಯಾಯಾಲಯಗಳಿಗೆ ಅನ್ವಯವಾಗತಕ್ಕುದಲ್ಲ; ಮತ್ತು

(ಸಿ) ಭಾರತ ಸರ್ಕಾರ ಅಧಿನಿಯಮ, ೧೯೩೫ರ ೨೨೪ನೇ ಪ್ರಕರಣದಲ್ಲಿ ಸೇರಿಸಿರುವ ಅಧಿಕಾರಗಳಿಗೆ ಹೆಚ್ಚಿಗೆಯಾಗಿ, ಭಾರತ ಸರ್ಕಾರ ಅಧಿನಿಯಮ, ೧೯೧೫ರ ೧೦೭ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯಗಳು ಅಧೀನ ನ್ಯಾಯಾಲಯಗಳ ಮೇಲ್ವಿಚಾರಣೆ ಮಾಡುವ ಅಧಿಕಾರಗಳನ್ನು ಹೊಂದಿರತಕ್ಕದ್ದು."

ನಿರ್ಣಯವನ್ನು ಅಂಗೀಕರಿಸಲಾಯಿತು.

**ಸನ್ಮಾನ್ಯ ಅಧ್ಯಕ್ಷರು** : ತಿದ್ದುಪಡಿಯಾದ ನಿರ್ಣಯವನ್ನು, ಎಂದರೆ ಇದೀಗ ಅಂಗೀಕರಿಸಲಾಗಿರುವ ಪರಂತುಕವನ್ನು ಸೇರಿಸಿಕೊಳ್ಳುವುದರೊಂದಿಗೆ ನಿರ್ಣಯವನ್ನು, ನಾನು ಸದನದ ಮತಕ್ಕೆ ಹಾಕುತ್ತಿದ್ದೇನೆ. ಇಡೀ ಖಂಡವನ್ನು ನಾನು ಓದಿ ಹೇಳಬೇಕಾಗಿಲ್ಲವೆಂದು ಭಾವಿಸುತ್ತೇನೆ.

ತಿದ್ದುಪಡಿಯಾದಂತೆ, ಭಾಗ-೨ನ್ನು ಅಂಗೀಕರಿಸಲಾಯಿತು.

**ಭಾಗ ೩ – ಪ್ರಾಂತೀಯ ಲೋಕಸೇವಾ ಆಯೋಗ ಮತ್ತು ಪ್ರಾಂತೀಯ ಮಹಾಲೆಕ್ಕ ಪರಿಶೋಧಕ**

**ಸನ್ಮಾನ್ಯ ಅಧ್ಯಕ್ಷರು:** ಈಗ ನಾವು ೩ನೇ ಭಾಗದ ವಿಷಯವನ್ನು ಚರ್ಚಿಸಲಿದ್ದೇವೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್:** ಮಾನ್ಯರೆ, ಈ ಭಾಗವು ಲೋಕ ಸೇವಾ ಆಯೋಗಗಳು ಮತ್ತು ಮಹಾಲೆಕ್ಕಪರಿಶೋಧಕರನ್ನು ಕುರಿತು ತಿಳಿಸುತ್ತದೆ.

"ಲೋಕ ಸೇವಾ ಆಯೋಗಗಳು ಮತ್ತು ಮಹಾಲೆಕ್ಕಪರಿಶೋಧಕರಿಗೆ ಸಂಬಂಧಿಸಿದ ಉಪಬಂಧಗಳನ್ನು ೧೯೩೫ರ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಸೇರಿಸಬೇಕು. ಪ್ರತಿಯೊಂದು ಪ್ರಾಂತೀಯ ಲೋಕ ಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಮಹಾಲೆಕ್ಕಪರಿಶೋಧಕರ ನೇಮಕಾತಿ ಅಧಿಕಾರವನ್ನು ರಾಜ್ಯಪಾಲರಲ್ಲಿ ಅವರ ವಿವೇಚನೆಗನುಸಾರವಾಗಿ ನಿಹಿತಗೊಳಿಸತಕ್ಕದ್ದು"

ಇದು ರಾಜ್ಯಪಾಲರಿಗೆ ಅಧಿಕಾರ ನೀಡುವುದನ್ನು ಪ್ರಸ್ತಾಪಿಸುತ್ತದೆ. ಸದನದ ಅಂಗೀಕಾರಕ್ಕಾಗಿ ನಾನು ಪ್ರಸ್ತಾವಿಸುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು:** ಇದಕ್ಕೆ ಶ್ರೀ ಖುರ್ಶಿದ್‌ಲಾಲ್ ಮತ್ತು ಶ್ರೀ ಗೋಪಿನಾಥ್ ಶ್ರೀವಾತ್ಸವ್, ಶ್ರೀ ಎಸ್.ಎಲ್. ಸಕ್ಸೇನಾ ಮತ್ತು ಮಾನ್ಯ ಸಂತಾನಮ್ ಅವರು ಸೂಚಿಸಿರುವ ತಿದ್ದುಪಡಿಗಳಿವೆ.

(ತಿದ್ದುಪಡಿಗಳನ್ನು ಮಂಡಿಸಲಿಲ್ಲ)

**ಶ್ರೀ ಕೆ. ಸಂತಾನಮ್:** ಮಾನ್ಯರೆ, ಭಾಗ ೩ಕ್ಕೆ ಸಂಬಂಧಿಸಿದಂತೆ, ನಾನು ಒಂದು ತಿದ್ದುಪಡಿ ಮಂಡಿಸುತ್ತೇನೆ (೧೬ನೇ ಜುಲೈ ೧೯೪೭ನೇ ದಿನಾಂಕದ ಎರಡನೇ ಪೂರಕ ಪಟ್ಟಿಯಲ್ಲಿರುವ ಸಂಖ್ಯೆ ೨೩). ಮಾನ್ಯರೆ, ಈ ಹಂತದಲ್ಲಿ ತಿದ್ದುಪಡಿಯನ್ನು ಪ್ರಸ್ತಾವಿಸಲು ನಾನು ಬಯಸದಿದ್ದಾಗ್ಯೂ, ಒಕ್ಕೂಟ ಸಂವಿಧಾನವನ್ನು ಕೈಗೆತ್ತಿಕೊಳ್ಳುವ ಸಮಯದಲ್ಲಿ ಇದನ್ನು ಪರಿಶೀಲಿಸಬಹುದಾಗಿದೆ ಎಂದು ಸಲಹೆ ನೀಡಿರುವುದರಿಂದ ಆಗ ಪರ್ಯಾಲೋಚನೆಗಾಗಿ

ಇದನ್ನು ಕೈಗೆತ್ತಿಕೊಳ್ಳಬಹುದೆಂದು ನೀವು ನಿರ್ಣಯ ನೀಡಬೇಕೆಂದು ನಾನು ಬಯಸುತ್ತೇನೆ. ಆಗ ಇದನ್ನು ತಳ್ಳಿಹಾಕುವುದಿಲ್ಲವೆಂಬುದನ್ನು ಖಚಿತಪಡಿಸಬೇಕೆಂದು ಮಾತ್ರ ನಾನು ಬಯಸುತ್ತೇನೆ. ಆ ಸಮಯದಲ್ಲಿ ತಿದ್ದುಪಡಿಯನ್ನು ಪ್ರಸ್ತಾವಿಸಲು ನನಗೆ ತಾವು ಅನುಮತಿ ನೀಡುತ್ತೀರೋ ಇಲ್ಲವೋ ಎಂಬುದನ್ನು ನಾನು ತಿಳಿಯಬಯಸುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು :** ಈಗ ನೀವು ತಿದ್ದುಪಡಿಯನ್ನು ಪ್ರಸ್ತಾವಿಸಲು ಬಯಸಿದರೆ ನೀವು ಹಾಗೆ ಮಾಡಬಹುದು, ಭವಿಷ್ಯಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಭರವಸೆಯನ್ನು ನಿಮಗೆ ನೀಡಲು ಸಾಧ್ಯವಿಲ್ಲ. ನೀವು ಬಯಸಿದರೆ ಈಗ ನಿಮ್ಮ ತಿದ್ದುಪಡಿಯನ್ನು ಹಿಂಪಡೆಯಲು ನಿಮಗೆ ನಾನು ಅನುಮತಿ ನೀಡುತ್ತೇನೆ, ಮತ್ತು ಇತರ ವರದಿಗೆ ಸಂಬಂಧಿಸಿದಂತೆ ತಿದ್ದುಪಡಿಯನ್ನು ಪ್ರಸ್ತಾವಿಸಿದಲ್ಲಿ, ಪ್ರಶ್ನೆ ಕುರಿತು ಸರಿಯಾದ ಸಮಯದಲ್ಲಿ ಪರ್ಯಾಲೋಚನೆ ಮಾಡಲಾಗುವುದು.

**ಶ್ರೀ ಕೆ. ಸಂತಾನಮ್ :** ಮಾನ್ಯರೆ, ನಾನು ನನ್ನ ತಿದ್ದುಪಡಿಗಳನ್ನು ಪ್ರಸ್ತಾವಿಸಬಯಸುವುದಿಲ್ಲ.

**ಸನ್ಮಾನ್ಯ ಅಧ್ಯಕ್ಷರು:** ಪ್ರಶ್ನೆ ಏನೆಂದರೆ:

"ಭಾಗ ೩ನ್ನು ಅಂಗೀಕರಿಸತಕ್ಕದ್ದು"

ನಿರ್ಣಯವನ್ನು ಅಂಗೀಕರಿಸಲಾಯಿತು.

## ಭಾಗ ೪ – ಮಧ್ಯಕಾಲೀನ ಉಪಬಂಧಗಳು

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಮಾನ್ಯರೆ, ನಾನು ಈ ಮುಂದಿನ ಪ್ರಸ್ತಾವವನ್ನು ಮಂಡಿಸುತ್ತೇನೆ:

"೧. ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಯಾವುದೇ ಪ್ರಾಂತದ ರಾಜ್ಯಪಾಲರಾಗಿ ಪದಧಾರಣ ಮಾಡಿರುವ ಯಾರೇ ವ್ಯಕ್ತಿಯು, ಈ ಸಂವಿಧಾನದ ಮೇರೆಗೆ ವಿಧ್ಯುಕ್ತವಾಗಿ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿ ಆತನು ಈ ಸಂವಿಧಾನದ ಅಡಿಯಲ್ಲಿ ಆ ಪದವಿಯನ್ನು ವಹಿಸಿಕೊಳ್ಳುವವರೆಗೆ ಪದಧಾರಣ ಮಾಡಿರುವುದು ಮುಂದುವರಿಯತಕ್ಕದ್ದು ಮತ್ತು ಪ್ರಾಂತದ ರಾಜ್ಯಪಾಲರಾಗಿರುವುದಾಗಿ ಭಾವಿಸತಕ್ಕದ್ದು.

೨. ಮಂತ್ರಿ ಮಂಡಲ, ವಿಧಾನಸಭೆ ಮತ್ತು ವಿಧಾನ ಪರಿಷತ್ತುಗಳ (ಮೇಲ್ಮನೆ ಇರಬೇಕೆಂದು ನಿರ್ಧರಿಸಿರುವ ಪ್ರಾಂತ್ಯಗಳಲ್ಲಿ) ಸಂಬಂಧದಲ್ಲಿ, ಯಥೋಚಿತ ವ್ಯತ್ಯಾಸಗಳೊಂದಿಗೆ ಅಂತಹ ಉಪಬಂಧಗಳಿರತಕ್ಕದ್ದು.

೩. ಪ್ರತಿಯೊಬ್ಬ ರಾಜ್ಯಪಾಲರ ಪ್ರಾಂತ್ಯದ ಸರ್ಕಾರವು, ಎಲ್ಲ ಸ್ವತ್ತು, ಆಸ್ತಿಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗೆ ಸಂಬಂಧಿಸಿದಂತೆ ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಸಂವಾದಿ ಪ್ರಾಂತದ ಸರ್ಕಾರದ ಉತ್ತರಾಧಿಕಾರಿಯಾಗಿ ಸರ್ಕಾರವಾಗಿರತಕ್ಕದ್ದು."

ಇವು, ಪ್ರಭುತ್ವಾಂತರ ತಪ್ಪಿಸುವ ಸಲುವಾಗಿ ರಚಿಸಿದ ಮಧ್ಯಕಾಲೀನ ಉಪಬಂಧಗಳಾಗಿವೆ. ಈ ಕ್ರಮಕ್ಕೆ ಯಾವುದೇ ವಿವಾದ ಇರುವ ಸಾಧ್ಯತೆ ಇಲ್ಲವೆಂದು ಹಾಗೂ ಇದನ್ನು ಅಂಗೀಕರಿಸಬಹುದೆಂದು ನಾನು ಭಾವಿಸುತ್ತೇನೆ.

**ಶ್ರೀ ಟಿ.ಎ. ರಾಮಲಿಂಗಮ್ ಚೆಟ್ಟಿಯಾರ್** (ಮದ್ರಾಸ್ : ಸಾಮಾನ್ಯ) : ೧ನೇ ಖಂಡಕ್ಕೆ ನಾನು ತಿದ್ದುಪಡಿಯನ್ನು ಪ್ರಸ್ತಾವಿಸಬಯಸುವುದಿಲ್ಲ (ದಿನಾಂಕ: ೧೫ನೇ ಜುಲೈ ೧೯೪೭ರ ಪಟ್ಟಿಯಲ್ಲಿರುವ ಸಂ. ೧೧೯).

**ಶ್ರೀ ಕೆ. ಸಂತಾನಮ್ :** ೩ನೇ ಖಂಡಕ್ಕೆ ನಾನು ತಿದ್ದುಪಡಿಯನ್ನು ಪ್ರಸ್ತಾವಿಸ ಬಯಸುವುದಿಲ್ಲ (ದಿನಾಂಕ: ೧೫ನೇ ಜುಲೈ ೧೯೪೭ರ ಪಟ್ಟಿಯಲ್ಲಿರುವ ಸಂ. ೧೨೦).

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ೩ನೇ ಖಂಡಕ್ಕೆ ನಾನು ತಿದ್ದುಪಡಿಯನ್ನು ಪ್ರಸ್ತಾವಿಸಬಯಸುವುದಿಲ್ಲ (೧೬ನೇ ಜುಲೈ ೧೯೪೭ರ ಎರಡನೇ ಪೂರಕ ಪಟ್ಟಿಯಲ್ಲಿರುವ ಸಂ. ೨೪).

(ಪಂಡಿತ್ ಗೋವಿಂದ್ ಮಾಳವೀಯ, ಶ್ರೀ ರೋಹಿಣಿಕುಮಾರ್ ಚೌದರಿ, ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್, ಶ್ರೀ ಮೋಹನ್‌ಲಾಲ್ ಸಕ್ಸೇನಾ ಮತ್ತು ಪ್ರೊ. ಎನ್.ಜಿ. ರಂಗ ಇವರು ೩ನೇ ಮತ್ತು ೪ನೇ ಪೂರಕ ಪಟ್ಟಿಗಳಲ್ಲಿ ತಮ್ಮ ತಿದ್ದುಪಡಿಗಳನ್ನು ಪ್ರಸ್ತಾವಿಸಲಿಲ್ಲ).

**ಸನ್ಮಾನ್ಯ ಅಧ್ಯಕ್ಷರು :** ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರು ಪ್ರಸ್ತಾವಿಸಿದ ಎರಡು ತಿದ್ದುಪಡಿಗಳಿದ್ದು, ಅವು ಪ್ರತ್ಯೇಕ ಪ್ರಸ್ತಾವಗಳು. ತರುವಾಯದಲ್ಲಿ ನಾನು ಅವುಗಳನ್ನು ಕೈಗೆತ್ತಿಕೊಳ್ಳುವೆನು.

**ಶ್ರೀ ಕೆ.ಎಮ್. ಮುನ್ಷಿ :** ಈ ಭಾಗದ ೩ನೇ ಖಂಡಕ್ಕೆ ಸಂಬಂಧಿಸಿದಂತೆ ಒಂದೇ ಒಂದು ಅಭಿಪ್ರಾಯವನ್ನು ತಿಳಿಸುತ್ತೇನೆ. ಅದು ಈ ರೀತಿಯಾಗಿದೆ:

"ಪ್ರತಿಯೊಬ್ಬ ರಾಜ್ಯಪಾಲರ ಪ್ರಾಂತೀಯ ಸರ್ಕಾರವು, ಎಲ್ಲ ಸ್ವತ್ತು, ಆಸ್ತಿಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳಿಗೆ ಸಂಬಂಧಿಸಿದಂತೆ ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಸಂವಾದಿ ಪ್ರಾಂತದ ಸರ್ಕಾರದ ಉತ್ತರಾಧಿಕಾರಿಯಾಗಿರತಕ್ಕದ್ದು."

ಮಾನ್ಯರೆ, "ಸರ್ಕಾರದ ಉತ್ತರಾಧಿಕಾರಿ" ಎಂಬ ಪದಗಳು ತೊಂದರೆಯನ್ನುಂಟು ಮಾಡಬಹುದು ಮತ್ತು ಈ ಹಂತದಲ್ಲಿ ೩ನೇ ಖಂಡವನ್ನು ಉಳಿಸಿಕೊಳ್ಳುವುದರಿಂದ ಯಾವುದೇ ಉಪಯುಕ್ತ ಉದ್ದೇಶ ಸಾಧನೆಯಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಆದುದರಿಂದ, ೩ನೇ ಖಂಡವನ್ನು ಬಿಟ್ಟುಬಿಡಬೇಕೆಂದು ನಾನು ನಿವೇದಿಸಿಕೊಳ್ಳುತ್ತೇನೆ. "ಸರ್ಕಾರದ ಉತ್ತರಾಧಿಕಾರಿ" ಎಂಬ ಪದಗಳು ಇತರ ಸಂಕೀರ್ಣತೆಗಳಿಗೆ ಎಡೆ ಮಾಡಿಕೊಡಬಹುದಾಗಿದ್ದು, ಈ ಹಂತದಲ್ಲಿ ಅವುಗಳಿಗೆ ಅವಕಾಶವಿರಬಾರದು.

**ಶ್ರೀ ಹೆಚ್.ವಿ. ಕಾಮತ್** (ಸಿ.ಪಿ. ಮತ್ತು ಬಿರಾರ್: ಸಾಮಾನ್ಯ) : ಸನ್ಮಾನ್ಯ ಅಧ್ಯಕ್ಷರೆ, ಈ ಭಾಗದ ೧ನೇ ಖಂಡವು ಅಸಾಧಾರಣವಾದುದೇನಲ್ಲ ಮತ್ತು ಈ ಸದನವು ಅದನ್ನು ಅಂಗೀಕರಿಸುವ ಮಾರ್ಗದಲ್ಲಿ ಯಾವುದೇ ತೊಂದರೆ ಉದ್ಭವಿಸುವುದಿಲ್ಲ ಎಂಬುದು ನನ್ನ ಭಾವನೆ. ಆದರೆ, ಅದನ್ನು ಅಂಗೀಕರಿಸಿದ ನಂತರ ಅದರಿಂದ ಕೆಲವು ಪರಿಣಾಮಗಳು ಉಂಟಾಗಬಹುದೆಂಬುದು ನನ್ನ ಮನಸ್ಸಿನಲ್ಲಿರುವ ವಿಚಾರ. ಆದ್ದರಿಂದ, ಈ ಖಂಡದ ಪರಿಣಾಮದ ಅಂಶಗಳ ಕಡೆಗೆ ಎಂದರೆ, ಭಾಗ ೪ರ ೧ನೇ ಖಂಡದ ಕಡೆಗೆ ನಾನು ತಮ್ಮ ಗಮನವನ್ನು ಮತ್ತು ಈ ಉನ್ನತ ಸಭೆಯ ಗಮನವನ್ನು ಸೆಳೆಯಬಯಸುತ್ತೇನೆ. ಈ ಖಂಡದಲ್ಲಿ ಹೇಳಿರುವುದೇನೆಂದರೆ:

"ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಯಾವುದೇ ಪ್ರಾಂತದ ರಾಜ್ಯಪಾಲರಾಗಿ ಪದಧಾರಣ ಮಾಡಿರುವ ಯಾರೇ ವ್ಯಕ್ತಿಯು, ಈ ಸಂವಿಧಾನದ ಮೇರೆಗೆ ವಿಧ್ಯುಕ್ತವಾಗಿ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿ ಆತನು ಈ ಸಂವಿಧಾನದ ಅಡಿಯಲ್ಲಿ ಆ ಪದವನ್ನು ವಹಿಸಿಕೊಳ್ಳುವವರೆಗೆ ಪದಧಾರಣ ಮಾಡಿರುವುದು ಮುಂದುವರಿಯತಕ್ಕದ್ದು ಮತ್ತು ಪ್ರಾಂತ್ಯದ ರಾಜ್ಯಪಾಲರಾಗಿರುವಂತೆ ಭಾವಿಸತಕ್ಕದ್ದು."

ಇಂದು ನಾವು ದಾಸ್ಯದ ಕತ್ತಲೆಯಿಂದ ಸ್ವಾತಂತ್ರ್ಯದ ಬೆಳಕಿನೆಡೆಗೆ ಹೆಜ್ಜೆ ಹಾಕುತ್ತಿದ್ದೇವೆ. ಆದರೆ ನಮ್ಮ ರಾಜರ ಅಧಿಪತ್ಯ (ಡೊಮಿನಿಯನ್) ಮತ್ತು ನಾವು ಹೋರಾಡುತ್ತಿರುವ ಗಣರಾಜ್ಯ ಸ್ವಾತಂತ್ರ್ಯದ ನಡುವೆ, ಪ್ರಭುತ್ವಾಂತರ ಸಂಧಿಕಾಲಕ್ಕೆ ಬದ್ಧರಾಗಬೇಕಿದೆ. ಈ ಪ್ರಭುತ್ವಾಂತರ ಸಂಧಿಕಾಲವು ದೀರ್ಘವಾಗಿರಬಹುದು ಅಥವಾ ಅಲ್ಪಕಾಲಿಕವಾಗಿರಬಹುದು, ಮತ್ತು ಈ ದಿನ ಹಾಗೂ ಈ ಸಂವಿಧಾನದ ಪ್ರಾರಂಭದ ನಡುವೆ, ಪುನಃ ಮತ್ತೊಂದು ಸಂಧಿಕಾಲ ಇರಬಹುದು. 'ಪ್ರಾರಂಭ' ಎಂದರೆ ಈ ಸಂವಿಧಾನವನ್ನು ಅನುಷ್ಠಾನಗೊಳಿಸುವುದಕ್ಕಾಗಿ ಉದ್ಘೋಷಣೆ ಮಾಡುವ ದಿನ ಎಂದು ನಾನು ನಂಬುತ್ತೇನೆ. ಬಹುಶಃ ಸಂವಿಧಾನವನ್ನು ಈ ವರ್ಷದ ಕೊನೆಯಲ್ಲಿ ಉದ್ಘೋಷಿಸಲಾಗುವುದು. ಆದರೆ, ಈ ದಿನ ಮತ್ತು ಸಂವಿಧಾನವನ್ನು ಉದ್ಘೋಷಿಸುವ ದಿನಾಂಕ ಇವುಗಳ ನಡುವೆ ನಾವು ಹೊಸದೊಂದು ಸ್ಥಿತಿಗೆ ಪ್ರವೇಶಿಸಿದ್ದೇವೆ ಮತ್ತು ಅದು

ರಾಜರ ಅಧಿಪತ್ಯದ ಕಾಲದ ಸ್ಥಿತಿಯಾಗಿರುತ್ತದೆ. ಭಾರತ ಒಕ್ಕೂಟವನ್ನು ಮುಂದಿನ ತಿಂಗಳ ೧೫ನೇ ದಿನಾಂಕದಂದು ರಾಜರ ಅಧಿಪತ್ಯವನ್ನು ಔಪಚಾರಿಕವಾಗಿ ಉದ್ಘಾಟಿಸಲಾಗುವುದು. ಆದುದರಿಂದ, ಈ ಖಂಡಕ್ಕನುಸಾರವಾಗಿ, ಸಂವಿಧಾನವನ್ನು ಡಿಸೆಂಬರ್ ತಿಂಗಳಿನಲ್ಲಿ ಜಾರಿಗೊಳಿಸುವ ಸಂಭವವಿದ್ದರೆ, ಕೆಲವು ಪ್ರಾಂತಗಳಲ್ಲಿ ರಾಜ್ಯಪಾಲರಿರುತ್ತಾರೆ, ಅವರು ಹಾಗೆಯೇ ಮುಂದುವರಿಯುವ ಸಂಭವವಿದೆ ಮತ್ತು ಅವರನ್ನು ಈ ಸಂವಿಧಾನದ ಅಡಿಯಲ್ಲಿ ರಾಜ್ಯಪಾಲರಾಗಿರುವರೆಂದು ಭಾವಿಸಲಾಗುವುದು, "ಈ ಸಂವಿಧಾನದ ಮೇರೆಗೆ ಪ್ರಾಂತದ ರಾಜ್ಯಪಾಲರಾಗಿರುವರೆಂದು ಭಾವಿಸತಕ್ಕದ್ದು" ಎಂಬ ಪದಗಳ ಮೇಲೆ ನಾನು ಒತ್ತು ನೀಡಬಯಸುತ್ತೇನೆ. ಈ ಸಂವಿಧಾನದ ಪ್ರಾರಂಭದ ನಂತರ ಮತ್ತು ಈ ಸಂವಿಧಾನದ ಅಡಿಯಲ್ಲಿ, ಚುನಾವಣೆಗಳನ್ನು ನಡೆಸುವ ಮುಂಚೆ ಈ ಸಂವಿಧಾನದ ಅಡಿಯಲ್ಲಿ ಕೆಲವು ವಿದೇಶಿಯರನ್ನು ರಾಜ್ಯಪಾಲರನ್ನಾಗಿ ಮುಂದುವರಿಸಲು ಅನುಮತಿಸಿದರೆ, ಅದು ಸಂವಿಧಾನದ ಘನತೆಗೆ ಕುಂದು ಉಂಟಾಗುತ್ತದೆ ಎಂದು ನಾನು ಭಾವಿಸುತ್ತೇನೆ. ನಮಗೆಲ್ಲ ತಿಳಿದಿರುವಂತೆ, ಶೀಘ್ರದಲ್ಲೆ, ಎಂದರೆ ಮುಂದಿನ ತಿಂಗಳ ಮಧ್ಯದಲ್ಲಿ. ಯಾರು, ಎಲ್ಲಿ ರಾಜ್ಯಪಾಲರಾಗಬೇಕು ಎಂಬುದನ್ನು ಹೇಳುವುದಕ್ಕೆ ಸಕ್ಷಮರಾದ ನಮ್ಮ ನಾಯಕರೆ ಹೇಳಬೇಕಾದಂಥ ಅಧಿಕಾರ ನಮಗೆ ಬರುವುದು. ದುರದೃಷ್ಟವಶಾತ್, ಆಗಸ್ಟ್ ೧೫ರಂದು ಕೆಲವು ವಿದೇಶಿಯರು---ಯುರೋಪಿಯನ್ನರು ಅಥವಾ ಬ್ರಿಟಿಷರು ಉಳಿದುಕೊಂಡರೆ ಅಥವಾ ಕೆಲವು ಪ್ರಾಂತ್ಯಗಳಲ್ಲಿ ಅವರನ್ನು ರಾಜ್ಯಪಾಲರನ್ನಾಗಿ ನೇಮಕ ಮಾಡಿದರೆ, ಡಿಸೆಂಬರ್‌ನಲ್ಲಿ ಸಂವಿಧಾನವನ್ನು ಉದ್ಘೋಷಿಸಿದಾಗ ಅಥವಾ ಪ್ರಾರಂಭಿಸಿದಾಗ, ರಾಜ್ಯಪಾಲರು ಅಧಿಕಾರದಲ್ಲಿಯೇ ಇರುತ್ತಾರೆ; ಆದ್ದರಿಂದ,ಅವರು ಚುನಾವಣೆಗಳು ನಡೆಯುವವರೆಗೆ ಈ ಸಂವಿಧಾನದ ಮೇರೆಗೆ ರಾಜ್ಯಪಾಲರಾಗಿ ಮುಂದುವರಿಯುತ್ತಾರೆ ಆದ್ದರಿಂದ ಮಾನ್ಯರೆ, ಆಧಿಪತ್ಯದ ಸಾರ್ವಭೌಮ ವಿಧಾನಮಂಡಲವು, ಇಂದು ಸಾರ್ವಭೌಮ ಸಂಸ್ಥೆಯಾಗಲೆಂದು ಹಾರೈಸಬೇಕಾದಂಥ ಪರಿಸ್ಥಿತಿಯಲ್ಲಿ ಇರುವ ನಮಗೆ ಅದನ್ನು ಅಲೋಚಿಸಲು ಸಾಧ್ಯವಿಲ್ಲ ಅಥವಾ ಸಹಿಸಲೂ ಸಾಧ್ಯವಿಲ್ಲ ಎಂದು ನಾನು ವಿನಂತಿಸಿಕೊಳ್ಳುತ್ತೇನೆ. ಭಾರತದಲ್ಲಿ ವಿದೇಶಿ ಆಳ್ವಿಕೆಯು ಕೊನೆಗೊಳ್ಳುವುದನ್ನು ನೋಡಲು ಈ ಹಲವಾರು ವರ್ಷಗಳಿಂದ ಮತ್ತು ದಶಕಗಳಿಂದಲೂ ಅತ್ಯಂತ ಪ್ರಬಲವಾಗಿ ಹೋರಾಟ ನಡೆಸಿದ್ದೇವೆ. ಐದು ವರ್ಷಗಳಿಗೆ ಕೆಲವು ತಿಂಗಳುಗಳ ಹಿಂದೆಯಷ್ಟೆ 'ಭಾರತ ಬಿಟ್ಟು ತೊಲಗಿ' ಎಂಬ ನಮ್ಮ ಕೂಗು, ಕ್ರಾಂತಿಕಾರಿ ಆಂದೋಲನಕ್ಕೆ ನಾಂದಿಯಾಯಿತು ಹಾಗೂ ಇದೇ ಆಗಸ್ಟ್ ತಿಂಗಳಿನಲ್ಲೇ ನಾವು ಭಾರತಕ್ಕೆ ಸ್ವಾತಂತ್ರ್ಯ ಸಿಗದಿದ್ದರೂ, ಸ್ವಾತಂತ್ರ್ಯಕ್ಕೆ ಸಮನಾದ ಆಧಿಪತ್ಯದ ಸರ್ಕಾರ ಲಭ್ಯವಾಗುವುದೆಂಬ ಒಂದು ಹರ್ಷದಾಯಕ ಘಟನೆ ನಡೆಯಿತು. ಹಾಗೆಯೆ, ನಮ್ಮ ಕೈಗಳಿಗೆ ಅಧಿಕಾರವೂ ದೊರೆಯುತ್ತದೆ ಎಂದು ನಾನು ಆಶಿಸುತ್ತೇನೆ. ಮಾನ್ಯರೆ, ನಮ್ಮವರೆ ರಾಜ್ಯಪಾಲರಾಗುವುದು ನಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಇರುವಾಗ, ಹೊಸ ಸಂವಿಧಾನವು ಉದ್ಘೋಷಿತವಾದ ಕೂಡಲೆ, ಭಾರತ ಒಕ್ಕೂಟದ ನಮ್ಮ ರಾಷ್ಟ್ರದವರೆ ಮತ್ತು ನಮ್ಮ ನಾಗರಿಕರೆ ರಾಜ್ಯಪಾಲರಾಗಬೇಕು ಎಂದು ಎಲ್ಲರೂ ಬಯಸುತ್ತಾರೆ, ಅವರಲ್ಲಿ ನಾನೂ ಒಬ್ಬ. ನಾನು ಉಲ್ಲೇಖಿಸುತ್ತಿರುವ ಮಧ್ಯಕಾಲೀನ ಉಪಬಂಧಗಳಲ್ಲಿ "ಈ ಸಂವಿಧಾನದ ಪ್ರಾರಂಭದ ನಿಕಟ ಪೂರ್ವದಲ್ಲಿ ಯಾವುದೇ ಪ್ರಾಂತದಲ್ಲಿ" ಈ ಪದಗಳೆಡೆ ನಾನು ತಮ್ಮ ಗಮನ ಸೆಳೆಯಬಯಸುತ್ತೇನೆ. ಈ ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಕೂಡಲೆ ನಮ್ಮ ಎಲ್ಲ ಪ್ರಾಂತಗಳಲ್ಲಿ ನಮ್ಮ ರಾಷ್ಟ್ರದ ಹಾಗೂ ಭಾರತೀಯ ರಾಜ್ಯಪಾಲರೆ ಇರುತ್ತಾರೆಯೇ ಹೊರತು ರಾಷ್ಟ್ರೇಯೇತರರು ಅಥವಾ ವಿದೇಶಿಯರಲ್ಲ ಎಂಬುದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು, ನಾವು ಗಮನಿಸಬೇಕಾಗಿದೆ. ಕೇವಲ ವಿದೇಶಿ ಚಕ್ರಾಧಿಪತ್ಯದ ಪಾಳೇಗಾರರು ಹಾಗು ಸೊಕ್ಕಿನ ಅಧಿಕಾರಿಗಳಾದ ಈ ಅತ್ಯಲ್ಪ ಸಂಖ್ಯೆಯ ಜನರು, ನಮ್ಮ ಪ್ರಾಂತಗಳ ಮೇಲೆ ಆಳ್ವಿಕೆಯನ್ನು ಮುಂದುವರಿಸುವುದನ್ನು ನೋಡುವುದಕ್ಕಾಗಿಯೇ ನಾವು ಈ ಎಲ್ಲ ಸಂಕಷ್ಟಗಳನ್ನು ಎದುರಿಸಿದ್ದೇವೆ ಹಾಗೂ ಎಷ್ಟೊಂದು ಸಂದರ್ಭಗಳಲ್ಲಿ ಈ ಆಳ್ವಿಕೆ ನಡೆಸುವವರ ವಿರುದ್ಧ ಹೋರಾಡಿದ್ದೇವೆಯೇ? ಇದರ ಅಂತ್ಯವನ್ನು ನಾನು ನೋಡಬಯಸುತ್ತೇನೆ. ಐದು ವರ್ಷಗಳ ಹಿಂದೆಯೇ ಇಲ್ಲಿಂದ ತೊಲಗಲು ನಾವು

ಕೇಳಿದ್ದಂಥ ಈ ಯುರೋಪಿಯನ್ನರು ಕೆಲವು ಪ್ರಾಂತಗಳಲ್ಲಿ ನಮ್ಮನ್ನು ಆಳುವವರಾಗಿ ಮುಂದುವರಿಯುವ ದಿನವನ್ನು ಈ ಸಂವಿಧಾನದ ಪ್ರಾರಂಭದ ನಂತರವೂ ಸಹ ನಾನು ನೋಡಬಯಸುವುದಿಲ್ಲ. ಭಾರತದ ಅಧಿಪತ್ಯದ ಗವರ್ನರ್–ಜನರಲ್ ಹುದ್ದೆಗೆ ಲಾರ್ಡ್ ಮೌಂಟ್‌ಬ್ಯಾಟನ್ ಅವರನ್ನು ಏಕೆ ಶಿಫಾರಸ್ಸು ಮಾಡಲಾಯಿತು ಎಂಬುದನ್ನು ಶ್ರೀಸಾಮಾನ್ಯನಿಗೆ ಕೆಲವು ದಿನಗಳ ಹಿಂದೆ ವಿವರಿಸಲು ನಾನು ಬಹಳ ಶ್ರಮಿಸಿದ್ದೇನೆ. ಗವರ್ನರ್ ಜನರಲ್ ಹುದ್ದೆಗೆ ಲಾರ್ಡ್ ಮೌಂಟ್‌ಬ್ಯಾಟನ್ ಅವರ ರಾಜತಾಂತ್ರಿಕತೆ, ರಾಜಕೀಯ ಕಾರ್ಯತಂತ್ರ ಮತ್ತು ಯುಕ್ತಿ ಚತುರತೆ, ಇಂಥ ಉನ್ನತ ಮಟ್ಟದ ವಿಚಾರಗಳನ್ನು ನಾನು ತಕ್ಕಮಟ್ಟಿಗೆ ಅರ್ಥ ಮಾಡಿಕೊಳ್ಳಬಲ್ಲೆ ಮತ್ತು ಪ್ರಶಂಸಿಸುತ್ತೇನೆ. ಆದರೆ ಶ್ರೀಸಾಮಾನ್ಯನು ಇದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ನಾವು ಯಾವಾಗಲೂ ಶ್ರೀಸಾಮಾನ್ಯನ ಅಭಿಪ್ರಾಯಗಳ ಆಧಾರದ ಮೇಲೆ ಕಾರ್ಯನಿರ್ವಹಿಸಲು ಸಾಧ್ಯವಿಲ್ಲವೆಂಬುದು ನಿಜ. ಆದರೆ, ಅದೇ ಕಾಲಕ್ಕೆ, ಪ್ರಜಾಪ್ರಭುತ್ವದಲ್ಲಿ ಶ್ರೀಸಾಮಾನ್ಯನ ಮನಸ್ಥಿತಿಗೆ ಅದರದೇ ಆದ ಸ್ಥಾನ ಇರುತ್ತದೆ. ಪ್ರಜಾಪ್ರಭುತ್ವವು ಬಹುತೇಕವಾಗಿ ಶ್ರೀಸಾಮಾನ್ಯನ ಮನಸ್ಥಿತಿಯ ಪ್ರತೀಕವಾಗಿದ್ದು, ಅದಕ್ಕೆ ಒಳಪಟ್ಟಿರುತ್ತದೆ. ಈ ಪರ್ಯಾಲೋಚನೆಗಳನ್ನು ಮನಸ್ಸಿನಲ್ಲಿರಿಸಿಕೊಂಡು, ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಯಾವುದೇ ಪ್ರಾಂತದ ರಾಜ್ಯಪಾಲರು ವಿದೇಶಿಯನಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಬೇಕೆಂದು ಮಾನ್ಯ ಪ್ರಸ್ತಾವಕರು ಮತ್ತು ಈ ಸಭೆಯಲ್ಲಿ ನಾನು ನಿವೇದಿಸಿಕೊಳ್ಳುತ್ತೇನೆ. ಆ ಸ್ಥಾನಗಳಲ್ಲಿ ಇರಬೇಕಾದವರು ನಮ್ಮ ಜನರೇ, ಹಾಗೆ ನಮ್ಮ ನಾಗರಿಕರೇ ಆಗಿರಬೇಕು. ಅವಶ್ಯಕವಾಗಿರುವ ಮಾನಸಿಕ ಪ್ರತಿಕ್ರಿಯೆಯನ್ನು ಶ್ರೀಸಾಮಾನ್ಯನ ಮನಸ್ಸಿನಲ್ಲಿ ನಾವು ಮೂಡಿಸಿದರೆ ಮಾತ್ರ ಇದು ಸಾಧ್ಯ. ಈ ಬಿಡುಗಡೆ ಮತ್ತು ಸ್ವಾತಂತ್ರ್ಯದ ಅರುಣೋದಯದ ಕಾಲದಲ್ಲಿ ಅದೇ ವಿದೇಶಿಯನು ಆಳುವವನಾಗಿ ಅಥವಾ ರಾಜ್ಯಪಾಲನಾಗಿ ಈ ಭೂಮಿಯಲ್ಲಿ ಈಗಲೂ ಠೀವಿಯಿಂದ ಮುಂದುವರಿಯುತ್ತಿರುವುದನ್ನು ಸಾಮಾನ್ಯ ನಾಗರಿಕನು ದುರದೃಷ್ಟವಶಾತ್ ನೋಡಿದರೆ, ಅತ್ಯವಶ್ಯಕವಾಗಿ ಆಗಬೇಕಾಗಿದ್ದ ಮಾನಸಿಕ ಪರಿಣಾಮವನ್ನು ಉಂಟು ಮಾಡುವಲ್ಲಿ ನಾವು ವಿಫಲರಾದಂತೆ ಆಗುತ್ತದೆ. ನಮ್ಮ 'ಭಾರತ ಬಿಟ್ಟು ತೊಲಗಿ' ಆಂದೋಲನವು ಶೀಘ್ರ ಫಲ ಕೊಡುವ ಆಂದೋಲನವಾಗಿದೆ. ಇಂಥ ಒಂದು ಕಾಲಘಟ್ಟದಲ್ಲಿ ಶ್ರೀಸಾಮಾನ್ಯನ ಮನಸ್ಸಿನಲ್ಲಿ ನಾವು, ಐದು ವರ್ಷಗಳ ಹಿಂದೆ ನಮ್ಮಿಂದ ಪ್ರಾರಂಭವಾಗಿದ್ದ 'ಭಾರತ ಬಿಟ್ಟು ತೊಲಗಿ ಆಂದೋಲನ'ದ ಸಮಾಪ್ತಿಯ ನಂತರ ನಾವು ಎಲ್ಲಿ ಅಧಿಕಾರವನ್ನು ತೆಗೆದುಕೊಂಡಿದ್ದೇವೆಂಬ ಭಾವವನ್ನು ಮೂಡಿಸಬೇಕಿದೆ.

(ನಾನ್ಯ ಪಂಥಾಃ ಅಯನಾಯ ವಿದ್ಯತೇ)

ಶೀಘ್ರದಲ್ಲೇ ನಾವು ಸ್ವಾತಂತ್ರ್ಯದ ಅರುಣೋದಯಕ್ಕೆ ಸಾಕ್ಷಿಯಾಗುತ್ತಿರುವ ಕಾಲದಲ್ಲಿ, ನಾವು ವಿದೇಶಿ ಯಜಮಾನಿಕೆಯಿಂದ ಹೊರಬಂದಿದ್ದೇವೆ ಮತ್ತು ನಮ್ಮ ಮೇಲಿನ ವಿದೇಶಿ ಆಳ್ವಿಕೆಯು ಮುಗಿದು ಹೋದ ಕತೆ ಎಂದು ತಿಳಿಯುವುದಕ್ಕೆ ಶ್ರೀಸಾಮಾನ್ಯನು ಶಕ್ತನಾಗಿದ್ದಾನೆ ಎಂಬುದನ್ನು ನೋಡಲು ನಾವು ಹೆಚ್ಚಿನ ಪ್ರಯತ್ನವನ್ನು ಮಾಡಲೇಬೇಕಿದೆ. ಇದನ್ನು ನಾವು ಎಷ್ಟು ಬೇಗ ಮಾಡುತ್ತೇವೆಯೋ ಅಷ್ಟು ನಮಗೆ ಮತ್ತು ನಮ್ಮ ದೇಶಕ್ಕೆ ಉತ್ತಮ. ಇದನ್ನು ನಾವು ಸಾಧಿಸಿದಲ್ಲಿ, ನಮ್ಮ "ಭಾರತ ಒಕ್ಕೂಟ"ವನ್ನು ಕಟ್ಟಲು ಬೇಕಾದ ಅಗತ್ಯ "ಶಕ್ತಿ"ಯನ್ನು ಜಾಗೃತಗೊಳಿಸುವ ಮಾರ್ಗದಲ್ಲಿ ನಾವು ಬಹು ದೂರ ಸಾಗಿದಂತಾಗುತ್ತದೆ. ಪ್ರಾಂತೀಯ ಸಂವಿಧಾನದ ಪ್ರಾರಂಭದ ಕಾಲದಲ್ಲಿ, ಯಾವುದೇ ಪ್ರಾಂತದಲ್ಲಿ ಯಾರೇ ವಿದೇಶಿಯನು ರಾಜ್ಯಪಾಲನಾಗಿ ಉಳಿಯಬಾರದು ಎಂದು ನಾನು ಹೇಳಿದಾಗ, ಈ ಸಭೆಯಲ್ಲಿರುವ ಬಹುತೇಕರ ಭಾವನೆಗೆ ನಾನು ಧ್ವನಿಯಾಗಿದ್ದೇನೆ ಎಂಬುದು ನನಗೆ ಖಂಡಿತ ಗೊತ್ತು. ಆ ದಿನಾಂಕದ ನಂತರ, ಪ್ರಾಂತದ ರಾಜ್ಯಪಾಲನಾಗಿ ಒಬ್ಬ ವಿದೇಶಿಯನಿಗೆ ಅವಕಾಶ ನೀಡುವುದು ತಪ್ಪಾಗುತ್ತದೆ.

ಮಾನ್ಯರೆ, ಮತ್ತೊಂದು ಐತಿಹಾಸಿಕ ಸಂದರ್ಭದಲ್ಲಿ ಹೇಳಿರುವ ಮಾತುಗಳನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ ಮತ್ತು ಈ ಗಣ್ಯ ಸಭೆಯು ವಿದೇಶಿಯನಿಗೆ ಇದನ್ನು ಹೇಳಬೇಕೆಂದು ವಿನಂತಿಸುತ್ತೇನೆ:

"ಐದು ವರ್ಷಗಳ ಹಿಂದೆ ನಾವು ನಿಮಗೆ ಭಾರತವನ್ನು ಬಿಟ್ಟು ತೊಲಗಲು ಹೇಳಿದ್ದೆವು;ಈಗ ನಾವು ಇನ್ನೂ ಹೆಚ್ಚು ಸಾಮರ್ಥ್ಯದಿಂದ, ಹಾಗೆಯೇ ಇನ್ನೂ ಹೆಚ್ಚು ಅಧಿಕಾರಯುತವಾಗಿ ಪುನಃ ಹೇಳುತ್ತೇವೆ: ದಯವಿಟ್ಟು ಹೋಗಿ. ಭಾರತವನ್ನು ಅದರ ಪಾಡಿಗೆ ಬಿಟ್ಟುಬಿಡಿ. ಶಕ್ತಿಶಾಲಿಯಾದ ಸ್ವತಂತ್ರ, ಸಾರ್ವಭೌಮ ಗಣರಾಜ್ಯವಾಗಿ ಭಾರತವನ್ನು ಕಟ್ಟಲು ಬಿಟ್ಟು ಹೊರಡಿ." "ಜೈ ಹಿಂದ್".

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಮಧ್ಯಕಾಲೀನ ಉಪಬಂಧಗಳಿಗೆ ಸಂಬಂಧಿಸಿದಂತೆ ನಾನು ಕೆಲವು ಮಾತುಗಳನ್ನಾಡಲು ಬಯಸುತ್ತೇನೆ. ಇದು ನಿಶ್ಚಯವಾಗಿಯೂ ಸಂಧಿಕಾಲ. ಅದೇ ನನ್ನ ಅಪೇಕ್ಷೆಯಾಗಿದೆ.

ನಮಗೆ ನಾವೇ ಅಭಿನಂದನೆ ಹೇಳಿಕೊಳ್ಳಲೇಬೇಕಾಗಿದೆ. ಮಾನ್ಯರೆ, ಸಭೆಗೆ ಸಲ್ಲಿಸಿರುವ ಈ ಸಂವಿಧಾನದಲ್ಲಿ ದಾಖಲಿಸಿದ, ಸುದೀರ್ಘ ಉಪಬಂಧಗಳ ಚರ್ಚೆಗಾಗಿ ನಾವು ಐದು ದಿನಗಳನ್ನು ಕಳೆದಿದ್ದೇವೆ. ಔಪಚಾರಿಕತೆಗೆ ಸಂಬಂಧಿಸಿದಂತೆ ವಿವರವಾಗಿ ಚರ್ಚೆ ಮುಂದುವರಿಸಲು ಮತ್ತು ಸಂವಿಧಾನವನ್ನು ಆದಷ್ಟು ಬೇಗನೆ ಹೊರತರಲು ನೇಮಕಗೊಂಡಿರುವಂಥ ತಜ್ಞರ ಸಮಿತಿಯು ಪರ್ಯಾಲೋಚಿಸಿರುವ ವಿವರಗಳನ್ನು ಪೂರ್ಣಗೊಳಿಸುವಲ್ಲಿ ನಾವು ಶಕ್ತರಿರುವ ಬಗ್ಗೆ ನನಗೆ ಭರವಸೆಯಿದೆ. ಹೊಸ ಸಂವಿಧಾನಕ್ಕೆ ಸ್ವಾಗತ ಕೋರಲು ಮೂಲತಃ ೩೦ನೇ ಜೂನ್ ೧೯೪೮ರ ದಿನಾಂಕವನ್ನು ನಿಗದಿಪಡಿಸಿದ್ದ ಬ್ರಿಟಿಷ್ ಸರ್ಕಾರವು, ಆ ದಿನಾಂಕವನ್ನು ಮುಂಚೆಯೇ ನಿಗದಿಪಡಿಸಿದರೆ, ನಾವು ಸಿದ್ಧರಿಲ್ಲದಿರುವ ಸ್ಥಿತಿ ಉಂಟಾಗಬಾರದು, ಇದರ ಬಗ್ಗೆಯೂ ನಾನು ಬಹಳ ನಿರೀಕ್ಷೆ ಇಟ್ಟುಕೊಂಡಿದ್ದೇನೆ. ನಾವು ನಮ್ಮ ಸಂವಿಧಾನವನ್ನು ಸಿದ್ಧವಾಗಿಟ್ಟುಕೊಳ್ಳಬೇಕು ಮತ್ತು ನಮ್ಮ ಕಡೆಯಿಂದ ಯಾವುದೇ ವಿಳಂಬವಾಗಬಾರದು. ಯಾವ ದಿನಾಂಕವನ್ನು ಭಾರತದ ಸ್ವಾತಂತ್ರ್ಯ ದಿನಾಚರಣೆ ಎಂದು ನಾವು ಆಚರಿಸಬೇಕೆಂದಿದ್ದೇವೆಯೋ ಆ ದಿನವು ೨೬ನೇ ಜನವರಿ ೧೯೪೮ ಆಗಲಿದೆ. ಖಂಡಿತವಾಗಿಯೂ ಅಂದೇ ನಾವು ಭಾರತದ ಸ್ವಾತಂತ್ರ್ಯ ದಿನಾಚರಣೆ ಆಚರಿಸುವ ದಿನವಾಗಲಿದೆ. ಇಲ್ಲಿ ನಾವು ಅನಾವಶ್ಯಕವಾಗಿ ನಡವಳಿಗಳನ್ನು ಎಳೆದಾಡುತ್ತಿದ್ದೇವೆ ಎಂದು ಯಾರೂ ಹೇಳದಿರಲಿ. ನಮ್ಮ ಮೇಲೆ ಆ ಆರೋಪ ಬಾರದಿರಲಿ. ನಾವು ಈ ಪ್ರಮುಖ ವಿಷಯದ ಚರ್ಚೆಗೆ ಕೇವಲ ಐದು ದಿನಗಳನ್ನು ತೆಗೆದುಕೊಂಡಿದ್ದೇವೆ. ನಾವು ಅವುಗಳ ವಿವರಗಳನ್ನು ಚರ್ಚಿಸದೆ ಹಾಗೆಯೇ ಬಿಟ್ಟಿಲ್ಲ. ಸಂಬಂಧಪಟ್ಟ ನಾವೆಲ್ಲರೂ ಜನವರಿ ೨೬ನೇ ದಿನಾಂಕ ನಾವು ಸ್ವತಂತ್ರ ಭಾರತವನ್ನು ಪಡೆಯುವುದು ನಿಜವಾಗಬೇಕಾದರೆ ಮತ್ತು ಸ್ವತಂತ್ರ ಸಂವಿಧಾನದ ಅಡಿಯಲ್ಲಿ ಕಾರ್ಯನಿರ್ವಹಿಸುವುದಕ್ಕೆ ಸಾಧ್ಯವಾಗುವಂತೆ ಆಗಬೇಕಾದರೆ, ಅಗತ್ಯ ಕಾರ್ಯವನ್ನು ಮುಂದುವರಿಸಿ ಪೂರ್ಣಗೊಳಿಸುತ್ತೇವೆಂದು ಆಶಿಸುತ್ತೇನೆ. ಈಗಿರುವ ರಾಜ್ಯಪಾಲರು ಅಲ್ಲಿಯವರೆಗೆ ಮುಂದುವರಿದುಕೊಂಡು ಹೋಗುವುದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಅವರು ಅವಶ್ಯಕತೆಗಿಂತ ಹೆಚ್ಚು ಕಾಲ ಮುಂದುವರಿಯುವುದಿಲ್ಲವೆಂಬ ಭರವಸೆಯಿದೆ ನನಗೆ ಇದೆ. ಹೊಸ ಸಂವಿಧಾನವು ಅಸ್ತಿತ್ವಕ್ಕೆ ಬಂದಾಗ, ರಾಷ್ಟ್ರಿಕರು ಮಾತ್ರ ರಾಜ್ಯಪಾಲರಾಗಿ ನೇಮಕಗೊಳ್ಳುತ್ತಾರೆಂಬುದು ನನ್ನ ನಿರೀಕ್ಷೆಯಾಗಿದೆ.

ಮೂರನೆಯದಾಗಿ, ಹೊಸ ಸಂವಿಧಾನವನ್ನು ರಚಿಸಿದ ನಂತರ, ಚುನಾವಣೆಗಳು ನಡೆಯುವುದಕ್ಕೆ ಹಾಗೂ ಮತಕ್ಷೇತ್ರಗಳ ಸೀಮಾ ನಿರ್ಣಯಕ್ಕೆ ಮುಂಚೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ; ಹೊಸ ಸಂವಿಧಾನದ ಮೇರೆಗೆ ಚುನಾವಣೆಗಳನ್ನು ನಡೆಸುವುದಕ್ಕೆ ನಿಗದಿಪಡಿಸಲಾಗುವ ಯಾವುದೇ ಖಚಿತ ದಿನಾಂಕವನ್ನು ತಿಳಿಯಬಯಸುವುದಿಲ್ಲ. ಇದೇ ಕಾಲದಲ್ಲಿ, ಹೊಸ ಸಂವಿಧಾನವನ್ನು ರಚಿಸಿದ ನಂತರ, ಆರು ತಿಂಗಳ ಒಳಗಾಗಿಯೇ ಆ ಹೊಸ ಸಂವಿಧಾನವನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಬೇಕೆಂಬುದನ್ನು ನಾನು ಒತ್ತಿ ಹೇಳುತ್ತೇನೆ. ನಾವು ವಯಸ್ಕ ಮತದಾನಕ್ಕೆ ಅವಕಾಶ ಕಲ್ಪಿಸಿರುವುದರಿಂದ, ಸಂವಿಧಾನದ ಕರಡು ರಚನೆಗೂ ಮುಂಚೆಯೇ, ಪ್ರತಿಯೊಂದು ಗ್ರಾಮ ಮತ್ತು ಪಟ್ಟಣದಲ್ಲಿ ವಯಸ್ಕರಿಗೆ ಸಂಬಂಧಿಸಿದಂತೆ ಮತದಾರರ ಪಟ್ಟಿಗಳನ್ನು ಸಿದ್ಧಪಡಿಸಲು ಪ್ರಸ್ತುತ ಸರ್ಕಾರಗಳನ್ನು ನಾವು ಕೋರಬೇಕಿದೆ. ಆ ತರುವಾಯ, ಮತಕ್ಷೇತ್ರಗಳ

ಪರಿಶೀಲನಾ ಕಾರ್ಯವನ್ನು ಕೈಗೊಳ್ಳಲಾಗುವುದು. ಯಾವುದೇ ಪ್ರಯತ್ನವು ವಿಫಲವಾಗಬಾರದು ಮತ್ತು ಹೊಸ ಸಂವಿಧಾನವನ್ನು ಕಾಣಲು ಎಲ್ಲಾ ಪ್ರಯತ್ನಗಳನ್ನು ಸಾಧ್ಯವಾದಷ್ಟೂ ಬೇಗನೆ ಮಾಡಬೇಕು. ಈ ಕೆಲವು ಮಾತುಗಳೊಂದಿಗೆ, ನಾನು ಈ ಮಧ್ಯಕಾಲೀನ ಉಪಬಂಧಗಳಿರುವ ಖಂಡಗಳಿಗೆ ಬೆಂಬಲ ನೀಡುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು** : ಬೇರೆ ಯಾರಾದರೂ ಈ ವಿಷಯದ ಬಗ್ಗೆ ಮಾತನಾಡಬಯಸುತ್ತೀರಾ?

**ಶ್ರೀ ಬಿಸ್ವನಾಥ್ ದಾಸ್** (ಒಡಿಸ್ಸ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಸಾಧ್ಯವಿರುವಷ್ಟು ಅತ್ಯಲ್ಪಕಾಲದೊಳಗಾಗಿಯೇ ವರದಿಯನ್ನು ಸಿದ್ಧಪಡಿಸುವಲ್ಲಿ ನೇತೃತ್ವ ವಹಿಸಿದ್ದ ಗೌರವಾನ್ವಿತ ಸರ್ದಾರ್ ಪಟೇಲ್ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಮಾನ್ಯರೇ, ಅವರಿಗೆ ಅಭಿನಂದನೆ ತಿಳಿಸುವುದರ ಜೊತೆಗೆ, ಪ್ರಾಂತಗಳಿಗೆ ಸಂಬಂಧಪಟ್ಟಂತೆ ಸಿದ್ಧಪಡಿಸಲಾಗಿರುವ ಸಂವಿಧಾನವು, ೧೯೩೫ರ ಅಧಿನಿಯಮದ ಅಡಿಯಲ್ಲಿ ಪ್ರಾಂತಗಳು ಏನು ಅಧಿಕಾರಗಳನ್ನು ಅನುಭವಿಸುತ್ತಿದ್ದುವೋ ಅದಕ್ಕಿಂತ ಕಡಿಮೆ ಅಧಿಕಾರಗಳನ್ನು ಅವುಗಳಿಗೆ ನೀಡಲಾಗಿದೆ ಎಂಬುದನ್ನು ನಾನು ಸಹ ಒಪ್ಪಿಕೊಳ್ಳಲೇಬೇಕಾಗಿದೆ.

ಜನತೆಯದೆ ಆದ ಹಾಗೂ ಜನರಿಂದ ಮತ್ತು ಜನರಿಗಾಗಿ ಸರ್ಕಾರ ಎಂಬ ಒಂದು ಹೊಸ ಆಡಳಿತ ವ್ಯವಸ್ಥೆಯ ಅಡಿಯಲ್ಲಿ ಬರುತ್ತದೆ ಎಂದು ನಾವು ನಿರೀಕ್ಷಿಸಿದ್ದೇವೆ. ಈಗ, ಪ್ರಾಂತಗಳ ಜನರ ಮುಖ್ಯಸ್ಥರು ಪ್ರಾಂತಗಳ ರಾಜ್ಯಪಾಲರಾಗಿ ಇರದಿದ್ದರೆ, ಈ ಎಲ್ಲ ಮೂರು ಘೋಷಣೆಗಳು ಅರ್ಥಹೀನವಾಗುತ್ತವೆ. ಮಾನ್ಯರೇ, ಪ್ರಸ್ತುತ ದಿನಾಂಕ ಮತ್ತು ಚುನಾವಣಾ ದಿನಾಂಕದ ನಡುವಣ ಅವಧಿಯನ್ನು ಪ್ರಾಂತಗಳಲ್ಲಿ ರಾಜ್ಯಪಾಲರ ಸ್ಥಾನಕ್ಕೆ ಖಾಯಂಸೇವಾನಿರತರನ್ನು ನೇಮಕಾತಿಯಿಂದ ಹಾಳುಗೆಡವತಕ್ಕದ್ದಲ್ಲ. ಮಾನ್ಯರೆ, ಗವರ್ನರ್ ಜನರಲ್ಲರನ್ನಾಗಿ ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ನಾಮನಿರ್ದೇಶಿಸಲು ತೆಗೆದುಕೊಂಡ ನಿರ್ಧಾರವನ್ನು ನಾನು ಬೆಂಬಲಿಸುತ್ತೇನೆ. ಇದಕ್ಕೆ ಪ್ರಮುಖ ಕಾರಣಗಳು ಮತ್ತು ಸಮರ್ಥನೆಗಳು ಇರಬಹುದು. ದೇಶವು ಇದಕ್ಕೆ ನಮ್ಮ ನಾಯಕರ ಒಪ್ಪಿಗೆಯೂ ಇದೆ. ಮಾನ್ಯರೆ, ಆದಾಗ್ಯೂ, ಅದು ಪ್ರಾಂತಗಳನ್ನಾಗಿ ಪರಿವರ್ತಿಸುವುದಿಲ್ಲ. ನಾನು ರಾಷ್ಟ್ರಕರು ಮತ್ತು ರಾಷ್ಟ್ರೀಯೇತರ ನಡುವೆ ಯಾವುದೇ ವ್ಯತ್ಯಾಸವನ್ನು ಇಲ್ಲಿ ಮಾಡುತ್ತಿಲ್ಲ. ಮಾನ್ಯರೆ, ನಾನು ಆ ಜನರನ್ನು, ಸಾರ್ವಜನಿಕ ನೌಕರರಾಗಿರುವರು, ಪ್ರಾಂತಗಳ ರಾಜ್ಯಪಾಲರಾಗಿ ಇರುವುದನ್ನು ನೋಡುವುದನ್ನು ಒಪ್ಪಲು ಸಾಧ್ಯವಿಲ್ಲ. ಬಹಳಷ್ಟು ಐ.ಸಿ.ಎಸ್. ಅಧಿಕಾರಿಗಳಿಗೆ ಭಾರತೀಯ ಲಕ್ಷಣಗಳು,/ ಮನೋಭಾವ ಇರುವುದಿಲ್ಲ ಮತ್ತು ಯಾವುದೇ ರೀತಿಯಲ್ಲೂ ಅವರನ್ನು ಜನತೆಯ ಸೇವಕರೆಂದು ಪರಿಗಣಿಸಲು ಸಾಧ್ಯವಿಲ್ಲ. ವಿಷಯ ಹೀಗಿರುವಾಗ, ಅದೇ ಐ.ಸಿ.ಎಸ್. ಅಧಿಕಾರಿಗಳ ಆಳ್ವಿಕೆ ಪದ್ಧತಿಯು, ಪ್ರಾಂತ್ಯಗಳಲ್ಲಿ ಶಾಶ್ವತವಾಗಿ ಆಡಳಿತ ನಡೆಸುವುದನ್ನು ದೇಶವು ಸಹಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ನಮ್ಮ ನಾಯಕರು ಈ ಪ್ರಮಾದವನ್ನು ಎಸಗುವುದಿಲ್ಲವೆಂಬ ವಿಶ್ವಾಸ ನನಗಿದೆ.

ಮಾನ್ಯರೆ, ಈ ಅರಿಕೆಗಳೊಂದಿಗೆ, ನಾನು ನಿರ್ಣಯಕ್ಕೆ ಸಂಪೂರ್ಣ ಬೆಂಬಲ ನೀಡುತ್ತೇನೆ ಮತ್ತು ಅಂಗೀಕರಿಸುವುದಕ್ಕೆ ಸಾಧ್ಯವಿರುವಂತೆ ಅತ್ಯಲ್ಪ ಕಾಲದೊಳಗೆ ಸದನದ ಒಪ್ಪಿಗೆಗಾಗಿ ವರದಿಯನ್ನು ಮಂಡಿಸಿರುವ ಸಮಿತಿಯನ್ನು ಅಭಿನಂದಿಸುತ್ತೇನೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಜೆ. ಪಟೇಲ್** : ಮಾನ್ಯರೆ, ೧ನೇ ಖಂಡದ ಮೂರನೇ ಸಾಲಿನಲ್ಲಿ ಬರುವ "ಮುಂದುವರಿಸತಕ್ಕದ್ದು" ಎಂಬ ಪದಗಳಲ್ಲಿ ಬದಲಾವಣೆ ಮಾಡಲು ನಾನು ಸಲಹೆ ಮಾಡುತ್ತೇನೆ. ಆ ಪದಗಳಿಗೆ ಬದಲು "ಮುಂದುವರಿಸಬಹುದು" ಎಂಬ ಪದಗಳನ್ನು ನಾನು ಸೇರಿಸಬಯಸುತ್ತೇನೆ. "ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಯಾವುದೇ ಪ್ರಾಂತದಲ್ಲಿ ರಾಜ್ಯಪಾಲರಾಗಿ ಪದಧಾರಣ ಮಾಡಿರುವ ಯಾರೇ ವ್ಯಕ್ತಿಯನ್ನು ಮುಂದುವರಿಸಬಹುದು". ನಾಲ್ಕನೇ ಸಾಲಿನಲ್ಲಿ "ಮತ್ತು" ಪದದ ತರುವಾಯ "ಹಾಗೆ ಮುಂದುವರಿಸಿದಾಗ" ಎಂಬ ಪದಗಳನ್ನು ಸೇರಿಸುವುದಕ್ಕೆ ಸಲಹೆ ನೀಡುತ್ತೇನೆ. ಇವು ಸಂಪೂರ್ಣವಾಗಿ ಶಾಬ್ದಿಕ ಬದಲಾವಣೆಗಳು.

ಸಮಾರೋಪ ಭಾಷಣಗಳನ್ನು ಮಾಡಿರುವ ಕೆಲವು ಸ್ನೇಹಿತರು ಬಹುಶಃ ಪ್ರಸ್ತಾವಿಸಬೇಕಾದ ಇನ್ನೂ ಒಂದು ಖಂಡ ಎಂದರೆ, 'ಖಂಡ ೧೫' ಬಾಕಿ ಇದೆ ಎಂಬುದನ್ನು ಮರೆತಿರುವರೆಂಬುದನ್ನು ಈ ಸದನಕ್ಕೆ ನಾನು ನೆನಪಿಸಬಯಸುತ್ತೇನೆ. ಇದು ಒಂದು ವಿವಾದಾತ್ಮಕ ಖಂಡವಾಗಿದ್ದು ಇದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

**ಶ್ರೀ ಸಿ. ಸುಬ್ರಹ್ಮಣ್ಯಮ್** (ಮದ್ರಾಸ್ : ಸಾಮಾನ್ಯ) : ಯಾರಿಂದ ಮುಂದುವರಿಸಬಹುದು? ಹೊಸ ಸಂವಿಧಾನದ ಅಡಿಯಲ್ಲಿ ರಾಜ್ಯಪಾಲರನ್ನಾಗಿ ಅವರನ್ನು ಮುಂದುವರಿಸಲು ಯಾರು ಅಧಿಕಾರ ನೀಡುತ್ತಾರೆ?

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಜೆ. ಪಟೇಲ್** : ಭಾರತ ಸರ್ಕಾರ ಎಂಬುದರಲ್ಲಿ ಸಂಶಯವೇ ಇಲ್ಲ. ಅದೇ ಅವರನ್ನು ನೇಮಕ ಮಾಡುವ ಪ್ರಾಧಿಕಾರವಾಗಿದೆ. ಆ ಕುರಿತು ಯಾವುದೇ ತೊಂದರೆ ಇಲ್ಲ.

**ಮಾನ್ಯ ಎಚ್.ವಿ. ಕಾಮತ್**: "ಮುಂದುವರಿಯಬಹುದು" ಅಥವಾ "ಮುಂದುವರಿಸಬಹುದು". "ಮುಂದುವರಿಯಬಹುದು" ಯಾಕಲ್ಲ?

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಜೆ. ಪಟೇಲ್** : ನಿಮಗೆ ಇಷ್ಟವಿದ್ದಲ್ಲಿ "ಮುಂದುವರಿಯಬಹುದು" ಪದವನ್ನೇ ಹಾಕಿ.

**ಡಾ. ಪಿ.ಎಸ್. ದೇಶ್‌ಮುಖ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : "ಮುಂದುವರಿಸಬಹುದು" ಉತ್ತಮವಾಗಿದೆ. "ಮುಂದುವರಿಯಬಹುದು" ಪದವು "ಮುಂದುವರೆಯಬೇಕು" ಎಂದು ಅರ್ಥ ಕೊಡುವ ಸಂಭವವಿದೆ ಮತ್ತು ಶ್ರೀ ಕಾಮತ್ ಅವರು ತಮ್ಮ ಮನೋಗತ ಉದ್ದೇಶವನ್ನು ವಿಫಲಗೊಳಿಸಬಹುದು. "ಮುಂದುವರಿಸಬಹುದು" ಎಂಬುದು ಸರ್ಕಾರವು ಹಾಗೆ ಆದೇಶಿಸಿದರೆ ಮಾತ್ರ ಮುಂದುವರಿಯುತ್ತದೆ.

**ಸನ್ಮಾನ್ಯ ಅಧ್ಯಕ್ಷರು** : ನಾನು, ಈ ನಿರ್ಣಯವನ್ನು ಶಾಬ್ದಿಕ ಬದಲಾವಣೆ ಮಾಡಿ ಮತಕ್ಕೆ ಹಾಕುತ್ತೇನೆ. "ಮುಂದುವರಿಸತಕ್ಕದ್ದು" ಪದಗಳ ಸ್ಥಳದಲ್ಲಿ "ಮುಂದುವರಿಸಬಹುದು" ಎಂಬ ಪದಗಳನ್ನು ಪ್ರತಿಯೋಜಿಸಲಾಗಿದೆ ಮತ್ತು ನಾಲ್ಕನೇ ಸಾಲಿನಲ್ಲಿ 'ಮತ್ತು' ಪದದ ತರುವಾಯ 'ಹಾಗೆ ಮುಂದುವರಿಸಿದಾಗ' ಪದಗಳನ್ನು ಸೇರಿಸಲಾಗಿದೆ.

ನಿರ್ಣಯವನ್ನು ಅಂಗೀಕರಿಸಲಾಯಿತು.

**ಸನ್ಮಾನ್ಯ ಅಧ್ಯಕ್ಷರು** : ಶ್ರೀ ಮುನ್ಷಿಯವರೆ, ೩ನೇ ಖಂಡವನ್ನು ಬಿಟ್ಟುಬಿಡಬೇಕೆಂದು ನೀವು ಪ್ರಸ್ತಾವ ಸಲ್ಲಿಸುವಿರಾ. ಕ್ಷಮಿಸಿ ನಾನು ಅದನ್ನು ಮತಕ್ಕೆ ಹಾಕಲಿಲ್ಲ, ಆದರೆ ನಾನು ಅದನ್ನು ಒಪ್ಪಲಾಗಿದೆ ಎಂದು ಪರಿಗಣಿಸುತ್ತೇನೆ.

ನಿರ್ಣಯವನ್ನು ಅಂಗೀಕರಿಸಲಾಯಿತು.

**ಸನ್ಮಾನ್ಯ ಅಧ್ಯಕ್ಷರು** : ನಾನು ಈಗ, ೩ನೇ ಖಂಡವನ್ನು ಬಿಟ್ಟುತಿದ್ದುಪಡಿಯಾದ ಇಡೀ ನಿರ್ಣಯವನ್ನು ಮತಕ್ಕೆ ಹಾಕುತ್ತೇನೆ, ಏಕೆಂದರೆ ಇಲ್ಲಿ ಸ್ವಲ್ಪ ತಪ್ಪು ತಿಳುವಳಿಕೆ ಇತ್ತು:

ತಿದ್ದುಪಡಿಯಾದ ಭಾಗ ೪ನ್ನು ಅಂಗೀಕರಿಸಲಾಯಿತು.

**ಸನ್ಮಾನ್ಯ ಅಧ್ಯಕ್ಷರು** : ಶ್ರೀ ಅನಂತಶಯನಮ್ ಅಯ್ಯಂಗಾರ್‌ರ ಅವರು, ತಿದ್ದುಪಡಿಯ ನೋಟೀಸನ್ನು ನೀಡಿದ್ದಾರೆ.

(ತಿದ್ದುಪಡಿಯನ್ನು ಮಂಡಿಸಲಿಲ್ಲ)

### ಖಂಡ ೧೫

**ಸನ್ಮಾನ್ಯ ಅಧ್ಯಕ್ಷರು** : ಮುಂದಕ್ಕೆ ಹಾಕಲಾಗಿದ್ದ ೧೫ನೇ ಖಂಡ ಇದಾಗಿದೆ ಮತ್ತು ನಾವು ಅದನ್ನು ಈಗ ಕೈಗೆತ್ತಿಕೊಳ್ಳಬಹುದಾಗಿದೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯ್ ಜೆ. ಪಟೇಲ್** : ನಾನು ಈ ಕೆಳಗಿನಂತೆ ಪ್ರಸ್ತಾವ ಮಂಡಿಸುತ್ತಿದ್ದೇನೆ:

"೧೫(೧) ರಾಜ್ಯಪಾಲರು, ತಮ್ಮ ಹೊಣೆಗಾರಿಕೆಗಳನ್ನು ನಿರ್ವಹಿಸುವಲ್ಲಿ, ಈ ಮುಂದಿನ ವಿಶೇಷ ಹೊಣೆಗಾರಿಕೆಗಳನ್ನು, ಎಂದರೆ, ಪ್ರಾಂತ ಅಥವಾ ಅದರ ಯಾವುದೇ ಭಾಗದ ಶಾಂತಿ ಮತ್ತು ನೆಮ್ಮದಿಗೆ ಯಾವುದೇ ತೀವ್ರ ಬೆದರಿಕೆಯಾಗುವುದನ್ನು ತಡೆಯುವ ಅಧಿಕಾರವನ್ನು ಹೊಂದಿರತಕ್ಕದ್ದು."

(೨) ತಮ್ಮ ವಿಶೇಷ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ, ರಾಜ್ಯಪಾಲರು ತಮ್ಮ ವಿವೇಚನಾನುಸಾರ ಕಾರ್ಯನಿರ್ವಹಿಸತಕ್ಕದ್ದು:

ಪರಂತು, ತಮ್ಮ ವಿಶೇಷ ಹೊಣೆಗಾರಿಕೆಯನ್ನು ನಿರ್ವಹಿಸುವಾಗ, ಯಾವುದೇ ಸಮಯದಲ್ಲಿ, ಶಾಸನದ ಮೂಲಕ ಉಪಬಂಧವನ್ನು ರಚಿಸಬೇಕಾದ ಅಗತ್ಯವಿದೆಯೆಂದು ಪರಿಗಣಿಸಿದರೆ, ಅಂಥ ಶಾಸನವನ್ನು ಪಡೆಯುವಲ್ಲಿ ಸಾಧ್ಯವಾಗದಿದ್ದರೆ, ಅವರು ಒಕ್ಕೂಟದ ರಾಷ್ಟ್ರಪತಿಯವರಿಗೆ ವರದಿ ಮಾಡತಕ್ಕದ್ದು, ಅವರು ಆ ಬಗ್ಗೆ ತುರ್ತು ಪರಿಸ್ಥಿತಿಯಲ್ಲಿ ಅವರಿಗೆ ಇರುವ ಅಧಿಕಾರಗಳಡಿಯಲ್ಲಿ ಸೂಕ್ತವೆಂದು ತಾವು ಪರಿಗಣಿಸಿದಂಥ ಕ್ರಮವನ್ನು ತೆಗೆದುಕೊಳ್ಳಬಹುದು."

ಮಾನ್ಯ ಸದಸ್ಯರು ಈ ಸಂಬಂಧದಲ್ಲಿ ನನ್ನ ಪ್ರಸ್ತಾವನಾ ಭಾಷಣವನ್ನು ದಯವಿಟ್ಟು ಪರಾಮರ್ಶಿಸಬಹುದಾಗಿದೆ. ರಾಜ್ಯಪಾಲರ ವಿವೇಚನಾಧಿಕಾರಗಳ ಈ ಪ್ರಶ್ನೆಯನ್ನು ಅತ್ಯಂತ ಜಾಗರೂಕತೆಯಿಂದ ಪರ್ಯಾಲೋಚನೆ ಮಾಡುವ ಅಗತ್ಯವಿರುವ ವಿಷಯವಾಗಿದೆ. ಒಂದೆಡೆ ಇದು ಮಂತ್ರಿ ಮಂಡಲದ ಅಧಿಕಾರಗಳನ್ನು ಅತಿಕ್ರಮಿಸುತ್ತದೆ. ರಾಜ್ಯಪಾಲರು ತಮ್ಮ ಅಧೀನದ ಸೇವೆಗಳನ್ನು ಪಡೆಯುವಂತಿಲ್ಲ, ಮತ್ತು ಅವರು ತಮ್ಮ ಪ್ರಕಾರ್ಯಗಳನ್ನು ತಮ್ಮ ವಿವೇಚನಾಯುತ್ತ ನಿರ್ವಹಿಸಬೇಕಾಗಿರುತ್ತದೆ, ವಿವೇಚನಾನುಸಾರದ ಹೊಣೆಗಾರಿಕೆಯ ಉದ್ದೇಶಕ್ಕಾಗಿ ಸೇವೆಗಳ ನಿಯಂತ್ರಣವನ್ನು ತೆಗೆದುಕೊಳ್ಳಲು ಅವರಿಗೆ ಅಧಿಕಾರ ನೀಡಿದರೆ, ಆಗ ಮಂತ್ರಿ ಮಂಡಲವು ಹೇಗೆ ಪ್ರಕಾರ್ಯ ನಿರ್ವಹಿಸಬೇಕೆಂದು ಊಹಿಸುವುದು ಕಷ್ಟವಾಗುತ್ತದೆ, ಮತ್ತು ಅವರ ಅಧಿನಿಯಮದ ಉಪಬಂಧಗಳ ಮೇರೆಗೆ ೯೩ನೇ ಪ್ರಕರಣವನ್ನು ಪ್ರಸ್ತಾವವೆ ಹೆಚ್ಚುಕಡಿಮೆ ಅನ್ವಯಿಸಿದಂತೆಯೇ ಆಗುತ್ತದೆ. ಅಷ್ಟೇ ಅಲ್ಲದೆ ಇನ್ನೊಂದೆಡೆ, ದೇಶದಲ್ಲಿನ ಪ್ರಚಲಿತ ಸ್ಥಿತಿಗತಿಗಳ ಕಡೆಗೆ ಗಮನ ನೀಡಬೇಕಾದಂಥ ಭಾವನೆಯೂ ಇರುತ್ತದೆ, ಇಂದು ದೇಶದಲ್ಲಿ ಉದ್ಭವಿಸಿರುವ ಕಷ್ಟಕರ ಸ್ಥಿತಿಯನ್ನು ನಿಭಾಯಿಸಲು ವಿಶೇಷ ಹೊಣೆಗಾರಿಕೆಗಳನ್ನು ನೀಡುವುದಕ್ಕಾಗಿ ಏನಾದರೊಂದು ಉಪಬಂಧದ ರಚನೆಮಾಡಬೇಕಿದೆ. ಈ ಉದ್ದೇಶಕ್ಕಾಗಿ ಈ ಖಂಡವನ್ನು ಎಚ್ಚರಿಕೆಯಿಂದ ಪರ್ಯಾಲೋಚಿಸಬೇಕಾದ ಅಗತ್ಯವಿದೆ ಮತ್ತು ಈ ಚರ್ಚೆಯಲ್ಲಿ ಎಲ್ಲ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಲಾಗುವುದೆಂದು ನಾನು ನಂಬುತ್ತೇನೆ. ಆದ್ದರಿಂದ, ನಾನು ಈ ಪ್ರಸ್ತಾವವನ್ನು ಸದನದ ಅಂಗೀಕಾರಕ್ಕಾಗಿ ಮಂಡಿಸುತ್ತೇನೆ.

**ಗೌರವಾನ್ವಿತ ಪಂಡಿತ್ ಹೃದಯನಾಥ್ ಕುಂಜ್ರು** (ಉತ್ತರ ಪ್ರದೇಶ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನಮ್ಮೆಲ್ಲರ ಹಿತದೃಷ್ಟಿಯಿಂದ ಈ ಪ್ರಶ್ನೆಯ ಮೇಲಿನ ಚರ್ಚೆಯನ್ನು ನಾಳೆಗೆ ಮುಂದೂಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಹೊಸ ತಿದ್ದುಪಡಿ ಮಂಡಿಸುವ ಬಗ್ಗೆ ಮಾನ್ಯ ಮುನ್ಷಿಯವರು ನೀಡಿರುವ ನೋಟೀಸು ನಮ್ಮ ಮುಂದೆ ಇದೆ; ಅದನ್ನು ಕುರಿತು ಪರಗಣಿಸಲು ನಮಗೆ ಸ್ವಲ್ಪ ಕಾಲಾವಕಾಶ ಬೇಕು. ಈ ಪ್ರಶ್ನೆಯು ಅನೇಕ ದಿನಗಳಿಂದ ನಮ್ಮ ಮನಸ್ಸಿನಲ್ಲಿದೆ ಎಂಬುದರ ಬಗ್ಗೆ ಯಾವುದೇ ಸಂಶಯ ಬೇಡ, ಆದರೆ ಮಾನ್ಯ ಮುನ್ಷಿಯವರ ತಿದ್ದುಪಡಿಯಲ್ಲಿ ಪರಿಭಾವಿಸಿರುವುದನ್ನು ಬಿಟ್ಟು, ನಮ್ಮ ಮುಂದೆ ಬೇರಾವುದೇ ರೂಪದ ಸಲಹೆ ಇಲ್ಲ. ಆದ್ದರಿಂದ, ಅದನ್ನು ನಾವು ನಾಳೆ ಕೈಗೆತ್ತಿಕೊಳ್ಳಬಹುದೆಂಬುದು ನನ್ನ ಸಲಹೆ. ಈಗ ಇನ್ನೂ ಹನ್ನೆರಡುವರೆಯಾಗಿದೆ ಹಾಗೂ ನಾಳೆಯವರೆಗೆ ನಾವು ಈ ಚರ್ಚೆಯನ್ನು ಮುಂದೂಡಿದರೆ, ಸದನವು ಅರ್ಧ ಗಂಟೆಗಿಂತ ಹೆಚ್ಚಿನ ಸಮಯವನ್ನು ಕಳೆದುಕೊಳ್ಳುವುದಿಲ್ಲ. ನನ್ನ ಸಲಹೆಗೆ ಸದನವು ಮತ್ತು ತಾವು ಒಪ್ಪುವಿರೆಂದು ಆಶಿಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಸದನವು ಅನುಮತಿ ನೀಡಿದರೆ, ಈ ಅರ್ಧ ಗಂಟೆಯನ್ನು ನಾವು ಉಪಯೋಗಿಸಿಕೊಳ್ಳದೆ ಇರುವ ಬದಲು, ಆ ತಿದ್ದುಪಡಿಗಳನ್ನು ಇಂದು ಪ್ರಸ್ತಾವಿಸಿ, ನಾಳೆ ಮುಂದಿನ ಚರ್ಚೆಯನ್ನು ಕೈಗೆತ್ತಿಕೊಳ್ಳಬಹುದಾಗಿದೆ ಎಂಬುದು ನನ್ನ ಸಲಹೆ. ಆದ್ದರಿಂದ, ಸದನವು ಅಪೇಕ್ಷಿಸಿದರೆ, ಸದಸ್ಯರು ಆ ತಿದ್ದುಪಡಿಗಳ ಬಗ್ಗೆ ಪ್ರಸ್ತಾವಕರ ಭಾಷಣಸಹಿತವಾಗಿ ತಿದ್ದುಪಡಿಗಳನ್ನು ಪರ್ಯಾಲೋಚಿಸುವ ಅವಕಾಶವನ್ನು ಪಡೆಯಬಹುದು.

**ಗೌರವಾನ್ವಿತ ಪಂಡಿತ್ ಹೃದಯನಾಥ್ ಕುಂಜ್ರು** (ಉತ್ತರ ಪ್ರದೇಶ : ಸಾಮಾನ್ಯ) : ತಿದ್ದುಪಡಿಯನ್ನು ಇಂದು ಪ್ರಸ್ತಾವಿಸಿ, ಮಾತನಾಡುವುದನ್ನು ನಾಳೆಗೆ ಕಾಯ್ದಿರಿಸಬೇಕೆಂದು ನೀವು ಸೂಚಿಸುತ್ತಿರುವಿರಾ?

**ಸನ್ಮಾನ್ಯ ಅಧ್ಯಕ್ಷರು :** ಯಾವುದೇ ತಿದ್ದುಪಡಿಯನ್ನು ಮಂಡಿಸುವ ಯಾರೇ ಪ್ರಸ್ತಾವಕರಿಗೆ ಆ ಹಕ್ಕು ಬೇಕೆಂದು ಇಚ್ಛಿಸಿದರೆ, ನಾನು ಅವರಿಗೆ ಆ ಹಕ್ಕನ್ನು ನೀಡುತ್ತೇನೆ.

**ಡಾ. ಬಿ.ಆರ್. ಅಂಬೇಡ್ಕರ್ :** ಅದನ್ನು ಇಂದೇ ಮುಗಿಸಬೇಕೆಂದೇನೂ ಇಲ್ಲ.

**ಸನ್ಮಾನ್ಯ ಅಧ್ಯಕ್ಷರು:**ಮೊದಲ ತಿದ್ದುಪಡಿಯು, ಶ್ರೀಯುತರುಗಳಾದ ಅಜಿತ್ ಪ್ರಸಾದ್ ಜೈನ್, ಖುರ್ಶಿದ್ ಲಾಲ್ ಮತ್ತು ಗೋಪಿನಾಥ್ ಶ್ರೀವಾಸ್ತವ ಅವರದು.

(ತಿದ್ದುಪಡಿಯನ್ನು ಮಂಡಿಸಲಿಲ್ಲ)

(ಶ್ರೀಯುತರುಗಳಾದ ಕೆ. ಸಂತಾನಮ್, ಕಲಾ ವೆಂಕಟರಾವ್, ಎಮ್. ಅನಂತಶಯನಮ್ ಅಯ್ಯಂಗಾರ್, ಶಿಬ್ಬನ್ ಲಾಲ್ ಸಕ್ಸೇನಾ ಮತ್ತು ಪಂಡಿತ್ ಗೋವಿಂದ ವಲ್ಲಭ ಪಂತ್ ಇವರು ತಮ್ಮ ತಮ್ಮ ತಿದ್ದುಪಡಿಗಳನ್ನು ಪ್ರಸ್ತಾವಿಸಲಿಲ್ಲ.)

**ಶ್ರೀ ಬಿ.ಎಮ್. ಗುಪ್ತೆ** (ಬಾಂಬೆ : ಸಾಮಾನ್ಯ): ಮಾನ್ಯರೆ, ೧೫ನೇ ಖಂಡದ (೨)ನೇ ಉಪ–ಖಂಡದ ಪರಂತುಕವನ್ನು ಬಿಡಬೇಕೆಂದು ಮತ್ತು ಈ ಮುಂದಿನ ಹೊಸ ಉಪಖಂಡವನ್ನು ಸೇರಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ.

"(೩) ರಾಜ್ಯಪಾಲರು, ತಮ್ಮ ವಿಶೇಷ ಹೊಣೆಗಾರಿಕೆಯನ್ನು ನಿರ್ವಹಿಸುವಾಗ, ಶೀಘ್ರ ಕ್ರಮ ಕೈಗೊಳ್ಳಬೇಕಾದ ಸನ್ನಿವೇಶ ಉದ್ಭವಿಸಿದೆ ಎಂದು ಅವರಿಗೆ ಮನದಟ್ಟಾದಲ್ಲಿ, ಅವರು, ಉಚ್ಚ ನ್ಯಾಯಾಲಯವನ್ನು ಹೊರತುಪಡಿಸಿ, ಯಾವುದೇ ಪ್ರಾಂತೀಯ ನಿಕಾಯದಲ್ಲಿ ಅಥವಾ ಪ್ರಾಧಿಕಾರದಲ್ಲಿ ನಿಹಿತವಾಗಿರುವ ಅಥವಾ ಚಲಾಯಿಸಬಹುದಾದ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಉದ್ಘೋಷಿಸುವ ಮೂಲಕ ತಾವು ವಹಿಸಿಕೊಳ್ಳಬಹುದು.

(೪) ಉದ್ಘೋಷಣೆಯನ್ನು ಕೂಡಲೇ ಒಕ್ಕೂಟದ ರಾಷ್ಟ್ರಪತಿಗೆ ತಿಳಿಸತಕ್ಕದ್ದು, ಅವರು ತರುವಾಯ ತಮ್ಮ ತುರ್ತು ಪರಿಸ್ಥಿತಿ ಅಧಿಕಾರಗಳ ಮೇರೆಗೆ ಸೂಕ್ತವೆಂದು ಪರಿಗಣಿಸಬಹುದಾದ ಕ್ರಮವನ್ನು ತೆಗೆದುಕೊಳ್ಳಬಹುದು.

(೫) ರಾಜ್ಯಪಾಲರು ಸ್ವತಃ, ತಾವೇ ಅಥವಾ ರಾಷ್ಟ್ರಪತಿಗಳು, ಅವರ ತುರ್ತು ಪರಿಸ್ಥಿತಿ ಅಧಿಕಾರಗಳ ಮೇರೆಗೆ, ೨ ವಾರಗಳ ಮೊದಲು ಉದ್ಘೋಷಣೆಯನ್ನು ಹಿಂದಕ್ಕೆ ಪಡೆದ ಹೊರತು, ೨ ವಾರಗಳ ನಂತರ ಅದರ ಕಾರ್ಯನಿರ್ವಹಣೆ ಸ್ಥಗಿತಗೊಳ್ಳಬೇಕು. (ಇವೆರಡರಲ್ಲಿ ಯಾವುದು ಮೊದಲೋ ಅದು ಅನ್ವಯವಾಗುತ್ತದೆ)

**ಸನ್ಮಾನ್ಯ ಅಧ್ಯಕ್ಷರು :** ಪಂಡಿತ್ ಹೃದಯನಾಥ್ ಕುಂಜ್ರು.

**ಗೌರವಾನ್ವಿತ ಪಂಡಿತ್ ಹೃದಯನಾಥ್ ಕುಂಜ್ರು :** ಮಾನ್ಯ ಅಧ್ಯಕ್ಷರೇ, ನಾನು ನೋಟೀಸು ನೀಡಿರುವ ತಿದ್ದುಪಡಿಯು ಈ ಮುಂದೆ ಕಂಡಂತಿದೆ.

"೧೫ನೇ ಖಂಡಕ್ಕೆ ಮುಂದೆ ಕಂಡಂತೆ ಪ್ರತಿಯೋಜಿಸತಕ್ಕದ್ದು:

'ಪ್ರಾಂತದ ಅಥವಾ ಅದರ ಯಾವುದೇ ಭಾಗದ ಶಾಂತಿ ಮತ್ತು ನೆಮ್ಮದಿಗೆ ಗಂಭೀರ ತೊಂದರೆ ಉಂಟಾಗಿದೆ ಎಂದು ರಾಜ್ಯಪಾಲರಿಗೆ ಮನವರಿಕೆಯಾದಾಗೆಲ್ಲ, ಅವರು, ತಮ್ಮ ವಿವೇಚನಾನುಸಾರ ಒಕ್ಕೂಟದ

ರಾಷ್ಟ್ರಪತಿಯವರಿಗೆ ವರದಿ ಸಲ್ಲಿಸತಕ್ಕದ್ದು.

**ಟಿಪ್ಪಣಿ :** ರಾಷ್ಟ್ರಪತಿಗಳು, ತಮ್ಮಲ್ಲಿ ನಿಹಿತವಾಗಿರುವ ತುರ್ತು ಪರಿಸ್ಥಿತಿ ಅಧಿಕಾರಗಳ ಅಡಿಯಲ್ಲಿ ವರದಿ ಕುರಿತು ತಮಗೆ ಸೂಕ್ತವೆನಿಸಿದ ಕ್ರಮ ತೆಗೆದುಕೊಳ್ಳಬಹುದು.

ಮಾನ್ಯರೆ, ಎಲ್ಲಾ ತಿದ್ದುಪಡಿಗಳು ಮಂಡನೆಯಾದ ನಂತರ ಸಹಜವಾಗಿಯೇ ವಿಷಯವನ್ನು ಕುರಿತು ಪರ್ಯಾಲೋಚಿಸಲು ಅನುಕೂಲವಿರುವುದರಿಂದ, ನಾಳೆಯವರೆಗೆ ನನ್ನ ಭಾಷಣವನ್ನು ನಾನು ಕಾಯ್ದಿರಿಸುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು :** ಮಾನ್ಯ ಮುನ್ಷಿ.

**ಮಾನ್ಯ ಕೆ.ಎಮ್. ಮುನ್ಷಿ:** ಮಾನ್ಯರೆ, ಈ ತಿದ್ದುಪಡಿಯು ಮಾನ್ಯ ಗುಪ್ತೆಯವರ ತಿದ್ದುಪಡಿಯ ವಿಸ್ತರಣೆ ಮಾತ್ರವಾಗಿದೆ. ತಿದ್ದುಪಡಿಯ ಬಗ್ಗೆ ನಾನು ಏನು ಹೇಳಬೇಕೆಂದಿರುವೆನೋ ಅದನ್ನು ನಾಳೆಯವರೆಗೆ ನಾನೂ ಸಹ ಕಾಯ್ದಿರಿಸುತ್ತೇನೆ.

ಇಲ್ಲೊಂದು ಕ್ರಿಯಾಲೋಪವಿದೆ.

**ಶ್ರೀ ಎಮ್.ಎಸ್. ಅನೆ :** ಮಾನ್ಯ ಮುನ್ಷಿಯವರು ಮಂಡಿಸಿರುವ ತಿದ್ದುಪಡಿಯು, ಕ್ರಿಯಾಲೋಪ ಕುರಿತು, ಪಂಡಿತ್ ಗೋವಿಂದ ವಲ್ಲಭ ಪಂತ್ ಅವರು ಸೂಚನೆ ಕೊಟ್ಟಿರುವ ತಿದ್ದುಪಡಿಗೆ ತಿದ್ದುಪಡಿಯಾಗಿದೆ; ಆದರೆ ಪಂಡಿತ್ ಪಂತ್ ಅವರು ತಮ್ಮ ತಿದ್ದುಪಡಿಯು, ಪ್ರಸ್ತಾವಿಸುವುದಕ್ಕೆ ಸೂಕ್ತವಾಗಿಲ್ಲವೆಂದು ಭಾವಿಸಿರುವಾಗ, ಮಾನ್ಯ ಮುನ್ಷಿ ಅವರು ಅದಕ್ಕೆ ಸಂಬಂಧಿಸಿದ ತಿದ್ದುಪಡಿಯನ್ನು ಮಂಡಿಸುವ ಪ್ರಶ್ನೆಯೇ ಇಲ್ಲ.

**ಸನ್ಮಾನ್ಯ ಅಧ್ಯಕ್ಷರು :** ಪಂಡಿತ್ ಕುಂಜ್ರು ಅವರ ಮೂಲಕ ಮಂಡಿಸಲಾಗಿರುವ ಪಂಡಿತ್ ಗೋವಿಂದ್ ವಲ್ಲಭ ಪಂತ್ ಅವರ ತಿದ್ದುಪಡಿಯನ್ನು ಯಥಾವತ್ತಾಗಿ ನಾನು ಹೇಳಲೇ?

**ಮಾನ್ಯ ಎಮ್.ಎಸ್. ಅನೆ :** ಆಗ "ಪಂಡಿತ್ ಹೃದಯನಾಥ್ ಕುಂಜ್ರುರವರು ಪ್ರಸ್ತಾವಿಸಬೇಕಿರುವ ಪದಾವಳಿಗಳಲ್ಲಿ ಬದಲಾವಣೆ ಮಾಡಬೇಕಾದ ಅಗತ್ಯ ಇರುತ್ತದೆ.

**ಶ್ರೀ ಕೆ.ಎಮ್. ಮುನ್ಷಿ :** ಶ್ರೀ ಅನೆಯವರು ಪತ್ರವನ್ನು ಸರಿಯಾಗಿ ಓದಿಲ್ಲವೆಂದು ಕಾಣುತ್ತದೆ. ನಾನು ಎರಡು ತಿದ್ದುಪಡಿಗಳನ್ನು ಮಂಡಿಸಿದ್ದೇನೆ, ಒಂದು ಪಂತ್‌ಜಿ ಅವರ ತಿದ್ದುಪಡಿಗೆ ಸಂಬಂಧಿಸಿದೆ ಮತ್ತು ಇನ್ನೊಂದು ಮಾನ್ಯ ಗುಪ್ತೆಯವರ ತಿದ್ದುಪಡಿಗೆ ಸಂಬಂಧಿಸಿದೆ. ಮೊದಲನೇ ತಿದ್ದುಪಡಿಯನ್ನು, ಮಂಡಿಸಲಿಲ್ಲವಾದ್ದರಿಂದ ಮತ್ತು ಮಾನ್ಯ ಗುಪ್ತೆರವರು ಅವರ ತಿದ್ದುಪಡಿಯನ್ನು ಮಂಡಿಸಿದ್ದರಿಂದ, ಮಾನ್ಯ ಅನೆಯವರ ವಿರೋಧ ವ್ಯಕ್ತಪಡಿಸಿದರೂ ನಾನು ಮಂಡಿಸಿದ ತಿದ್ದುಪಡಿ ಸಂಪೂರ್ಣವಾಗಿ ಕ್ರಮಬದ್ಧವಾಗಿಯೇ ಇದೆ. ಆ ತಿದ್ದುಪಡಿ ಹೀಗಿದೆ:

"೧೫ನೇ ಖಂಡಕ್ಕೆ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು:

'(೧) ಪ್ರಾಂತದಲ್ಲಿ ಶಾಂತಿ ಮತ್ತು ನೆಮ್ಮದಿಗೆ ಭಂಗ ತರುವಂಥ ಗಂಭೀರ ಪರಿಸ್ಥಿತಿಯು ಉದ್ಭವಿಸಿದೆ ಎಂದು ಪ್ರಾಂತದ ರಾಜ್ಯಪಾಲರಿಗೆ ಮನವರಿಕೆಯಾದರೆ ಮತ್ತು ಪ್ರಾಂತದ ಸರ್ಕಾರವನ್ನು ನಡೆಸಿಕೊಂಡು ಹೋಗಲು ಅಸಾಧ್ಯವೆಂದು ಅವರಿಗೆ ಮನದಟ್ಟಾದಲ್ಲಿ, ೯ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ತನ್ನ ಸಚಿವರ ಸಲಹೆ ಪಡೆದು ಅವರು ಉದ್ಘೋಷಣೆಯ ಮೂಲಕ, ಸರ್ಕಾರದ ಎಲ್ಲ ಅಥವಾ ಯಾವುದೇ ಪ್ರಕಾರ್ಯಗಳನ್ನು, ಹಾಗೂ ಯಾವುದೇ ಪ್ರಾಂತೀಯ ನಿಕಾಯದಲ್ಲಿ ಅಥವಾ ಸರ್ಕಾರದಲ್ಲಿ ನಿಹಿತವಾದ ಮತ್ತು ಅದು ಚಲಾಯಿಸಬಹುದಾದ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಸ್ವತಃ ತಾವೇ ವಹಿಸಿಕೊಳ್ಳಬಹುದು; ಹಾಗೂ ಯಾವ ಅಂಥ ಉದ್ಘೋಷಣೆಯಾಗಲಿ, ಯಾವುದೇ ಪ್ರಾಂತೀಯ ನಿಕಾಯ ಅಥವಾ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ, ಈ ಅಧಿನಿಯಮದ ಯಾವ ಉಪಬಂಧಗಳನ್ನು ಒಟ್ಟಾರೆ ಅಥವಾ ಅದರ ಯಾವೊಂದು ಭಾಗದ ಕಾರ್ಯಾಚರಣೆಯನ್ನು ರದ್ದುಪಡಿಸುವುದಕ್ಕೆ ಸಂಬಂಧಿಸಿದ ಉಪಬಂಧಗಳನ್ನು ಒಳಗೊಂಡಂತೆ ಉದ್ಘೋಷಣೆಯ ಉದ್ದೇಶಗಳನ್ನು ಜಾರಿಗೊಳಿಸುವುದಕ್ಕಾಗಿ ಅವಶ್ಯಕ ಅಥವಾ ಅಪೇಕ್ಷಣೀಯ

ಎಂದು ಅವರಿಗೆ ಕಂಡುಬರುವಂಥ, ಪ್ರಾಸಂಗಿಕ ಅಥವಾ ಆನುಷಂಗಿಕ ಉಪಬಂಧಗಳನ್ನು ಒಳಗೊಳ್ಳಬಹುದಾಗಿದೆ;

ಪರಂತು, ಈ ಉಪಪ್ರಕರಣದಲ್ಲಿರುವ ಯಾವುದೂ, ಉಚ್ಚ ನ್ಯಾಯಾಲಯದಲ್ಲಿ ನಿಹಿತವಾದ ಅಥವಾ ಅದು ಚಲಾಯಿಸಬಹುದಾದ ಯಾವುವೇ ಅಧಿಕಾರಗಳನ್ನು ಅಥವಾ ಉಚ್ಚ ನ್ಯಾಯಾಲಯಕ್ಕೆ ಸಂಬಂಧಿಸಿದ ಅಧಿನಿಯಮದ ಯಾವುದೇ ಉಪಬಂಧದ ಕಾರ್ಯನಿರ್ವಹಣೆಯನ್ನು ಸಂಪೂರ್ಣವಾಗಿಯಾಗಲಿ ಅಥವಾ ಭಾಗಶಃ ಆಗಲಿ ತಾನು ಸ್ವತಃ ವಹಿಸಿಕೊಳ್ಳಲು ರಾಜ್ಯಪಾಲರಿಗೆ ಅಧಿಕಾರವಿರತಕ್ಕುದಲ್ಲ.

(೨) ರಾಜ್ಯಪಾಲರು, ಉದ್ಘೋಷಣೆಯನ್ನು ಕೂಡಲೇ ಒಕ್ಕೂಟದ ರಾಷ್ಟ್ರಪತಿಯವರಿಗೆ ತಿಳಿಸತಕ್ಕದ್ದು, ಅವರು, ತದನಂತರ ತುರ್ತು ಪರಿಸ್ಥಿತಿಯ ಅಧಿಕಾರಗಳ ಅಡಿಯಲ್ಲಿ ಅವರು ಸೂಕ್ತವೆಂದು ಪರಿಗಣಿಸಬಹುದಾದಂಥ ಕ್ರಮವನ್ನು ತೆಗೆದುಕೊಳ್ಳಬಹುದು.

(೩) ಸ್ವತಃ ರಾಜ್ಯಪಾಲರಾಗಲಿ ಅಥವಾ ಒಕ್ಕೂಟದ ರಾಷ್ಟ್ರಪತಿಯಾಗಲಿ ಎರಡು ವಾರಗಳು ಮುಕ್ತಾಯಗೊಳ್ಳುವುದಕ್ಕೆ ಮುಂಚೆಯೇ ಉದ್ಘೋಷಣೆಯನ್ನು ಹಿಂಪಡೆಯದ ಹೊರತು, ತರುವಾಯ ಅದರ ಕಾರ್ಯನಿರ್ವಹಣೆ ಸ್ಥಗಿತಗೊಳ್ಳತಕ್ಕದು.

**ಮಾನ್ಯ ಹೆಚ್.ವಿ. ಕಾಮತ್** : ಕಾನೂನು ವಿಷಯದಲ್ಲಿ ಮತ್ತು ಸಾಂವಿಧಾನಿಕ ವಿಷಯಗಳಲ್ಲಿ ಶ್ರೀ ಕುಂಜ್ರು ಅವರಿಗಿರುವ ಸಾಮರ್ಥ್ಯವನ್ನು ಗೌರವಿಸುತ್ತ, "ತನ್ನ ವಿವೇಚನೆಯಂತೆ ... . .. .ಮನವರಿಕೆಯಾದರೆ" ಎಂಬ ಪದಾವಳಿಗಳು, ಅಷ್ಟೊಂದು ಯುಕ್ತವಾಗಿಲ್ಲವೆಂದು ನಾನು ಅರಿಕೆ ಮಾಡಿಕೊಳ್ಳಬಯಸುತ್ತೇನೆ. ಒಬ್ಬರು ತಮ್ಮ ವಿವೇಚನಾನುಸಾರ ಹೇಳಬಹುದು ಅಥವಾ ಏನನ್ನಾದರೂ ಮಾಡಬಹುದು, ಆದರೆ "ಒಬ್ಬರ ವಿವೇಚನಾನುಸಾರ ಮನವರಿಕೆಯಾಗುವುದು" ಎಂಬುದು ರೂಢಿಯಲ್ಲ.

**ಸನ್ಮಾನ್ಯ ಅಧ್ಯಕ್ಷರು** : ನಾವು ಈ ಚರ್ಚೆಯನ್ನು ನಾಳೆಗೆ ಮುಂದೂಡೋಣ.

**ಗೌರವಾನ್ವಿತ ಪಂಡಿತ್ ಹೃದಯನಾಥ್ ಕುಂಜ್ರು** : ನಾನು ಮಾನ್ಯ ಕಾಮತ್ ಅವರು ಹೇಳಿದ ವಿಷಯ ಕುರಿತು ನಾಳೆ ಮಾತನಾಡುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು** : ನಾವು ಈಗ ಕಾರ್ಯಸೂಚಿಯಲ್ಲಿರುವ ಇತರ ವಿಷಯವನ್ನು ಎಂದರೆ, ಒಕ್ಕೂಟ ಸಂವಿಧಾನಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುತ್ತಿರುವ ಸಮಿತಿಯ ವರದಿಯನ್ನು ಕೈಗೆತ್ತಿಕೊಳ್ಳಬಹುದಾಗಿದೆ. ಪಂಡಿತ್ ನೆಹರು ಅವರು ತಮ್ಮ ಹೆಸರಿನಲ್ಲಿರುವ ಈ ನಿರ್ಣಯವನ್ನು ಪ್ರಸ್ತಾಪಿಸುವರು.

**ಶ್ರೀ ಎಚ್.ವಿ. ಕಾಮತ್** : ಮಾನ್ಯ ಅಧ್ಯಕ್ಷರೆ, ನಮ್ಮ ರಾಷ್ಟ್ರ ಧ್ವಜಕ್ಕೆ ಸಂಬಂಧಪಟ್ಟ ಹಾಗೆ ನಾಳೆ ಡಾ. ನೆಹರು ಅವರು ಪ್ರಸ್ತಾಪಿಸಬೇಕಾದ ನಿರ್ಣಯದ ಸೂಚನೆಯನ್ನು ಕಳೆದ ರಾತ್ರಿ ಸ್ವೀಕರಿಸಿದ್ದೇವೆ, ಈ ನಿರ್ಣಯಕ್ಕೆ ತಿದ್ದುಪಡಿಗಳನ್ನು, ನಾವು ಯಾವ ವೇಳೆಯವರೆಗೆ ಕಳುಹಿಸಬಹುದು ಎಂಬುದನ್ನು ನಮಗೆ ತಿಳಿಸಬೇಕೆಂದು ನಾನು ನಿಮ್ಮಲ್ಲಿ ಕೋರುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು** : ನೀವು ಕಳೆದ ರಾತ್ರಿಯೇ ಸೂಚನೆಯನ್ನು ಸ್ವೀಕರಿಸಿರುವುದರಿಂದ, ನೀವು ಇಷ್ಟರೊಳಗಾಗಿ ನಿಮ್ಮ ತಿದ್ದುಪಡಿಯನ್ನು ಕಳುಹಿಸಬಹುದಾಗಿತ್ತು, ಆದರೆ ನೀವು ಅದನ್ನು ಕಳುಹಿಸದಿದ್ದಲ್ಲಿ, ನೀವು ಈ ದಿನ ಸಂಜೆ ೫ ಗಂಟೆಯವರೆಗೆ ಕಳುಹಿಸಬಹುದಾಗಿದೆ.

**ಮೌಲಾನಾ ಹಸ್ರತ್ ಮೋಹಾನಿ** (ಉತ್ತರ ಪ್ರದೇಶ : ಮುಸ್ಲಿಮ್) : ಈ ಒಕ್ಕೂಟ ವರದಿಯ ಬಗ್ಗೆ ಪ್ರಸ್ತಾಪಿಸಿದ ತಿದ್ದುಪಡಿ ಕುರಿತು ಯಾವುದೇ ಉಲ್ಲೇಖ ನನಗೆ ಬಂದಿಲ್ಲ. ನಾನು ನನ್ನ ತಿದ್ದುಪಡಿಯನ್ನು ಸಲ್ಲಿಸಿದ ಸಮಯದಲ್ಲಿ ಡಾ. ದೇಶ್‌ಮುಖ್ ಸಲ್ಲಿಸಿದ ತಿದ್ದುಪಡಿ ಇತ್ತು.

**ಸನ್ಮಾನ್ಯ ಅಧ್ಯಕ್ಷರು** : ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ತಿದ್ದುಪಡಿಗಳನ್ನು ಎಲ್ಲರಿಗೂ ಕಳುಹಿಸಲಾಗಿದೆ. ಶನಿವಾರದ ಮಧ್ಯಾಹ್ನದ ನಂತರ ನಾವು ಆ ತಿದ್ದುಪಡಿಯನ್ನು ಸ್ವೀಕರಿಸಿದ್ದೇವೆ. ಆದರೆ ಎಲ್ಲ ತಿದ್ದುಪಡಿಗಳನ್ನು

ಸದನದ ಮುಂದೆ ಮಂಡಿಸಲಾಗಿಲ್ಲ.

**ಮೌಲಾನಾ ಹಸ್ರತ್ ಮೋಹಾನಿ** : ಡಾ. ದೇಶಮುಖ್ ಅವರ ತಿದ್ದುಪಡಿಗೆ ಮುಂಚೆ ಎರಡು ದಿನಗಳ ಮೊದಲು ಶ್ರೀ ಲೆಂಗಾರ್ ಅವರಿಗೆ ನನ್ನ ತಿದ್ದುಪಡಿಯನ್ನು ನೀಡಿದ್ದೇನೆ.

**ಸನ್ಮಾನ್ಯ ಅಧ್ಯಕ್ಷರು** : ನಾವು ಆ ವಿಷಯಕ್ಕೆ ಬಂದಾಗ ಆ ಕುರಿತು ಪರ್ಯಾಲೋಚಿಸೋಣ.

**ಒಕ್ಕೂಟ ಸಂವಿಧಾನ ತತ್ತ್ವಗಳನ್ನು ಕುರಿತ ವರದಿ**

**ಗೌರವಾನ್ವಿತ ಪಂಡಿತ್ ಜವಾಹರ್‌ಲಾಲ್ ನೆಹರು** (ಉತ್ತರ ಪ್ರದೇಶ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನಾನು ವಿನಯಪೂರ್ವಕವಾಗಿ ವಿಷಯವನ್ನು ಮಂಡಿಸುತ್ತೇನೆ:

"೩೦ನೇ ಏಪ್ರಿಲ್ ೧೯೪೭ರಂದು ನಡೆದ ಸಭೆಯ ನಿರ್ಣಯಕ್ಕನುಸಾರವಾಗಿ ನೇಮಕ ಮಾಡಿದ್ದ ಸಮಿತಿಯು ಸಲ್ಲಿಸಿದ ಒಕ್ಕೂಟ ಸಂವಿಧಾನ ತತ್ವಗಳನ್ನು ಕುರಿತ ವರದಿಯನ್ನು ಪರ್ಯಾಲೋಚಿಸಲು ಸಂವಿಧಾನ ರಚನಾ ಸಭೆಯು ಉಪಕ್ರಮಿಸಬೇಕು."

ಈ ವರದಿಯನ್ನು ಎಲ್ಲರಿಗೂ ಕಳುಹಿಸಿಕೊಡಲಾಗಿದೆ ಮತ್ತು, ಪೂರ್ಣ ವರದಿಯನ್ನು ಕಳುಹಿಸಿಕೊಟ್ಟ ನಂತರ, #ಪೂರಕ ವರದಿಯನ್ನು ಅಥವಾ ಹಿಂದಿನ ವರದಿಗೆ ತಿದ್ದುಪಡಿಯನ್ನು ಸಹ ಕಳುಹಿಸಿಕೊಡಲಾಗಿದೆ. ಈ ಪೂರಕ ವರದಿಯು, ಹಿಂದಿನ ವರದಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದೆ. ಹಾಗಾಗಿ, ಪೂರಕ ವರದಿಯು ತಿದ್ದುಪಡಿ ಮಾಡಿರುವಂತೆ, ವರದಿಯನ್ನು ಸದನದ ಮುಂದೆ ನಾನು ಮಂಡಿಸುತ್ತಿದ್ದೇನೆ. ಎರಡು ದಿನಗಳ ಹಿಂದೆ ಈ ಸದನದ ಸದಸ್ಯರಿಗೆ ಈ ವರದಿಯ ಬಗ್ಗೆ ಟಿಪ್ಪಣಿಯನ್ನು ಪರಿಚಲಿಸಲಾಗಿದ್ದು, ಅದರಲ್ಲಿ ನಾನು ಸಾಧ್ಯವಿದ್ದಷ್ಟುಮಟ್ಟಿಗೆ ಪೀಠಿಕೆಯಲ್ಲಿರುವಂತೆ ಮತ್ತು ಖಂಡ ೧ರ ಭಾಗಕ್ಕೆ ಸಂಬಂಧಿಸಿದಂತೆ, ಗಮನ ಸೆಳೆಯುವ ಪ್ರಯತ್ನ ಮಾಡಿದ್ದೇನೆ, ಅವು ಬಹುತೇಕ ಈ ಸದನದ ಉದ್ದೇಶ ನಿರ್ಣಯವನ್ನು ಒಳಗೊಂಡಿವೆ. ಆ ನಿರ್ಣಯವನ್ನು ಅಂಗೀಕರಿಸಿದ ನಂತರದ ರಾಜಕೀಯ ಬೆಳವಣಿಗೆಗಳ ಕಾರಣದಿಂದ ಸಣ್ಣಪುಟ್ಟ ವಿಷಯಗಳಿಗೆ ಸಂಬಂಧಪಟ್ಟಂತೆ ವ್ಯತ್ಯಾಸಗಳಿರಬಹುದು.

---

* ಅನುಬಂಧ ಎ

\# ಅನುಬಂಧ ಬಿ

---

ಕರಡು ಸಿದ್ಧಪಡಿಸುವುದಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸಲು ಉಪಸಮಿತಿಯನ್ನು ಕೋರಲಾಗಿತ್ತು. ನಾವು, ವಸ್ತುನಿಷ್ಠ ಉದ್ದೇಶಗಳ ನಿರ್ಣಯವನ್ನು ಖಂಡಿತವಾಗಿಯೂ ಬದಲಾವಣೆ ಮಾಡುತ್ತಿಲ್ಲ. ಇದನ್ನು ಪೀಠಿಕೆಯಲ್ಲಿ ಅಳವಡಿಸಿಕೊಳ್ಳಬೇಕೆಂದು ನಾನು ಹೇಳಬಯಸುತ್ತಿದ್ದೇನೆ. ವಸ್ತುನಿಷ್ಠ ನಿರ್ಣಯದ ಹಿನ್ನೆಲೆಯಾಗಿದ್ದು, ನಾವು ಅದರಲ್ಲಿ ಹೇಳಿರುವ ಎಲ್ಲ ತತ್ತ್ವಗಳನ್ನು ಸಮರ್ಥಿಸುತ್ತೇವೆ. ಅದನ್ನು ಪೀಠಿಕೆಯಲ್ಲಿ ಅಳವಡಿಸಿಕೊಳ್ಳುವಾಗ, ಕೆಲವೊಂದು ಸ್ಪಷ್ಟ ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಪ್ರಸ್ತುತ ಸಂದರ್ಭದಲ್ಲಿ, ಸದನಕ್ಕೆ ತಿಳಿದಿರುವಂತೆ, ನಾವು ಸಂವಿಧಾನದ ಕರಡನ್ನು ಸಿದ್ಧಪಡಿಸುತ್ತಿಲ್ಲ, ಆದರೆ ಅದರ ಕರಡನ್ನು ಯಾವ ತತ್ತ್ವಗಳ ಆಧಾರದ ಮೇಲೆ ಸಿದ್ಧಪಡಿಸಬೇಕೆಂಬುದನ್ನು ನಿರ್ದಿಷ್ಟಪಡಿಸುತ್ತಿದ್ದೇವೆ. ಆದ್ದರಿಂದ, ಪೀಠಿಕೆಯ ಕರಡು ಅವಶ್ಯಕವಲ್ಲ. ನಾವು ಸಿದ್ಧಾಂತಗಳನ್ನು ಇತ್ಯರ್ಥಪಡಿಸಿದ್ದೇವೆ. ಹಾಗಾಗಿ, ಈ ವಿಷಯವನ್ನು ಪರಿಗಣಿಸಬಾರದೆಂದು ನಾನು ಟಿಪ್ಪಣಿಯಲ್ಲಿ ಸೂಚಿಸಿದ್ದೇನೆ.

ಪೌರತ್ವದ ಬಗ್ಗೆ ವಿವರಿಸುವ ಭಾಗ ೨ನ್ನು ಕುರಿತು ಉಪಸಮಿತಿಯು ಇನ್ನೂ ಅಂತಿಮವಾಗಿ

ನಿರ್ಧರಿಸಿರುವುದಿಲ್ಲ ಮತ್ತು ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ಭಾಗ ೩ನ್ನು ಈ ಸದನವು ಈಗಾಗಲೇ ಪರ್ಯಾಲೋಚಿಸಿದ್ದು, ಅದನ್ನು ಅಂಗೀಕರಿಸಿದೆ. ಆದುದರಿಂದ, ಭಾಗ ೩ರಿಂದ ವರದಿಯ ಪರ್ಯಾಲೋಚನೆಯನ್ನು ನಾವು ಪ್ರಾರಂಭಿಸಬಹುದಾಗಿದೆ. ಅಧ್ಯಾಯ ೧, ಒಕ್ಕೂಟದ ಕಾರ್ಯಾಂಗ. ೧ರ ಮತ್ತು ೨ನೇ ಭಾಗಗಳಲ್ಲಿ ನೀವು ಪರ್ಯಾಲೋಚಿಸಬಹುದಾಗಿರುವ ಒಂದೆರಡು ವಿಷಯಗಳಿವೆ. ಈ ಒಂದು ಅಥವಾ ಎರಡು ಸರಳ ವಿಷಯಗಳನ್ನು ಕೈಗೆತ್ತಿಕೊಳ್ಳುವುದು ಅಗತ್ಯವೇನಲ್ಲ. ಭಾಗ ೪ರ ಪರಿಗಣನೆಯನ್ನು ಪ್ರಾರಂಭಿಸಿ, ಉಳಿದದ್ದನ್ನು ತರುವಾಯದ ಅವಧಿಯಲ್ಲಿ ಪರ್ಯಾಲೋಚಿಸುವುದು ಉತ್ತಮ.

ಈ ಸದನವು ಮೂಲಭೂತ ಹಕ್ಕುಗಳನ್ನು ಕುರಿತು ಪರ್ಯಾಲೋಚಿಸಿದೆ ಮತ್ತು ಅಂಗೀಕರಿಸಿದೆ ಎಂದು ನಾನು ಈಗ ತಾನೆ ಹೇಳಿರುವುದರ ಕಡೆಗೆ ನಿಮ್ಮ ಗಮನ ಸೆಳೆಯಬಹುದೇ. ನಾವು ಅಂಗೀಕರಿಸಿದ ಎಲ್ಲವೂ ಅಂತಿಮ ಪರ್ಯಾಲೋಚನೆಗಾಗಿ ಮತ್ತೊಮ್ಮೆ ಸದನದ ಮುಂದೆ ಖಂಡಿತವಾಗಿಯೂ ಬರುತ್ತವೆ. ಹಲವಾರು ಹೊಸ ಸದಸ್ಯರಿದ್ದಾರೆ ಮತ್ತು ಈ ಮೂಲಭೂತ ಹಕ್ಕುಗಳನ್ನು ಕುರಿತು ಪರ್ಯಾಲೋಚಿಸಿದಾಗ ಮತ್ತು ಅಂಗೀಕರಿಸಿದಾಗ ಅವರು ಉಪಸ್ಥಿತರಿರಲಿಲ್ಲವೆಂದು ಆ ಬಗ್ಗೆ ಅವರಲ್ಲಿ ಕೆಲವರು ನನ್ನ ಗಮನ ಸೆಳೆದಿದ್ದಾರೆ. ಇದು ಸಂಪೂರ್ಣ ಸತ್ಯ ಒಮ್ಮೆ ಹೇಳಿದುದನ್ನು ಮತ್ತೆ ಮತ್ತೆ ಹೊಸದಾಗಿ ಹೇಳಲು ಪ್ರಾರಂಭಿಸುವುದು ನಮಗೆ ಸ್ವಲ್ಪ ಕಷ್ಟಕರವಾಗುತ್ತದೆ ಮತ್ತು ಅದು ನನಗನಿಸಿದಂತೆ ಸೂಕ್ತವೂ ಅಲ್ಲ. ಆದರೆ, ವಿಷಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಈ ಎಲ್ಲ ವಿಷಯಗಳು ಅಂತಿಮವಾಗಿ ಸದನದ ಮುಂದೆ ಬರುತ್ತವೆ ಮತ್ತು ಆ ಸಮಯದಲ್ಲಿ ಯಾವುದೇ ವಿಷಯದ ಕಡೆಗೆ ಗಮನ ಸೆಳೆಯಲು ಮತ್ತು ಯಾವುದೇ ಭಾಗವನ್ನು ತಿದ್ದುಪಡಿ ಮಾಡಲು ಯಾರೇ ಸದಸ್ಯರಿಗಾದರೂ ಅವಕಾಶವಿದ್ದೇ ಇರುತ್ತದೆ. ಹಾಗಾಗಿ, ಮಾನ್ಯರೇ, ನಾವು ಈಗ ಭಾಗ ೪, ಅಧ್ಯಾಯ ೧ನ್ನು ಮುಂದುವರಿಸಬಹುದೆಂದು ನಾನು ಸೂಚಿಸುತ್ತೇನೆ, ನಿಮಗೆ ಮುದ್ರಿತ ಕಿರು ಹೊತ್ತಗೆ ದೊರೆತಿದ್ದರೆ, ಅದು ೫ನೇ ಪುಟದಲ್ಲಿದೆ. ಅದು "ಸಂಮಿಶ್ರ ಕಾರ್ಯಾಂಗ" ಅಧ್ಯಾಯದಿಂದ ಪ್ರಾರಂಭವಾಗುತ್ತದೆ.

ವರದಿಯು ಸಾಧ್ಯವಾದಷ್ಟೂ ದೀರ್ಘವಾಗಿದೆ. ವರದಿಯ ಕೊನೆಯಲ್ಲಿ, ನೀವು ನ್ಯಾಯಾಂಗಕ್ಕೆ ಸಂಬಂಧಿಸಿದ ವಿಷಯವನ್ನು ಮತ್ತು ಅನುಬಂಧವನ್ನು ನೋಡಬಹುದು. ಇದು ಸರ್ವೋಚ್ಚ ನ್ಯಾಯಾಲಯದ ತಾತ್ಕಾಲಿಕ ಸಮಿತಿಯ ವರದಿಯಾಗಿದೆ. ಇದು ನಿಮ್ಮ ಮಾಹಿತಿಗಾಗಿ ಮಾತ್ರವಾಗಿದ್ದು, ಈ ನಿರ್ಣಯಗಳನ್ನು ಬಹುತೇಕವಾಗಿ ವರದಿಯಲ್ಲಿ ಸೇರಿಸಲಾಗಿದೆ.

ಸಂವಿಧಾನ, ರಾಷ್ಟ್ರದ ಮೂಲಭೂತ ಕಾನೂನಾಗಿ ರೂಪುಗೊಳ್ಳಲಿದೆ. ಅದನ್ನು ಅದು ಗಹನವಾದ ಮತ್ತು ಪ್ರಮುಖವಾದ ವಿಷಯವಾಗಿದ್ದು, ಅದಕ್ಕೆ ಸಾಕಷ್ಟು ಸಮಯ ನೀಡದೆ ಮತ್ತು ಪರ್ಯಾಲೋಚಿಸದೆ ನಾವು ಹಾಗೆಯೇ ತರಾತುರಿಯಲ್ಲಿ ಮುಂದುವರಿಯಲು ಸಾಧ್ಯವಿಲ್ಲ. ಒಕ್ಕೂಟ ಸಂವಿಧಾನ ಸಮಿತಿಗೆ ಸಂಬಂಧಿಸಿರುವಷ್ಟರಮಟ್ಟಿಗೆ, ಸದನವು ಒಮ್ಮೆಯಲ್ಲ, ಹಲವಾರು ಸಲ ಅತ್ಯಂತ ಶ್ರದ್ಧಾಪೂರ್ವಕವಾಗಿ ವಿಷಯವನ್ನು ಪರಿಶೀಲನೆ ಮಾಡಿದೆ ಎಂಬುದನ್ನು ನಾನು ಈ ಸದನಕ್ಕೆ ತಿಳಿಸಬಯಸುತ್ತೇನೆ. ಪ್ರಾಂತೀಯ ಸಂವಿಧಾನ ಸಮಿತಿಯನ್ನು ನಾವು ಹಲವಾರು ಸಂದರ್ಭಗಳಲ್ಲಿ ಭೇಟಿ ಮಾಡಿದ್ದೇವೆ ಮತ್ತು ಇದು ನಮ್ಮ ಜಂಟಿ ಸಮಾಲೋಚನೆಯ ಪರಿಣಾಮವಾಗಿದೆಯಾದರೂ, ಬಹುತೇಕವಾಗಿ ಇದು ಸ್ವತಃ ಒಕ್ಕೂಟ ಸಂವಿಧಾನ ಸಮಿತಿಯ ಕಾರ್ಯನಿರ್ವಹಣೆಯ ಫಲವಾಗಿದೆ.

ಈಗ ತಾನೆ ನಾನು ತಿದ್ದುಪಡಿಗಳ ಪಟ್ಟಿಯನ್ನು ನೀಡಿದ್ದೇನೆ. ಈ ಪತ್ರವು ೨೨೮ ತಿದ್ದುಪಡಿಗಳನ್ನು ಒಳಗೊಂಡಿದೆ. ಈ ಸಂಖ್ಯೆ ೧,೦೦೦ ಅಂಕಿಯನ್ನು ತಲುಪಿದೆ ಎಂದು ತಿಳಿದುಬಂದಿದೆ; ಆದಾಗ್ಯೂ, ಇದುವರೆಗೆ ಅವುಗಳಲ್ಲಿ ಒಂದನ್ನೂ ನಾನು ನೋಡಿರುವುದಿಲ್ಲ. ಈಗ ಅವುಗಳಿಗೆ ಸಂಬಂಧಿಸಿದ ಹಾಗೆ ವ್ಯವಹರಿಸುವುದು ನನಗೆ ಕಷ್ಟಕರವಾಗುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ, ಸದನದ ಅಪೇಕ್ಷೆಗಳಿಗೆ ಬದ್ಧವಾಗಿದ್ದೇನೆ.

ಪ್ರಸ್ತುತ ನಾನು ಒಂದು ವಿಷಯದ ಬಗ್ಗೆ ಸಲಹೆ ನೀಡಬಹುದಾದರೆ, ಅದು, ನಾವು ಭಾಗ–೪ ಸಂಮಿಶ್ರ ಕಾರ್ಯಾಂಗ ಕುರಿತ ವಿಷಯವನ್ನು ಪ್ರಾರಂಭಿಸಬೇಕೆಂಬುದಾಗಿದೆ. ಮೊದಲಲ್ಲೇ ಬರುವ ವಿಷಯ ಎಂದರೆ, ಒಕ್ಕೂಟದ ಮುಖ್ಯಸ್ಥನನ್ನು ಹೇಗೆ ಆಯ್ಕೆ ಮಾಡಬೇಕೆಂಬುದಾಗಿದೆ. ಅದನ್ನು ಕುರಿತು ಹಲವಾರು ಅಭಿಪ್ರಾಯಗಳಿವೆ ಎಂಬುದು ನನಗೆ ತಿಳಿದಿದೆ. ಬಹುಶಃ ಒಂದು ನಿರ್ದಿಷ್ಟ ವಿಷಯವನ್ನು ನಾವು ಕೈಗೆತ್ತಿಕೊಳ್ಳಬಹುದಾಗಿದೆ. ಇದು ಸರಳವಾದ ವಿಷಯ. ಅಭಿಪ್ರಾಯಗಳು ಏನೇ ಆಗಿರಲಿ, ಆದರೆ ಇದೊಂದು ಸರಳ ವಿಷಯ; ಇದು ಕೇವಲ ಮೊಟ್ಟಮೊದಲ ವಿಷಯವೆಂಬ ಕಾರಣಕ್ಕೆ ಮಾತ್ರ ಇದಕ್ಕೆ ಸಂಬಂಧಿಸಿದಂತೆ ಅನೇಕ ತಿದ್ದುಪಡಿಗಳು ಇರುವುದು ತಿಳಿಯದಿದ್ದರೂ ಸುಲಭವಾಗಿ ಕೈಗೆತ್ತಿಕೊಂಡು ಪರ್ಯಾಲೋಚಿಸಬಹುದಾಗಿದೆ. ನಾನು ಇದನ್ನು ಪ್ರಸ್ತಾಪಿಸಲು ಅನುಮತಿ ಕೋರುತ್ತೇನೆ.

ಮಾನ್ಯರೆ, ಈಗ ಭಾಗ–೪ರ ಬಾಬು ೧ನ್ನು ನಾನು ಕೈಗೆತ್ತಿಕೊಳ್ಳಬಹುದೇ?

**ಸನ್ಮಾನ್ಯ ಅಧ್ಯಕ್ಷರು** : ವರದಿಯನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ನಾನು ಮೊದಲು ನಿರ್ಣಯವನ್ನು ಮಂಡಿಸುತ್ತೇನೆ.

**ಮೌಲಾನಾ ಹಸ್ರತ್ ಮೋಹಾನಿ** : ವರದಿಯನ್ನು ನೀವು ಪರ್ಯಾಲೋಚನೆಗೆ ಕೈಗೆತ್ತಿಕೊಳ್ಳುವ ಮೊದಲು, ನಾನು ಕೆಲವೊಂದು ಅಂಶಗಳನ್ನು ಸ್ಪಷ್ಟಪಡಿಸಬಯಸುತ್ತೇನೆ. ಪಂಡಿತ್ ನೆಹರು ಅವರು ಪೂರಕ ವರದಿಯೆಂದು ನಿರೂಪಿಸುತ್ತಿರುವ ಈ ಪತ್ರದಲ್ಲಿ, ಅವರು ಕೆಲವು ಸಲಹೆಗಳನ್ನು ನೀಡಿದ್ದಾರೆ. ಇದು ಕೇವಲ ಅವರ ಸಲಹೆಯಷ್ಟೆ ಅವುಗಳನ್ನು ನಾನಾಗಲಿ ಅಥವಾ ಇನ್ನಾರಾದರಾಗಲಿ ಒಪ್ಪುವುದು ಅವಶ್ಯವೇ? ನನ್ನ ಮಟ್ಟಿಗೆ ನಾನು ಈ ಸಲಹೆಗಳನ್ನು ಒಪ್ಪುವುದಿಲ್ಲ.

ಅಲ್ಲದೆ, ಇದಕ್ಕಾಗಿ ಅತ್ಯಂತ ಪ್ರಬಲ ಕಾರಣಗಳು ನನ್ನಲ್ಲಿ ಇವೆ. ಪಂಡಿತ್ ನೆಹರು ಅವರು, ಈ ಹಿಂದೆ ಹೇಳಿದಂತೆ ನಾವು ಈಗಲೆ ಉದ್ದೇಶಗಳ ನಿರ್ಣಯವನ್ನು ಅಂಗೀಕರಿಸಿದ್ದೇವೆ ಮತ್ತು ಈಗ ಅಥವಾ ತರುವಾಯದಲ್ಲಿ ಎಲ್ಲ ನಿರ್ಣಯಗಳ ಕರಡನ್ನು ಸಿದ್ಧಪಡಿಸುವಾಗ ನಾವು, ನಮ್ಮ ಮುಂದೆ ಆ ನಿರ್ಣಯವನ್ನು ಇರಿಸಿಕೊಳ್ಳಬೇಕಾಗಿದೆ ಎಂದು ಹೇಳಬಹುದು.

**ಸನ್ಮಾನ್ಯ ಅಧ್ಯಕ್ಷರು** : ಮೌಲಾನಾ ಸಾಹಿಬ್ ಅವರೇ, ಪ್ರಸ್ತುತ ಸಂದರ್ಭದಲ್ಲಿ ಈ ಸದನದ ಮುಂದೆ ನಾನು ಮಂಡಿಸುತ್ತಿರುವ ಸರಳ ಪ್ರಸ್ತಾವನೆ, ಎಂದರೆ, ಸಮಿತಿಯ ವರದಿಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂಬುದಾಗಿದೆ. ಅದು ಅಂಗೀಕೃತವಾದರೆ, ನಾವು ಪ್ರತಿಯೊಂದು ಖಂಡವನ್ನು ಬಿಡಿಬಿಡಿಯಾಗಿ ಚರ್ಚೆಗೆ ತೆಗೆದುಕೊಳ್ಳಬಹುದಾಗಿದೆ.

**ಹಾಜಿ ಅಬ್ದುಲ್ ಸತ್ತಾರ್ ಹಾಜಿ ಇಷಾಕ್ ಸೇಠ್** (ಮದ್ರಾಸ್ : ಮುಸ್ಲಿಮ್) : ಮಾನ್ಯರೆ, ಈ ವರದಿಯನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಎಂಬುದರ ಬಗ್ಗೆ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದಾಗಿದೆ. ಆ ನಿರ್ಣಯದ ಬಗ್ಗೆ ಮಾತನಾಡುವ ಹಕ್ಕು ನಮಗಿದೆ. ಮೌಲಾನಾ ಸಾಹಿಬ್ ಅವರು ಆ ನಿರ್ಣಯದ ಮೇಲೆ ಮಾತನಾಡುತ್ತಿದ್ದಾರೆ.

**ಸನ್ಮಾನ್ಯ ಅಧ್ಯಕ್ಷರು** : ವರದಿಯನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬಾರದೆಂಬುದು ನಿಮ್ಮ ಸಲಹೆಯಾಗಿದೆಯೇ?

**ಮೌಲಾನಾ ಹಸ್ರತ್ ಮೋಹಾನಿ** : ಹೌದು. ನಾನು ಈ ಬಗ್ಗೆ ಹೇಳಬಯಸುವುದೇನೆಂದರೆ, ಪಂಡಿತ್ ನೆಹರು ಅವರು, ಸದನವು ಈಗಾಗಲೆ ಅಂಗೀಕರಿಸಿದ ಉದ್ದೇಶಗಳ ನಿರ್ಣಯ ತಮ್ಮ ಬಳಿ ಇದೆ ಎಂದು ಹೇಳುತ್ತಿದ್ದಾರೆ.

**ಮೌಲಾನಾ ಹಸ್ರತ್ ಮೋಹಾನಿ** : ಹೌದು. ನಾನು ಇದನ್ನೇ ಹೇಳುತ್ತಿದ್ದೇನೆ, ಆ ಉದ್ದೇಶಗಳ ನಿರ್ಣಯದಲ್ಲಿ ಪಂಡಿತ್ ನೆಹರು ಅವರು ಇಷ್ಟನ್ನೇ ಹೇಳಿದ್ದಾರೆ. ಎಂದರೆ, ನಮ್ಮದು ಒಂದು ಗಣರಾಜ್ಯ ವ್ಯವಸ್ಥೆಯಾಗಿರುತ್ತದೆ.

ಆದರೆ ಆ ಗಣರಾಜ್ಯವು ಏಕೀಕೃತ ಗಣರಾಜ್ಯವೇ ಅಥವಾ ಸಂಮಿಶ್ರ ಗಣರಾಜ್ಯವೇ ಎಂಬುದನ್ನು ಅದು ಹೇಳುತ್ತಿಲ್ಲ. ಅದು ಸಂಮಿಶ್ರ ಗಣರಾಜ್ಯವೇ ಆಗಿದ್ದರೂ, ಅದು ವಿಕೇಂದ್ರೀಕೃತ ಅಥವಾ ಕೇಂದ್ರೀಕೃತ ಗುಣಲಕ್ಷಣ ಹೊಂದಿರಬೇಕೆ ಎಂಬುದರ ಬಗ್ಗೆ ಅದರಲ್ಲಿ ಸ್ಪಷ್ಟಪಡಿಸಿಲ್ಲ ಮತ್ತು ಈ ಎಲ್ಲ ವಿಷಯಗಳನ್ನು ಕುರಿತು ನಾವು ನಿರ್ಧರಿಸಿದ ಹೊರತು ಮತ್ತು ನಿರ್ಧರಿಸುವವರೆಗೆ, ಪ್ರಾಂತೀಯ ಸಂವಿಧಾನದ ಮಾದರಿಯನ್ನು ಕುರಿತು ನಿರ್ಧರಿಸುವುದು ನಿರರ್ಥಕವಾಗುತ್ತದೆ. ಈ ಕಾರಣಕ್ಕಾಗಿಯೇ ನಾನು ಈ ಹಿಂದೆ ನನ್ನ ಭಾಷಣದಲ್ಲಿ, ಒಂದು ಸಲಹೆ ನೀಡಿದೆ; ನಿಮ್ಮ ಪ್ರಾಂತದ ಸಂವಿಧಾನದಲ್ಲಿ ಒಂದು ವಿಷಯವನ್ನು ನೀವು ಅಂಗೀಕರಿಸಬಯಸುತ್ತೀರಿ; ನೀವು ಪ್ರಾಂತದ ಸಂವಿಧಾನವನ್ನು ಅಂಗೀಕರಿಸುವಾಗ ಮತ್ತು ಸಂವಿಧಾನ ರಚನಾ ಸಭೆಯಲ್ಲಿ ಸಭೆಯ ಮುಂದೆ, ಪ್ರಸ್ತಾವಿತ ಪರಿಷ್ಕೃತ ಒಕ್ಕೂಟ ಸಂವಿಧಾನ ವರದಿಯು, ಬಹುಶಃ ಅಕ್ಟೋಬರ್‌ನಲ್ಲಿ ಪರ್ಯಾಲೋಚನೆಗೆ ಬರುವ ಸಂದರ್ಭದಲ್ಲಿ, ಅದು ಭಾರತ ಸಮಾಜವಾದಿ ಗಣರಾಜ್ಯಗಳ ಒಕ್ಕೂಟವಾಗಿರಬೇಕೆಂಬ ತಿದ್ದುಪಡಿಯನ್ನು ತರಬೇಕೆಂದು ನಾನು ಪ್ರಸ್ತಾಪಿಸಿದಾಗ, "ಅದು ಇತ್ಯರ್ಥಗೊಂಡ ಅಂಶವೆಂದು, ಹಾಗೂ ಅದನ್ನು ಅಳವಡಿಸುವುದಕ್ಕೆ ನೀವು ಅಡ್ಡಿಯುಂಟು ಮಾಡುವಿರಿ" ಎಂದು ನೀವು ಹೇಳಬಹುದೆಂದು, ಈಗಾಗಲೆ ನಾನು ಸೂಚಿಸಿದ್ದೇನೆ. ನಾವು ಪ್ರಾಂತೀಯ ಸಂವಿಧಾನವನ್ನು ಅಂಗೀಕರಿಸಿದ್ದೇವೆ; ಈಗ ಮತ್ತೆ ಆ ವಿಷಯಕ್ಕೆ ಅವಕಾಶವಿಲ್ಲ, ಹಸ್ರತ್ ಮೋಹಾನಿಯವರು ಅದಕ್ಕೆ ಏನನ್ನಾದರೂ ಸೇರಿಸಲು ಅಥವಾ ಅದರ ವಿರುದ್ಧ ಮಾತನಾಡಲು ಅವಕಾಶ ಕೊಡಿ.

ಮಾನ್ಯರೆ, ನನ್ನ ಮಿತ್ರರಾದ ಶ್ರೀ ತಾಜಮುಲ್ ಹುಸೇನ್ ಅವರು ಪ್ರಸ್ತಾವಿಸಿದ ತಿದ್ದುಪಡಿಗೆ ಸಂಬಂಧಿಸಿದಂತೆ, ಹಿಂದೆ ನೀವು ಹೇಳಿದ್ದಿರಿ; ಹಾಗೆಯೇ ಒಕ್ಕೂಟ ರಚನೆಗೆ ಸಂಬಂಧಿಸಿದ ನನ್ನ ತಿದ್ದುಪಡಿಗಳೂ ಕ್ರಮದಲ್ಲಿಲ್ಲವೆಂದು ತುಂಬ ಸುಲಭವಾಗಿ ನೀವು ಘೋಷಿಸಿಬಿಡುತ್ತೀರೆಂಬ ಆತಂಕವಾಗುತ್ತಿದೆ. "ಪ್ರಾಂತೀಯ ಸಂವಿಧಾನವನ್ನು ಒಪ್ಪಿಕೊಂಡು ಅಂಗೀಕರಿಸಲಾಗಿದೆ, ಈಗ, ನಿಮ್ಮ ತಿದ್ದುಪಡಿಗಳು ಕ್ರಮದಲ್ಲಿಲ್ಲವೆಂದು ಹೇಳುವಿರಿ. ಈ ಹಂತದಲ್ಲೇ, ಈ ವಿಷಯವನ್ನು ಮುಂದೂಡಿದರೆ ನನಗೆ ಯಾವುದೇ ಆಕ್ಷೇಪಣೆಯಿಲ್ಲ. ಆಗ, ನೀವು ಖಂಡ ಖಂಡವಾಗಿ ಚರ್ಚೆಯನ್ನು ಮುಂದುವರಿಸುವ ಸಂದರ್ಭದಲ್ಲಿ, ನಾನು ತಿದ್ದುಪಡಿಗಳನ್ನು ಪ್ರಸ್ತಾಪಿಸುವ ಎಲ್ಲಾ ಹಕ್ಕು ನನಗಿರುತ್ತದೆ ಅಥವಾ ಉದ್ದೇಶಗಳ ನಿರ್ಣಯವನ್ನು ನಾನು ವಿರೋಧಿಸುತ್ತೇನೆ ಎಂದು ಸಹ ಹೇಳುವ ಸಂಪೂರ್ಣ ಹಕ್ಕು ನನಗೆ ಇರುತ್ತದೆ. ನನ್ನ ಬಳಿ ಎರಡು ಕಾರಣಗಳಿವೆ. ಇದು ಏನನ್ನೂ ನಿರ್ಧರಿಸುವುದಿಲ್ಲವೆಂದು ಒಂದು ಕಾರಣವನ್ನು ನಾನು ಸ್ಪಷ್ಟಪಡಿಸಿದ್ದೇನೆ.

**ಮಾನ್ಯ ಶಂಕರ್ ದತ್ತಾತ್ರಯ ದೇವ್** (ಬಾಂಬೆ : ಸಾಮಾನ್ಯ): ನಮಗೆ ಒಂದು ಪದವೂ ಒಂದು ವಿಚಾರವೂ ಗೊತ್ತಾಗುತ್ತಿಲ್ಲ.

**ಸನ್ಮಾನ್ಯ ಅಧ್ಯಕ್ಷರು :** (ಮೌಲಾನಾ ಹಸ್ರತ್ ಮೋಹಾನಿಯವರನ್ನು ಕುರಿತು) ದಯವಿಟ್ಟು ಮೈಕ್ ಬಳಿ ಬನ್ನಿ.

**ಮಾನ್ಯ ಜೈನಾಪಯಣ್ ವ್ಯಾಸ್** (ಜೋಧ್‌ಪುರ್ ರಾಜ್ಯ) : ಮಾನ್ಯರೆ, ಇದೊಂದು ಕ್ರಿಯಾಲೋಪ ಕುರಿತಂತೆ, ಮಾನ್ಯ ಸದಸ್ಯರು ಆಗಲೆ ವರದಿಯ ಪರ್ಯಾಲೋಚನೆಯನ್ನು ಪ್ರಾರಂಭಿಸಿದ್ದಾರೆ. ಸದನದ ಮುಂದಿರುವ ಪ್ರಶ್ನೆ ಎಂದರೆ, ವರದಿಯನ್ನು ಪರ್ಯಾಲೋಚಿಸಬೇಕೇ ಅಥವಾ ಬೇಡವೇ ಎಂಬುದಾಗಿದೆ. ಆ ಪ್ರಶ್ನೆಯನ್ನು ಕುರಿತು ಮೊದಲು ಪರ್ಯಾಲೋಚಿಸಬೇಕಿದೆ.

**ಮೌಲಾನಾ ಹಸ್ರತ್ ಮೋಹಾನಿ :** ವರದಿಯನ್ನು ಕುರಿತು ಪರ್ಯಾಲೋಚಿಸುವುದಕ್ಕೆ ಮೊದಲು, ಅವರು ಕೆಲವೊಂದು ಅಂಶಗಳನ್ನು ಸ್ಪಷ್ಟಪಡಿಸಬೇಕು. ಈ ವರದಿಯನ್ನು ನಾನು ಅಂಗೀಕರಿಸಿದರೆ, ನನಗೆ ಅದರಿಂದ ಎಷ್ಟೂ ಅನುಕೂಲವಾಗುವುದಿಲ್ಲ.

**ಸನ್ಮಾನ್ಯ ಅಧ್ಯಕ್ಷರು :** ನನಗೆ ಅರ್ಥವಾಗುತ್ತಿದೆ, ಮೌಲಾನಾ ಅವರು ಹೇಳುತ್ತಿರುವುದೇನೆಂದರೆ, ಈ

ಹಂತದಲ್ಲಿ ಅವರ ತಿದ್ದುಪಡಿಯನ್ನು, ಕ್ರಮರಾಹಿತ್ಯವೆಂದು ತೆಗೆದುಹಾಕಬಾರದೆಂಬ ಭರವಸೆಯನ್ನು ನಾನು ಅವರಿಗೆ ನೀಡಬೇಕೆಂಬುದಾಗಿದೆ. ನಿಸ್ಸಂಶಯವಾಗಿಯೂ, ವಿಷಯವು ವಾಸ್ತವವಾಗಿ ಚರ್ಚೆಗೆ ಬರುವುದಕ್ಕೆ ಮೊದಲು, ನಾನು ಯಾರೇ ಸದಸ್ಯರಿಗೆ ಯಾವುದೇ ಭರವಸೆಯನ್ನು ನೀಡಲು ಸಾಧ್ಯವಿಲ್ಲ. ಆದರೆ, ನಿಮಗೆಲ್ಲ ತಿಳಿದಿರುವಂತೆ, ಆ ತಿದ್ದುಪಡಿಗಳು ಸಮಯ ಮೀರಿ ಬಂದಿದ್ದಾಗ್ಯೂ, ತಿದ್ದುಪಡಿಗಳನ್ನು ಪ್ರಸ್ತಾವಿಸಲು ಅವಕಾಶ ನೀಡುವ ವಿಷಯದಲ್ಲಿ ನಾನು ಬಹಳ ಉದಾರವಾಗಿದ್ದೇನೆ. ತಾಂತ್ರಿಕ ಕಾರಣಗಳಿದ್ದ ಹೊರತು, ಅವರ ತಿದ್ದುಪಡಿಯನ್ನು ಕ್ರಮರಾಹಿತ್ಯವೆಂದು ನಿರ್ಣಯಿಸಬೇಕೆಂಬುದಕ್ಕೆ ಯಾವುದೇ ಕಾರಣಗಳು ನನಗೆ ಕಂಡುಬರುತ್ತಿಲ್ಲ. ಅಷ್ಟೇ ಅಲ್ಲದೆ, ಈ ಹಂತದಲ್ಲಿ ನಾನು ಯಾವುದನ್ನೂ ಹೇಳಲು ಸಾಧ್ಯವಿಲ್ಲ. ಮೌಲಾನಾ ಅವರು ಬಯಸಿದಂಥ ಭರವಸೆಯನ್ನು ನಾನು ನೀಡುತ್ತೇನೆ. ಈ ವರದಿಯ ಪರ್ಯಾಲೋಚನೆಯೊಂದಿಗೆ ನಾವು ಮುಂದುವರಿಯಬೇಕೆಂದು ಸದನವು ಇಚ್ಛಿಸಿದಲ್ಲಿ ನಾನು ಅದನ್ನು ಕೈಗೆತ್ತಿಕೊಳ್ಳುತ್ತೇನೆ.

**ಹಲವಾರು ಗೌರವಾನ್ವಿತ ಸದಸ್ಯರು :** ಹೌದು, ಹೌದು.

ಪರ್ಯಾಲೋಚನೆಗೆ ವರದಿಯನ್ನು ತೆಗೆದುಕೊಳ್ಳುವ ನಿರ್ಣಯವನ್ನು ಅಂಗೀಕರಿಸಲಾಯಿತು.

**ಬಿ. ಪಾಕರ್ ಸಾಹಿಬ್ ಬಹಾದ್ದೂರ್ :** ನೀವು ಮಂಡಿಸಿದ ಪ್ರಸ್ತಾವದ ಬಗ್ಗೆ ಒಂದು ಮಾತನ್ನು ನಾನು ಹೇಳಬಯಸುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು:** ನಾನು ಇದನ್ನು ಮತಕ್ಕೆ ಹಾಕಿದೆ; ಮತ್ತು ಅದು ಅಂಗೀಕೃತವಾಗಿದೆ.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು :** ಮಾನ್ಯರೆ, ನಾವು ಭಾಗ–೪, ಅಧ್ಯಾಯ–೧ನ್ನು ಪ್ರಾರಂಭಿಸಬೇಕೆಂದು ನಾನು ಸೂಚಿಸುತ್ತೇನೆ.

"ಖಂಡ ೧(೧) – ಈ ಕೆಳಗೆ ಉಪಬಂಧಿಸಿರುವಂತೆ, ಆಯ್ಕೆಯಾಗಲಿರುವ ರಾಷ್ಟ್ರಪತಿಯವರು ಒಕ್ಕೂಟದ (ಫೆಡರೇಷನ್) ಮುಖ್ಯಸ್ಥರಾಗಿರುತ್ತಾರೆ:

(೨) ಚುನಾವಣೆಯನ್ನು,–

(ಎ) ಒಕ್ಕೂಟ (ಫೆಡರೇಷನ್) ಸಂಸತ್ತಿನ ಎರಡೂ ಸದನಗಳ ಸದಸ್ಯರನ್ನು; ಮತ್ತು

(ಬಿ) ಎಲ್ಲಾ ಘಟಕಗಳ ವಿಧಾನಮಂಡಲಗಳ ಸದಸ್ಯರನ್ನು ಅಥವಾ ಎರಡು ಸದನಗಳ ವಿಧಾನಮಂಡಲವಿರುವಲ್ಲಿ ಅದರ ಕೆಳಮನೆಯ ಸದಸ್ಯರನ್ನು,

– ಒಳಗೊಂಡ ಚುನಾಯಕ ಗಣದಿಂದ ನಡೆಸತಕ್ಕದ್ದು.

ಘಟಕಗಳ ಪ್ರಾತಿನಿಧ್ಯದ ಪ್ರಮಾಣದಲ್ಲಿ ಏಕರೂಪತೆಯನ್ನು ಕಾಪಾಡಿಕೊಳ್ಳುವ ಸಲುವಾಗಿ, ಘಟಕಗಳ ವಿಧಾನಮಂಡಲಗಳ ಮತಗಳನ್ನು ಸಂಬಂಧಪಟ್ಟ ಘಟಕಗಳ ಜನಸಂಖ್ಯೆಯ ಅನುಪಾತಕ್ಕನುಸಾರವಾಗಿ ಸರಿದೂಗಿಸತಕ್ಕದ್ದು.

**ವಿವರಣೆ –** "ಘಟಕ" ಎಂದರೆ, ಸಂಮಿಶ್ರ ಸಂಸತ್ತಿಗೆ ತನ್ನದೇ ಆದ ಸೂಕ್ತ ಸದಸ್ಯರನ್ನು ಆಯ್ಕೆ ಮಾಡುವ ಒಂದು ಪ್ರಾಂತ ಅಥವಾ ಭಾರತದ ರಾಜ್ಯ. ರಾಜ್ಯಗಳ ಪರಿಷತ್ತುಗಳಿಗೆ ಪ್ರತಿನಿಧಿಗಳನ್ನು ಚುನಾಯಿಸುವ ಉದ್ದೇಶಕ್ಕಾಗಿ ಒಟ್ಟಾಗಿ ಗುಂಪುಗೂಡಿರುವ ಭಾರತದ ರಾಜ್ಯಗಳು "ಘಟಕ" ಎಂದರೆ, ಅಂತಹ ಗುಂಪು. ಘಟಕದ ವಿಧಾನಮಂಡಲ ಎಂದರೆ, ಅಂತಹ ಎಲ್ಲ ರಾಜ್ಯಗಳನ್ನು ಒಳಗೊಂಡ ವಿಧಾನ ಮಂಡಲಗಳು.

(೩) ರಾಷ್ಟ್ರಪತಿಯವರ ಚುನಾವಣೆಯು ಗುಪ್ತ ಮತದಾನದ ಮೂಲಕ ಮತ್ತು ಏಕ ವರ್ಗಾವಣೀಯ ಮತದ ಮೂಲಕ, ದಾಮಾಷಾ ಪ್ರಮಾಣಾನುಸಾರ ಪ್ರಾತಿನಿಧ್ಯದ ವ್ಯವಸ್ಥೆಯ ಆಧಾರದ ಮೇಲೆ ನಡೆಯತಕ್ಕದ್ದು.

(೪) ಮೇಲಿನ ಉಪಬಂಧಗಳಿಗೆ ಒಳಪಟ್ಟು, ರಾಷ್ಟ್ರಪತಿಯವರ ಪದಕ್ಕೆ ಚುನಾವಣೆಗಳನ್ನು ಒಕ್ಕೂಟ (ಫೆಡರೇಷನ್) ಸಂವಿಧಾನ ಅಧಿನಿಯಮದ ಮೂಲಕ ನಿಯಂತ್ರಿಸತಕ್ಕದ್ದು.

ಮಾನ್ಯರೆ ಈಗ, ಪ್ರಾರಂಭದಲ್ಲೆ ನಾವು ನಿರ್ಧರಿಸಬೇಕಾದ ಒಂದು ವಿಷಯವೆಂದರೆ, ಸರ್ಕಾರದ

ಸ್ವರೂಪವು ಯಾವ ರೀತಿಯದ್ದಾಗಿರಬೇಕು, ಸಚಿವರ ಹೊಣೆಗಾರಿಕೆ ಇರುವ ಒಂದೇ ವ್ಯವಸ್ಥೆಯಾಗಿರಬೇಕೆ ಅಥವಾ ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಚಾಲ್ತಿಯಲ್ಲಿರುವಂತೆ ಅಧ್ಯಕ್ಷೀಯ ವ್ಯವಸ್ಥೆಯಾಗಿರಬೇಕೇ ಎಂಬುದಾಗಿದೆ; ಬಹುಶಃ ಮೊದಲ ಹಂತದಲ್ಲೇ ಹಲವಾರು ಸದಸ್ಯರು ಈ ಪರೋಕ್ಷ ಚುನಾವಣೆಗೆ ಆಕ್ಷೇಪಿಸಬಹುದು ಮತ್ತು ವಯಸ್ಕ ಮತಾಧಿಕಾರಕ್ಕೆ ಪ್ರಾಶಸ್ತ್ಯ ನೀಡಬಹುದು. ಈ ವಿಷಯಕ್ಕೆ ನಾವು ಕುತೂಹಲಕಾರಿ ತಿರುವನ್ನು ನೀಡಿದ್ದೇವೆ ಮತ್ತು ಇದು ಅಪೇಕ್ಷಣೀಯವಲ್ಲವೆಂಬ ಒಂದು ಅತ್ಯಂತ ಖಚಿತ ನಿರ್ಣಯಕ್ಕೆ ನಾವು ಬಂದಿದ್ದೇವೆ; ಏಕೆಂದರೆ, ಮೊದಲನೆಯದಾಗಿ ಮಂತ್ರಿಮಂಡಲದಲ್ಲಿ ಮತ್ತು ವಿಧಾನಮಂಡಲದಲ್ಲಿ ವಾಸ್ತವವಾಗಿಯೂ ಅಧಿಕಾರವು ಉಳಿಯುವಂಥ, ಮಂತ್ರಿಮಂಡಲದ ಗುಣಲಕ್ಷಣವುಳ್ಳ ಸರ್ಕಾರಕ್ಕೆ ನಾವು ಒತ್ತು ನೀಡಬಯಸುತ್ತೇವೆಯೇ ಹೊರತು, ಆ ರೀತಿಯಲ್ಲಿ ಅಧ್ಯಕ್ಷೀಯ ವ್ಯವಸ್ಥೆಯಲ್ಲಿ ಅಲ್ಲ. ಅದೇ ಸಮಯದಲ್ಲಿ ನಾವು ನಮ್ಮ ರಾಷ್ಟ್ರಪತಿಯನ್ನು ಫ್ರೆಂಚ್ ರಾಷ್ಟ್ರಪತಿಯ ಹಾಗೆ ಕೇವಲ ನಾಮಮಾತ್ರ ರಾಷ್ಟ್ರಪತಿಯನ್ನಾಗಿಸಲೂ ಬಯಸುವುದಿಲ್ಲ. ನಾವು ಅವರಿಗೆ ಯಾವುದೇ ನಿಜವಾದ ಅಧಿಕಾರವನ್ನು ನೀಡುವುದಿಲ್ಲ, ಆದರೆ ನಾವು ಅವರ ಸ್ಥಾನಕ್ಕೆ ಅತಿ ದೊಡ್ಡ ಪ್ರಾಧಿಕಾರದ ಸ್ಥಾನಮಾನವನ್ನು ಮತ್ತು ಘನತೆಯನ್ನು ನೀಡಿದ್ದೇವೆ. ಈ ಕರಡು ಸಂವಿಧಾನದಲ್ಲಿ ನೀವು ಗಮನಿಸಿರುವಂತೆ, ಅವರು ಅಮೇರಿಕಾ ಅಧ್ಯಕ್ಷರಂತೆ ರಕ್ಷಣಾ ದಳಗಳ ಮಹಾದಂಡನಾಯಕ (ಕಮಾಂಡರ್–ಇನ್–ಚೀಫ್) ಸಹ ಆಗಿರುತ್ತಾರೆ. ಆದ್ದರಿಂದ, ಈಗ, ವಯಸ್ಕ ಮತದಾನದ ಮೂಲಕ ನಾವು ಚುನಾವಣೆಯನ್ನು ನಡೆಸಿದರೆ ಮತ್ತು ಯಾವುದೇ ನಿಜವಾದ ಅಧಿಕಾರಗಳನ್ನು ಅವರಿಗೆ ಇನ್ನೂ ನೀಡದಿದ್ದರೆ, ಅದು ಬಹುಶಃ ಸ್ವಲ್ಪಮಟ್ಟಿಗೆ ವಿಲಕ್ಷಣವೆನಿಸಬಹುದು ಮತ್ತು ಸ್ವಲ್ಪ ಸಮಯ ಹಾಗೂ ಶಕ್ತಿ ಮತ್ತು ಹಣ ಖರ್ಚಾಗಬಹುದು. ವೈಯಕ್ತಿಕವಾಗಿ, ಪ್ರಜಾಪ್ರಭುತ್ವ ಪ್ರಕ್ರಿಯೆಗಳಿಗೆ ನನ್ನ ಸಂಪೂರ್ಣ ಒಪ್ಪಿಗೆಯಿದೆ, ಆದರೆ ಇಲ್ಲಿ ಅತ್ಯಂತ ಹೆಚ್ಚಿನ ಪ್ರಜಾಪ್ರಭುತ್ವ ಪ್ರಕ್ರಿಯೆ ಕಂಡುಬರುತ್ತಿದೆ ಮತ್ತು ನಾವು ಹೀಗೆ ಸಮಯವನ್ನು ಕಳೆಯುತ್ತಿದ್ದರೆ, ನಾವು ಚುನಾವಣೆಗಳಿಗೆ ಸಿದ್ಧರಾಗುವುದನ್ನು ಮತ್ತು ಚುನಾವಣೆಗಳನ್ನು ಎದುರಿಸುವುದನ್ನು ಬಿಟ್ಟು ಏನನ್ನೂ ಮಾಡುವುದಕ್ಕೆ ಉಳಿಯುವುದಿಲ್ಲವೆಂದು ನನಗೆ ಬಹಳ ಆತಂಕವಾಗುತ್ತಿದೆ. ಸಂವಿಧಾನಕ್ಕಾಗಿ ನಾವು ಸಾಕಷ್ಟು ಚುನಾವಣೆಗಳನ್ನು ಈಗಾಗಲೇ ನಡೆಸಬೇಕಾಗಿದೆ. ಸಂಮಿಶ್ರ ವಿಧಾನಮಂಡಲಕ್ಕಾಗಿ, ವಯಸ್ಕ ಮತದಾನದ ಆಧಾರದ ಮೇಲೆ ನಾವು ಚುನಾವಣೆಗಳನ್ನು ನಡೆಸಬೇಕಿದೆ. ಈಗ, ನೀವು ಇಡೀ ಭಾರತದಲ್ಲಿ ಪ್ರತಿಯೊಂದು ವಯಸ್ಕ ಮತಗಳನ್ನು ರಾಷ್ಟ್ರಪತಿಯವರ ಭಾರಿ ಚುನಾವಣೆಗೆ ಸೇರಿಸಿದರೆ, ಅದೇ ಒಂದು ಬಹುದೊಡ್ಡ ಕೆಲಸವಾಗುತ್ತದೆ. ವಾಸ್ತವದಲ್ಲಿ ಆರ್ಥಿಕವಾಗಿ ಅದನ್ನು ನಡೆಸುವುದು ಕಷ್ಟಕರವಾಗುತ್ತದೆ, ಇಲ್ಲದೆ ಹೋದರೆ, ಅದು ವರ್ಷದ ಬಹು ದೊಡ್ಡ ಭಾಗದ ಬಹುತೇಕ ಕಾರ್ಯಚಟುವಟಿಕೆಗಳಿಗೆ ಅಡ್ಡಿಯುಂಟು ಮಾಡುತ್ತದೆ. ಅಮೇರಿಕಾ ಅಧ್ಯಕ್ಷೀಯ ಚುನಾವಣೆಯು, ವಾಸ್ತವವಾಗಿ ಹಲವಾರು ತಿಂಗಳುಗಳವರೆಗೆ ನಡೆದು ಹಲವಾರು ಕಾರ್ಯಚಟುವಟಿಕೆಗಳ ನಂತರ ಕೊನೆಗೊಳ್ಳುತ್ತದೆ. ಈಗ ನಾವು ಅಮೇರಿಕಾ ವ್ಯವಸ್ಥೆಯನ್ನಾಗಲಿ ಅಥವಾ ಯಾವುದೇ ಇತರ ವ್ಯವಸ್ಥೆಯನ್ನಾಗಲಿ ವಿಮರ್ಶಿಸುವುದು ಸೂಕ್ತವಲ್ಲ. ಪ್ರತಿಯೊಂದು ದೇಶವು ತನ್ನದೇ ಆದ ಆಯ್ಕೆಯ ವ್ಯವಸ್ಥೆಯನ್ನು ಕಂಡುಕೊಂಡಿರುತ್ತದೆ. ಅಮೇರಿಕಾದ ವ್ಯವಸ್ಥೆಯಲ್ಲಿ ಒಳ್ಳೆಯ ಅಂಶಗಳಿರುವಂತೆ ಆ ವ್ಯವಸ್ಥೆಯಲ್ಲಿ ಬಹಳಷ್ಟು ನ್ಯೂನ್ಯತೆಗಳೂ ಇವೆ ಎಂದು ನಾನು ಭಾವಿಸುತ್ತೇನೆ. ನಾನು ಅಮೇರಿಕ ಸಂಯುಕ್ತ ಸಂಸ್ಥಾನದ ಬಗ್ಗೆ ಯೋಚಿಸುತ್ತಿಲ್ಲ, ಪ್ರಸ್ತುತ ಭಾರತದ ಬಗ್ಗೆ ಯೋಚಿಸುತ್ತಿದ್ದೇನೆ, ಮತ್ತು ಅದನ್ನು ನಾವು ಇಲ್ಲಿ ಅಳವಡಿಸಿಕೊಂಡರೆ, ಯಾವುದೇ ಮಂತ್ರಿಮಂಡಲ ಸ್ವರೂಪದ ಸರ್ಕಾರದ ಬೆಳವಣಿಗೆಯನ್ನು ತಡೆಯಬೇಕಾಗುತ್ತದೆ ಮತ್ತು ನಾವು ದೊಡ್ಡ ಪ್ರಮಾಣದಲ್ಲಿ ಸಮಯ ಮತ್ತು ಶಕ್ತಿಯನ್ನು ವ್ಯಯ ಮಾಡಬೇಕಾಗುತ್ತದೆ ಎಂದು ನನ್ನ ಮನಸ್ಸಿಗೆ ತೋರುತ್ತಿದೆ. ಅಮೇರಿಕಾದ ಅಧ್ಯಕ್ಷೀಯ ಚುನಾವಣೆಯು, ಇಡೀ ದೇಶದ ಗಮನವನ್ನು ಅಧ್ಯಕ್ಷೀಯ ಚುನಾವಣೆಯ ಮೇಲೆ ಕೇಂದ್ರೀಕರಿಸಿ, ಆ ಚುನಾವಣೆಗಳನ್ನು ನಡೆಸಿದ ಮೇಲೆ, ದೇಶದ ಏಕತೆಯನ್ನು ರೂಪಿಸುವಲ್ಲಿ ಸಹಾಕಾರಿಯೆಂದು ಹೇಳಲಾಗುತ್ತಿದೆ.

ಒಬ್ಬ ವ್ಯಕ್ತಿ ದೇಶದ ಪ್ರತೀಕವಾಗುತ್ತಾನೆ. ಇಲ್ಲೂ ಸಹ ಅವನು ದೇಶದ ಪ್ರತೀಕವಾಗುತ್ತಾನೆ; ಆದರೆ ನಮ್ಮ ದೇಶದಲ್ಲಿ ರಾಷ್ಟ್ರಪತಿ ಸ್ಥಾನಕ್ಕೆ ಆ ರೀತಿಯ ಚುನಾವಣಾ ಪದ್ಧತಿಯನ್ನು ಅಳವಡಿಸುವುದು ನಮಗೆ ಒಳ್ಳೆಯದಲ್ಲ.

"ನಾವು ಸಲಹೆ ನೀಡಿರುವಂಥ ಚುನಾವಣಾ ವ್ಯವಸ್ಥೆಯನ್ನು, ಏಕೆ ಈ ರೀತಿಯಾಗಿ ಸಂಕೀರ್ಣಗೊಳಿಸಿಕೊಳ್ಳಬೇಕು? ಕೇಂದ್ರ ಶಾಸನ ಸಭೆಯೇ, ಏಕೆ ರಾಷ್ಟ್ರಪತಿಯನ್ನು ಆಯ್ಕೆ ಮಾಡಬಾರದು?" ಎಂದು ಕೆಲವರು ಸಲಹೆ ನೀಡಿದ್ದಾರೆ. ಸಹಜವಾಗಿಯೇ ಅದು ಬಹಳ ಸರಳ, ಆದರೆ, ಅದನ್ನು ಅತ್ಯಂತ ಸಂಕುಚಿತ ಆಧಾರದ ಮೇಲೆ ನಡೆಸುವಂಥ ಮತ್ತೊಂದು ವಿಚಾರವು ನಮ್ಮನ್ನು ಅಪಾಯಕ್ಕೆ ತಳ್ಳಬಹುದು. ಕೇಂದ್ರ ಶಾಸನ ಸಭೆಯು ಪ್ರಬಲವಾಗಬಹುದು ಮತ್ತು ಪ್ರಾಯಶಃ ಪ್ರಬಲಗೊಳ್ಳುತ್ತದೆ. ಒಂದು ಪಕ್ಷವು ಅಥವಾ ಒಂದು ಗುಂಪು ಮಂತ್ರಿಮಂಡಲವನ್ನು ರಚಿಸಬಹುದೆಂದು ಹೇಳಬಹುದು. ಆ ಗುಂಪು ರಾಷ್ಟ್ರಪತಿಯವರನ್ನು ಆಯ್ಕೆ ಮಾಡಿದರೆ, ಖಂಡಿತವಾಗಿಯೂ ಅವರು ತಮ್ಮದೇ ಪಕ್ಷದ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಆಗ ಅವರು ಹೆಸರಿಗಷ್ಟೇ ರಾಷ್ಟ್ರಪತಿಯಾಗಿರುತ್ತಾರೆ ಹೊರತು ಬೇರೇನೂ ಅಲ್ಲ. ಆಗ ರಾಷ್ಟ್ರಪತಿ ಮತ್ತು ಮಂತ್ರಿಮಂಡಲ ಒಂದೇ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗುತ್ತದೆ. ರಾಷ್ಟ್ರಪತಿ ಒಂದೇ ಗುಂಪನ್ನು ಅಥವಾ ಪಕ್ಷವನ್ನು ಅಥವಾ ವಿಚಾರಗಳನ್ನು ಪ್ರತಿನಿಧಿಸುವುದನ್ನು ಬಿಟ್ಟು ಬೇರೇನೂ ಮಾಡದಿರುವ ಸಾಧ್ಯತೆಯೂ ಸಹ ಇರಬಹುದು. ಆದರೆ, ನಾವು ಮಧ್ಯದ ದಾರಿಯನ್ನು ಆಯ್ಕೆ ಮಾಡಿಕೊಂಡಿದ್ದು, ಭಾರತಾದ್ಯಂತ ಇರುವ ಎಲ್ಲ ಘಟಕಗಳ ಎಲ್ಲ ವಿಧಾನಮಂಡಲಗಳ ಎಲ್ಲ ಸದಸ್ಯರನ್ನು ಮತದಾರರಾಗಲು ಕೋರುತ್ತಿದ್ದೇವೆ. ಅವರು ಒಂದೇ ಪಕ್ಷವನ್ನು, ಪಕ್ಷದ ಒಬ್ಬರೇ ವ್ಯಕ್ತಿಯನ್ನು ಆಯ್ಕೆ ಮಾಡಿದಂತೆಯೇ ಇರುತ್ತದೆ. ಅದು ಯಾವಾಗಲೂ ಸಾಧ್ಯವಿರುವ ಮಾರ್ಗವಾಗಿದೆ. ಹೇಗೆ ಆಗಲಿ, ಕೇಂದ್ರ ಶಾಸನಸಭೆಯು ರಾಷ್ಟ್ರಪತಿಯವರನ್ನು ಆಯ್ಕೆ ಮಾಡುವುದು ಅತ್ಯಂತ ಸಂಕುಚಿತ ಆಧಾರವಾಗುವುದರಿಂದ ಈ ವಿಧಾನವನ್ನು ನಾವು ತಳ್ಳಿಹಾಕಬಹುದಾಗಿದೆ.

ವಯಸ್ಕ ಮತದಾನದ ಆಧಾರದ ಮೇಲೆ ಚುನಾವಣೆ ಮಾಡಬೇಕಾದರೆ, ಚುನಾಯಕಗಣ ಇರಬೇಕಾಗುತ್ತದೆ; ಎಲ್ಲ ಬಗೆಯ ಜನರನ್ನು ಪೌರಸಭೆಗಳು, ಜಿಲ್ಲಾ ಮಂಡಳಿಗಳು ಇತ್ಯಾದಿಯ ಸದಸ್ಯರನ್ನು, ಒಳಗೊಂಡಿರುವ ಚುನಾಯಕಗಣ ಇರಬೇಕೆಂದು ಸಲಹೆ ನೀಡಲಾಗಿದೆ. ಅದು ಯಾರಿಗೂ ಒಳ್ಳೆಯದನ್ನು ಮಾಡದೆ ಗೊಂದಲವನ್ನು ಮೂಡಿಸುವುದೆಂದು ನನಗೆ ಅನಿಸುತ್ತದೆ; ಚುನಾಯಕಗಣವನ್ನು ಸಿದ್ಧಪಡಿಸುವುದಕ್ಕಾಗಿ ಅನೇಕ ಚಿಕ್ಕ ಚಿಕ್ಕ ಚುನಾವಣೆಗಳನ್ನು ನಡೆಸಬೇಕೆಂದು ಅದರರ್ಥ. ವಿವಿಧ ವಿಧಾನಮಂಡಲಗಳಲ್ಲಿ ಈಗಾಗಲೇ ಸಿದ್ಧಪಡಿಸಿರುವ ಚುನಾಯಕಗಣವನ್ನು– ಎಂದರೆ, ಭಾರತಾದ್ಯಂತ ವಿಧಾನ ಮಂಡಲಗಳ ಸದಸ್ಯರು ಇರುತ್ತಾರೆ. ಪ್ರಾಯಶಃ, ಅವರ ಸಂಖ್ಯೆ ಸಾವಿರ ಆಗಬಹುದು ಮತ್ತು ಚುನಾವಣೆಗೆ ಸ್ಪರ್ಧಿಸಿರುವ ವ್ಯಕ್ತಿಯ ಅಥವಾ ಅಭ್ಯರ್ಥಿಗಳ ಅರ್ಹತೆಗಳನ್ನು ನಿರ್ಣಯಿಸಲು, ಪೌರಸಭೆ ಸದಸ್ಯರು ಮತ್ತು ಇತರರನ್ನು ಒಳಗೊಂಡಿರುವ ಕೆಲವು ಇತರ ದೊಡ್ಡ ಚುನಾಯಕ ಗಣಕ್ಕಿಂತ ವಿಧಾನಮಂಡಲಗಳ ಈ ಸದಸ್ಯರು ಬಹುಶಃ ಉತ್ತಮ ಸ್ಥಾನಮಾನ ಪಡೆದಿರುತ್ತಾರೆ. ಆದ್ದರಿಂದ, ಈ ಸಮಿತಿಯು ನೀಡಿರುವಂಥ ಸಲಹೆಯು ಕಾರ್ಯಸಾಧ್ಯ ಆಗುವುದು ಮತ್ತು ಹೆಚ್ಚಿನ ಅಧಿಕಾರದ ಸ್ಥಾನವನ್ನು ಹೊಂದಿರುವ ಹಾಗೂ ಭಾರತ ಮತ್ತು ವಿದೇಶದಲ್ಲಿ ಘನತೆಯನ್ನು ಕಾಪಾಡುವ ಒಬ್ಬ ಉತ್ತಮ ವ್ಯಕ್ತಿಯನ್ನು ಆಯ್ಕೆ ಮಾಡಲು ಇದು ಸರಿಯಾದ ವಿಧಾನವೆಂದು ಸದನಕ್ಕೆ ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಈ ವಿಧಾನವನ್ನು ಆಯ್ಕೆ ಮಾಡಿಕೊಂಡರೆ, ಮತದಾನದಲ್ಲಿ ಯಾವುದೇ ರೀತಿಯ ಪ್ರಾಮುಖ್ಯ ನೀಡುವುದನ್ನು ತಡೆಯುವ ಬಗ್ಗೆ ನಾವು ಕಾಳಜಿ ವಹಿಸಿದಂತಾಗುತ್ತದೆ ಎಂಬುದನ್ನು ನೀವು ಗಮನಿಸಬಹುದು, ಏಕೆಂದರೆ, ಈಗಾಗಲೇ ವಿವರಿಸಿರುವಂತೆ, ವಿಧಾನಮಂಡಲಗಳು ಬಹುಳಷ್ಟು ಜನರ ಪ್ರತಿನಿಧಿಗಳಾಗಿಲ್ಲದಿರಬಹುದು ಎಂಬುದನ್ನು ನಾನು ನಂಬುತ್ತೇನೆ. ಸಂಯುಕ್ತ ಪ್ರಾಂತಗಳು ಅಥವಾ ಮದ್ರಾಸ್ ಪ್ರಾಂತದಲ್ಲಿ ಅಂದಾಜು ೬೦

ಅಥವಾ ೫೫ ದಶಲಕ್ಷ ಜನರನ್ನು ಪ್ರತಿನಿಧಿಸುವ ೩೦೦ ಸದಸ್ಯರಿರುವ ಪ್ರಾಂತೀಯ ವಿಧಾನಮಂಡಲ ಇರಬಹುದು. ಆ ಸಂಖ್ಯೆ ಎಷ್ಟೆಂಬುದು ನನಗೆ ಗೊತ್ತಿಲ್ಲ. ಅಂದಾಜು ೫೦,೦೦೦ ಜನರನ್ನು ಪ್ರತಿನಿಧಿಸುವ ೫೦ ಸದಸ್ಯರು ಇರುವ ಇನ್ನೊಂದು ವಿಧಾನಮಂಡಲವು ಇರಬಹುದು. ಇವುಗಳಿಗೆ ಒಂದೇ ಪ್ರಾಮುಖ್ಯ ವೇಯ್ಟೇಜ್ ನೀಡುವುದು ನಿಸ್ಸಂದೇಹವಾಗಿ ಅಸಂಗತವಾಗುತ್ತದೆ ಮತ್ತು ಇದರ ಫಲಿತಾಂಶವೆಂದರೆ, ದೇಶದಲ್ಲಿನ ಅತ್ಯಂತ ಸಣ್ಣ ಘಟಕಗಳ ಸದಸ್ಯರು ವಾಸ್ತವವಾಗಿ ಪರಿಸ್ಥಿತಿಯ ಮೇಲೆ ಪ್ರಾಬಲ್ಯ ಸಾಧಿಸಿದಂತಾಗುತ್ತದೆ. ಆದುದರಿಂದ, ಪ್ರಾಮುಖ್ಯಕ್ಕೆ (ವೇಯ್ಟೇಜ್) ಅವಕಾಶವಿರಬಾರದು ಮತ್ತು ಸಂಬಂಧಪಟ್ಟ ಘಟಕಗಳ ಜನಸಂಖ್ಯೆಗೆ ಅನುಸಾರವಾಗಿ ಮತದಾನ ವ್ಯವಸ್ಥೆ ಇರಬೇಕೆಂಬುದನ್ನು ನೋಡಿಕೊಳ್ಳಲು ಕೆಲವು ಸೂತ್ರಗಳನ್ನು ಎಚ್ಚರಿಕೆಯಿಂದ ಅಳವಡಿಸಿಕೊಳ್ಳಬೇಕಾಗಿದೆ. ಇದನ್ನು ಪ್ರಸ್ತಾವಿಸಲು ಮನವಿ ಮಾಡಿಕೊಳ್ಳುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು:**ಈ ನಿರ್ಣಯಕ್ಕೆ ನಾವು ತಿದ್ದುಪಡಿಗಳನ್ನು ತರಬೇಕಿದೆ, ಮತ್ತು ಇದರ ಮೇಲಿನ ಚರ್ಚೆಯನ್ನು ಮುಂದಿನ ದಿನದಲ್ಲಿ ಮುಂದುವರಿಸಲಾಗುವುದು.

ಸಭೆಯನ್ನು ಮುಕ್ತಾಯಗೊಳಿಸುವ ಮುನ್ನ, ನಾನು ಒಂದು ಘೋಷಣೆಯನ್ನು ಮಾಡಲಿಚ್ಛಿಸುತ್ತೇನೆ. ಈಗ ಕೇಂದ್ರ ಅಧಿಕಾರಗಳ ಸಮಿತಿಯ ವರದಿ ನಮ್ಮ ಮುಂದಿದ್ದು, ಅದನ್ನು ಎಲ್ಲರಿಗೂ ಕಳುಹಿಸಲಾಗಿದೆ. ಸದಸ್ಯರು ನಾಡಿದ್ದು ಸಂಜೆ ೫.೦೦ ಗಂಟೆಯವರೆಗೆ, ಎಂದರೆ ಬುಧವಾರ, ದಿನಾಂಕ ೨೩ರ ಸಂಜೆ ೫.೦೦ ಗಂಟೆಯವರೆಗೆ ಅದರ ಬಗ್ಗೆ ತಿದ್ದುಪಡಿಗಳನ್ನು ಕಳುಹಿಸಬಹುದು (ಕೆಲವು ಗೌರವಾನ್ವಿತ ಸದಸ್ಯರು: "ನಮಗೆ ವರದಿ ಸಿಕ್ಕಿರುವುದಿಲ್ಲ".) ವರದಿಯನ್ನು ಸಾಕಷ್ಟು ಹಿಂದೆಯೇ ಕಳುಹಿಸಿಕೊಟ್ಟಿದೆ, ವಾಸ್ತವವಾಗಿ ಅದನ್ನು ಎರಡು ಬಾರಿ ಕಳುಹಿಸಿಕೊಡಲಾಗಿದೆ ಎಂದು ನನಗೆ ತಿಳಿದಿದೆ. ಆದರೂ, ಇಲ್ಲಿಯವರೆಗೆ ಯಾರೇ ಸದಸ್ಯರಿಗೆ ಅದರ ಪ್ರತಿ ಸಿಗದಿದ್ದಲ್ಲಿ, ಅವರು ಈಗ ಅದನ್ನು ತೆಗೆದುಕೊಳ್ಳಬಹುದು."

**ಕೆಲವು ಗೌರವಾನ್ವಿತ ಸದಸ್ಯರು :** ಮುಂದಿನ ಅಧಿವೇಶನಕ್ಕೆ ಸಂಬಂಧಿಸಿದ ವೇಳಾಪಟ್ಟಿ ಕುರಿತು ತಿಳಿದುಕೊಳ್ಳಲು ನಾವು ಕುತೂಹಲಿಗಳಾಗಿದ್ದೇವೆ. ನಾವು ಗುರುವಾರ ಸಂಜೆಯವರೆಗೆ ತಿದ್ದುಪಡಿಗಳ ಬಗ್ಗೆ ಸೂಚನೆಯನ್ನು ನೀಡಲು ಸಾಧ್ಯವಾಗುವಂತೆ ಅದನ್ನು ಮುಂದಕ್ಕೆ ಹಾಕಲು ಸಾಧ್ಯವೇ?

**ಸನ್ಮಾನ್ಯ ಅಧ್ಯಕ್ಷರು :** ಆಗಲಿ, ಕೇಂದ್ರ ಅಧಿಕಾರ ಸಮಿತಿಯ ವರದಿಗೆ ಸಂಬಂಧಿಸಿದ ತಿದ್ದುಪಡಿಗಳ ಸೂಚನೆಯನ್ನು ಈಗಿನಿಂದ ೨೪ನೇ ಗುರುವಾರದ ಸಂಜೆ ೫.೦೦ ಗಂಟೆಯವರೆಗೆ ನೀಡಬಹುದು.

ನಂತರ, ಸದನವನ್ನು ೨೨ನೇ ಜುಲೈ ೧೯೪೭ರ ಗುರುವಾರ, ಬೆಳಿಗ್ಗೆ ಹತ್ತು ಗಂಟೆಯವರೆಗೆ ಮುಂದೂಡಲಾಯಿತು.

[]*ಹಿಂದುಸ್ತಾನಿ ಭಾಷಣದ ಭಾಷಾಂತರ

**ಗೋಪ್ಯ**

*ಅನುಬಂಧ 'ಎ'

ಸಂಖ್ಯೆ ಸಿಎ/೭೩/ಸಿಒಎಸ್‌ಎಸ್./೪೭

**ಭಾರತ ಸಂವಿಧಾನ ರಚನಾ ಸಭೆ**

ಪರಿಷತ್ ಸದನ,
ನವದೆಹಲಿ, ೪ನೇ ಜುಲೈ, ೧೯೪೭

ಇಂದ,

**ಪಂಡಿತ್ ಜವಾಹರಲಾಲ್ ನೆಹರು,**
ಅಧ್ಯಕ್ಷರು,
ಕೇಂದ್ರ ಸಂವಿಧಾನ ಸಮಿತಿ.

ಇವರಿಗೆ–

**ಅಧ್ಯಕ್ಷರು,**
ಭಾರತ ಸಂವಿಧಾನ ರಚನಾ ಸಭೆ.

ಮಾನ್ಯರೇ,

ಒಕ್ಕೂಟ ಸಂವಿಧಾನದ ತತ್ತ್ವಗಳ ಬಗ್ಗೆ ವರದಿ ಮಾಡಲು, ೩೦ನೇ ಏಪ್ರಿಲ್, ೧೯೪೭ರ ಸಂವಿಧಾನ ರಚನಾ ಸಭೆಯ ನಿರ್ಣಯಕ್ಕನುಸಾರವಾಗಿ, ಗೌರವಾನ್ವಿತ ಅಧ್ಯಕ್ಷರು ನೇಮಕ ಮಾಡಿದ ಸಮಿತಿಯ ಸದಸ್ಯರ ಪರವಾಗಿ, ಅವಶ್ಯವಿರುವ ವಿವರಣಾತ್ಮಕ ಟಿಪ್ಪಣಿಗಳ ಸಹಿತ ಸಮಿತಿಯ ಶಿಫಾರಸ್ಸುಗಳನ್ನು ಒಳಗೊಂಡಿರುವ ಅನುಬಂಧಿಸಲಾಗಿರುವ ಜ್ಞಾಪನಪತ್ರವನ್ನು ಸಲ್ಲಿಸುವ ಗೌರವ ನನಗೆ ದೊರೆತಿದೆ.

ಮಾನ್ಯರೆ, ನಾನು ನಿಮ್ಮ ಅತ್ಯಂತ ವಿಧೇಯ ಸೇವಕನಾಗಿರುವ ಗೌರವಕ್ಕೆ ಪಾತ್ರನಾಗಿದ್ದೇನೆ .

ನಿಮ್ಮ ನಂಬುಗೆಯ,

**ಜವಾಹರಲಾಲ್ ನೆಹರು,**
ಅಧ್ಯಕ್ಷ.

ಸಂ. ಸಿಎ/೬೩/ಸಿಒಎನ್ಎಸ್./೪೭

# ಭಾರತ ಸಂವಿಧಾನ ರಚನಾ ಸಭೆ

## ಭಾರತ ಸಂವಿಧಾನ ಕುರಿತ ಜ್ಞಾಪನಪತ್ರ

**ಪೀಠಿಕೆ.**–– ಭಾರತದ ಪ್ರಜೆಗಳಾದ ನಾವು, ಸಮಸ್ತ ಜನರ ಒಳಿತನ್ನು ವೃದ್ಧಿಗೊಳಿಸುವುದಕ್ಕಾಗಿ, ನಮ್ಮ ಚುನಾಯಿತ ಪ್ರತಿನಿಧಿಗಳ ಮೂಲಕ, ಈ ಸಂವಿಧಾನವನ್ನು ಅಧಿನಿಯಮಿತಗೊಳಿಸಿ, ಅಂಗೀಕರಿಸಿ, ನಮಗೆ ಸಮರ್ಪಿಸಿದ್ದೇವೆ.

## ಭಾಗ ೧

## ಫೆಡರಲ್ (ಒಕ್ಕೂಟದ) ರಾಜ್ಯಕ್ಷೇತ್ರ ಮತ್ತು ಅದರ ಅಧಿಕಾರ ವ್ಯಾಪ್ತಿ

**೧. ಒಕ್ಕೂಟದ ಹೆಸರು ಮತ್ತು ರಾಜ್ಯಕ್ಷೇತ್ರ** ––– ಈ ಮೂಲಕ ಸ್ಥಾಪಿತವಾದ ಈ ಒಕ್ಕೂಟವು, ಭಾರತ ಎಂಬ ಹೆಸರಿನಿಂದ ಸಾರ್ವಭೌಮ ಸ್ವತಂತ್ರ ಗಣರಾಜ್ಯವಾಗಿರತಕ್ಕದ್ದು.

ಈ ಸಂವಿಧಾನವು, ಅನ್ಯಥಾ ಉಪಬಂಧಿಸಿದುದನ್ನುಳಿದು ಅಥವಾ ಈ ಸಂವಿಧಾನದ ಮೇರೆಗೆ ಅಥವಾ ಯಾವುದೇ ಒಡಂಬಡಿಕೆ ಅಥವಾ ಒಪ್ಪಂದದ ಮೇರೆಗೆ, ಅನುಸೂಚಿ Iರಲ್ಲಿ ತತ್ಕಾಲದಲ್ಲಿ ಸೇರಿಸಲಾಗಿರುವ ರಾಜ್ಯಕ್ಷೇತ್ರಗಳು ಒಕ್ಕೂಟದ (ಫೆಡರೇಷನ್ನಿನ) ವ್ಯಾಪ್ತಿಗೆ ಒಳಪಡತಕ್ಕದ್ದು.

[**ಟಿಪ್ಪಣಿ.**– ಈ ಸಂವಿಧಾನವು ಸ್ಥಾಪಿಸಬೇಕೆಂದು ಪ್ರಸ್ತಾವಿಸಿದ ಸ್ವರೂಪವು ಒಕ್ಕೂಟ (ಫೆಡರೇಷನ್ನಿನ) ಗುಣಲಕ್ಷಣದ್ದಾಗಿರುವುದರಿಂದ, ಒಕ್ಕೂಟ ಎಂಬ ಪದವನ್ನು ಬಳಸಲಾಗಿದೆ.]

ಅತ್ಯಂತ ಚಿಕ್ಕದಾಗಿ ಮತ್ತು ಅತ್ಯಂತ ಸಮಗ್ರವಾಗಿರಬೇಕೆಂದು ರಾಷ್ಟ್ರದ ಹೆಸರನ್ನು "ಭಾರತ" ಎಂಬುದಾಗಿ ಸಲಹೆ ನೀಡಲಾಗಿದೆ.

ಒಕ್ಕೂಟಕ್ಕೆ ಸೇರದಿದ್ದಾಗ್ಯೂ ಮತ್ತು ಅದರಿಂದಾಗಿ ಅನುಸೂಚಿಯಲ್ಲಿ ಇರದಿದ್ದಾಗ್ಯೂ, ಕೆಲವು ಒಡಂಬಡಿಕೆಯ ಅಥವಾ ಒಪ್ಪಂದದ ಕೆಲವು ವಿಶೇಷ ಉದ್ದೇಶಗಳಿಗಾಗಿ ಅಧಿಕಾರವ್ಯಾಪ್ತಿಯನ್ನು ಬಿಟ್ಟುಕೊಟ್ಟಿರಬಹುದಾದ, ರಾಜ್ಯಗಳು ಭಾರತದಲ್ಲಿ ಇರಬಹುದಾದ್ದರಿಂದ "ಈ ಸಂವಿಧಾನವು ಉಪಬಂಧಿಸಿದುದನ್ನುಳಿದು ಅಥವಾ ಈ ಸಂವಿಧಾನದ ಮೇರೆಗೆ ಮತ್ತು ಯಾವುದೇ ಒಡಂಬಡಿಕೆ ಅಥವಾ ಒಪ್ಪಂದದ ಮೇರೆಗೆ" ಎಂಬ ಪದಗಳು ಅವಶ್ಯಕವಾಗಿವೆ.

**೨. ಹೊಸ ರಾಜ್ಯಕ್ಷೇತ್ರ ಸೇರ್ಪಡೆ.** ಒಕ್ಕೂಟದ ಸಂಸತ್ತು ಕಾಲಕಾಲಕ್ಕೆ ಅಧಿನಿಯಮದ ಮೂಲಕ, ಸೂಕ್ತವೆಂದು ಅದು ಭಾವಿಸುವಂಥ ನಿಬಂಧನೆಗಳ ಮೇರೆಗೆ ಅನುಸೂಚಿ ೧ರಲ್ಲಿ ಹೊಸ ರಾಜ್ಯಕ್ಷೇತ್ರಗಳನ್ನು ಸೇರಿಸಿಕೊಳ್ಳಬಹುದು.

[ಯು.ಎಸ್.ಎ.ಯ ಸಂವಿಧಾನದ ಸಿಎಫ್. ಅನುಚ್ಛೇದ ೪, ಪ್ರಕರಣ ೩(೧) ಮತ್ತು ಆಸ್ಟ್ರೇಲಿಯಾ ಸಂವಿಧಾನದ ೧೨೧ನೇ ಪ್ರಕರಣ. ಹೊಸ ರಾಜ್ಯಗಳನ್ನು ಸೇರಿಸಿಕೊಳ್ಳುವ ಅಧಿಕಾರವನ್ನು ಯು.ಎಸ್.ಎ.ನಲ್ಲಿ ಕಾಂಗ್ರೆಸ್‌ನಲ್ಲಿ ಮತ್ತು ಆಸ್ಟ್ರೇಲಿಯಾದಲ್ಲಿ ಕಾಮನ್‌ವೆಲ್ತ್ ಸಂಸತ್ತಿನಲ್ಲಿ ನಿಹಿತಗೊಳಿಸಲಾಗಿದೆ.

ಹೆಸರಿಗೆ ಸಂಬಂಧಿಸಿದಂತೆ, ಒಕ್ಕೂಟದ ಶಾಸನಸಭೆಯ ಈ ಕರಡಿನಲ್ಲಿ "ಸಂಸತ್ತು" ಎಂದು ಉಲ್ಲೇಖಿಸಲಾಗಿದೆ, ಎಂದು ವಿವರಿಸಬಹುದಾಗಿದೆ; ಘಟಕ ವಿಧಾನ ಮಂಡಲಗಳನ್ನು "ವಿಧಾನಮಂಡಲಗಳು"

ಎಂದು ಉಲ್ಲೇಖಿಸಲಾಗಿದೆ. ಒಕ್ಕೂಟ ಸಂಸತ್ತು ರಾಷ್ಟ್ರಪತಿ ಮತ್ತು ಎರಡು ಸದನಗಳು ಒಳಗೊಂಡಿರುವ ರಾಷ್ಟ್ರೀಯ ಸಭೆಯನ್ನು ಒಳಗೊಂಡಿದೆ.]

**೩. ನೂತನ ಘಟಕಗಳ ರಚನೆ ಮತ್ತು ಘಟಕಗಳ ಗಡಿಗಳ ಬದಲಾವಣೆ**–– ಒಕ್ಕೂಟದ ಸಂಸತ್ತು, ಅಧಿನಿಯಮದ ಮೂಲಕ, ಪ್ರತಿಯೊಂದು ಪ್ರಾಂತದ ವಿಧಾನಮಂಡಲದ ಮತ್ತು ಅದರಿಂದ ಭಾಧಿತವಾಗುವ ಭಾರತದ ಪ್ರತಿಯೊಂದು ರಾಜ್ಯದ ವಿಧಾನಮಂಡಲದ ಸಮ್ಮತಿಯೊಂದಿಗೆ,––

(ಎ) ಹೊಸ ಘಟಕವನ್ನು ರಚಿಸಬಹುದು;

(ಬಿ) ಯಾವುದೇ ಘಟಕದ ಪ್ರದೇಶವನ್ನು ಹೆಚ್ಚಿಸಬಹುದು;

(ಸಿ) ಯಾವುದೇ ಘಟಕದ ಪ್ರದೇಶವನ್ನು ಕಡಿಮೆ ಮಾಡಬಹುದು;

(ಡಿ) ಯಾವುದೇ ಘಟಕದ ಗಡಿಗಳನ್ನು ಬದಲಾಯಿಸಬಹುದು'

– ಮತ್ತು ಅದೇ ರೀತಿ ಸಮ್ಮತಿಯೊಂದಿಗೆ, ಅವಶ್ಯವೆಂದು ಅಥವಾ ಸೂಕ್ತವೆಂದು ಅದು ಭಾವಿಸಬಹುದಾದಂಥ ಪ್ರಾಸಂಗಿಕ ಮತ್ತು ಆನುಷಂಗಿಕ ಉಪಬಂಧಗಳನ್ನು ರಚಿಸಬಹುದು.

[ಟಿಪ್ಪಣಿ.– ಇದು ೧೯೩೫ರ ಅಧಿನಿಯಮದ ೨೯೦ನೇ ಪ್ರಕರಣಕ್ಕೆ ಸಂವಾದಿಯಾಗಿದೆ, ಆದರೆ, ಪ್ರಾಂತದಲ್ಲಿ ಸೇರಿಸಿಕೊಳ್ಳಲಾಗುವ ಭಾರತ ರಾಜ್ಯ ಕ್ಷೇತ್ರದ ಸಾಧ್ಯತೆಗೆ ಸಂಬಂಧಿಸಿದಂತೆ ಅದು ಉಪಬಂಧಿಸಿದುದಕ್ಕಿಂತಲೂ ಹೆಚ್ಚು ವ್ಯಾಪಕವಾಗಿದೆ.]

## ಅನುಬಂಧ ಎ

### ಅನುಸೂಚಿ I
### ಒಕ್ಕೂಟದ ಅಧಿಕಾರವ್ಯಾಪ್ತಿಗೆ ಒಳಪಡುವ ರಾಜ್ಯಕ್ಷೇತ್ರಗಳು

೧. **ರಾಜ್ಯಪಾಲರ ಪ್ರಾಂತಗಳು**

ಮದ್ರಾಸ್,
ಬಾಂಬೆ,
ಪಶ್ಚಿಮ ಬಂಗಾಳ,
ಸಂಯುಕ್ತ ಪ್ರಾಂತಗಳು
ಬಿಹಾರ್,
ಪೂರ್ವ ಪಂಜಾಬ್,
ಕೇಂದ್ರ ಪ್ರಾಂತಗಳು ಮತ್ತು ಬೇರಾರ್,
ಅಸ್ಸಾಂ,
ಒರಿಸ್ಸಾ

II. **ಮುಖ್ಯ ಆಯುಕ್ತರ ಪ್ರಾಂತಗಳು**

ದೆಹಲಿ,
ಅಜ್ಮೇರ್–ಮೇವಾರ್
ಕೂರ್ಗ್,

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು,
ಪಂತ್ ಪಿಪ್ಲೋಡಾ

**III. ಭಾರತೀಯ ರಾಜ್ಯಗಳು**

[ಇಲ್ಲಿ ಸಮ್ಮತಿಸಿದ ಮತ್ತು ಅನುಸಮರ್ಥಿಸಿದ ಭಾರತೀಯ ರಾಜ್ಯಗಳನ್ನು ಪಟ್ಟಿಮಾಡಲಾಗಿದೆ:–

(೧) ಏಕ ರಾಜ್ಯಗಳು

(೨) ರಾಜ್ಯಗಳ ಗುಂಪುಗಳು.]

[ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ರಾಜ್ಯಪಾಲರ ಪ್ರಾಂತಗಳು ಮತ್ತು ಮುಖ್ಯ ಆಯುಕ್ತರ ರಾಜ್ಯಗಳು ಭಾರತದ ಒಕ್ಕೂಟದ ಅಧಿಕಾರವ್ಯಾಪ್ತಿಯೊಳಗೆ ತಾವಾಗಿಯೇ ಸೇರುತ್ತವೆ. ಭಾರತದ ರಾಜ್ಯಗಳಿಗೆ ಸಂಬಂಧಿಸಿದಂತೆ, ಪ್ರಾರಂಭಕ್ಕೆ, ಅವುಗಳಲ್ಲಿ ಯಾವುವನ್ನು ಅನುಸೂಚಿಯಲ್ಲಿ ಸೇರಿಸಬೇಕೆಂಬುದನ್ನು ನಿರ್ಧರಿಸುವುದಕ್ಕಾಗಿ ಕೆಲವು ಕಾರ್ಯವಿಧಾನಗಳನ್ನು ಗೊತ್ತುಪಡಿಸಬೇಕಾಗುತ್ತದೆ. ೧೯೩೫ನೇ ಅಧಿನಿಯಮದ ಮೇರೆಗೆ, ಆಡಳಿತಗಾರರು ಬರೆದುಕೊಟ್ಟ "ಸೇರ್ಪಡೆ ಲಿಖಿತಪತ್ರಗಳ" ಮೂಲಕ ಸೇರ್ಪಡೆಯನ್ನು ಪ್ರಮಾಣೀಕರಿಸಲಾಗಿದೆ. ಈ ಪದವನ್ನು ಬಳಸುವುದು ಅಥವಾ ಈ ಪ್ರಕ್ರಿಯೆಯನ್ನು ಅಂಗೀಕರಿಸುವುದು ಅನಪೇಕ್ಷಣೀಯವೆಂದು ಪರಿಗಣಿಸಿದರೆ, ಕೆಲವು ರೀತಿಯ ಅನುಸಮರ್ಥನೆಯನ್ನು ಗೊತ್ತುಪಡಿಸಬೇಕಾಗಬಹುದು.

ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಪ್ರಾಂತಗಳನ್ನು, ಸಂವಿಧಾನವು ಜಾರಿಗೆ ಬರುವುದಕ್ಕೆ ಮುಂಚೆಯೇ ವಿಭಜಿಸುವುದಾದರೆ, ಅನುಸೂಚಿಯನ್ನು ಅದಕ್ಕನುಸಾರವಾಗಿ ತಿದ್ದುಪಡಿ ಮಾಡಬೇಕಾಗುತ್ತದೆ.]

## ಭಾಗ II
## ಪೌರತ್ವ

೧. **ಪೌರತ್ವ**–– ಈ ಸಂವಿಧಾನದ ಪ್ರಾರಂಭದ ದಿನಾಂಕದಂದು ಒಕ್ಕೂಟದ ವ್ಯಾಪ್ತಿಗೆ ಒಳಪಡುವ ರಾಜ್ಯಕ್ಷೇತ್ರಗಳಲ್ಲಿ ಅಧಿವಾಸವುಳ್ಳ,

(ಎ) ಆ ದಿನಾಂಕದ ನಿಕಟಪೂರ್ವದಲ್ಲಿ ಐದು ವರ್ಷಗಳಿಗಿಂತ ಕಡಿಮೆ ಇಲ್ಲದಷ್ಟು ಕಾಲದಿಂದ ಆ ರಾಜ್ಯಕ್ಷೇತ್ರಗಳಲ್ಲಿ ಸಾಮಾನ್ಯವಾಗಿ ನಿವಾಸಿಯಾಗಿರುವ; ಅಥವಾ

(ಬಿ) ಭಾರತದಲ್ಲಿ ಜನಿಸಿದಾತ, ಅಥವಾ ಆತನ ಪೋಷಕರು ಅಥವಾ ಅವರಿಬ್ಬರಲ್ಲೊಬ್ಬರು.

– ಒಕ್ಕೂಟದ ಪೌರವಾಗಿರತಕ್ಕದು.

ಪರಂತು, ಯಾವುದೇ ಇತರ ರಾಷ್ಟ್ರದ ಪೌರನಾಗಿರುವ ಯಾರೇ ಅಂಥ ವ್ಯಕ್ತಿಯು, ಒಕ್ಕೂಟ ಕಾನೂನಿಗನುಸಾರ, ಈ ಮೂಲಕ ಪ್ರದಾನ ಮಾಡಲಾಗಿರುವ ಪೌರತ್ವವನ್ನು ಒಪ್ಪಿಕೊಳ್ಳದಿರುವುದನ್ನು ಆಯ್ಕೆ ಮಾಡಿಕೊಳ್ಳಬಹುದು.

**ವಿವರಣೆ**––  ಈ ಖಂಡದ ಉದ್ದೇಶಕ್ಕಾಗಿ

"ವಾಸಸ್ಥಳ" ಎಂಬ ಪದಕ್ಕೆ ಭಾರತ ಉತ್ತರಾಧಿಕಾರ ಅಧಿನಿಯಮ, ೧೯೨೫ಕ್ಕೆ ಇರುವ ಅರ್ಥವೇ ಇರತಕ್ಕದ್ದು.

೨. ಈ ಸಂವಿಧಾನವು ಜಾರಿಗೆ ಬಂದ ನಂತರ,

(ಎ) ಒಕ್ಕೂಟದ ವ್ಯಾಪ್ತಿಗೆ ಒಳಪಡುವ ರಾಜ್ಯಕ್ಷೇತ್ರಗಳಲ್ಲಿ ಜನಿಸಿರುವ ಪ್ರತಿಯೊಬ್ಬ ವ್ಯಕ್ತಿಯೂ;

(ಬಿ) ಒಕ್ಕೂಟದ ಕಾನೂನಿಗನುಸಾರವಾಗಿ, ದೇಶೀಯ ಹಕ್ಕುಗಳನ್ನು ಕೊಡಲಾಗಿರುವ ಪ್ರತಿಯೊಬ್ಬ ವ್ಯಕ್ತಿಯೂ; ಮತ್ತು

(ಸಿ) ಜನನದ ಸಮಯದಲ್ಲಿ ಒಬ್ಬ ವ್ಯಕ್ತಿಯ ತಂದೆ ಅಥವಾ ತಾಯಿ ಇಬ್ಬರಲ್ಲಿ ಒಬ್ಬರು ಒಕ್ಕೂಟದ ನಾಗರಿಕರಾಗಿದ್ದಂಥವರಿಗೆ ಜನಿಸಿದ ಪ್ರತಿಯೊಬ್ಬ ವ್ಯಕ್ತಿಯು,

– ಒಕ್ಕೂಟದ ನಾಗರಿಕನಾಗಿರತಕ್ಕದ್ದು.

೩. ಒಕ್ಕೂಟ ನಾಗರಿಕತ್ವದ ಆರ್ಜನೆ ಮತ್ತು ಕೊನೆಗೊಳಿಸುವಿಕೆಯನ್ನು ನಿಯಂತ್ರಿಸುವ ಹೆಚ್ಚಿನ ಉಪಬಂಧಗಳನ್ನು ಒಕ್ಕೂಟವು ಕಾನೂನಿನ ಮೂಲಕ ರಚಿಸಬಹುದು.

**ವಿವರಣೆ.**–– ಈ ಸಂವಿಧಾನದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, "ಒಕ್ಕೂಟ ಕಾನೂನು" ಎಂಬ ಪದವು, ಒಕ್ಕೂಟದ ವ್ಯಾಪ್ತಿಗೆ ಒಳಪಡುವ ರಾಜ್ಯಕ್ಷೇತ್ರಗಳ ಒಳಗೆ ಕಾನೂನಾಗಿ ಜಾರಿಯಲ್ಲಿರುವ ಅಸ್ತಿತ್ವದಲ್ಲಿರುವ ಭಾರತದ ಯಾವುದೇ ಕಾನೂನನ್ನು ಒಳಗೊಳ್ಳುತ್ತದೆ.

[**ಟಿಪ್ಪಣಿ.**–– ಪೌರತ್ವ ಸಂಬಂಧಿಸಿದ ಉಪಬಂಧಗಳು ನಿಸ್ಸಂಶಯವಾಗಿ ತೀವ್ರ ವಿರೋಧವನ್ನು ಸೃಜಿಸುತ್ತವೆ. ಪ್ರಸ್ತುತ ಕರಡನ್ನು ಚರ್ಚೆಯ ಉದ್ದೇಶಕ್ಕಾಗಿ ಆಧಾರವಾಗಿ ಸಿದ್ಧಪಡಿಸಲಾಗಿದೆ. ಐರಿಷ್ ಸ್ವತಂತ್ರ ರಾಜ್ಯದ ಸಂವಿಧಾನದ ಸಿಎಫ್. ಅನುಚ್ಛೇದ ೩. ಮುಂದಿನಂತಿದೆ,–

"ಲಿಂಗ ತಾರತಮ್ಯವಿಲ್ಲದೆ, ಈ ಸಂವಿಧಾನವು ಜಾರಿಗೆ ಬರುವ ಕಾಲದಲ್ಲಿ ಐರಿಷ್ ಸ್ವತಂತ್ರ ರಾಜ್ಯದ ವ್ಯಾಪ್ತಿಯ ಪ್ರದೇಶದಲ್ಲಿ ವಾಸವಿದ್ದ, ಐರ್ಲೆಂಡಿನಲ್ಲಿ ಜನಿಸಿದ ಅಥವಾ ತಂದೆ ಅಥವಾ ತಾಯಿ ಇಬ್ಬರಲ್ಲಿ ಒಬ್ಬರು ಐರ್ಲೆಂಡಿನಲ್ಲಿ ಜನಿಸಿದ್ದರೆ ಅವರಿಗೆ ಹುಟ್ಟಿದ ಅಥವಾ ದಂಗೆರಹಿತ ಏಳು ವರ್ಷಗಳ ಅವಧಿಯಲ್ಲಿ ಐರಿಷ್ ಸ್ವತಂತ್ರ ರಾಜ್ಯದ ವ್ಯಾಪ್ತಿಯ ಪ್ರದೇಶದಲ್ಲಿ ಸಾಮಾನ್ಯವಾಗಿ ವಾಸವಿದ್ದ ಪ್ರತಿಯೊಬ್ಬ ವ್ಯಕ್ತಿಯು, ಐರಿಷ್ ಸ್ವತಂತ್ರ ರಾಜ್ಯದ ವ್ಯಾಪ್ತಿಯ ಪರಿಮಿತಿಯೊಳಗೆ, ವಿಶೇಷಾಧಿಕಾರಗಳನ್ನು ಅನುಭವಿಸತಕ್ಕದ್ದು ಮತ್ತು ಅಂಥ ಗೌರತ್ವದ ಬಾಧ್ಯತೆಗಳಿಗೆ ಒಳಪಡತಕ್ಕದ್ದು.

ಪರಂತು, ಮತ್ತೊಂದು ರಾಷ್ಟ್ರದ ಪೌರವಾಗಿರುವ ಯಾರೇ ವ್ಯಕ್ತಿಯು ಈ ಮೂಲಕ ಪ್ರದಾನ ಮಾಡಿರುವ ಪೌರತ್ವ ಒಪ್ಪದೇ ಇರುವುದನ್ನು ಆಯ್ಕೆ ಮಾಡಿಕೊಳ್ಳಬಹುದು; ಮತ್ತು ಈ ಐರಿಷ್ ಸ್ವತಂತ್ರ ರಾಜ್ಯದಲ್ಲಿ, ಭವಿಷ್ಯದ ಪೌರತ್ವದ ಆರ್ಜನೆ ಮತ್ತು ಕೊನೆಗೊಳ್ಳುವಿಕೆಯನ್ನು ನಿಯಂತ್ರಿಸುವ ಷರತ್ತುಗಳನ್ನು ಕಾನೂನಿನ ಮೂಲಕ ನಿರ್ಧರಿಸತಕ್ಕದ್ದು."

೧ನೇ ಖಂಡವು, ಭಾರತ ದೇಶೀಯ ಹಕ್ಕು ನೀಡಿಕೆ ಅಧಿನಿಯಮ, ೧೯೨೬ರ VIIರ ೩(೧)(ಸಿ) ಖಂಡಕ್ಕನುಸಾರವಾಗಿ ಏಳು ವರ್ಷಗಳಿಗೆ ಬದಲಾಗಿ ಐದು ವರ್ಷಗಳು ಎಂಬುದಾಗಿ ಪ್ರತಿಯೋಜಿಸಿರುವ ಅವಧಿಯನ್ನು ಹೊರತುಪಡಿಸಿ, ಮೇಲಿನ ಉಪಬಂಧಗಳಿಗನುಸಾರವಾಗಿದೆ.

ಒಕ್ಕೂಟವು ಪ್ರಾರಂಭದಲ್ಲಿ, ಇಡೀ ಭಾರತದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದಿಲ್ಲವೆಂಬ ಸಂಭಾವ್ಯತೆಗೆ ಯುಕ್ತ ಗಮನ ನೀಡಿ ಈ ಖಂಡದ ಕರಡನ್ನು ಸಿದ್ಧಪಡಿಸಲಾಗಿದೆ.

ಹೊಸ ಸಂವಿಧಾನದ ಪ್ರಾರಂಭದಲ್ಲಿ, ಭಾರತದಲ್ಲಿ ಜನಿಸಿದ, ಬಾಂಬೆಯಲ್ಲಿ ಅಧಿವಾಸವಿದ್ದಂಥ ಒಬ್ಬ ವ್ಯಕ್ತಿಯು, ಲಂಡನ್‌ನಲ್ಲಿ ವಾಸವಿರಬೇಕಾಗಿ ಬಂದಿರುವ ಸಂದರ್ಭದಲ್ಲಿ, ಈ ಖಂಡದ ಅಡಿಯಲ್ಲಿ ಒಕ್ಕೂಟದ ನಾಗರಿಕನಾಗುವನು; ಆದರೆ, ಸಿಂಧ್ ಅಥವಾ ಬಲೂಚಿಸ್ಥಾನದಲ್ಲಿ ಒಕ್ಕೂಟವು ಪ್ರಾರಂಭದಲ್ಲಿ ಅಧಿಕಾರವ್ಯಾಪ್ತಿಯನ್ನು ಚಲಾಯಿಸದಿದ್ದರೆ, ಅಲ್ಲಿ ವಾಸವಿದ್ದ ವ್ಯಕ್ತಿ ಪೌರನಾಗುವುದಿಲ್ಲ ಆದಾಗ್ಯೂ, ಸಂವಿಧಾನವು ಜಾರಿಗೆ ಬರುವ ಮುಂಚೆ ಮತ್ತೊಂದು ಪ್ರದೇಶದಲ್ಲಿರುವ ಖಾಯಂ ವಾಸಸ್ಥಳವನ್ನು ತೊರೆದು, ಹೊಸ ವಾಸಸ್ಥಳವನ್ನು ಆರ್ಜಿಸಲು ಯಾರೇ ವ್ಯಕ್ತಿಗೆ ಸ್ವಾತಂತ್ರ್ಯವಿದೆ.

ಭಾರತ ಉತ್ತರಾಧಿಕಾರ ಅಧಿನಿಯಮ, ೧೯೨೫ರ ಮೇರೆಗೆ, ಪ್ರತಿಯೊಬ್ಬ ವ್ಯಕ್ತಿಯು, ಹೊಸ ಅಧಿವಾಸವನ್ನು ಪಡೆಯುವವರೆಗೆ ಚಾಲ್ತಿಯಲ್ಲಿರುವ ಮೂಲ "ಅಧಿವಾಸ"ವನ್ನು ಹೊಂದಿರುತ್ತಾನೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅವರ ಜನನದ ಸಮಯದಲ್ಲಿ ಅವರ ತಂದೆಯು ಅಧಿವಾಸವಾಗಿದ್ದಂಥ ದೇಶವು ಅವರ ಮೂಲ

ಅಧಿವಾಸವಿರುತ್ತದೆ, ಮತ್ತು ಅವರು ಮತ್ತೊಂದು ದೇಶದಲ್ಲಿ ಅವರ ಖಾಯಂ ವಾಸಸ್ಥಳವನ್ನು ತೊರೆದು, ಹೊಸ ಅಧಿವಾಸವನ್ನು ಹೊಂದಬಹುದಾಗಿದೆ. ಪ್ರಾಂತೀಯ ಸರ್ಕಾರವು, ಗೊತ್ತುಪಡಿಸಿದ ಬ್ರಿಟಿಷ್ ಇಂಡಿಯಾದಲ್ಲಿನ ಕೆಲವು ಕಚೇರಿಗಳಲ್ಲಿ ಅಂಥ ಅಧಿವಾಸವನ್ನು ಹೊಂದುವ ತನ್ನ ಅಪೇಕ್ಷೆಯನ್ನು ಲಿಖಿತದಲ್ಲಿ ಘೋಷಣೆ ಮಾಡಿ, ಆ ಘೋಷಣೆಯಲ್ಲಿ ಅಲ್ಲಿ ಒಪ್ಪಿಸಿರುವ ಬ್ರಿಟೀಷ್ ಇಂಡಿಯಾದಲ್ಲಿ ಅಧಿವಾಸವನ್ನು ಪಡೆಯಲು ಯಾರೇ ವ್ಯಕ್ತಿಗೆ ಸಾಧ್ಯವಾಗುವಂತೆ ಮಾಡಲು ಅಧಿನಿಯಮದಲ್ಲಿ ಒಂದು ಉಪಬಂಧವನ್ನು ಸಹ ಕಲ್ಪಿಸಲಾಗಿದೆ; ಪರಂತು, ಅವರು ಆ ಘೋಷಣೆಯ ದಿನಾಂಕಕ್ಕೆ ಮೊದಲಿನ ಒಂದು ವರ್ಷದಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ನಿವಾಸಿಯಾಗಿರಬೇಕು. ಸಾಮಾನ್ಯವಾಗಿ ಹೇಳಬೇಕೆಂದರೆ, ಪತ್ನಿಯು ತನ್ನ ವಿವಾಹದ ಸಮಯದ ಅಧಿವಾಸವನ್ನು ಆಕೆಯ ಪತಿಯ ಅಧಿವಾಸಕ್ಕೆ ಬದಲಾಯಿಸುತ್ತಾಳೆ. ಆ ವ್ಯಕ್ತಿಯ ಪ್ರಸ್ತುತ ಅಧಿವಾಸವು ಹೈದರಾಬಾದ್ ಆಗಿದ್ದು, ಈ ಸಂವಿಧಾನವು ಜಾರಿಗೆ ಬರುವ ಮೊದಲು ದೆಹಲಿಯಲ್ಲಿ ತನ್ನ ಅಧಿವಾಸವನ್ನು ಹೊಂದಲು ಬಯಸಿದರೆ, ಅವರು ದೆಹಲಿಯಲ್ಲಿನ ತನ್ನ ಶಾಶ್ವತ ಅಧಿವಾಸವನ್ನು ಬದಲಾಯಿಸಿ ಅಥವಾ ಭಾರತ ಉತ್ತರಾಧಿಕಾರ ಅಧಿನಿಯಮದಲ್ಲಿ, ಮೇಲೆ ಹೇಳಿರುವ ಉಪಬಂಧದಲ್ಲಿ ನಿಯಮಿಸಲಾದ ಪ್ರಕ್ರಿಯೆಯನ್ನು ಅನುಸರಿಸಿ, ಸಂವಿಧಾನದ ಪ್ರಾರಂಭದ ದಿನಾಂಕದಂದು ಅವರು "ಒಕ್ಕೂಟದ ವ್ಯಾಪ್ತಿಗೆ ಒಳಪಟ್ಟ ರಾಜ್ಯಕ್ಷೇತ್ರಗಳಲ್ಲಿ" ಅಧಿವಾಸಿಯಾಗಲು, ಹಾಗೆ ಮಾಡಬಹುದು.

೨ ಮತ್ತು ೩ನೇ ಖಂಡಗಳ ಸಂಬಂಧದಲ್ಲಿ ತಾತ್ಪೂರ್ತಿಕ ಸಮಿತಿಯು ಸಲಹೆ ನೀಡಿದ ಉಪಬಂಧಗಳನ್ನು ಅನುಸರಿಸಲಾಗಿದೆ; ಖಂಡ ೩ರ ಅಡಿಯಲ್ಲಿ ಒಕ್ಕೂಟ ಕಾನೂನಿಗೆ ವಿಷಯವನ್ನು ಬಿಡಲು ನಾವು ಒಪ್ಪಿದರೆ, ೨ನೇ ಖಂಡವು ಅವಶ್ಯಕವಲ್ಲ. ಈ ಸಂಬಂಧದಲ್ಲಿ, ಕಲ್ಕತ್ತ ಸಾಪ್ತಾಹಿಕ ಟಿಪ್ಪಣಿಗಳ ಅಭಿಪ್ರಾಯದ ಪರವಾಗಿ ಹೇಳಬೇಕಾದುದು ಬಹಳಷ್ಟಿದೆ.

"ಜನನದ ಮೂಲಕವಾಗಿರಲಿ ಅಥವಾ ದೇಶೀ ಹಕ್ಕನ್ನು ಕೊಡಲಾಗಿರುವುದರ ಮೂಲಕವಾಗಲಿ, ಸಂವಿಧಾನವು ರಾಷ್ಟ್ರೀಯತೆಯ ಷರತ್ತುಗಳನ್ನು ಸಂಪೂರ್ಣವಾಗಿ ಪರಿಭಾಷಿಸಲು ಸಾಧ್ಯವಿಲ್ಲ. ಕೆಲವು ಷರತ್ತುಗಳನ್ನು ಸಂವಿಧಾನದ ಮೂಲಕ ವಿಧಿಸಿದರೆ, ಭವಿಷ್ಯತ್ ಶಾಸನದ ಅರ್ಥವಿವರಣೆಗೆ ಸಂಬಂಧಿಸಿದಂತೆ ತೊಂದರೆಗಳು ಉದ್ಭವಿಸಬಹುದಾಗಿದ್ದು, ಅವು ಯಾವುದೇ ರೀತಿಯಲ್ಲೂ ವಿರುದ್ಧವಾಗಿರುವಂತೆ ಅಥವಾ ಅವುಗಳನ್ನು ಬಿಟ್ಟುಬಿಡುವಂತೆ ಕಂಡುಬರುತ್ತದೆ. ಉದಾಹರಣೆಗೆ, ಸಂವಿಧಾನ ರಚನಾ ಸಭೆಯ ಮುಂದೆ ಮಂಡಿಸಿರುವ ರಾಷ್ಟ್ರೀಯತೆ ಖಂಡದ ಕರಡು, ಒಕ್ಕೂಟದಲ್ಲಿ ಜನಿಸಿದ ಯಾರೇ ವ್ಯಕ್ತಿಯು, ಒಕ್ಕೂಟದ ನಾಗರಿಕನಾಗುವನು ಎಂದು ವಿಧಿಸಿದೆ. ಆದರೆ, ವಿದೇಶಿಯನನ್ನು ವಿವಾಹವಾಗುವ ಒಕ್ಕೂಟದ ಮಹಿಳಾ ನಾಗರಿಕಳ ಬಗ್ಗೆ ಅಥವಾ ಒಕ್ಕೂಟದ ರಾಷ್ಟ್ರೀಯನನ್ನು ವಿವಾಹವಾಗುವ ವಿದೇಶಿ ಮಹಿಳೆ ಕುರಿತು ಏನು ಮಾಡಬೇಕು? ಮೊದಲ ಸಂದರ್ಭದಲ್ಲಿ ಮಹಿಳೆಯು ಆಕೆಯ ಒಕ್ಕೂಟದ ರಾಷ್ಟ್ರೀಯತೆಯನ್ನು ಕಳೆದುಕೊಳ್ಳುವಂತೆ ಅಥವಾ ಎರಡನೇ ಸಂದರ್ಭದಲ್ಲಿ ಆಕೆಯು ಒಕ್ಕೂಟದ ನಾಗರಿಕತೆಯನ್ನು ಪಡೆದುಕೊಳ್ಳುವಂತೆ ಶಾಸನ ರಚಿಸುವ ಅಧಿಕಾರವು ಕೇಂದ್ರ ಶಾಸನ ಸಭೆಗೆ ಇರುವುದೇ (ಬಹಳಷ್ಟು ದೇಶಗಳಲ್ಲಿ ಕಾನೂನು ಇದನ್ನೇ ಹೇಳುತ್ತದೆ) ಇವು ಕುತೂಹಲಕಾರಿ ಪ್ರಶ್ನೆಗಳಾಗಿವೆ, ಆದರೆ, ಸಂವಿಧಾನದಲ್ಲಿ ಈ ಜಡವಾದ ಖಂಡವನ್ನು ಸೇರಿಸುವ ಮೊದಲೆ ಈ ಎಲ್ಲ ವಿಷಯಗಳನ್ನು ಪರಾಮರ್ಶಿಸಬೇಕಿದೆ. ಆದುದರಿಂದ, ನಮ್ಮ ಅಭಿಪ್ರಾಯದಲ್ಲಿ, ಐರಿಷ್ ಸ್ವತಂತ್ರ ರಾಷ್ಟ್ರದ ಸಂವಿಧಾನದಲ್ಲಿರುವಂತೆ, ಸಂವಿಧಾನವು ಜಾರಿಗೆ ಬಂದ ದಿನಾಂಕದಂದು ಭಾರತ ಒಕ್ಕೂಟದ ನಾಗರಿಕರು ಯಾರಾಗಿರಬೇಕು ಎಂಬುದನ್ನು ಸ್ಪಷ್ಟಪಡಿಸುವುದು ಮತ್ತು ಅಂಗೀಕೃತ ಖಾಸಗಿ ಅಂತಾರಾಷ್ಟ್ರೀಯ ಕಾನೂನಿನ ತತ್ವಗಳಿಗೆ ಅನುಸಾರವಾಗಿ ಭಾರತ ಒಕ್ಕೂಟವು ಶಾಸನದ ಮೂಲಕ ಒದಗಿಸಬೇಕಾದ ರಾಷ್ಟ್ರೀಯತೆಗೆ ಸಂಬಂಧಿಸಿದ ಕಾನೂನಿಗೆ ಬಿಟ್ಟುಬಿಡುವುದು ಉತ್ತಮ." (ಕಲ್ಕತ್ತ ವೀಕ್ಲಿ ನೋಟ್ಸ್, ಸಂಪುಟ. ಎಲ್‌ಐ ಸಂ. ೨೭, ಮೇ ೨೬, ೧೯೪೭).

ಅದೇ ಪತ್ರಿಕೆಯ (ಜರ್ನಲ್) ತರುವಾಯದ ಎರಡು ಸಂಚಿಕೆಗಳಲ್ಲಿ (ಸಂಪುಟ ಎಲ್ಐ, ಸಂಖ್ಯೆ. ೨೮ ಮತ್ತು ೨೯, ಜೂನ್ ೨ ಮತ್ತು ಜೂನ್ ೯, ೧೯೪೭), ೨ನೇ ಖಂಡದಿಂದ ಉದ್ಭವಿಸುವ ಇತರ ಪ್ರಶ್ನೆಗಳ ಸಮೂಹವನ್ನು ಮತ್ತು ಅವುಗಳನ್ನು, ೩ನೇ ಖಂಡದ ಅಡಿಯಲ್ಲಿ ಒಕ್ಕೂಟ ಕಾನೂನಿನ ಮೂಲಕ ನಿಯಂತ್ರಿಸಬೇಕಾದ ವಿವರವಾದ ವಿಷಯಕ್ಕೆ ಆ ಖಂಡವನ್ನು ಬಿಟ್ಟುಬಿಡುವುದೇ ಉತ್ತಮ ಎಂಬುದರ ಕಡೆಗೆ ಗಮನ ಸೆಳೆಯಲಾಗಿದೆ).

* ಈ ಭಾಗವು, ನಾಗರಿಕತ್ವ ಖಂಡಕ್ಕೆ ಸಂಬಂಧಿಸಿದ ತಾತ್ಪೂರ್ತಿಕ ಸಮಿತಿಯ ನಿರ್ಣಯಕ್ಕೆ ಒಳಪಡುತ್ತದೆ.

## ಭಾಗ –III
## ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಒಳಗೊಂಡ ಮೂಲಭೂತ ಹಕ್ಕುಗಳು

೧. **ಮೂಲಭೂತ ಹಕ್ಕುಗಳು:**–– [ಸಂವಿಧಾನ ಸಭೆಯಲ್ಲಿ ಅಂಗೀಕರಿಸಲಾಗಿರುವ ಮೂಲಭೂತ ಹಕ್ಕುಗಳು ಮತ್ತು ರಾಜ್ಯನೀತಿ ತತ್ವಗಳನ್ನು ಇಲ್ಲಿ ವಿವರಿಸಲಾಗಿದೆ)

## ಭಾಗ – IV
## ಅಧ್ಯಾಯ – I

### ಸಂಯುಕ್ತ (ಫೆಡರಲ್) ಕಾರ್ಯಾಂಗ

೧. **ಒಕ್ಕೂಟದ ಮುಖ್ಯಸ್ಥ.**–– (೧) ಒಕ್ಕೂಟದ ಮುಖ್ಯಸ್ಥರು ರಾಷ್ಟ್ರಪತಿಯಾಗಿರತಕ್ಕದು ಅವರನ್ನು ಈ ಕೆಳಗೆ ಉಪಬಂಧಿಸಲಾದಂತೆ ಚುನಾಯಿಸತಕ್ಕದ್ದು:

(೨) ಚುನಾವಣೆಯು,–

(ಎ) ಒಕ್ಕೂಟದ ಸಂಸತ್ತಿನ ಎರಡೂ ಸದನಗಳ ಸದಸ್ಯರನ್ನು; ಹಾಗೂ

(ಬಿ) ಎಲ್ಲ ಘಟಕಗಳ ವಿಧಾನ ಮಂಡಲಗಳ ಸದಸ್ಯರನ್ನು ಅಥವಾ ಎರಡು ಸದನಗಳಿರುವ ವಿಧಾನಮಂಡಲಗಳ ಕೆಳ ಸದನದ ಸದಸ್ಯರನ್ನು,

– ಒಳಗೊಂಡಿರುವ ಚುನಾಯಕ ಗಣದ ಮೂಲಕ ನಡೆಯತಕ್ಕದ್ದು

ಘಟಕಗಳ ಪ್ರಾತಿನಿಧ್ಯದ ಪ್ರಮಾಣದಲ್ಲಿ ಏಕರೂಪತೆಯನ್ನು ಪಡೆದುಕೊಳ್ಳುವ ಸಲುವಾಗಿ, ಘಟಕದ ವಿಧಾನಮಂಡಲಗಳ ಮತಗಳನ್ನು ಸಂಬಂಧಪಟ್ಟ ಘಟಕಗಳ ಜನಸಂಖ್ಯೆಯ ಅನುಪಾತಕ್ಕೆ ಅನುಸಾರ ಸರಿದೂಗಿಸಲಾಗುವುದು.

**ವಿವರಣೆ.**–– ಒಂದು ಘಟಕ ಎಂದರೆ, ಒಕ್ಕೂಟ ಸಂಸತ್ತಿಗೆ ತನ್ನ ಸ್ವಂತ ಸೂಕ್ತ ಸದಸ್ಯರನ್ನು ಆಯ್ಕೆ ಮಾಡಿ ಕಳುಹಿಸುವ ಒಂದು ಪ್ರಾಂತ ಅಥವಾ ಭಾರತೀಯ ರಾಜ್ಯ. ರಾಜ್ಯ ಪರಿಷತ್ತಿಗೆ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸುವ ಉದ್ದೇಶಕ್ಕಾಗಿ ಒಟ್ಟಿಗೆ ಗುಂಪುಗೂಡಿರುವ ಭಾರತದ ರಾಜ್ಯಗಳಲ್ಲಿ ಘಟಕ ಎಂದರೆ, ಆ ರೀತಿ ರೂಪುಗೊಂಡ ಒಂದು ಗುಂಪು ಹಾಗೂ ಘಟಕದ ವಿಧಾನಮಂಡಲ ಎಂದರೆ ಗುಂಪಿನಲ್ಲಿರುವ ಎಲ್ಲ ರಾಜ್ಯಗಳ ವಿಧಾನ ಮಂಡಲಗಳು.

(೩) ರಾಷ್ಟ್ರಪತಿಯವರ ಚುನಾವಣೆಯು ರಹಸ್ಯ ಮತದಾನದ ಮೂಲಕ ಮತ್ತು ಏಕ ವರ್ಗಾವಣೀಯ

ಮತದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯ ಪದ್ಧತಿಯ ಆಧಾರದ ಮೇಲೆ ನಡೆಯತಕ್ಕದ್ದು.

(೪) ಮೇಲಿನ ಉಪಬಂಧಗಳಿಗೆ ಒಳಪಟ್ಟು, ರಾಷ್ಟ್ರಪತಿ ಹುದ್ದೆಯ ಚುನಾವಣೆಯನ್ನು ಒಕ್ಕೂಟ ಸಂಸತ್ತಿನ ಅಧಿನಿಯಮದ ಮೂಲಕ ವಿನಿಯಮಿಸತಕ್ಕದ್ದು.

[**ಟಿಪ್ಪಣಿ** – – ದೊಡ್ಡ ಘಟಕದ ಮತಗಳು, ತುಲನಾತ್ಮಕವಾಗಿ ದೊಡ್ಡ ವಿಧಾನಮಂಡಲ ಇರಬಹುದಾದ ಅತಿ ಚಿಕ್ಕ ಘಟಕಗಳ ಮತಗಳನ್ನು ನಿಷ್ಕ್ರಿಯಗೊಳಿಸಬಹುದಾದ ಸಾಧ್ಯತೆಯನ್ನು ತಡೆಯಲು, ಘಟಕಗಳ ಜನಸಂಖ್ಯೆಗನುಸಾರವಾಗಿ ಮತಗಳನ್ನು ಸರಿದೂಗಿಸುವ ಕುರಿತು ಉಪಬಂಧವು ಇರುವುದುಅವಶ್ಯಕವಾಗಿದೆ. ಮತಗಳನ್ನು ಸರಿದೂಗಿಸುವ ವಿಧಾನವನ್ನು ಮುಂದಿನಂತೆ ವಿವರಿಸಬಹುದು: ಪ್ರತಿಯೊಬ್ಬ ಶಾಸಕನು, ೧ ಲಕ್ಷ (೧,೦೦,೦೦೦) ಜನಸಂಖ್ಯೆಯನ್ನು ಪ್ರತಿನಿಧಿಸುವ ವಿಧಾನ ಮಂಡಲದಲ್ಲಿ, ೧೦೦ ಮತಗಳಿಗೆ ಅವರ ಒಂದು ಮತವನ್ನು ಸಮವೆಂದು ಪರಿಗಣಿಸತಕ್ಕದ್ದು, ಎಂದರೆ, ಪ್ರತಿ ೧,೦೦೦ ಜನಸಂಖ್ಯೆಗೆ ೧ ಮತ ಎಂಬುದಾಗಿ; ಮತ್ತು ಒಬ್ಬ ಶಾಸಕನು ೧೦,೦೦೦ ಜನಸಂಖ್ಯೆಯನ್ನು ಪ್ರತಿನಿಧಿಸಿದಲ್ಲಿ, ಅವರ ಮತವನ್ನು ಅದೇ ಪ್ರಮಾಣಕ್ಕೆ ೧೦ ಮತಗಳಿಗೆ ಸಮವೆಂದು ಪರಿಗಣಿಸಲಾಗುವುದು].

**೨. ರಾಷ್ಟ್ರಪತಿಯವರ ಪದಾವಧಿ** –– (೧) ರಾಷ್ಟ್ರಪತಿ ೫ ವರ್ಷಗಳ ಅವಧಿಯವರೆಗೆ ಪದಧಾರಣ ಮಾಡಿರತಕ್ಕದ್ದು:

ಪರಂತು–

(ಎ) ತನ್ನ ಹಸ್ತಾಕ್ಷರದಲ್ಲಿ ಪತ್ರ ಬರೆದು, ರಾಜ್ಯ ಸಭೆಯ ಸಭಾಪತಿಯವರಿಗೆ ಮತ್ತು ಲೋಕಸಭೆಯ ಸಭಾಧ್ಯಕ್ಷರಿಗೆ, ರಾಷ್ಟ್ರಪತಿಯವರು ತಮ್ಮ ಪದಕ್ಕೆ ರಾಜೀನಾಮೆಯನ್ನು ನೀಡಬಹುದು.

(ಬಿ) ರಾಷ್ಟ್ರಪತಿಯವರು,ಸಂವಿಧಾನವನ್ನು ಉಲ್ಲಂಘಿಸಿದ್ದ ಸಂದರ್ಭದಲ್ಲಿ, (೨)ನೇ ಉಪಖಂಡದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಮಹಾಭಿಯೋಗದ ಮೂಲಕ ಪದದಿಂದ ತೆಗೆದುಹಾಕಬಹುದು.

(೨) ರಾಷ್ಟ್ರಪತಿಯವರು, ಸಂವಿಧಾನವನ್ನು ಉಲ್ಲಂಘಿಸಿದ ಸಂದರ್ಭದಲ್ಲಿ, ಮಹಾಭಿಯೋಗಕ್ಕೆ ಗುರಿಪಡಿಸಬೇಕಾದಾಗ, ಒಕ್ಕೂಟ ಸಂಸತ್ತಿನ ಯಾವುದೇ ಸದನದ ಮೂಲಕವಾದರೂ ದೋಷಾರೋಪವನ್ನು ಮಾಡಬಹುದು, ಆದರೆ, ಅಂಥ ದೋಷಾರೋಪವನ್ನು ಮಾಡುವ ಯಾವುದೇ ಪ್ರಸ್ತಾವವನ್ನು, ಸದನದ ಒಟ್ಟು ಸದಸ್ಯರ ಮೂರನೇ ಎರಡರಷ್ಟಕ್ಕಿಂತ ಕಡಿಮೆಯಿಲ್ಲದ ಸದಸ್ಯರ ಬೆಂಬಲದಿಂದ ಸದನದ ನಿರ್ಣಯವನ್ನು ಪಡೆದ ಹೊರತು ಆ ಸದನವು ಅಂಗೀಕರಿಸತಕ್ಕದ್ದಲ್ಲ.

(ಬಿ) ಒಕ್ಕೂಟ ಸಂಸತ್ತಿನ ಯಾವುದೇ ಒಂದು ಸದನವು, ಹಾಗೆ ದೋಷಾರೋಪವನ್ನು ಮಾಡಿರುವಾಗ, ಇನ್ನೊಂದು ಸದನವು ದೋಷಾರೋಪದ ಬಗ್ಗೆ ತನಿಖೆ ಮಾಡತಕ್ಕದ್ದು ಅಥವಾ ತನಿಖೆ ಮಾಡಿಸತಕ್ಕದ್ದು ಮತ್ತು ಅಂಥ ತನಿಖೆಯಲ್ಲಿ ರಾಷ್ಟ್ರಪತಿ ಹಾಜರಿರಲು ಅಥವಾ ತಮ್ಮನ್ನು ಪ್ರತಿನಿಧಿಸಲು ಹಕ್ಕನ್ನು ಹೊಂದಿರತಕ್ಕದ್ದು.

(ಸಿ) ತನಿಖೆಯ ಪರಿಣಾಮವಾಗಿ ದೋಷಾರೋಪದ ಅಥವಾ ತನಿಖೆ ಮಾಡಿಸಿದ ಸದನದ ಒಟ್ಟು ಸದಸ್ಯರ ಮೂರನೇ ಎರಡರಷ್ಟಕ್ಕಿಂತ ಕಡಿಮೆಯಲ್ಲದಷ್ಟು ಸದಸ್ಯರ ಬೆಂಬಲದಿಂದ ರಾಷ್ಟ್ರಪತಿಯವರ ವಿರುದ್ಧ ಮಾಡಿರುವ ದೋಷಾರೋಪವು ಸಮರ್ಥಿತವಾಗಿದೆ ಎಂದು ಘೋಷಿಸುವ ನಿರ್ಣಯವು ಅಂಗೀಕೃತವಾದರೆ, ಆ ನಿರ್ಣಯವು ಹಾಗೆ ಅಂಗೀಕೃತವಾದ ದಿನಾಂಕದಿಂದ ರಾಷ್ಟ್ರಪತಿಯವರನ್ನು ಪದದಿಂದ ತೆಗೆದುಹಾಕುವಂಥ ಪರಿಣಾಮವುಳ್ಳದ್ದಾಗಿರತಕ್ಕದ್ದು.

(೩) ರಾಷ್ಟ್ರಪತಿಯಾಗಿ ಪದಧಾರಣ ಮಾಡಿರುವ ಅಥವಾ ಮಾಡಿದ್ದ ವ್ಯಕ್ತಿಯು, ಮತ್ತೊಮ್ಮೆ ಚುನಾಯಿತರಾಗಲು ಅರ್ಹರು, ಆದರೆ ಒಮ್ಮೆ ಮಾತ್ರ.

[**ಟಿಪ್ಪಣಿ** – (೧)(ಬಿ) ಮತ್ತು (೨)ನೇ ಉಪಖಂಡಗಳು ಐರಿಷ್ ಸಂವಿಧಾನದ ೧೨(೧೦) ಅನುಚ್ಛೇದದ

ಅನುಸರಣೆಯಾಗಿವೆ ಮತ್ತು (೩)ನೇ ಉಪಖಂಡವನ್ನು ಸಹ ಐರಿಷ್ ಸಂವಿಧಾನದಿಂದ ತೆಗೆದುಕೊಳ್ಳಲಾಗಿದೆ.]

(೩) **ವಯಸ್ಸಿನ ಅರ್ಹತೆ**-- ಮೂವತ್ತೈದು ವಯಸ್ಸು ಪೂರ್ತಿಯಾಗಿರುವ ಹಾಗೂ ಲೋಕಸಭೆ ಸದಸ್ಯನಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹರಾಗಿರುವ, ಒಕ್ಕೂಟದ ಪ್ರತಿಯೊಬ್ಬ ನಾಗರಿಕನು ರಾಷ್ಟ್ರಪತಿ ಚುನಾವಣೆಯಲ್ಲಿ ಭಾಗವಹಿಸಲು ಅರ್ಹನಾಗಿರತಕ್ಕದ್ದು.

[**ಟಿಪ್ಪಣಿ:** ಇದು ಯು.ಎಸ್.ಎ. ಸಂವಿಧಾನದ IIನೇ ಅನುಚ್ಛೇದದ ೧(೫)ನೇ ಪ್ರಕರಣ ಹಾಗೂ ಐರಿಷ್ ಸಂವಿಧಾನದ ೧೨(೪)ನೇ ಅನುಚ್ಛೇದದ ಅನುಸರಣೆಯಾಗಿದೆ.)

**೪. ರಾಷ್ಟ್ರಪತಿ ಪದದ ಷರತ್ತುಗಳು**--- (೧) ರಾಷ್ಟ್ರಪತಿಯವರು, ಸಂಯುಕ್ತ ಸಂಸತ್ತಿನ ಯಾವುದೇ ಸದನದ ಸದಸ್ಯರಾಗಿರತಕ್ಕದ್ದಲ್ಲ ಮತ್ತು ಯಾವುದೇ ಸದನದ ಸದಸ್ಯರು ರಾಷ್ಟ್ರಪತಿಯಾಗಿ ಚುನಾಯಿತರಾದರೆ, ಅವರು ಆ ಸದನದಲ್ಲಿನ ತನ್ನ ಸ್ಥಾನವನ್ನು ತೆರವುಗೊಳಿಸಿರುವನೆಂದು ಭಾವಿಸತಕ್ಕದ್ದು.

(೨) ರಾಷ್ಟ್ರಪತಿಯವರು ಇತರ ಯಾವುದೇ ಲಾಭದಾಯಕ ಪದವನ್ನು ಧಾರಣ ಮಾಡತಕ್ಕದ್ದಲ್ಲ.

(೩) ರಾಷ್ಟ್ರಪತಿಯವರು ಅಧಿಕೃತ ನಿವಾಸವನ್ನು ಹೊಂದಿರತಕ್ಕದ್ದು ಮತ್ತು ಸಂಯುಕ್ತ ಸಂಸತ್ತಿನ ಅಧಿನಿಯಮದ ಮೂಲಕ ನಿರ್ಧರಿಸಬಹುದಾದಂಥ ಉಪಲಬ್ಧಿಗಳನ್ನು ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು ಹಾಗೂ ಹಾಗೆ ನಿರ್ಧರಿಸುವವರೆಗೆ ಅನುಸೂಚಿಯಲ್ಲಿ ನಿಯಮಿಸಬಹುದಾದಂಥ ಉಪಲಬ್ಧಿಗಳನ್ನು ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು.

(೪) ರಾಷ್ಟ್ರಪತಿಯವರ ಉಪಲಬ್ಧಿಗಳನ್ನು ಹಾಗೂ ಭತ್ಯೆಗಳನ್ನು ಅವರ ಪದಾವಧಿಯಲ್ಲಿ ಕಡಿತಗೊಳಿಸತಕ್ಕದ್ದಲ್ಲ.

[**ಟಿಪ್ಪಣಿ.**--- ಇವು ಐರಿಷ್ ಸಂವಿಧಾನದ ೧೨(೬) ಮತ್ತು (೧೧)ನೇ ಅನುಚ್ಛೇದದ ಉಪಬಂಧಗಳ ಅನುಸರಣೆಯಾಗಿದೆ.]

**೫. ಆಕಸ್ಮಿಕ ಖಾಲಿಸ್ಥಾನಗಳು ಹಾಗೂ ಚುನಾವಣೆಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ.**--- ಆಕಸ್ಮಿಕ ಖಾಲಿಸ್ಥಾನಗಳನ್ನು ತುಂಬಲು ನಡೆಸಲಾಗುವ ಚುನಾವಣೆಗಳಿಗಾಗಿ ಸೂಕ್ತ ಉಪಬಂಧಗಳನ್ನು ರಚಿಸತಕ್ಕದು. ಪದವು ಆಕಸ್ಮಿಕವಾಗಿ ತೆರವಾಗಿರಲಿ ಅಥವಾ ಆಗಿಲ್ಲದಿರಲಿ, ಅವುಗಳಿಗೆ ಸಂಬಂಧಿಸಿದ ಎಲ್ಲ ಚುನಾವಣೆಗಳಿಗಾಗಿ ವಿವರವಾದ ಕಾರ್ಯವಿಧಾನಗಳನ್ನು ಸಂಯುಕ್ತ ಸಂಸತ್ತು ರಚಿಸಿದ ಅಧಿನಿಯಮದ ಮೂಲಕ ವಿನಿಯಮಿಸತಕ್ಕದ್ದು:

ಪರಂತು—

(ಎ) ಆಕಸ್ಮಿಕವಾಗಿ ಉಂಟಾದ ಖಾಲಿ ಸ್ಥಾನವನ್ನು ತುಂಬಲು ಚುನಾವಣೆಯನ್ನು ಕಾರ್ಯಸಾಧ್ಯವಾದಷ್ಟು ಬೇಗನೆ ಮತ್ತು ಯಾವುದೇ ಸಂದರ್ಭದಲ್ಲೂ ಸ್ಥಾನ ತೆರವಾದ ದಿನಾಂಕದಿಂದ ಆರು ತಿಂಗಳಿಗಿಂತ ಹೆಚ್ಚಾಗದಂತೆ ನಡೆಸತಕ್ಕದ್ದು; ಮತ್ತು

(ಬಿ) ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬಲು ನಡೆಸಲಾಗುವ ಚುನಾವಣೆಯಲ್ಲಿ ರಾಷ್ಟ್ರಪತಿಯಾಗಿ ಚುನಾಯಿತನಾಗುವ ವ್ಯಕ್ತಿಯು, ಐದು ವರ್ಷಗಳ ಪೂರ್ಣಾವಧಿವರೆಗೆ ಪದಧಾರಣ ಮಾಡತಕ್ಕದ್ದು.

**೬. ಉಪರಾಷ್ಟ್ರಪತಿ.**--- ರಾಷ್ಟ್ರಪತಿಯವರ ಅನುಪಸ್ಥಿತಿಯಲ್ಲಿ ಅಥವಾ, ಅವರ ಮರಣದಿಂದ, ರಾಜಿನಾಮೆಯಿಂದ, ಪದದಿಂದ ತೆಗೆದುಹಾಕುವುದರಿಂದ ಅಥವಾ ಅವರು ತಮ್ಮ ಪದದ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥರಾದ ಅಥವಾ ವಿಫಲರಾದ ಸಂದರ್ಭದಲ್ಲಿ ಅಥವಾ ರಾಷ್ಟ್ರಪತಿಯವರ ಪದವು ಖಾಲಿಯಾಗಬಹುದಾದ ಯಾವುದೇ ಸಮಯದಲ್ಲಿ, ರಾಷ್ಟ್ರಪತಿಯವರು ತಮ್ಮ ಕರ್ತವ್ಯಗಳನ್ನು ಪುನಃ ವಹಿಸಿಕೊಳ್ಳುವವರೆಗೆ ಅಥವಾ ಸಂದರ್ಭಾನುಸಾರವಾಗಿ ನೂತನ ರಾಷ್ಟ್ರಪತಿಯವರ ಚುನಾವಣೆ ನಡೆಯುವವರೆಗೆ, ಉಪರಾಷ್ಟ್ರಪತಿ ರಾಷ್ಟ್ರಪತಿಯವರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(೨) ಏಕ ವರ್ಗಾವಣೀಯ ಮತದ ಮೂಲಕ ದಾಮಾಷಾ ಪ್ರಾತಿನಿಧ್ಯದ ಪದ್ಧತಿಯ ಆಧಾರದ ಮೇಲೆ ರಹಸ್ಯ ಮತದಾನದ ಮೂಲಕ ಜಂಟಿ ಅಧಿವೇಶನದಲ್ಲಿ ಸಂಯುಕ್ತ ಸಂಸತ್ತಿನ ಎರಡೂ ಸದನಗಳು ಉಪ–ರಾಷ್ಟ್ರಪತಿಯವರನ್ನು ಚುನಾಯಿಸತಕ್ಕದ್ದು ಮತ್ತು ಅವರು ರಾಜ್ಯ ಸಭೆಯ ಪದನಿಮಿತ್ತ ಸಭಾಪತಿಯಾಗಿರತಕ್ಕದ್ದು.

(೩) ಉಪರಾಷ್ಟ್ರಪತಿಯವರು ಐದು ವರ್ಷಗಳವರೆಗೆ ಪದಧಾರಣ ಮಾಡತಕ್ಕದ್ದು.

**೭. ರಾಷ್ಟ್ರಪತಿಯವರ ಪ್ರಕಾರ್ಯಗಳು.**–– (೧) ಸಂವಿಧಾನದ ಉಪಬಂಧಗಳಿಗೊಳಪಟ್ಟು, ಒಕ್ಕೂಟದ ಕಾರ್ಯನಿರ್ವಹಣಾ ಅಧಿಕಾರವು ರಾಷ್ಟ್ರಪತಿಯಲ್ಲಿ ನಿಹಿತವಾಗಿರತಕ್ಕದ್ದು.

(೨) ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ–

(ಎ) ಒಕ್ಕೂಟದ ರಕ್ಷಣಾ ಪಡೆಗಳ ಸರ್ವೋಚ್ಚ ಅಧಿಕಾರವು ರಾಷ್ಟ್ರಪತಿಯವರಲ್ಲಿ ನಿಹಿತವಾಗಿರತಕ್ಕದ್ದು;

(ಆ) ಕ್ರಿಮಿನಲ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ, ಯಾವುದೇ ನ್ಯಾಯಾಲಯವು ವಿಧಿಸುವ ಶಿಕ್ಷೆಗೆ ಕ್ಷಮಾದಾನ ನೀಡುವ ಮತ್ತು ಅದನ್ನು ತಗ್ಗಿಸುವ ಅಥವಾ ಮಾಫಿ ಮಾಡುವ ಅಧಿಕಾರವು ರಾಷ್ಟ್ರಪತಿಯಲ್ಲಿ ನಿಹಿತವಾಗಿರತಕ್ಕದ್ದು, ಆದರೆ ಶಿಕ್ಷೆಯನ್ನು ತಗ್ಗಿಸುವ ಅಥವಾ ಮಾಫಿ ಮಾಡುವ ಅಂಥ ಅಧಿಕಾರವನ್ನು ಇತರ ಪ್ರಾಧಿಕಾರಗಳಿಗೆ ಸಹ ಕಾನೂನಿನ ಮೂಲಕ ಪ್ರದಾನ ಮಾಡಬಹುದು.

[**ಟಿಪ್ಪಣಿ.**–– ೨(ಬಿ) ಉಪಖಂಡದ ಓರೆ ಲಿಪಿಯಲ್ಲಿರುವ (ಇಟಾಲಿಕ್ಸ್‌ನಲ್ಲಿರುವ) ಪದಗಳು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ಉಪಬಂಧಗಳ ಕಾರಣದಿಂದಾಗಿ ಅವಶ್ಯಕವಾಗಿದ್ದು, ಅವು, ಈ ಸಂಬಂಧದಲ್ಲಿ ನೂತನ ಸಂವಿಧಾನದ ಪ್ರಾರಂಭದ ನಂತರವೂ ಜಾರಿಯಲ್ಲಿರುತ್ತವೆ. ಅದೇ ರೀತಿಯ ಪರಿಮಿತಿಗೊಳಿಸುವ ಪದಗಳು ಐರಿಷ್ ಸಂವಿಧಾನದಲ್ಲಿ ಬರುತ್ತವೆ).

**೮. ಒಕ್ಕೂಟದ ಕಾರ್ಯಾಂಗ ಅಧಿಕಾರದ ವ್ಯಾಪ್ತಿ.**–– ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು, ಒಕ್ಕೂಟ ಸಂಸತ್ತಿಗೆ, ಕಾನೂನುಗಳನ್ನು ರಚಿಸಲು ಅಧಿಕಾರವಿರುವ ಮತ್ತು ಯಾವುದೇ ಒಡಂಬಡಿಕೆ ಅಥವಾ ಒಪ್ಪಂದದ ಮೂಲಕ ಒಕ್ಕೂಟಕ್ಕೆ ಅಧಿಕಾರ ಪ್ರದಾನ ಮಾಡಿರುವ ಮತ್ತು ತನ್ನದೇ ಏಜನ್ಸಿಯ ಮೂಲಕವಾಗಲಿ ಅಥವಾ ಘಟಕಗಳ ಮೂಲಕವಾಗಲಿ ಚಲಾಯಿಸತಕ್ಕಂಥ ಇತರೆ ಯಾವುವೇ ವಿಷಯಗಳಿಗೆ ಸಂಬಂಧಿಸಿದಂತೆ ಒಕ್ಕೂಟದ ಕಾರ್ಯಾಂಗದ ಅಧಿಕಾರವನ್ನು ವಿಸ್ತರಿಸತಕ್ಕದ್ದು.

೯. ಒಕ್ಕೂಟಕ್ಕೆ ಸೇರಿದ ರಾಜ್ಯದ ರಾಜನ ಕಾರ್ಯಾಂಗ ಅಧಿಕಾರವು, ಒಕ್ಕೂಟ ವಿಷಯಗಳಿಗೆ ಸಂಬಂಧಿಸಿದಂತೆ,ಸಮುಚಿತ ಒಕ್ಕೂಟ ಪ್ರಾಧಿಕಾರವು ಅನ್ಯಥಾ ಉಪಬಂಧಿಸುವವರೆಗೆ, ಆ ರಾಜ್ಯದಲ್ಲಿ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

[**ವಿವರಣೆ.**––  ೧೯೩೫ರ ಅಧಿನಿಯಮದ ೮(೨)ನೇ ಪ್ರಕರಣದಲ್ಲಿರುವ ಸಂವಾದಿ ಉಪಬಂಧದಂತೆ, ಈ ಖಂಡವು ಒಕ್ಕೂಟಕ್ಕೆ ಸೇರಲು ಒಪ್ಪಿಕೊಂಡಿರುವ ಭಾರತದ ರಾಜ್ಯಗಳ ರಾಜರಿಗೆ, ಒಕ್ಕೂಟ ಪ್ರಾಧಿಕಾರವು ಅನ್ಯಥಾ ಉಪಬಂಧ ಕಲ್ಪಿಸುವವರೆಗೆ, ಒಕ್ಕೂಟದ ವಿಷಯಗಳಲ್ಲಿಯೂ ಸಹವರ್ತಿ ಕಾರ್ಯಾಂಗ ಅಧಿಕಾರವನ್ನು ನೀಡುತ್ತದೆ. (ಈ ಸಂಬಂಧದಲ್ಲಿ, ಪ್ರಾಂತೀಯ ಘಟಕಗಳ ಸ್ಥಾನವು ಸ್ವಲ್ಪ ಭಿನ್ನವಾಗಿರುತ್ತದೆ: ಒಕ್ಕೂಟ ಕಾನೂನಿನಲ್ಲಿ ನೀಡಿರುವುದನ್ನುಳಿದು, ಒಕ್ಕೂಟ ವಿಷಯಗಳಿಗೆ ಸಂಬಂಧಿಸಿದಂತೆ ಇವುಗಳು ಯಾವುದೇ ಕಾರ್ಯಾಂಗ ಅಧಿಕಾರವನ್ನು ಹೊಂದಿರುವುದಿಲ್ಲ). ಅಂಥ ಖಂಡದ ಅವಶ್ಯಕತೆ ಇದೆ. ಇಲ್ಲವಾದರೆ ಈ ಸಂವಿಧಾನದ ಪ್ರಾರಂಭದ ನಂತರ ಒಕ್ಕೂಟ ಸೇರಲು ಸಮ್ಮತಿಸಿರುವ ರಾಜ್ಯಗಳಲ್ಲಿ, ಒಕ್ಕೂಟ ವಿಷಯಗಳಿಗೆ ಸಂಬಂಧಿಸಿದ ಎಲ್ಲ ಶಾಸನಬದ್ಧ ಅಧಿಕಾರಗಳು ಅಂತ್ಯಗೊಳ್ಳುತ್ತವೆ).

೧೦. **ಮಂತ್ರಿ ಮಂಡಲ.**––  ರಾಷ್ಟ್ರಪತಿಯವರಿಗೆ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ಅವರಿಗೆ

(೨) ಏಕ ವರ್ಗಾವಣೀಯ ಮತದ ಮೂಲಕ ದಾಮಾಷಾ ಪ್ರಾತಿನಿಧ್ಯದ ಪದ್ಧತಿಯ ಆಧಾರದ ಮೇಲೆ ರಹಸ್ಯ ಮತದಾನದ ಮೂಲಕ ಜಂಟಿ ಅಧಿವೇಶನದಲ್ಲಿ ಸಂಯುಕ್ತ ಸಂಸತ್ತಿನ ಎರಡೂ ಸದನಗಳು ಉಪ–ರಾಷ್ಟ್ರಪತಿಯವರನ್ನು ಚುನಾಯಿಸತಕ್ಕದ್ದು ಮತ್ತು ಅವರು ರಾಜ್ಯ ಸಭೆಯ ಪದನಿಮಿತ್ತ ಸಭಾಪತಿಯಾಗಿರತಕ್ಕದ್ದು.

(೩) ಉಪರಾಷ್ಟ್ರಪತಿಯವರು ಐದು ವರ್ಷಗಳವರೆಗೆ ಪದಧಾರಣ ಮಾಡತಕ್ಕದ್ದು.

**೭. ರಾಷ್ಟ್ರಪತಿಯವರ ಪ್ರಕಾರ್ಯಗಳು.**–– (೧) ಸಂವಿಧಾನದ ಉಪಬಂಧಗಳಿಗೊಳಪಟ್ಟು, ಒಕ್ಕೂಟದ ಕಾರ್ಯನಿರ್ವಹಣಾ ಅಧಿಕಾರವು ರಾಷ್ಟ್ರಪತಿಯಲ್ಲಿ ನಿಹಿತವಾಗಿರತಕ್ಕದ್ದು.

(೨) ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ–

(ಎ) ಒಕ್ಕೂಟದ ರಕ್ಷಣಾ ಪಡೆಗಳ ಸರ್ವೋಚ್ಚ ಅಧಿಕಾರವು ರಾಷ್ಟ್ರಪತಿಯವರಲ್ಲಿ ನಿಹಿತವಾಗಿರತಕ್ಕದ್ದು;

(ಆ) ಕ್ರಿಮಿನಲ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ, ಯಾವುದೇ ನ್ಯಾಯಾಲಯವು ವಿಧಿಸುವ ಶಿಕ್ಷೆಗೆ ಕ್ಷಮಾದಾನ ನೀಡುವ ಮತ್ತು ಅದನ್ನು ತಗ್ಗಿಸುವ ಅಥವಾ ಮಾಫಿ ಮಾಡುವ ಅಧಿಕಾರವು ರಾಷ್ಟ್ರಪತಿಯಲ್ಲಿ ನಿಹಿತವಾಗಿರತಕ್ಕದ್ದು, ಆದರೆ ಶಿಕ್ಷೆಯನ್ನು ತಗ್ಗಿಸುವ ಅಥವಾ ಮಾಫಿ ಮಾಡುವ ಅಂಥ ಅಧಿಕಾರವನ್ನು ಇತರ ಪ್ರಾಧಿಕಾರಗಳಿಗೆ ಸಹ ಕಾನೂನಿನ ಮೂಲಕ ಪ್ರದಾನ ಮಾಡಬಹುದು.

[**ಟಿಪ್ಪಣಿ.**–– ೨(ಬಿ) ಉಪಖಂಡದ ಓರೆ ಲಿಪಿಯಲ್ಲಿರುವ (ಇಟಾಲಿಕ್ಸ್‌ನಲ್ಲಿರುವ) ಪದಗಳು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ಉಪಬಂಧಗಳ ಕಾರಣದಿಂದಾಗಿ ಅವಶ್ಯಕವಾಗಿದ್ದು, ಅವು, ಈ ಸಂಬಂಧದಲ್ಲಿ ನೂತನ ಸಂವಿಧಾನದ ಪ್ರಾರಂಭದ ನಂತರವೂ ಜಾರಿಯಲ್ಲಿರುತ್ತವೆ. ಅದೇ ರೀತಿಯ ಪರಿಮಿತಿಗೊಳಿಸುವ ಪದಗಳು ಐರಿಷ್ ಸಂವಿಧಾನದಲ್ಲಿ ಬರುತ್ತವೆ).

**೮. ಒಕ್ಕೂಟದ ಕಾರ್ಯಾಂಗ ಅಧಿಕಾರದ ವ್ಯಾಪ್ತಿ.**–– ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು, ಒಕ್ಕೂಟ ಸಂಸತ್ತಿಗೆ, ಕಾನೂನುಗಳನ್ನು ರಚಿಸಲು ಅಧಿಕಾರವಿರುವ ಮತ್ತು ಯಾವುದೇ ಒಡಂಬಡಿಕೆ ಅಥವಾ ಒಪ್ಪಂದದ ಮೂಲಕ ಒಕ್ಕೂಟಕ್ಕೆ ಅಧಿಕಾರ ಪ್ರದಾನ ಮಾಡಿರುವ ಮತ್ತು ತನ್ನದೇ ಏಜನ್ಸಿಯ ಮೂಲಕವಾಗಲಿ ಅಥವಾ ಘಟಕಗಳ ಮೂಲಕವಾಗಲಿ ಚಲಾಯಿಸತಕ್ಕಂಥ ಇತರೆ ಯಾವುವೇ ವಿಷಯಗಳಿಗೆ ಸಂಬಂಧಿಸಿದಂತೆ ಒಕ್ಕೂಟದ ಕಾರ್ಯಾಂಗದ ಅಧಿಕಾರವನ್ನು ವಿಸ್ತರಿಸತಕ್ಕದ್ದು.

೯. ಒಕ್ಕೂಟಕ್ಕೆ ಸೇರಿದ ರಾಜ್ಯದ ರಾಜನ ಕಾರ್ಯಾಂಗ ಅಧಿಕಾರವು, ಒಕ್ಕೂಟ ವಿಷಯಗಳಿಗೆ ಸಂಬಂಧಿಸಿದಂತೆ,ಸಮುಚಿತ ಒಕ್ಕೂಟ ಪ್ರಾಧಿಕಾರವು ಅನ್ಯಥಾ ಉಪಬಂಧಿಸುವವರೆಗೆ, ಆ ರಾಜ್ಯದಲ್ಲಿ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

[**ವಿವರಣೆ.**–– ೧೯೩೫ರ ಅಧಿನಿಯಮದ ೮(೨)ನೇ ಪ್ರಕರಣದಲ್ಲಿರುವ ಸಂವಾದಿ ಉಪಬಂಧದಂತೆ, ಈ ಖಂಡವು ಒಕ್ಕೂಟಕ್ಕೆ ಸೇರಲು ಒಪ್ಪಿಕೊಂಡಿರುವ ಭಾರತದ ರಾಜ್ಯಗಳ ರಾಜರಿಗೆ, ಒಕ್ಕೂಟ ಪ್ರಾಧಿಕಾರವು ಅನ್ಯಥಾ ಉಪಬಂಧ ಕಲ್ಪಿಸುವವರೆಗೆ, ಒಕ್ಕೂಟದ ವಿಷಯಗಳಲ್ಲಿಯೂ ಸಹವರ್ತಿ ಕಾರ್ಯಾಂಗ ಅಧಿಕಾರವನ್ನು ನೀಡುತ್ತದೆ. (ಈ ಸಂಬಂಧದಲ್ಲಿ, ಪ್ರಾಂತೀಯ ಘಟಕಗಳ ಸ್ಥಾನವು ಸ್ವಲ್ಪ ಭಿನ್ನವಾಗಿರುತ್ತದೆ: ಒಕ್ಕೂಟ ಕಾನೂನಿನಲ್ಲಿ ನೀಡಿರುವುದನ್ನುಳಿದು, ಒಕ್ಕೂಟ ವಿಷಯಗಳಿಗೆ ಸಂಬಂಧಿಸಿದಂತೆ ಇವುಗಳು ಯಾವುದೇ ಕಾರ್ಯಾಂಗ ಅಧಿಕಾರವನ್ನು ಹೊಂದಿರುವುದಿಲ್ಲ). ಅಂಥ ಖಂಡದ ಅವಶ್ಯಕತೆ ಇದೆ. ಇಲ್ಲವಾದರೆ ಈ ಸಂವಿಧಾನದ ಪ್ರಾರಂಭದ ನಂತರ ಒಕ್ಕೂಟ ಸೇರಲು ಸಮ್ಮತಿಸಿರುವ ರಾಜ್ಯಗಳಲ್ಲಿ, ಒಕ್ಕೂಟ ವಿಷಯಗಳಿಗೆ ಸಂಬಂಧಿಸಿದ ಎಲ್ಲ ಶಾಸನಬದ್ಧ ಅಧಿಕಾರಗಳು ಅಂತ್ಯಗೊಳ್ಳುತ್ತವೆ).

**೧೦. ಮಂತ್ರಿ ಮಂಡಲ.**–– ರಾಷ್ಟ್ರಪತಿಯವರಿಗೆ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ಅವರಿಗೆ

ನೆರವು ಮತ್ತು ಸಲಹೆ ನೀಡಲು, ಪ್ರಧಾನ ಮಂತ್ರಿಯ ನೇತೃತ್ವದಲ್ಲಿ ಒಂದು ಮಂತ್ರಿ ಮಂಡಲವಿರತಕ್ಕದ್ದು.

೧೧. **ಒಕ್ಕೂಟದ ಅಡ್ವೋಕೇಟ್ ಜನರಲ್.**— ರಾಷ್ಟ್ರಪತಿಯವರು, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಳ್ಳಲು ಅರ್ಹತೆ ಇರುವ ಒಬ್ಬ ವ್ಯಕ್ತಿಯನ್ನು, ಒಕ್ಕೂಟದ ಅಡ್ವೋಕೇಟ್ ಜನರಲ್ ಆಗಿ ನೇಮಕ ಮಾಡತಕ್ಕದ್ದು, ಆತನಿಗೆ ಕಳುಹಿಸಿಕೊಟ್ಟ ನ್ಯಾಯಿಕ ವಿಷಯಗಳ ಬಗ್ಗೆ ಒಕ್ಕೂಟ ಸರ್ಕಾರಕ್ಕೆ ಆತನು ಸಲಹೆ ನೀಡತಕ್ಕದ್ದು.

೧೨. **ಒಕ್ಕೂಟ ಸರ್ಕಾರದ ಕಾರ್ಯಕಲಾಪ ನಿರ್ವಹಣೆ.**— ಒಕ್ಕೂಟ ಸರ್ಕಾರದ ಕಾರ್ಯಾಂಗದ ಎಲ್ಲ ಕ್ರಮವನ್ನು ರಾಷ್ಟ್ರಪತಿಯವರ ಹೆಸರಿನಲ್ಲಿ ಕೈಗೊಳ್ಳಲಾಗಿದೆ ಎಂದು ವ್ಯಕ್ತವಾಗತಕ್ಕದ್ದು.

## ಅಧ್ಯಾಯ II
## ಒಕ್ಕೂಟ (ಫೆಡರಲ್) ಸಂಸತ್ತು

೧೩. **ಒಕ್ಕೂಟ ಸಂಸತ್ತಿನ ರಚನೆ.**— ಒಕ್ಕೂಟದ ಶಾಸಕಾಂಗ ಅಧಿಕಾರವು, ರಾಷ್ಟ್ರಪತಿಯನ್ನು ಮತ್ತು ಎರಡು ಸದನಗಳನ್ನು ಒಳಗೊಂಡ ಮತ್ತು ರಾಜ್ಯ ಸಭೆ ಮತ್ತು ಲೋಕ ಸಭೆ ಈ ಎರಡೂ ಸದನಗಳನ್ನು ಒಳಗೊಂಡಿರುವ ಒಕ್ಕೂಟದ ಸಂಸತ್ತಿನಲ್ಲಿ ನಿಹಿತವಾಗಿರತಕ್ಕದ್ದು.

೧೪. (೧) (ಎ) ರಾಜ್ಯ ಸಭೆಯು,—

(i) ರಾಷ್ಟ್ರಪತಿಯವರು, ವಿಶ್ವವಿದ್ಯಾನಿಲಯಗಳೊಂದಿಗೆ ಹಾಗೂ ವೈಜ್ಞಾನಿಕ ಸಂಸ್ಥೆಗಳೊಂದಿಗೆ ಸಮಾಲೋಚಿಸಿ, ನಾಮನಿರ್ದೇಶಿಸಿದ ೧೦ಕ್ಕೆ ಹೆಚ್ಚಲ್ಲದ ಸದಸ್ಯರನ್ನು;

(ii) ಐದು ದಶಲಕ್ಷದವರೆಗೆ ಒಂದು ಘಟಕದ ಇಡೀ ಒಂದು ದಶಲಕ್ಷ ಜನಸಂಖ್ಯೆಯ ಪ್ರಮಾಣದ ಆಧಾರದ ಮೇಲೆ ಘಟಕಗಳ ಪ್ರತಿನಿಧಿಗಳು ಮತ್ತು ಒಟ್ಟು ಗರಿಷ್ಠ ೨೦ ದಶಲಕ್ಷ ಜನಸಂಖ್ಯೆಗೆ ಒಳಪಟ್ಟು, ಅದಕ್ಕೂ ಹೆಚ್ಚಿನ ಪ್ರತಿ ಎರಡು ದಶಲಕ್ಷ ಜನಸಂಖ್ಯೆ ಪ್ರಮಾಣದ ಆಧಾರದ ಮೇಲೆ ಘಟಕಗಳ ಪ್ರತಿನಿಧಿಗಳನ್ನು,

– ಒಳಗೊಂಡಿರತಕ್ಕದ್ದು.

**ವಿವರಣೆ.**— ಘಟಕ ಎಂದರೆ, ಒಕ್ಕೂಟ ಸಂಸತ್ತಿಗೆ ತನ್ನದೇ ಆದ ವ್ಯಕ್ತಿಗತ ಸೂಕ್ತ ಸದಸ್ಯರನ್ನು ಆಯ್ಕೆ ಮಾಡಿ ಕಳುಹಿಸುವ ಭಾರತದ ಒಂದು ಪ್ರಾಂತ ಅಥವಾ ರಾಜ್ಯ. ರಾಜ್ಯಸಭೆಗೆ ಪ್ರತಿನಿಧಿಗಳನ್ನು ಚುನಾಯಿಸುವ ಉದ್ದೇಶಕ್ಕೆ ಸಂಬಂಧಿಸಿದಂತೆ ಗುಂಪುಗೂಡಿರುವ ಭಾರತದ ರಾಜ್ಯಗಳ ಘಟಕ ಎಂದರೆ, ಆ ರೀತಿಯಾಗಿ ರೂಪುಗೊಂಡಿರುವ ಒಂದು ಗುಂಪು.

(ಬಿ) ರಾಜ್ಯಸಭೆಯ ಪ್ರತಿಯೊಂದು ಘಟಕದ ಪ್ರತಿನಿಧಿಗಳನ್ನು ಅಂಥ ಘಟಕದ ವಿಧಾನಮಂಡಲದ ಕೆಳಮನೆಯ ಸದಸ್ಯರು ಚುನಾಯಿಸತಕ್ಕದ್ದು.

(ಸಿ) ಲೋಕಸಭೆಯು, ಒಕ್ಕೂಟದ ರಾಜ್ಯಕ್ಷೇತ್ರಗಳ ಜನಪ್ರತಿನಿಧಿಗಳನ್ನು, ಪ್ರತಿ ದಶಲಕ್ಷ ಜನಸಂಖ್ಯೆಗೆ ಒಬ್ಬ ಪ್ರತಿನಿಧಿಗೆ ಕಡಿಮೆಯಲ್ಲದ ಅನುಪಾತದಲ್ಲಿ ಮತ್ತು ಪ್ರತಿ ೭,೫೦,೦೦೦ ಜನಸಂಖ್ಯೆಗೆ ಒಬ್ಬ ಪ್ರತಿನಿಧಿಗೆ ಹೆಚ್ಚಿಲ್ಲದ ಅನುಪಾತದಲ್ಲಿ ಜನಪ್ರತಿನಿಧಿಗಳನ್ನು ಹೊಂದಿರತಕ್ಕದ್ದು.

(ಡಿ) ಪ್ರತಿಯೊಂದು ಮತಕ್ಷೇತ್ರಕ್ಕೆ ಯಾವುದೇ ಸಮಯದಲ್ಲಿ ಚುನಾಯಿಸಬೇಕಾದ ಸದಸ್ಯರ ಸಂಖ್ಯೆ ಮತ್ತು ಹಿಂದಿನ ಜನಗಣತಿಯಿಂದ ತಿಳಿದುಬಂದ ಆ ಮತಕ್ಷೇತ್ರದ ಜನಸಂಖ್ಯೆಯ ನಡುವಿನ ಅನುಪಾತವು ಕಾರ್ಯಸಾಧ್ಯವಿದ್ದಷ್ಟು, ಒಕ್ಕೂಟದ ರಾಜ್ಯಕ್ಷೇತ್ರಗಳಾದ್ಯಂತ ಒಂದೇ ಆಗಿರತಕ್ಕದ್ದು.

೨. ಅನುಸೂಚಿಯಲ್ಲಿ ಆ ಬಗ್ಗೆ ಒಳಗೊಂಡಿರುವ ಉಪಬಂಧಗಳಿಗನುಸಾರವಾಗಿ ಸದರಿ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು;

ಪರಂತು, ಲೋಕಸಭೆಗೆ ಚುನಾವಣೆಗಳನ್ನು ವಯಸ್ಕ ಮತಾಧಿಕಾರದ ಆಧಾರದ ಮೇಲೆ ನಡೆಸತಕ್ಕದ್ದು.

(೩) ಪ್ರತಿ ದಶವಾರ್ಷಿಕ ಜನಗಣತಿಯು ಪೂರ್ಣಗೊಂಡ ನಂತರ, ಎರಡೂ ಸದನಗಳಲ್ಲಿ ಅನೇಕ ಪ್ರಾಂತಗಳ ಮತ್ತು ಭಾರತದ ರಾಜ್ಯಗಳ ಅಥವಾ ಭಾರತದ ರಾಜ್ಯಗಳ ಗುಂಪುಗಳ ಪ್ರತಿನಿಧಿಗಳನ್ನು, ಒಕ್ಕೂಟ ಸಂಸತ್ತು ಕಾನೂನಿನ ಮೂಲಕ ನಿರ್ಧರಿಸಬಹುದಾದ ಪ್ರಾಧಿಕಾರವು, ಆ ರೀತಿಯಲ್ಲಿ, ಅಂಥ ಸಮಯದಲ್ಲಿ ಪಡೆದ ನೆರವಿನಿಂದ ಮರು ಹೊಂದಾಣಿಕೆ ಮಾಡತಕ್ಕದ್ದು.

(೪) ರಾಜ್ಯಸಭೆಯು, ಖಾಯಂ ನಿಕಾಯವಾಗಿರತಕ್ಕದ್ದು ಮತ್ತು ವಿಸರ್ಜನೆಗೆ ಒಳಪಡತಕ್ಕದ್ದಲ್ಲ. ಆದರೆ, ಸಾಧ್ಯವಿದ್ದಷ್ಟುಮಟ್ಟಿಗೆ ಅದರ ಮೂರನೇ ಒಂದರಷ್ಟು ಸದಸ್ಯರು, ಅನುಸೂಚಿಯಲ್ಲಿ ಆ ಬಗ್ಗೆ ಒಳಗೊಂಡಿರುವ ಉಪಬಂಧಗಳಿಗನುಗುಣವಾಗಿ ಪ್ರತಿ ಎರಡು ವರ್ಷಕ್ಕೆ ನಿವೃತ್ತರಾಗತಕ್ಕದ್ದು.

(೫) ಲೋಕಸಭೆಯು, ಪೂರ್ಣ ಅವಧಿಗೆ ಮೊದಲೇ ವಿಸರ್ಜನೆಯಾದ ಹೊರತು, ಅದರ ಮೊದಲ ಸಭೆಯು ನಿಗದಿಯಾದ ದಿನಾಂಕದಿಂದ ನಾಲ್ಕು ವರ್ಷಗಳವರೆಗೆ ಮುಂದುವರೆಯತಕ್ಕದ್ದು ಹಾಗೂ ನಾಲ್ಕು ವರ್ಷಗಳಿಗೆ ಮೀರದಂತೆ, ಮತ್ತು ಸದರಿ ನಾಲ್ಕು ವರ್ಷಗಳ ಅವಧಿಯು ಮುಗಿದಾಗ ಅದು ಅದು ವಿಸರ್ಜಿತ ಸದನವಾಗಿ ಪ್ರವರ್ತಿಸುವುದು.

ಪರಂತು, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸದರಿ ಅವಧಿಯನ್ನು ರಾಷ್ಟ್ರಪತಿಯವರು, ಒಂದು ಸಲಕ್ಕೆ, ಒಂದು ವರ್ಷಕ್ಕೆ ಮೀರದ ಅವಧಿಯವರೆಗೆ ವಿಸ್ತರಿಸಬಹುದು ಮತ್ತು ಯಾವುದೇ ಸಂದರ್ಭದಲ್ಲೂ, ತುರ್ತು ಪರಿಸ್ಥಿತಿಯ ಅವಧಿಯು ಮುಕ್ತಾಯಗೊಂಡ ದಿನಾಂಕದಿಂದ ಆರು ತಿಂಗಳ ಅವಧಿಯನ್ನು ಮೀರತಕ್ಕದ್ದಲ್ಲ.

[**ಟಿಪ್ಪಣಿ.**– ಕೇವಲ "ಸಮ್ಮತಿ ಇರುವ" ಪ್ರಾಂತಗಳನ್ನು ಗಮನದಲ್ಲಿಟ್ಟುಕೊಂಡು, ಈ ಖಂಡವು, ರಾಜ್ಯಸಭೆಗೆ ಸುಮಾರು ೨೫೦ ಸದಸ್ಯರ ಗರಿಷ್ಠ ಬಲವನ್ನು ಹಾಗೂ ಲೋಕಸಭೆಯ ಸದಸ್ಯರ ಗರಿಷ್ಠ ಸಂಖ್ಯೆ ೩೦೦ರಿಂದ ೪೦೦ರ ಒಳಗೆ ಇರುವ ಅವಕಾಶ ಕಲ್ಪಿಸುತ್ತದೆ. ಮುಂದಿನ ಕೋಷ್ಟಕ ರೂಪದ ವಿವರಣಾಪಟ್ಟಿಯು, ಮೇಲ್ಕಂಡ ಯೋಜನೆ ಅಡಿಯಲ್ಲಿ ಮೇಲ್ಮನೆಯ ರಚನೆಯ ಸಾಮಾನ್ಯ ಚಿತ್ರಣವನ್ನು ನೀಡುತ್ತದೆ. (ಕೆಳಮನೆಯ ರಚನೆಯು ಸಂಪೂರ್ಣವಾಗಿ ಜನಗಣತಿಯನ್ನು ಆಧರಿಸಿರುತ್ತದೆ.)]

**ರಾಜ್ಯಸಭೆ**

**ಪ್ರಾಂತಗಳು**

| | |
|---|---|
| ಮದ್ರಾಸ್ | ೨೦ |
| ಬಾಂಬೆ | ೧೨ |
| ಬಂಗಾಳ (ಪ) | ೧೨ |
| ಉತ್ತರಪ್ರದೇಶ | ೨೦ |
| ಪಂಜಾಬ್ (ಪೂ) | ೦೯ |
| ಬಿಹಾರ್ | ೨೦ |
| ಕೇಂದ್ರೀಯ ಪ್ರಾಂತಗಳು (ಸೆಂಟ್ರಲ್ ಪ್ರಾವಿನ್ಸ್) | ೧೦ |
| ಅಸ್ಸಾಂ | ೦೭ |
| ಒರಿಸ್ಸ | ೦೬ |
| **ಒಟ್ಟು** | ೧೧೬ |

| ರಾಜ್ಯಗಳು | |
|---|---|
| ಹೈದರಾಬಾದ್ | ೧೦ |
| ಮೈಸೂರು | ೬ |
| ತಿರುವಾಂಕೂರ್ | ೫ |
| ಬರೋಡ | ೩ |
| ಗ್ವಾಲಿಯರ್ | ೪ |
| ಜೈಪುರ್ | ೩ |
| ಕಾಶ್ಮೀರ | ೪ |
| ಜೋಧಪುರ್ | ೨ |
| ಉದಯ್‌ಪುರ | ೨ |
| ಪಾಟಿಯಾಲ | ೨ |
| ರೇವಾ | ೨ |
| ಕೊಚಿನ್ | ೧ |
| ಬಿಕಾನೇರ್ | ೧ |
| ಕೊಲ್ಹಾಪುರ | ೧ |
| ಇಂದೋರ್ | ೧ |
| **ಒಟ್ಟು** | **೪೭** |

ಒಂದೊಂದರಲ್ಲಿ, ಒಂದು ದಶಲಕ್ಷದಷ್ಟು ಜನಸಂಖ್ಯೆಯಿರುವ ಉಳಿದ ರಾಜ್ಯಗಳ ಗುಂಪುಗಳಿಗಾಗಿ: ೨೪

-------

ಒಟ್ಟು ೭೧

-------

೧೫. ಹಣಕಾಸಿನ ವಿಷಯಗಳ ಪ್ರಕ್ರಿಯೆಯೂ ಒಳಗೊಂಡಂತೆ, ಅಧಿವೇಶನವನ್ನು ಮುಕ್ತಾಯಗೊಳಿಸುವ ಹಾಗೂ ಸಂಸತ್ತಿನ ವಿಸರ್ಜನೆಗಾಗಿ ಹಾಗೂ ಎರಡು ಸದನಗಳ ನಡುವಿನ ಸಂಬಂಧಗಳನ್ನು ವಿನಿಯಮಿಸಲು, ಮತದಾನದ ವಿಧಾನವನ್ನು ಸದಸ್ಯರುಗಳ ವಿಶೇಷ ಹಕ್ಕುಗಳನ್ನು, ಸದಸ್ಯರ ಅನರ್ಹಗೊಳಿಸುವಿಕೆಯನ್ನು, ಸಂಸದೀಯ ಕಾರ್ಯವಿಧಾನಗಳನ್ನು ವಿನಿಯಮಿಸಲು, ಸಾಮಾನ್ಯ ಉಪಬಂಧಗಳು ಇರತಕ್ಕದ್ದು. ನಿರ್ದಿಷ್ಟವಾಗಿ, ಧನ ವಿಧೇಯಕಗಳನ್ನು ಕೆಳ ಸದನದಲ್ಲಿ ಮೊದಲು ಮಂಡಿಸಬೇಕು. ಧನ ವಿಧೇಯಕಗಳಿಗೆ ತಿದ್ದುಪಡಿಗಳನ್ನು ಸೂಚಿಸುವ ಅಧಿಕಾರವು ಮೇಲ್ಮನೆಗೆ ಇರಬೇಕು; ಕೆಳಮನೆಯು ಅವುಗಳನ್ನು ಪರಿಗಣಿಸುತ್ತದೆ ಹಾಗೂ ತದನಂತರ, ಅವರು ತಿದ್ದುಪಡಿಯನ್ನು ಅಂಗೀಕರಿಸಲಿ ಅಥವಾ ಅಂಗೀಕರಿಸದಿರಲಿ, ಆ ರೀತಿ ತಿದ್ದುಪಡಿಯಾದ ವಿಧೇಯಕವು (ತಿದ್ದುಪಡಿಗಳನ್ನು ಅಂಗೀಕರಿಸಿರುವಲ್ಲಿ) ಅಥವಾ ಅದರ ಮೂಲ ರೂಪದಲ್ಲಿ (ತಿದ್ದುಪಡಿಗಳಿಗೆ ಅಂಗೀಕಾರ ನೀಡದಿರುವಲ್ಲಿ) ಅದನ್ನು ರಾಷ್ಟ್ರಪತಿಯವರ ಒಪ್ಪಿಗೆಗಾಗಿ ಸಲ್ಲಿಸತಕ್ಕದ್ದು ಮತ್ತು ಅವರ ಒಪ್ಪಿಗೆಯ ಮೇರೆಗೆ ಅದು ಕಾನೂನು ಆಗತಕ್ಕದ್ದು. ವಿಧೇಯಕವು ಧನ ವಿಧೇಯಕವೇ ಅಥವಾ ಅಲ್ಲವೇ ಎಂಬುದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ಉಂಟಾದರೆ, ಲೋಕಸಭೆಯ ಸಭಾಧ್ಯಕ್ಷರ ನಿರ್ಧಾರವು ಅಂತಿಮವಾಗಿರುತ್ತದೆ.

ಧನ ವಿಧೇಯಕಗಳನ್ನು ಹೊರತುಪಡಿಸಿ, ಎರಡೂ ಸದನಗಳು ಶಾಸನ ರಚನೆಯ ಸಮಾನ ಅಧಿಕಾರವನ್ನು ಹೊಂದಿರಬೇಕು ಹಾಗೂ ಬಿಕ್ಕಟ್ಟುಗಳನ್ನು ಎರಡೂ ಸದನಗಳು ಜಂಟಿ ಸಭೆಯ ಮೂಲಕ ಪರಿಹರಿಸಿಕೊಳ್ಳಬೇಕು. ರಾಷ್ಟ್ರಪತಿಯವರು, ಆರು ತಿಂಗಳೊಳಗಾಗಿ ಮರು ಪರ್ಯಾಯಲೋಚನೆಗಾಗಿ, ರಾಷ್ಟ್ರೀಯ ಸಭೆಯು ಅಂಗೀಕರಿಸಿದ ವಿಧೇಯಕಗಳನ್ನು ಹಿಂತಿರುಗಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

**೧೬. ಭಾಷೆ.–** ಸಂಯುಕ್ತ ಸಂಸತ್ತಿನಲ್ಲಿ, ಕಾರ್ಯಕಲಾಪಗಳನ್ನು ಹಿಂದೂಸ್ಥಾನಿ (ಹಿಂದಿ ಅಥವಾ ಉರ್ದು) ಅಥವಾ ಆಂಗ್ಲ ಭಾಷೆಯಲ್ಲಿ ನಡೆಸತಕ್ಕದ್ದು; ಪರಂತು, ಸಂದರ್ಭಾನುಸಾರ ಸಭಾಪತಿಯವರು ಅಥವಾ ಸಭಾಧ್ಯಕ್ಷರು, ಈ ಎರಡೂ ಭಾಷೆಗಳಲ್ಲಿ ಸದನವನ್ನು ಉದ್ದೇಶಿಸಿ ಸ್ಪಷ್ಟವಾಗಿ ಮಾತನಾಡಲು ಆಗದ ಯಾರೇ ಸದಸ್ಯನಿಗೆ, ತನ್ನ ಮಾತೃ ಭಾಷೆಯಲ್ಲಿ ಮಾತನಾಡಲು ಅನುಮತಿಯನ್ನು ನೀಡಬಹುದಾಗಿದೆ. ಸಂದರ್ಭಾನುಸಾರ ಸಭಾಪತಿವರು ಅಥವಾ ಸಭಾಧ್ಯಕ್ಷರು ಸೂಕ್ತವೆಂದು ತಾನು ಭಾವಿಸಿದಾಗಲೆಲ್ಲ, ಸದಸ್ಯನು ಬಳಸುವ ಭಾಷೆಯನ್ನು ಹೊರತುಪಡಿಸಿ ಬೇರೆ ಭಾಷೆಯಲ್ಲಿ ಭಾಷಣದ ಸಾರಾಂಶವನ್ನು ಸದನಕ್ಕೆ ಒದಗಿಸಲು ಮತ್ತು ಅಂಥ ಸಾರಾಂಶವನ್ನು ಸದನದ ನಡವಳಿಗಳ ದಾಖಲೆಯಲ್ಲಿ ಸೇರಿಸಲು ಏರ್ಪಾಡುಗಳನ್ನು ಮಾಡತಕ್ಕದ್ದು.

[**ಟಿಪ್ಪಣಿ.**—ಇದು, ಸಂವಿಧಾನ ರಚನಾ ಸಭೆಯ ನಿಮಯಗಳಲ್ಲಿರುವ ಸಂವಾದಿ ಉಪಬಂಧದ ಅನುಸರಣೆಯಾಗಿದೆ.]

## ಅಧ್ಯಾಯ III
## ರಾಷ್ಟ್ರಪತಿಯವರ ವಿಧಾಯೀ ಅಧಿಕಾರಗಳು

**೧೭. ಸಂಸತ್ತಿನ ವಿರಾಮದ ಕಾಲದಲ್ಲಿ ಅಧ್ಯಾದೇಶಗಳನ್ನು ಹೊರಡಿಸಲು ರಾಷ್ಟ್ರಪತಿಯವರ ಅಧಿಕಾರ.–** ಸಂಯುಕ್ತ ಸಂಸತ್ತಿನ ಅಧಿವೇಶನ ಇರದ ಯಾವುದೇ ಸಂದರ್ಭದಲ್ಲಿ, ತಾನು ಕೂಡಲೇ ಕ್ರಮ ತೆಗೆದುಕೊಳ್ಳುವುದು ಅವಶ್ಯವಾಗಿರುವಂಥ ಸನ್ನಿವೇಶಗಳು ಇರುವುದಾಗಿ ರಾಷ್ಟ್ರಪತಿಯವರಿಗೆ ಮನದಟ್ಟಾದರೆ, ಆ ಸನ್ನಿವೇಶಗಳಲ್ಲಿ ಅವರು ಅಗತ್ಯವೆಂದು ತನಗೆ ಕಂಡುಬರುವಂಥ ಅಧ್ಯಾದೇಶಗಳನ್ನು ಹೊರಡಿಸಬಹುದು.

(೨) ಈ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಅಧ್ಯಾದೇಶವು, ರಾಷ್ಟ್ರಪತಿಯಿಂದ ಒಪ್ಪಿಗೆ ಪಡೆದ ಸಂಯುಕ್ತ ಸಂಸತ್ತಿನ ಒಂದು ಅಧಿನಿಯಮದಂತೆಯೇ ಬಲವುಳ್ಳದ್ದಾಗಿಯೂ ಮತ್ತು ಪರಿಣಾಮವುಳ್ಳದ್ದಾಗಿಯೂ ಇರತಕ್ಕದ್ದು. ಆದರೆ, ಅಂಥ ಪ್ರತಿಯೊಂದು ಅಧ್ಯಾದೇಶವನ್ನು–

(ಎ) ಒಕ್ಕೂಟ ಸಂಸತ್ತಿನ ಮುಂದೆ ಮಂಡಿಸತಕ್ಕದ್ದು ಮತ್ತು ಒಕ್ಕೂಟ ಸಂಸತ್ತು ಪುನಃ ಸಭೆ ಸೇರಿದಾಗಿನಿಂದ ಆರು ವಾರಗಳು ಮುಕ್ತಾಯವಾದ ಆನಂತರ ಅಥವಾ, ಆ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಅನುಮೋದಿಸದೆ ಇರುವ ನಿರ್ಣಯಗಳನ್ನು ಉಭಯ ಸದನಗಳು ಅಂಗೀಕರಿಸಿದರೆ, ಎರಡನೆಯ ನಿರ್ಣಯವು ಅಂಗೀಕೃತವಾದ ಕೂಡಲೆ, ಅಧ್ಯಾದೇಶವು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು; ಮತ್ತು

(ಬಿ) ಯಾವುದೇ ಕಾಲದಲ್ಲಿ ರಾಷ್ಟ್ರಪತಿಯವರು ಅದನ್ನು ಹಿಂತೆಗೆದುಕೊಳ್ಳಬಹುದಾಗಿದೆ.

(೩) ಯಾವುದೇ ಉಪಬಂಧವನ್ನು ಒಕ್ಕೂಟ ಸಂಸತ್ತು ಈ ಸಂವಿಧಾನದ ಅಡಿಯಲ್ಲಿ ಅಧಿನಿಯಮಿತಗೊಳಿಸಲು ಸಕ್ಷಮವಾಗಿಲ್ಲವೋ ಅಂಥ ಯಾವುದೇ ಉಪಬಂಧವನ್ನು ಈ ಪ್ರಕರಣದ ಅಡಿಯಲ್ಲಿ ಮಾಡಿದ್ದರೆ ಅದು ಅಸಿಂಧುವಾಗತಕ್ಕದ್ದು.

[**ಟಿಪ್ಪಣಿ.–** ಅಧ್ಯಾದೇಶವನ್ನು ರಚಿಸುವ ಅಧಿಕಾರವು ಪ್ರಸ್ತುತ ಸಂವಿಧಾನದಡಿಯಲ್ಲಿ ತೀವ್ರ ಟೀಕೆಗೆ ಒಳಪಟ್ಟಿದೆ. ಆದಾಗ್ಯೂ, ಕಾನೂನನ್ನು ಕೂಡಲೇ ಜಾರಿಗೊಳಿಸುವುದು ಅತ್ಯಂತ ಅವಶ್ಯಕವೆನಿಸುವ ಮತ್ತು

ಒಕ್ಕೂಟ ಸಂಸತ್ತು ಸಭೆ ಸೇರಲು ಸಮಯವಿರುವ ಸಂದರ್ಭಗಳು ಉಂಟಾಗಬಹುದು. ೧೯೨೫ರಲ್ಲಿ, ಹತ್ತಿ, ಅಬಕಾರಿ ಸುಂಕವನ್ನು ತೆಗೆದುಹಾಕುವುದಕ್ಕೆ ಅಧ್ಯಾದೇಶವನ್ನು ರಚಿಸುವ ಅವಶ್ಯಕತೆ ಲಾರ್ಡ್ ರೀಡಿಂಗ್ ಅವರಿಗೆ ಕಂಡುಬಂದಿತ್ತು; ಅಂಥ ಕ್ರಮವನ್ನು ದೇಶದ ಹಿತಾಸಕ್ತಿಯಲ್ಲಿ ಕೂಡಲೇ ಮತ್ತು ತ್ವರಿತವಾಗಿ ತೆಗೆದುಕೊಳ್ಳುವುದು ಅಗತ್ಯವಾಗಿದ್ದಾಗ, ಪ್ರಜಾಸತ್ತಾತ್ಮಕವಾಗಿ ಆಯ್ಕೆಗೊಂಡಿರುವ, ಅಲ್ಲದೆ ಸಂಸತ್ತಿನ ಜವಾಬ್ದಾರಿ ಹೊಂದಿರುವ ಸಚಿವರ ಸಲಹೆಯ ಮೇರೆಗೆ ನಡೆದುಕೊಳ್ಳಬೇಕಾದ ರಾಷ್ಟ್ರಪತಿಯವರು ತಮ್ಮಲ್ಲಿ ನಿಹಿತವಾಗಿರಬಹುದಾದ, ಅಧ್ಯಾದೇಶವನ್ನು ರಚಿಸುವ ಅಧಿಕಾರವನ್ನು ಚಲಾಯಿಸುವುದು ಅಧಿಕಾರ ದುರುಪಯೋಗವಾಗುವುದಿಲ್ಲ. ಆದ್ದರಿಂದ ಪ್ರಸ್ತಾವಿತ ಉಪಬಂಧವನ್ನು ಮಂಡಿಸಲಾಗಿದೆ.]

## ಅಧ್ಯಾಯ IV
## ಒಕ್ಕೂಟ ನ್ಯಾಯಾಂಗ

**೧೮. ಸರ್ವೋಚ್ಚ ನ್ಯಾಯಾಲಯ.**— ರಾಷ್ಟ್ರಪತಿ, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಕ ಮಾಡುವುದನ್ನು ಹೊರತುಪಡಿಸಿ, ಮುಖ್ಯ ನ್ಯಾಯಾಧೀಶರು ಮತ್ತು ಸರ್ವೋಚ್ಚ ನ್ಯಾಯಾಲಯದ ಅಂಥ ಇತರ ನ್ಯಾಯಾಧೀಶರು, ಅದೇ ರೀತಿ ಉದ್ದೇಶಕ್ಕೆ ಅವಶ್ಯಕವಿರಬಹುದಾದ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರೊಂದಿಗೆ ಸಮಾಲೋಚಿಸಿ ಕೇಂದ್ರ ನ್ಯಾಯಾಂಗದ ತಾತ್ಕಾಲಿಕ ಸಮಿತಿಯು ಶಿಫಾರಸು ಮಾಡಿದ ಸಾಂವಿಧಾನಾತ್ಮಕ ಅಧಿಕಾರಗಳನ್ನು ಮತ್ತು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸರ್ವೋಚ್ಚ ನ್ಯಾಯಾಲಯವು ಇರತಕ್ಕದ್ದು.

[**ವಿವರಣೆ**– ಸರ್ವೋಚ್ಚ ನ್ಯಾಯಾಲಯದ ತಾತ್ಕಾಲಿಕ (ಅಡ್‌ಹಾಕ್) ಸಮಿತಿಯು,* ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಕ ಮಾಡುವ ಅಧಿಕಾರವನ್ನು ಒಕ್ಕೂಟದ ರಾಷ್ಟ್ರಪತಿಯವರ ಸ್ವಂತ ವಿವೇಚನೆಗೆ ಬಿಡುವುದು ವಿಹಿತವಲ್ಲ ಎಂದು ಅಭಿಪ್ರಾಯಪಟ್ಟಿತು. ಅವರು ಎರಡು ಪರ್ಯಾಯಗಳನ್ನು ಸೂಚಿಸಿದ್ದರು, ಅವುಗಳಲ್ಲಿ ಹನ್ನೊಂದು ಜನ ಸದಸ್ಯರ ವಿಶೇಷ ತಂಡದ ರಚನೆಯೂ ಒಳಗೊಂಡಿದ್ದು, ಅದರಲ್ಲಿ ಒಂದು ಪರ್ಯಾಯದ ಪ್ರಕಾರ, ರಾಷ್ಟ್ರಪತಿಯವರು, ಮುಖ್ಯ ನ್ಯಾಯಾಧೀಶರೊಡನೆ ಸಮಾಲೋಚಿಸಿ, ಕಿರಿಯ ನ್ಯಾಯಾಧೀಶನಾಗಿ ನೇಮಕಗೊಳ್ಳಲು ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡುವುದೂ ಒಂದು ಮತ್ತು ಈ ನಾಮನಿರ್ದೇಶನವನ್ನು ಕನಿಷ್ಠ ಪಕ್ಷ ತಂಡದ ಏಳು ಸದಸ್ಯರು ಅನುಮೋದಿಸಬೇಕಾಗುತ್ತದೆ. ಮತ್ತೊಂದು ಪರ್ಯಾಯದ ಪ್ರಕಾರ, ತಂಡವು ಮೂರು ಹೆಸರುಗಳನ್ನು ಶಿಫಾರಸ್ಸು ಮಾಡಬೇಕು, ರಾಷ್ಟ್ರಪತಿ ಮುಖ್ಯನ್ಯಾಯಾಧೀಶರೊಂದಿಗೆ ಸಮಾಲೋಚಿಸಿ, ಅವರ ಪೈಕಿ ಒಬ್ಬರನ್ನು ನೇಮಕಕ್ಕೆ ಆಯ್ಕೆ ಮಾಡಬೇಕಾಗುತ್ತದೆ. ಮೇಲಿನ ಖಂಡದಲ್ಲಿ ಸೂಚಿಸಿರುವ ಉಪಬಂಧವು ಕೇಂದ್ರ ಸಂವಿಧಾನ ಸಮಿತಿಯ ನಿರ್ಣಯದ ಅನುಸಾರವಿದೆ.)

* ಸಮಿತಿಯ ವರದಿಗಾಗಿ ಅನುಬಂಧವನ್ನು ನೋಡಿ.

## ಅಧ್ಯಾಯ V
## ಒಕ್ಕೂಟದ ಮಹಾಲೆಕ್ಕಪರಿಶೋಧಕ

**೧೯. ಮಹಾಲೆಕ್ಕಪರಿಶೋಧಕ.**– ಒಕ್ಕೂಟಕ್ಕೆ ಒಬ್ಬ ಮಹಾಲೆಕ್ಕ ಪರಿಶೋಧಕರಿರಬೇಕು ಮತ್ತು ಅವರನ್ನು ರಾಷ್ಟ್ರಪತಿಯವರು ನೇಮಕ ಮಾಡತಕ್ಕದ್ದು ಹಾಗೂ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನು

ತೆಗೆದುಹಾಕಬಹುದಾದ ರೀತಿಯಲ್ಲಿ ಮತ್ತು ಅಂಥ ಕಾರಣಗಳ ಮೇಲೆ ಮಾತ್ರ ಪದದಿಂದ ತೆಗೆದುಹಾಕತಕ್ಕದ್ದು.

**೨೦. ಮಹಾಲೆಕ್ಕಪರಿಶೋಧಕರ ಪ್ರಕಾರ್ಯಗಳು.–** ಮಹಾಲೆಕ್ಕಪರಿಶೋಧಕರ ಕರ್ತವ್ಯಗಳು ಮತ್ತು ಅಧಿಕಾರಗಳು, ೧೯೩೫ರ ಅಧಿನಿಯಮದಲ್ಲಿರುವ ಸಂವಾದಿ ಉಪಬಂಧಗಳ ರೀತಿಯಲ್ಲೇ ಇರತಕ್ಕದ್ದು.

## ಅಧ್ಯಾಯ VI
## ಸೇವೆಗಳು

**೨೧. ಲೋಕ ಸೇವಾ ಆಯೋಗ.–** ಒಕ್ಕೂಟದಲ್ಲಿ ಒಂದು ಲೋಕ ಸೇವಾ ಆಯೋಗವು ಇರತಕ್ಕದ್ದು, ರಾಷ್ಟ್ರಪತಿಯವರು ತಮ್ಮ ಮಂತ್ರಿಗಳ ಸಲಹೆಯ ಮೇರೆಗೆ ಆಯೋಗಕ್ಕೆ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ನೇಮಕ ಮಾಡುವುದನ್ನು ಹೊರತುಪಡಿಸಿ, ಲೋಕಸೇವಾ ಆಯೋಗದ ರಚನೆ ಮತ್ತು ಪ್ರಕಾರ್ಯಗಳು, ೧೯೩೫ನೇ ಅಧಿನಿಯಮದಲ್ಲಿನ ಸಂವಾದಿ ಉಪಬಂಧಗಳ ರೀತಿಯಲ್ಲೇ ಇರತಕ್ಕದ್ದು.

೨೨. ಅಖಿಲ ಭಾರತ ಸೇವೆಗಳ ಸೃಜನೆಗಾಗಿ ಉಪಬಂಧಗಳನ್ನು ರಚಿಸತಕ್ಕದ್ದು. ಸೇವೆಗಳಿಗೆ ಸಂಬಂಧಿಸಿದ ನೌಕರಿಭರ್ತಿ ಮತ್ತು ಸೇವಾ ಷರತ್ತುಗಳನ್ನು ಒಕ್ಕೂಟ ಕಾನೂನಿನ ಮೂಲಕ ವಿನಿಯಮಿಸಲಾಗುವುದು.

## ಅಧ್ಯಾಯ VII
## ಚುನಾವಣೆಗಳು

**೨೩. ಒಕ್ಕೂಟ ಸಂಸತ್ತಿಗೆ ಚುನಾವಣೆಗಳು.–** ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು, ಒಕ್ಕೂಟ ಸಂವಿಧಾನವು, ಕಾಲಕಾಲಕ್ಕೆ, ಮತಕ್ಷೇತ್ರಗಳ ಸೀಮಾ ನಿರ್ಣಯ ಮಾಡುವುದೂ ಒಳಗೊಂಡಂತೆ, ಒಕ್ಕೂಟ ವಿಧಾನಮಂಡಲದ ಎರಡೂ ಸದನಗಳ ಚುನಾವಣೆಗಳಿಗೆ ಸಂಬಂಧಪಟ್ಟ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಉಪಬಂಧಗಳನ್ನು ರಚಿಸಬಹುದು.

**೨೪. ಚುನಾವಣೆಗಳ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣ.––** ಈ ಸಂವಿಧಾನದ ಅಡಿಯಲ್ಲಿ ನಡೆಸಲಾಗುವ ಎಲ್ಲಾ ಚುನಾವಣೆಗಳಿಗೆ ಸಂಬಂಧಿಸಿದಂತೆ ಉದ್ಭವಿಸುವ ಸಂಶಯಗಳು ಮತ್ತು ವಿವಾದಗಳನ್ನು ಕುರಿತ ನಿರ್ಣಯಕ್ಕಾಗಿ ಚುನಾವಣಾ ನ್ಯಾಯಾಧಿಕರಣಗಳ ನೇಮಕವೂ ಒಳಗೊಂಡಂತೆ, ಅವುಗಳ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು, ಅದು ಒಕ್ಕೂಟದ್ದಾಗಿರಲಿ ಅಥವಾ ಪ್ರಾಂತದ್ದಾಗಿರಲಿ, ರಾಷ್ಟ್ರಪತಿಯವರು ನೇಮಕ ಮಾಡಬೇಕಾದ ಆಯೋಗದಲ್ಲಿ ನಿಹಿತವಾಗಿರತಕ್ಕದ್ದು.

*ಆಯೋಗದ ವರದಿಗಾಗಿ ಅನುಬಂಧವನ್ನು ನೋಡಿ.

## ಅಧ್ಯಾಯ V
## ಒಕ್ಕೂಟ ಮತ್ತು ಘಟಕಗಳ ನಡುವೆ ವಿಧಾಯೀ ಅಧಿಕಾರಗಳ ಹಂಚಿಕೆ

ಈ ಶೀರ್ಷಿಕೆಯ ಅಡಿಯಲ್ಲಿ ಸೇರಿಸಲಾಗುವ ಉಪಬಂಧಗಳು, ಒಕ್ಕೂಟ ಅಧಿಕಾರಗಳ ಸಮಿತಿಯ ವರದಿಯ ಮೇಲೆ ತೆಗೆದುಕೊಳ್ಳಬಹುದಾದ ನಿರ್ಣಯಗಳ ಮೇಲೆ ಅವಲಂಬಿತವಾಗಿರುತ್ತವೆ. ಆದಾಗ್ಯೂ, ಒಕ್ಕೂಟ ರಚನಾ ಸಮಿತಿಯು ಈ ಕೆಳಗಿನಂತೆ ನಿರ್ಧರಿಸಿದೆ,––

(೧) ಸಂವಿಧಾನವು ಸಂಯುಕ್ತ ಸಂರಚನೆಯನ್ನು ಹೊಂದಿದ್ದು, ಸಶಕ್ತ ಕೇಂದ್ರದಿಂದ ಕೂಡಿರಬೇಕು.

(೨) ಕೇಂದ್ರಕ್ಕೆ ಉಳಿಕೆ ಅಧಿಕಾರಗಳೊಂದಿಗೆ, ಮೂರು ಸಂಪೂರ್ಣ ವಿಧಾಯಿ ಪಟ್ಟಿಗಳು, ಎಂದರೆ, ಒಕ್ಕೂಟ, ಪ್ರಾಂತೀಯ ಹಾಗೂ ಸಮವರ್ತಿ ವಿಧಾಯೀ ಪಟ್ಟಿಗಳಿರತಕ್ಕದ್ದು;

(೩) ಪಟ್ಟಿಗಳನ್ನು ಸಂಪೂರ್ಣವಾಗಿ ಸಿದ್ಧಪಡಿಸಿದಾಗ ಉದ್ಭವಿಸಬಹುದಾದ ಯಾವುದೇ ವಿಶೇಷ ವಿಷಯದ ಪರಿಗಣನೆಗೆ ಒಳಪಟ್ಟು, ಒಕ್ಕೂಟ ವಿಧಾಯೀ ಪಟ್ಟಿಗೆ ಸಂಬಂಧಿಸಿದಂತೆ ರಾಷ್ಟ್ರವು (ಸ್ಟೇಟ್)ಪ್ರಾಂತಗಳಿಗೆ ಸರಿಸಮನಾಗಿರತಕ್ಕದ್ದು.

## ಭಾಗ VI
## ಒಕ್ಕೂಟ ಮತ್ತು ಘಟಕಗಳ ನಡುವಿನ ಆಡಳಿತಾತ್ಮಕ ಸಂಬಂಧಗಳು

೧. ಒಕ್ಕೂಟ ವಿಷಯಕ್ಕೆ ಮಾತ್ರವೇ ಸಂಬಂಧಿಸಿದ ಶಾಸನವನ್ನು ರಚಿಸುವಾಗ, ಅದು, ಆ ವಿಷಯಕ್ಕೆ ಸಂಬಂಧಿಸಿದ ಯಾವುವೇ ಪ್ರಕಾರ್ಯಗಳನ್ನು ಒಕ್ಕೂಟ ಸರ್ಕಾರದ ಪರವಾಗಿ ಚಲಾಯಿಸುತ್ತದೆ. ಘಟಕದ ಸರ್ಕಾರವು, ಪ್ರಾಂತವಾಗಿರಲಿ, ಭಾರತದ ರಾಜ್ಯವಾಗಿರಲಿ ಅಥವಾ ಇತರ ಪ್ರದೇಶವಾಗಿರಲಿ, ಅದರ ಮೇಲೆ, ಅಥವಾ ಆ ಸರ್ಕಾರದ ಯಾರೇ ಒಬ್ಬ ಅಧಿಕಾರಿಯ ಮೇಲೆ ಇರಬಹುದು.

೨. ಸಂಯುಕ್ತ ಸರ್ಕಾರದ ಅಧಿಕಾರವನ್ನು, ಆ ಘಟಕಕ್ಕೆ ಅನ್ವಯವಾಗುವ ಸಂಯುಕ್ತ ಸಂಸತ್ತಿನ ಪ್ರತಿಯೊಂದು ಅಧಿನಿಯಮವನ್ನು ಘಟಕದ ಒಳಗೆ ಯುಕ್ತವಾಗಿ ಜಾರಿಗೊಳಿಸುವ ಖಾತರಿಯನ್ನು ನೀಡುವ ಉದ್ದೇಶಕ್ಕೆ ಸಂಬಂಧಿಸಿದಂತೆ ಅವಶ್ಯವಿರುವಷ್ಟರಮಟ್ಟಿಗೆ ಮತ್ತು ಅನ್ವಯವಾಗುವಷ್ಟರಮಟ್ಟಿಗೆ ಕಾರ್ಯಾಂಗ ಅಧಿಕಾರವನ್ನು ಮತ್ತು ಪ್ರಾಧಿಕಾರವನ್ನು ಸಹ ವಿಸ್ತರಿಸುವುದು; ಮತ್ತು ಸಂಯುಕ್ತ ಸರ್ಕಾರದ ಪ್ರಾಧಿಕಾರವನ್ನು, ಆ ಉದ್ದೇಶಕ್ಕಾಗಿ ಸರ್ಕಾರದ ಘಟಕಕ್ಕೆ ನಿರ್ದೇಶನ ನೀಡುವುದಕ್ಕಾಗಿ ವಿಸ್ತರಿಸಲಾಗುವುದು.

೩. ಒಕ್ಕೂಟ ವಿಷಯದ ಆಡಳಿತದ ಮೇಲೆ ಪರಿಣಾಮ ಬೀರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಚಿಕ್ಕಮಟ್ಟ ಕಾರ್ಯಾಂಗ ಅಧಿಕಾರ ಮತ್ತು ಪ್ರಾಧಿಕಾರವನ್ನು ಚಲಾಯಿಸಬೇಕಾಗಿರುವ ವಿಧಾನಕ್ಕೆ ಸಂಬಂಧಿಸಿದಂತೆ ಘಟಕ ಸರ್ಕಾರಕ್ಕೆ ನಿರ್ದೇಶನಗಳನ್ನು ನೀಡಲು ಸಹ ಸಂಯುಕ್ತ ಸರ್ಕಾರದ ಪ್ರಾಧಿಕಾರವನ್ನು ವಿಸ್ತರಿಸಲಾಗುವುದು.

[**ಟಿಪ್ಪಣಿ:–** ಸಿ.ಎಫ್. ಭಾರತ ಸರ್ಕಾರ ಅಧಿನಿಯಮ, ೧೯೩೫ರ ಪ್ರಕರಣ ೧೨೨, ೧೨೪ ಮತ್ತು ೧೨೬.]

## ಭಾಗ VII
## ಹಣಕಾಸು ಮತ್ತು ಸಾಲ ಪಡೆದುಕೊಳ್ಳುವ ಅಧಿಕಾರಗಳು

೧. ಯಾವ ಸಂಪನ್ಮೂಲಗಳಿಂದ ಸಂಯುಕ್ತ ಸಂಸತ್ತಿಗೆ ಮಾತ್ರವೇ ಕಾನೂನು ರಚಿಸಲು ಅಧಿಕಾರವಿರುವುದೋ ಆ ಸಂಪನ್ಮೂಲಗಳಿಂದ ಪಡೆಯಲಾದ ಆದಾಯಗಳನ್ನು ಸಂಯುಕ್ತ ಆದಾಯಗಳೆಂದು ಹಂಚಿಕೆ ಮಾಡಲಾಗುವುದು; ಆದರೆ, ಇನ್ನು ಮುಂದೆ ಬರುವ ಕಂಡಿಕೆಗಳಲ್ಲಿ ನಿರ್ದಿಷ್ಟಪಡಿಸಿರುವ ಸಂದರ್ಭಗಳಲ್ಲಿ, ಒಕ್ಕೂಟ ಆದಾಯಗಳಿಂದ ಘಟಕಗಳಿಗೆ ಕರ ನಿರ್ಧರಣೆ ಮಾಡಲು ಒಕ್ಕೂಟಕ್ಕೆ ಅಧಿಕಾರವಿರುತ್ತದೆ ಅಥವಾ ಅಗತ್ಯವಾಗಿರುತ್ತದೆ.

೨. ಈ ಮುಂದಿನ ತೆರಿಗೆಗಳನ್ನು, ಎಂದರೆ, ಸೀಮಾ ಸುಂಕಗಳು, ಸಂಯುಕ್ತ ಅಬಕಾರಿ ಸುಂಕಗಳು,

ರಫ್ತು ಸುಂಕಗಳು, ಅಪಾಯಕರ ವಸ್ತುಗಳ ಮೇಲೆ ಸುಂಕಗಳು, ಮತ್ತು ಕೃಷಿ ಅದಾಯ ಮತ್ತು ಕಂಪನಿಗಳ ಮೇಲಿನ ತೆರಿಗೆಗಳನ್ನು ಹೊರತುಪಡಿಸಿ, ಇತರ ಆದಾಯಗಳ ಮೇಲೆ ತೆರಿಗೆಗಳನ್ನು ವಿಧಿಸಲು ಮತ್ತು, ಅವಶ್ಯಕತೆ ಇದ್ದಲ್ಲಿ ಅವುಗಳನ್ನು ಹಂಚಿಕೆ ಮಾಡಲು ಉಪಬಂಧವನ್ನು ರಚಿಸತಕ್ಕದ್ದು.

೩. ಯಾವ ಉದ್ದೇಶಗಳ ಸಂಬಂಧದಲ್ಲಿ ಕಾನೂನುಗಳನ್ನು ರಚಿಸಬಹುದೋ ಆ ಉದ್ದೇಶಗಳಿಗೆ ಸಂಬಂಧಪಟ್ಟಿಲ್ಲದ ಉದ್ದೇಶಕ್ಕಲ್ಲದಿದ್ದರೂ, ಯಾವುದೇ ಉದ್ದೇಶಕ್ಕಾಗಿ ಸಂಯುಕ್ತ ಅದಾಯಗಳಿಂದ ಧನಸಹಾಯಗಳನ್ನು ಅಥವಾ ಅನುದಾನಗಳನ್ನು ನೀಡುವ ಅಧಿಕಾರವನ್ನು ಒಕ್ಕೂಟ ಸರ್ಕಾರವು ಹೊಂದಿರುವುದು.

೪. ಒಕ್ಕೂಟ ಕಾನೂನಿನ ಮೂಲಕ ನಿಗದಿಪಡಿಸಬಹುದಾದ ಮಿತಿಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ಒಕ್ಕೂಟದ ಆದಾಯಗಳ ಭದ್ರತೆಯ ಮೇಲೆ ಒಕ್ಕೂಟದ ಯಾವುದೇ ಉದ್ದೇಶಗಳಿಗಾಗಿ ಸಾಲ ಪಡೆದುಕೊಳ್ಳುವ ಅಧಿಕಾರವನ್ನು ಒಕ್ಕೂಟ ಸರ್ಕಾರವು ಹೊಂದಿರುತ್ತದೆ.

೫. ಒಕ್ಕೂಟ ಸರ್ಕಾರವು ಗೊತ್ತುಪಡಿಸಬಹುದಾದ ಅಂಥ ನಿಬಂಧನೆಗಳು ಅಥವಾ ಅಂಥ ಷರತ್ತುಗಳ ಮೇರೆಗೆ, ಸಾಲವನ್ನು ನೀಡಲು, ಅಥವಾ ಒಕ್ಕೂಟದ ಯಾವುದೇ ಘಟಕದಿಂದ ಸಾಲದ ಭರವಸೆ ಪಡೆಯುವ ಅಧಿಕಾರವನ್ನು ಒಕ್ಕೂಟ ಸರ್ಕಾರವು ಹೊಂದಿರುತ್ತದೆ.

[**ಟಿಪ್ಪಣಿ** – ಸಿ.ಎಫ್. ಭಾರತ ಸರ್ಕಾರ ಅಧಿನಿಯಮ, ೧೯೩೫ರ ೧೩೬ ರಿಂದ ೧೪೦, ೧೬೨ ಮತ್ತು ೧೬೩(೨)ನೇ ಪ್ರಕರಣಗಳು]

## ಭಾಗ VIII
## ನೇರ ಆಡಳಿತಕ್ಕೊಳಪಡುವ ಪ್ರದೇಶಗಳು

೧. ಭಾರತ ಸರ್ಕಾರದ ಅಧಿನಿಯಮ, ೧೯೩೫ರ ಮೇರೆಗೆ ಮುಖ್ಯ ಆಯುಕ್ತರ ಪ್ರಾಂತಗಳಲ್ಲಿ ಮಧ್ಯಂತರ ಕ್ರಮವಾಗಿ ಕೇಂದ್ರದ ಆಡಳಿತವೇ ಮುಂದುವರೆಯತಕ್ಕದ್ದು. ತರುವಾಯ ಪರಿಗಣಿಸಲಾಗುವ, ವ್ಯವಸ್ಥೆಯಲ್ಲಿ ಮಾಡಲಾಗುವ ಯಾವುದೇ ಬದಲಾವಣೆಯ ಪ್ರಶ್ನೆಯನ್ನು ಹಾಗೂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಒಳಗೊಂಡ ಕೇಂದ್ರಾಡಳಿತ ಪ್ರದೇಶಗಳನ್ನು ಸಂವಿಧಾನದಲ್ಲಿ ನಿರ್ದಿಷ್ಟವಾಗಿ ತಿಳಿಸತಕ್ಕದ್ದು.

೨. ಬುಡಕಟ್ಟು ಪ್ರದೇಶಗಳ ಆಡಳಿತಕ್ಕೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಸೂಕ್ತ ಉಪಬಂಧವನ್ನು ರಚಿಸತಕ್ಕದ್ದು.

[**ಟಿಪ್ಪಣಿ**.– ಸಲಹಾ ಸಮಿತಿಯ ವರದಿಯ ಆಧಾರದ ಮೇಲೆ ಸಂವಿಧಾನ ರಚನಾ ಸಭೆಯು ಅನುಮೋದಿಸಿದ ಪ್ರದೇಶಗಳ ಆಡಳಿತಕ್ಕಾಗಿ ಒಂದು ಯೋಜನೆಯನ್ನು, ಬುಡಕಟ್ಟು ಪ್ರದೇಶಗಳಿಗೆ ಸಂಬಂಧಿಸಿದಂತೆ ರಚಿಸುವ ಉಪಬಂಧದಲ್ಲಿ ಸೇರಿಸಿಕೊಳ್ಳಲಾಗುವುದು.]

## ಭಾಗ IX
## ಇತರ ವಿಷಯಗಳು

ಸಲಹಾ ಸಮಿತಿಯ ವರದಿಯ ಆಧಾರದ ಮೇಲೆ ಸಂವಿಧಾನ ರಚನಾ ಸಭೆಯು ಅನುಮೋದಿಸಿರುವ ಅಲ್ಪಸಂಖ್ಯಾತರ ರಕ್ಷಣೆಯ ಉಪಬಂಧಗಳನ್ನು ಸಂವಿಧಾನದಲ್ಲಿ ಸೇರಿಸತಕ್ಕದ್ದು.

## ಭಾಗ X
## ಸಂವಿಧಾನದ ತಿದ್ದುಪಡಿ

ಸಂವಿಧಾನಕ್ಕೆ ತಿದ್ದುಪಡಿ ತರುವ ಕಾರ್ಯವನ್ನು ಒಕ್ಕೂಟ ಸಂಸತ್ತಿನ ಯಾವುದೇ ಸದನದಲ್ಲಾದರೂ ಪ್ರಾರಂಭಿಸಬಹುದು ಮತ್ತು ಸದನದಲ್ಲಿ ಉಪಸ್ಥಿತರಿದ್ದು ಮತ ಚಲಾಯಿಸುವಂಥ ಸದಸ್ಯರ ಪೈಕಿ ಮೂರನೇ ಎರಡರಷ್ಟಕ್ಕಿಂತ ಕಡಿಮೆಯಿಲ್ಲದ ಸದಸ್ಯರ ಬಹುಮತದ ಮೂಲಕ ಪ್ರತಿಯೊಂದು ಸದನದಲ್ಲಿ ಪ್ರಸ್ತಾವಿತ ತಿದ್ದುಪಡಿಯು ಅಂಗೀಕೃತವಾದಾಗ ಮತ್ತು ಒಕ್ಕೂಟದ ಘಟಕಗಳಲ್ಲಿ ಅರ್ಧಕ್ಕಿಂತ ಕಡಿಮೆಯಲ್ಲದಷ್ಟು ವಿಧಾನಮಂಡಲಗಳು ಮತ ಹಾಕಿ ಹಾಗೂ ಅನುಸಮರ್ಥನೆ ಮಾಡಿದಾಗ, ರಾಷ್ಟ್ರಪತಿಯವರ ಸಮ್ಮತಿಗಾಗಿ ಅದನ್ನು ಮಂಡಿಸಲಾಗುವುದು; ಮತ್ತು ಅಂಥ ಸಮ್ಮತಿಯನ್ನು ನೀಡಿದ ನಂತರ, ತಿದ್ದುಪಡಿಯು ಅನುಷ್ಠಾನಗೊಳ್ಳತಕ್ಕದ್ದು.

[**ವಿವರಣೆ** – ಈ ಖಂಡದಲ್ಲಿ "ಘಟಕ" ಪದಕ್ಕೆ, IVನೇ ಭಾಗದ ೧೪ನೇ ಖಂಡದಲ್ಲಿರುವಂಥದೇ ಅರ್ಥ ಇರತಕ್ಕದ್ದು. ರಾಜ್ಯಗಳ ಗುಂಪನ್ನು ಒಳಗೊಂಡಿರುವ ಘಟಕದಲ್ಲಿ, ಪ್ರಸ್ತಾವಿತ ತಿದ್ದುಪಡಿಯು, ಗುಂಪಿನಲ್ಲಿರುವ ರಾಜ್ಯಗಳ ವಿಧಾನಮಂಡಲಗಳ ಬಹುಮತದಿಂದ ಅನುಸಮರ್ಥನೆಗೊಂಡಿದ್ದರೆ, ಅದು ಘಟಕದ ವಿಧಾನಮಂಡಲದಿಂದ ಅನುಸಮರ್ಥನೆಗೊಂಡಿದೆ ಎಂದು ಭಾವಿಸತಕ್ಕದ್ದು.]

## ಭಾಗ XI
## ಮಧ್ಯಕಾಲೀನ ಉಪಬಂಧಗಳು

೧. ಎಲ್ಲಾ ಸ್ವತ್ತು, ಆಸ್ತಿ, ಹಕ್ಕು ಮತ್ತು ಬಾಧ್ಯತೆಗಳಿಗೆ ಸಂಬಂಧಿಸಿದಂತೆ, ಭಾರತ ಸರ್ಕಾರ ಅಧಿನಿಯಮ, ೧೯೩೫ರ ಅಡಿಯಲ್ಲಿ ರಚಿತವಾದ 'ಭಾರತ ಸರ್ಕಾರ'ಕ್ಕೆ ಸಂಯುಕ್ತ ಸರ್ಕಾರವು ಉತ್ತರಾಧಿಕಾರಿಯಾಗಿರತಕ್ಕದ್ದು.

[ಈ ಸಂವಿಧಾನದ ಪ್ರಾರಂಭವಾಗುವುದಕ್ಕೆ ಮುಂಚೆ, ಭಾರತದಲ್ಲಿ ಎರಡು ಉತ್ತರಾಧಿಕಾರಿ ಸರ್ಕಾರಗಳು ರಚನೆಗೊಂಡರೆ, ಆಸ್ತಿ ಮತ್ತು ಹೊಣೆಗಾರಿಕೆಗಳ ವಿಭಜನೆಯಷ್ಟರಮಟ್ಟಿಗೆ, ಈ ಖಂಡವನ್ನು ತಿದ್ದುಪಡಿ ಮಾಡಬೇಕಾಗಬಹುದು.]

೨. (೧) ಈ ಸಂವಿಧಾನಕ್ಕೆ ಒಳಪಟ್ಟು, ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಒಕ್ಕೂಟದ ರಾಜ್ಯಕ್ಷೇತ್ರಗಳಲ್ಲಿ ಜಾರಿಯಲ್ಲಿರುವ ಕಾನೂನುಗಳು, ಸಕ್ಷಮ ವಿಧಾನಮಂಡಲಗಳಿಂದ ಅಥವಾ ಇತರ ಸಕ್ಷಮ ಪ್ರಾಧಿಕಾರಗಳಿಂದ ಮಾರ್ಪಾಟಾಗುವವರೆಗೆ ಅಥವಾ ನಿರಸನಗೊಳ್ಳುವವರೆಗೆ ಅಥವಾ ತಿದ್ದುಪಡಿಯಾಗುವವರೆಗೆ, ಜಾರಿ ಮುಂದುವರೆಯತಕ್ಕದ್ದು.

(೨) ರಾಷ್ಟ್ರಪತಿಯ ಆದೇಶದ ಮೂಲಕ, ಪ್ರಾಂತಗಳಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ನಿರ್ದಿಷ್ಟ ದಿನಾಂಕದಿಂದ, ಅದು ಸಕ್ಷಮ ಪ್ರಾಧಿಕಾರದಿಂದ ನಿರಸನಗೊಳ್ಳುವವರೆಗೆ ಅಥವಾ ತಿದ್ದುಪಡಿಯಾಗುವವವರೆಗೆ, ಆ ಕಾನೂನಿನ ಉಪಬಂಧಗಳನ್ನು ಈ ಸಂವಿಧಾನದ ಉಪಬಂಧಗಳೊಂದಿಗೆ ಸರಿಹೊಂದಿಸಲು, ತನಗೆ ಅವಶ್ಯಕ ಅಥವಾ ಯುಕ್ತವೆನಿಸುವ ಅಳವಡಿಕೆಗಳಿಗೆ ಮತ್ತು ಮಾರ್ಪಾಡುಗಳಿಗೆ ಒಳಪಟ್ಟು ಜಾರಿಗೆ ಅವಕಾಶ ಮಾಡಿಕೊಡಬಹುದು.

೩. ಈ ಸಂವಿಧಾನದಡಿಯಲ್ಲಿ ವಿಧ್ಯುಕ್ತವಾಗಿ ಸರ್ವೋಚ್ಚ ನ್ಯಾಯಾಲಯದ ರಚನೆ ಆಗುವವರೆಗೆ, ಒಕ್ಕೂಟ ನ್ಯಾಯಾಲಯವನ್ನು ಸರ್ವೋಚ್ಚ ನ್ಯಾಯಾಲಯವೆಂದು ಭಾವಿಸತಕ್ಕದ್ದು ಮತ್ತು ಅದು ಸರ್ವೋಚ್ಚ ನ್ಯಾಯಾಲಯದ ಎಲ್ಲ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು:

ಪರಂತು, ಈ ಸಂವಿಧಾನದ ಪ್ರಾರಂಭದ ದಿನಾಂಕದಿಂದ ಒಕ್ಕೂಟ ನ್ಯಾಯಾಲಯದ ಮುಂದೆ ಮತ್ತು ಪ್ರೀವಿ ಕೌನ್ಸಿಲ್‌ನ ನ್ಯಾಯಿಕ ಸಮಿತಿಯ ಮುಂದೆ ಇತ್ಯರ್ಥದಲ್ಲಿರುವ ಎಲ್ಲ ಪ್ರಕರಣಗಳನ್ನು ಈ ಸಂವಿಧಾನವು ಜಾರಿಗೆ ಬಂದಿಲ್ಲದಿದ್ದರೆ ಹೇಗೋ ಹಾಗೆ ವಿಲೇ ಮಾಡಬಹುದು.

೪. ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಹುದ್ದೆಗಳನ್ನು ಹೊಂದಿರುವವರನ್ನು ಹೊರತುಪಡಿಸಿ, ಈ ಸಂವಿಧಾನದ ಪ್ರಾರಂಭದ ದಿನಾಂಕದಿಂದ ನಿಕಟ ಪೂರ್ವದಲ್ಲಿ ಯಾವುದೇ ಒಕ್ಕೂಟ ನ್ಯಾಯಾಲಯದ ಅಥವಾ ಯಾವುದೇ ಉಚ್ಚ ನ್ಯಾಯಾಲಯದ ಯಾರೊಬ್ಬ ನ್ಯಾಯಾಧೀಶರನ್ನು ಒಳಗೊಂಡಂತೆ, ಭಾರತದ ಚಕ್ರವರ್ತಿ (ಕ್ರೌನ್) ಆಡಳಿತ ಸೇವೆಯಲ್ಲಿದ್ದ ಯಾರೇ ವ್ಯಕ್ತಿಯನ್ನು, ಆ ದಿನಾಂಕದಂದು ಒಕ್ಕೂಟದ ಸೂಕ್ತ ಸೇವೆಗೆ ಅಥವಾ ಸಂಬಂಧಪಟ್ಟ ಘಟಕಕ್ಕೆ ವರ್ಗಾವಣೆ ಮಾಡತಕ್ಕದ್ದು ಮತ್ತು ತಮ್ಮ ಹಿಂದಿನ ಅವಧಿಗೆ ಸಂವಾದಿಯಾಗಿರುವ ಹುದ್ದೆಯನ್ನು ಹೊಂದತಕ್ಕದ್ದು.

[**ಟಿಪ್ಪಣಿ:** ಅನುಕ್ರಮವಾಗಿ ಮುಂದಿನ ತರುವಾಯದ ಖಂಡದ ಮೇರೆಗೆ, 'ಗವರ್ನರ್ ಜನರಲ್' ಹುದ್ದೆಗೆ ಅವಕಾಶವಿರಬಾರದು ಎಂಬ ಕಾರಣದಿಂದ, ನೂತನ ಸಂವಿಧಾನದ ಪ್ರಾರಂಭದಿಂದ ಒಬ್ಬರು ಹಂಗಾಮಿ ರಾಷ್ಟ್ರಪತಿಯವರು ಇರುತ್ತಾರೆ. ಅದೇ ರೀತಿ, ಮಹಾಪ್ರಭ್ಯಂಗಳಿಂದ (ಹಿಸ್ ಮೆಜಸ್ಟಿಯಿಂದ) ನೇಮಕಗೊಂಡ ಯಾವ ರಾಜ್ಯಪಾಲರಿಗೂ ಪ್ರಾಂತಗಳಲ್ಲಿ ಅವಕಾಶವಿರುವುದಿಲ್ಲ. ಇತರೆ ಕೆಲವು ಹುದ್ದೆಗಳನ್ನು ಹೊಂದಿರುವವರ ವಿಷಯದಲ್ಲೂ ಇದೇ ರೀತಿ ಅನ್ವಯವಾಗುತ್ತದೆ. ಅಂಥ ಎಲ್ಲ ಹುದ್ದೆಗಳನ್ನು ಅನುಸೂಚಿಯಲ್ಲಿ ಪಟ್ಟಿ ಮಾಡಬಹುದು. ಅನುಸೂಚಿಯಲ್ಲಿ ಪಟ್ಟಿ ನಮೂದಿಸಿರುವ ಹುದ್ದೆಯನ್ನು ಹೊಂದಿರುವ ವ್ಯಕ್ತಿಗಳನ್ನು ಹೊರತುಪಡಿಸಿ, ಇತರೆ ಹುದ್ದೆಯನ್ನು ಹೊಂದಿರುವ ವ್ಯಕ್ತಿಗಳಿಗೆ ಪ್ರಸ್ತಾವಿತ ಉಪಬಂಧವು ಅನ್ವಯಿಸುತ್ತದೆ. ಐರಿಷ್ ಸ್ವತಂತ್ರ ರಾಜ್ಯದ, ಸಂವಿಧಾನ ೧೯೨೨ರ ತಾತ್ಕಾಲಿಕ ಉಪಬಂಧಗಳು ಸಿ.ಫ್. ೭೭ನೇ ಅನುಚ್ಛೇದವನ್ನು ಕೆಳಗಿನಂತೆ ಯಥಾವತ್ತಾಗಿ ನಿರೂಪಿಸಲಾಗಿದೆ:

"ಈ ಸಂವಿಧಾನವು ಜಾರಿಗೆ ಬಂದ ದಿನಾಂಕ, ಹಂಗಾಮಿ ಸರ್ಕಾರದಲ್ಲಿರುವ ಪ್ರತಿಯೊಬ್ಬ ಅಧಿಕಾರಿಯನ್ನು (ಬ್ರಿಟಿಷ್ ಸರ್ಕಾರದಲ್ಲಿ ಸೇವೆಯನ್ನು ಸಲ್ಲಿಸಿ, ಹಂಗಾಮಿ ಸರ್ಕಾರಕ್ಕೆ ತೆಗೆದುಕೊಂಡ ಅಧಿಕಾರಿ ಅಲ್ಲದ) ಐರಿಷ್ ಸ್ವತಂತ್ರ ರಾಜ್ಯದ [ಸಾಓ ಸ್ಟ್ಯಾಟ್ ಐರೇನ್ (Saorstat Eireann)] ಆ ದಿನಾಂಕದಂದು ವರ್ಗಾವಣೆ ಮಾಡತಕ್ಕದ್ದು ಮತ್ತು ಆ ಸಂಸ್ಥಾನದ ಅಧಿಕಾರಿಯಾಗತಕ್ಕದ್ದು ಹಾಗೂ ಅವರ ಹಿಂದಿನ ಅವಧಿಗೆ ಸಂವಾದಿಯಾಗಿ ಪದವನ್ನು ಹೊಂದತಕ್ಕದ್ದು."]

೫. (೧) ರಾಷ್ಟ್ರೀಯ ಶಾಸನ ಸಭೆಯ ಉಭಯ ಸದನಗಳು ಕ್ರಮಬದ್ಧವಾಗಿ ರಚನೆಯಾಗುವವರೆಗೆ ಮತ್ತು ಈ ಸಂವಿಧಾನದ ಅಡಿಯಲ್ಲಿ, ಅವುಗಳ ಸಭೆಯನ್ನು ಕರೆಯುವವರೆಗೆ, ಸಂವಿಧಾನ ರಚನಾ ಸಭೆಯೇ ಉಭಯ ಸದನಗಳ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಎಲ್ಲ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**ವಿವರಣೆ.**– ಈ ಉಪ-ಖಂಡದ ಉದ್ದೇಶಗಳಿಗಾಗಿ, ಸಂವಿಧಾನ ರಚನಾ ಸಭೆಯು, ಅನುಸೂಚಿ Iರಲ್ಲಿ ಸೇರಿರದ ರಾಜ್ಯಕ್ಷೇತ್ರವನ್ನು ಪ್ರತಿನಿಧಿಸುವ ಯಾರೇ ಸದಸ್ಯರನ್ನು ಒಳಗೊಳ್ಳತಕ್ಕದಲ್ಲ.

(೨) ಈ ಸಂವಿಧಾನದ IVನೇ ಭಾಗದಲ್ಲಿ ಉಪಬಂಧಿಸಲಾದಂತೆ, ರಾಷ್ಟ್ರಪತಿಯನ್ನು ಚುನಾಯಿಸುವವರೆಗೆ, ಈ ಬಗ್ಗೆ ಸಂವಿಧಾನ ರಚನಾ ಸಭೆಯು ಆಯ್ಕೆ ಮಾಡುವ ವ್ಯಕ್ತಿಯು ಒಕ್ಕೂಟದ ಹಂಗಾಮಿ ರಾಷ್ಟ್ರಪತಿಯಾಗಿರತಕ್ಕದ್ದು.

(೩) ಈ ಸಂವಿಧಾನದ IVನೇ ಭಾಗದಲ್ಲಿ ಉಪಬಂಧಿಸಲಾದಂತೆ, ಮಂತ್ರಿಗಳನ್ನು ವಿಧ್ಯುಕ್ತವಾಗಿ ನೇಮಕ ಮಾಡುವವರೆಗೆ, ಹಂಗಾಮಿ ರಾಷ್ಟ್ರಪತಿ ಈ ಬಗ್ಗೆ ನೇಮಕ ಮಾಡಿರತಕ್ಕ ವ್ಯಕ್ತಿಗಳು ತಾತ್ಕಾಲಿಕ ಮಂತ್ರಿ ಮಂಡಲದಲ್ಲಿರತಕ್ಕದ್ದು.

[**ಟಿಪ್ಪಣಿ**– ಈ ಸಂವಿಧಾನವು ಪ್ರಾರಂಭವಾಗುವ ದಿನಾಂಕ, ಅಧಿಕಾರವನ್ನು ವಹಿಸಿಕೊಳ್ಳಲು ಒಂದು

ಶಾಸಕಾಂಗ ಹಾಗೂ ಕಾರ್ಯಾಂಗ ಇರಬೇಕಾದುದು ಅತ್ಯಾವಶ್ಯಕವಾಗಿರುತ್ತದೆ. ಸಂವಿಧಾನ ಸಭೆಯೇ ತಾತ್ಕಾಲಿಕ ರಚನಾ ಶಾಸಕಾಂಗವಾಗಿರುವುದು ಹೆಚ್ಚು ವಾಸ್ತವಿಕ ಕ್ರಮವಾಗಿರುತ್ತದೆ. ತಾತ್ಕಾಲಿಕ ಕಾರ್ಯಾಂಗದ ಕುರಿತಾದ ಖಂಡವು ಸಾಂದರ್ಭಿಕವಾಗಿದೆ. ಆದಾಗ್ಯೂ, ಭಾರತ ಸರ್ಕಾರದ ಅಧಿನಿಯಮ, ೧೯೩೫ನ್ನು ತಿದ್ದುಪಡಿ ಮಾಡಿ ನೂತನ ಆದಿಪತ್ಯ (ಡೊಮಿನಿಯನ್) ಅಧಿನಿಯವವನ್ನು ಅಂಗೀಕರಿಸಿದ ತರುವಾಯ, ಈ ಉಪಬಂಧಗಳನ್ನು ಮಾರ್ಪಾಡು ಮಾಡಬೇಕಾದ ಅವಶ್ಯಕತೆ ಇದೆ.]

೬. ಮಧ್ಯಕಾಲೀನ ಅವಧಿಯಲ್ಲಿ ಅನಿರೀಕ್ಷಿತ ತೊಂದರೆಗಳು ಉದ್ಭವಿಸಬಹುದಾದ್ದರಿಂದ, ಈ ಮುಂದಿನ ವಿಷಯಗಳ ಕುರಿತು ಸಂವಿಧಾನದಲ್ಲಿ ಒಂದು ಖಂಡವಿರಬೇಕಾಗುತ್ತದೆ.

xನೇ ಭಾಗದಲ್ಲಿ ಏನೇ ಇದ್ದರೂ ಸಂಯುಕ್ತ ಸಂಸತ್ತು, ಅಧಿನಿಯಮದ ಮೂಲಕ.–

(ಎ) ಸದರಿ ಭಾಗವನ್ನು ಉಪಬಂಧಗಳನ್ನು ಮತ್ತು ಖಂಡವನ್ನು ಹೊರತುಪಡಿಸಿ, ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಬಹುದಾದ ಅವಧಿಯು ಯಾವುದಾದರೂ ಇದ್ದರೆ, ಅಂಥ ಅವಧಿಯಲ್ಲಿ, ಹಾಗೆ ನಿದಿಷ್ಟಪಡಿಸಬಹುದಾದ ಅಳವಡಿಕೆಗಳಿಗೆ ಮತ್ತು ಅಧಿಸೂಚನೆಗಳಿಗೆ ಒಳಪಟ್ಟು, ಪರಿಣಾಮವನ್ನು ಹೊಂದಿರುತ್ತವೆ ಎಂದು ನಿರ್ದೇಶಿಸಬಹುದು;

(ಬಿ) ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರಬಹುದಾದ ಹಿಂದೆ ಹೇಳಿದ ಅಂಥ ಯಾವುವೇ ತೊಂದರೆಗಳನ್ನು ನಿವಾರಿಸುವ ಉದ್ದೇಶಕ್ಕಾಗಿ ಆ ರೀತಿಯ ಇತರ ಉಪಬಂಧಗಳನ್ನು ರಚಿಸಬಹುದು.

ಸಂವಿಧಾನದ ಪ್ರಾರಂಭದಿಂದ ಮೂರು ವರ್ಷಗಳ ಮುಕ್ತಾಯದ ನಂತರ ಈ ಖಂಡದಡಿಯಲ್ಲಿ ಯಾವುದೇ ಅಧಿನಿಯಮವನ್ನು ರಚಿಸತಕ್ಕದ್ದಲ್ಲ.

[**ಟಿಪ್ಪಣಿ–** ತೊಂದರೆಗಳ ನಿವಾರಣೆ ಖಂಡವು ಈಗ ಬಹುತೇಕ ಸಾಮಾನ್ಯ ಸ್ವರೂಪದ್ದಾಗಿದೆ. ಉದಾಹರಣೆಗೆ ಭಾರತ ಸರ್ಕಾರ ಅಧಿನಿಯಮ, ೧೯೩೫ರ ೩೧೦ನೇ ಪ್ರಕರಣವನ್ನು ನೋಡಿ. ಮೂರು ವರ್ಷಗಳ ಅವಧಿಯವರೆಗೆ ಎಂಬ ಈ ಪರಿಕಲ್ಪನೆಯನ್ನು ಐರಿಷ್ ಸಂವಿಧಾನದ ೫೧ನೇ ಅನುಚ್ಛೇದದಿಂದ ತೆಗೆದುಕೊಳ್ಳಲಾಗಿದೆ. ಈ ಖಂಡವು ಮೊದಲ ಮೂರು ವರ್ಷಗಳ ಅವಧಿಯಲ್ಲಿ ತಿದ್ದುಪಡಿಯ ಪ್ರಕ್ರಿಯೆಯನ್ನು ತುಲನಾತ್ಮಕವಾಗಿ ಸುಲಭಗೊಳಿಸಲಿದೆ.]

## ಸಂವಿಧಾನ ರಚನಾ ಸಭೆ
## ಸರ್ವೋಚ್ಚ ನ್ಯಾಯಾಲಯದ ತಾತ್ಪೂರ್ತಿಕ ಸಮಿತಿ

ಸಂವಿಧಾನ ಮತ್ತು ಸರ್ವೋಚ್ಚ ನ್ಯಾಯಾಲಯದ ಅಧಿಕಾರಗಳನ್ನು ಪರ್ಯಾಲೋಚಿಸಲು ನೇಮಕ ಮಾಡಿರುವ ಸಮಿತಿಯ ಸದಸ್ಯರಾದ ನಾವು, ಈ ಕೆಳಗೆ ಸಹಿ ಮಾಡಿ, ನಮ್ಮ ವರದಿಯನ್ನು ಸಲ್ಲಿಸುವ ಗೌರವಕ್ಕೆ ಪಾತ್ರರಾಗಿದ್ದೇವೆ.

೨. ನಾವು ಮುಂದಿನ ಶೀರ್ಷಿಕೆಗಳಡಿಯಲ್ಲಿ ಪ್ರಶ್ನೆಗಳನ್ನು ಪರ್ಯಾಲೋಚಿಸಿದ್ದೇವೆ:

I. ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿ ಹಾಗೂ ಅಧಿಕಾರಗಳು.

II. ನ್ಯಾಯಾಲಯದ ಸಲಹಾ ಅಧಿಕಾರ ವ್ಯಾಪ್ತಿ.

III. ನ್ಯಾಯಾಲಯದ ಪೂರಕ ಅಧಿಕಾರಗಳು.

IV. ನ್ಯಾಯಾಲಯದ ರಚನೆ ಹಾಗೂ ಸಂಖ್ಯಾ ಬಲ.

V. ನ್ಯಾಯಾಧೀಶರ ಅರ್ಹತೆಗಳು ಹಾಗೂ ನೇಮಕ ವಿಧಾನ.

VI. ನ್ಯಾಯಾಧೀಶರ ಪದಾವಧಿ ಮತ್ತು ಸೇವಾ ಷರತ್ತುಗಳು.

**I. ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿ ಹಾಗೂ ಅಧಿಕಾರಗಳು:**

೩. ಅಧಿನಿಯಮಗಳ ಹಾಗೂ ಕಾನೂನುಗಳ ಸಂವಿಧಾನಾತ್ಮಕ ಸಿಂಧುತ್ವವನ್ನು ಕುರಿತು ನಿರ್ಧರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸರ್ವೋಚ್ಚ ನ್ಯಾಯಾಲಯವನ್ನು ಯಾವುದೇ ಒಕ್ಕೂಟ ಯೋಜನೆಯಲ್ಲಿ ಅವಶ್ಯಕವೆಂದು ತಿಳಿಯಬಹುದಾಗಿದೆ. ಆದಾಗ್ಯೂ, ಈ ಅಧಿಕಾರ ವ್ಯಾಪ್ತಿಯು, ಸರ್ವೋಚ್ಚ ನ್ಯಾಯಾಲಯಕ್ಕೆ ಮಾತ್ರವೇ ಇರಬೇಕೆಂದಿಲ್ಲ. ಪ್ರಸ್ತುತ ಅಸ್ತಿತ್ವದಲ್ಲಿರುವ ಭಾರತ ಸಂವಿಧಾನದ ಅಡಿಯಲ್ಲಿಯೂ ಸಹ, ಯಾವುದೇ ನ್ಯಾಯಾಲಯದ ಮುಂದಿರುವ ವ್ಯಾಜ್ಯದಲ್ಲಿ, ಅಧಿನಿಯಮಗಳ ಮತ್ತು ಕಾನೂನುಗಳ ಸಿಂಧುತ್ವವನ್ನು ಕುರಿತು ಪ್ರಶ್ನೆಗಳು ಉದ್ಭವಿಸಿದಾಗಲೆಲ್ಲಾ ಆ ನ್ಯಾಯಾಲಯದಲ್ಲಿ ಆ ಪ್ರಶ್ನೆಗಳನ್ನು ಎತ್ತಲು ಅನುಮತಿಸಲಾಗಿದೆ.

೪. ನೂತನ ಭಾರತ ಸಂವಿಧಾನದ ಮೇರೆಗೆ, ಕೆಲವು ಉದ್ದೇಶಗಳಿಗಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಅವಶ್ಯಕವೆಂದು ಈ ಮುಂದಿನ ಹೆಚ್ಚುವರಿ ಅಧಿಕಾರಗಳನ್ನು ಅದಕ್ಕೆ ನೀಡಬಹುದು ಎಂದು ನಾವುಗಳು ಪರ್ಯಾಲೋಚಿಸಿದ್ದೇವೆ:–

(ಎ) ಒಕ್ಕೂಟ ಮತ್ತು ಒಂದು ಘಟಕ ಅಥವಾ ಒಂದು ಘಟಕ ಮತ್ತು ಮತ್ತೊಂದು ಘಟಕದ ನಡುವಿನ ವಿವಾದಗಳನ್ನು ಕುರಿತು ಪ್ರತ್ಯೇಕವಾದ ಅಧಿಕಾರ ವ್ಯಾಪ್ತಿ;

೫. ಸರ್ವೋಚ್ಚ ನ್ಯಾಯಾಲಯವು, ಅಂಥ ವಿವಾದಗಳ ನ್ಯಾಯ ನಿರ್ಣಯಕ್ಕೆ ಲಭ್ಯವಿರುವ ಅತ್ಯುತ್ತಮ ನ್ಯಾಯ ನೀಡಿಕೆ ವೇದಿಕೆಯಾಗಿದೆ ಮತ್ತು ಅದರ ಅಧಿಕಾರ ವ್ಯಾಪ್ತಿಯು, ಅದಕ್ಕೆ ಮಾತ್ರ ವಿಶಿಷ್ಟವಾಗಿರತಕ್ಕದ್ದು.

(ಬಿ) ಒಕ್ಕೂಟವು ಮಾಡಿಕೊಂಡ ಒಡಂಬಡಿಕೆಗಳಿಂದ ಉದ್ಭವಿಸುವ ವಿಷಯಗಳಿಗೆ ಸಂಬಂಧಿಸಿದ ಅಧಿಕಾರವ್ಯಾಪ್ತಿ;

೬. 'ವಿದೇಶಿ ವ್ಯವಹಾರಗಳ' ವಿಷಯದ ಭಾಗವಾಗಿ ಒಡಂಬಡಿಕೆ ಮಾಡಿಕೊಳ್ಳುವ ಅಧಿಕಾರ ಒಕ್ಕೂಟಕ್ಕೆ ಇರುತ್ತದೆ. ಆದ್ದರಿಂದ, ಒಕ್ಕೂಟ ಮತ್ತು ವಿದೇಶಿ ರಾಷ್ಟ್ರದ ನಡುವಿನ ಪತ್ಯರ್ಪಣ ವಿಷಯವೂ ಒಳಗೊಂಡು ಒಡಂಬಡಿಕೆಗಳಿಂದ ಉದ್ಭವಿಸುವ ಎಲ್ಲಾ ವಿಷಯಗಳನ್ನು ಕುರಿತು, ಮೊದಲ ಹಂತದಲ್ಲಿ, ಅವಶ್ಯಕವಲ್ಲದಿದ್ದರೂ, ಅಂತಿಮವಾಗಿ ನಿರ್ಣಯಿಸಲು ಒಕ್ಕೂಟದ ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿಯನ್ನು ನಿಹಿತಗೊಳಿಸುವುದು ಸೂಕ್ತವಾಗಿರುತ್ತದೆ. ಈ ಹಂತದಲ್ಲಿ, ನಾವು ಅಂತರ–ಘಟಕ ಪ್ರತ್ಯರ್ಪಣಗಳನ್ನು ಕುರಿತು ವ್ಯವಹರಿಸುವುದಿಲ್ಲ. ಏಕೆಂದರೆ, ಇದು ಒಕ್ಕೂಟ ಮತ್ತು ಘಟಕಗಳ ನಡುವಿನ ಅಧಿಕಾರಗಳ ಅಂತಿಮ ಹಂಚಿಕೆಯನ್ನು ಆಧರಿಸಿರುತ್ತದೆ.

(ಸಿ) ಒಕ್ಕೂಟದ ಅಧಿಕಾರ ಸಾಮರ್ಥ್ಯದಲ್ಲಿ ಬರುವಂತಹ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಒಕ್ಕೂಟ ಶಾಸನ ಸಭೆಯೇ ನಿರ್ಧರಿಸಬಹುದಾದ ಅಧಿಕಾರ ವ್ಯಾಪ್ತಿ.

೭. ಕೆಲವು ವಿಷಯಗಳನ್ನು ಕುರಿತು, ಶಾಸನ ರಚಿಸಲು ಒಕ್ಕೂಟ ಶಾಸನಸಭೆಯು ಸಕ್ಷಮವಾಗಿದ್ದರೆ, ಇದು ನಿಸ್ಸಂಶಯವಾಗಿ, ಆ ವಿಷಯಕ್ಕೆ ಸಂಬಂಧಿಸಿದಂತೆ ತನ್ನದೇ ಆಯ್ಕೆಯಂತೆ ಆ ನ್ಯಾಯಾಧೀಕರಣಕ್ಕೆ ನ್ಯಾಯಿಕ ಅಧಿಕಾರವನ್ನು ಪ್ರದಾನ ಮಾಡಲು ಸಕ್ಷಮವಾಗಿರುತ್ತದೆ; ಮತ್ತು ಈ ಉದ್ದೇಶಕ್ಕಾಗಿ ಇದು ಸರ್ವೋಚ್ಚ ನ್ಯಾಯಾಲಯವನ್ನು ಆಯ್ಕೆ ಮಾಡಿಕೊಂಡಲ್ಲಿ, ಹಾಗೆ ಪ್ರದತ್ತವಾದ ಅಧಿಕಾರ ವ್ಯಾಪ್ತಿಯನ್ನು ಆ ನ್ಯಾಯಾಲಯವು ಹೊಂದಿರುತ್ತದೆ.

(ಡಿ) ಸಂವಿಧಾನವು ಖಾತರಿಪಡಿಸಿದ ಮೂಲಭೂತ ಹಕ್ಕುಗಳನ್ನು ಜಾರಿಗೆ ತರುವ ಉದ್ದೇಶಕ್ಕೆ ಸಂಬಂಧಿಸಿದ ಅಧಿಕಾರವ್ಯಾಪ್ತಿ.

೮. ಮೂಲಭೂತ ಹಕ್ಕುಗಳ ಕರಡಿನ ೨೨ನೇ ಖಂಡವು, ಮೂಲಭೂತ ಹಕ್ಕುಗಳ ಜಾರಿಗಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ಸೂಕ್ತ ವ್ಯವಹರಣೆಗಳನ್ನು ಪ್ರಾರಂಭಿಸಲು ಉಪಬಂಧವನ್ನು ಕಲ್ಪಿಸಿದೆ. ಆದಾಗ್ಯೂ, ಅಂಥ ವಿಷಯಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಅದಕ್ಕಷ್ಟೇ

ಸೀಮಿತಗೊಳಿಸುವುದು ಅನಪೇಕ್ಷಣೀಯವಾಗಿದೆ ಎಂದು ನಾವು ಭಾವಿಸುತ್ತೇವೆ. ಈ ಮೂಲಭೂತ ಹಕ್ಕುಗಳ ಉಲ್ಲಂಘನೆಯಾದರೆ, ಹಾಗೆ ಉಲ್ಲಂಘನೆಯಾದಾಗಲೆಲ್ಲಾ ವಾಸ್ತವಿಕವಾಗಿ ಅವುಗಳನ್ನು ನಾಗರಿಕನಿಗೆ ನಿರಾಕರಿಸಿದಂತಾಗುತ್ತದೆ. ಇದಕ್ಕೆ ಅವರು ಪರಿಹಾರ ಪಡೆಯುವ ಏಕಮಾತ್ರ ನ್ಯಾಯಾಲಯ ಸರ್ವೋಚ್ಚ ನ್ಯಾಯಾಲಯವಾಗಿದ್ದು, ಅವರು ಅದರ ನೆರವನ್ನು ಪಡೆಯಲು ಒತ್ತಾಯಿಸಬಹುದಾಗಿದೆ. ಅವಶ್ಯಕ ಅಧಿಕಾರ ವ್ಯಾಪ್ತಿಯಿರುವ ಮತ್ತಾವುದೇ ನ್ಯಾಯಾಲಯವು ಇಲ್ಲದಿರುವ ಸ್ಥಳಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಆ ಅಧಿಕಾರವನ್ನು ಹೊಂದಿರುತ್ತದೆ; ಅವಶ್ಯಕ ಅಧಿಕಾರ ವ್ಯಾಪ್ತಿಯಿಲ್ಲದಿರುವ ಮತ್ತಿತರ ನ್ಯಾಯಾಲಯಗಳಲ್ಲಿರುವ ಸ್ಥಳಗಳಲ್ಲಿ ಪುನರೀಕ್ಷಣಾ ಅಧಿಕಾರಗಳ್ಳೂ ಒಳಗೊಂಡಂತೆ ಸರ್ವೋಚ್ಚ ನ್ಯಾಯಾಲಯವು ಅಪೀಲು ವಿಚಾರಣಾ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ.

(ಇ) ಈಗ ಪ್ರೀವಿ ಕೌನ್ಸಿಲ್ ಚಲಾಯಿಸುತ್ತಿರುವಂತಹ ಸಾಮಾನ್ಯ ಅಪೀಲು ವಿಚಾರಣಾ ಅಧಿಕಾರ ವ್ಯಾಪ್ತಿ.

೯. ನೂತನ ಸಂವಿಧಾನದ ಅಡಿಯಲ್ಲಿ, ಅಂತಿಮ ಅಪೀಲು ಪ್ರಾಧಿಕಾರವಾಗಿರುವ ಪ್ರೀವಿ ಕೌನ್ಸಿಲ್‌ನ ಅಧಿಕಾರ ವ್ಯಾಪ್ತಿಯು ಇಲ್ಲವಾಗುತ್ತದೆ ಮತ್ತು ಅದೇ ರೀತಿಯ ಅಧಿಕಾರ ವ್ಯಾಪ್ತಿಯನ್ನು ಈಗ ಸರ್ವೋಚ್ಚ ನ್ಯಾಯಾಲಯಕ್ಕೆ ಪ್ರದಾನ ಮಾಡಬೇಕೆಂಬುದು ಸಹಜವಾಗಿಯೇ ಅಪೇಕ್ಷಣೀಯವಾಗಿದೆ. ಇದುವರೆಗೂ ಬ್ರಿಟೀಷ್ ಭಾರತದ ಘಟಕಗಳಿಗೆ ಸಂಬಂಧಿಸಿರುವಷ್ಟರಮಟ್ಟಿಗೆ, ಈ ಅಧಿಕಾರ ವ್ಯಾಪ್ತಿಯು, ಪ್ರೀವಿ ಕೌನ್ಸಿಲ್‌ನ ಪ್ರಸ್ತುತ ಅಧಿಕಾರ ವ್ಯಾಪ್ತಿಗೆ ಸಹ ವ್ಯಾಪ್ತಿಯನ್ನು ಹೊಂದಿರತಕ್ಕದ್ದು. ಭಾರತದ ರಾಜ್ಯ ಘಟಕಗಳಿಗೆ ಸಂಬಂಧಿಸಿದಂತೆ, ಕನಿಷ್ಠಪಕ್ಷ ಎರಡು ವರ್ಗಗಳ ಮೊಕದ್ದಮೆಗಳಿವೆ, ಇಲ್ಲಿ ಏಕರೂಪತೆಯ ದೃಷ್ಟಿಯಿಂದ ಅಂತಿಮ ತೀರ್ಮಾನವು ಸರ್ವೋಚ್ಚ ನ್ಯಾಯಾಲಯದಲ್ಲಿ ನಿಹಿತವಾಗಿರಬೇಕು ಎಂಬುದು ಸ್ಪಷ್ಟವಾದ ಅಪೇಕ್ಷೆಯಾಗಿದ್ದು, ಅವು ಈ ಮುಂದಿನಂತಿರುತ್ತವೆ:–

(೧) ಒಕ್ಕೂಟದ ಕಾನೂನಿನ ಅರ್ಥವಿವರಣೆಯನ್ನು ಒಳಗೊಂಡ ಮೊಕದ್ದಮೆಗಳು;

(೨) ಸಂಬಂಧಪಟ್ಟ ರಾಜ್ಯವನ್ನು ಹೊರತುಪಡಿಸಿ ಒಕ್ಕೂಟದ ಕಾನೂನಿನ ಅರ್ಥವಿವರಣೆಯನ್ನು ಒಳಗೊಂಡಿರುವ ಮೊಕದ್ದಮೆಗಳು.

ಮಾನ್ಯರೆ. ಬಿ.ಎಲ್. ಮಿಟ್ಟರ್‌ರವರು ಸಲಹೆ ನೀಡಿದಂತೆ, ಅಂತಹ ಏಕರೂಪತೆಯನ್ನು ಸರ್ವೋಚ್ಚ ನ್ಯಾಯಾಲಯದ ಅಪೀಲು ವಿಚಾರಣಾ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಅಥವಾ ಒಂದು ನಿರ್ದಿಷ್ಟ ಪ್ರಕರಣವನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಉಲ್ಲೇಖಿಸಿ ಪಡೆಯಬಹುದಾಗಿದೆ. ಒಕ್ಕೂಟದ ಅಥವಾ ಅದರ ಯಾವುದೇ ಘಟಕದ ಕಾನೂನಿನ ಸಾಂವಿಧಾನಿಕ ಸಿಂಧುತ್ವವನ್ನು ಒಳಗೊಂಡರುವ ಪ್ರಕರಣಗಳನ್ನು ಕುರಿತು ಈಗಾಗಲೆ ವಿಚಾರಣೆ ಮಾಡಿದ್ದರೆ, ಅವೆಲ್ಲವೂ ಅವಶ್ಯವಾಗಿ ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಬರುತ್ತವೆ.

೧೦. ಹಾಗಿದ್ದರೂ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ವಿಷಯಗಳಿಗೆ ಸಂಬಂಧಿಸಿದಂತೆ, ಸರ್ವೋಚ್ಚ ನ್ಯಾಯಾಲಯಕ್ಕೆ ಹೆಚ್ಚುವರಿ ಅಧಿಕಾರ ವ್ಯಾಪ್ತಿಯನ್ನು ವಿಶೇಷ ಒಪ್ಪಂದದ ಮೂಲಕ ಭಾರತದ ಯಾವುದೇ ರಾಜ್ಯ ಘಟಕಕ್ಕೆ ಪ್ರದಾನ ಮಾಡುವುದು.

## II. ನ್ಯಾಯಾಲಯದ ಸಲಹಾ ಅಧಿಕಾರ ವ್ಯಾಪ್ತಿ:

೧೧. ಕಾನೂನಿನ ಕ್ಲಿಷ್ಟ ಪ್ರಶ್ನೆಗಳನ್ನು ಕುರಿತು ರಾಜ್ಯದ (ರಾಷ್ಟ್ರದ) ಮುಖ್ಯಸ್ಥನಿಗೆ ಸಲಹೆ ನೀಡುವ ಹೊಣೆಯನ್ನು ಸರ್ವೋಚ್ಚ ನ್ಯಾಯಾಲಯದ ಮೇಲೆ ಹೊರಿಸುವುದನ್ನು ಕುರಿತು ಜೂರಿಗಳು ಮತ್ತು ರಾಜಕೀಯ ಚಿಂತಕರ ನಡುವೆ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ವಾದ ವಿವಾದಗಳ ಹೊರತಾಗಿಯೂ, ಅಧಿನಿಯಮದ

೨೧೩ನೇ ಪ್ರಕರಣದ ಮೂಲಕ ಪ್ರಸ್ತುತ ಸಂವಿಧಾನದ ಅಡಿಯಲ್ಲಿ ಒಕ್ಕೂಟ ನ್ಯಾಯಾಲಯಕ್ಕೆ ಸಲಹಾ ಅಧಿಕಾರ ವ್ಯಾಪ್ತಿಯನ್ನು ಪ್ರದಾನ ಮಾಡುವುದು ವಿಹಿತವೆಂದು ಪರಿಗಣಿಸಲಾಗಿದೆ. ವಾದ–ವಿವಾದಗಳ ಸಾಧಕ–ಬಾಧಕಗಳಿಗೆ ಹೆಚ್ಚಿನ ಪರಿಗಣನೆಯನ್ನು ನೀಡಿ, ನೂತನ ಸಂವಿಧಾನದ ಅಡಿಯಲ್ಲಿಯೂ ಈ ಅಧಿಕಾರ ವ್ಯಾಪ್ತಿಯನ್ನು ಮುಂದುವರೆಸುವುದು ಅತ್ಯುತ್ತಮ ಎಂಬುದು ನಮ್ಮ ಭಾವನೆಯಾಗಿದೆ. ಅಂಥ ಅಧಿಕಾರ ವ್ಯಾಪ್ತಿಯನ್ನು ಅನವಶ್ಯಕವಾಗಿ ಆಶ್ರಯಿಸುವ ಸಂಭವ ಬಹಳ ವಿರಳವೆಂದು ಎಂದು ಭಾವಿಸಬಹುದಾಗಿದೆ ಮತ್ತು, ನಾವು ಪ್ರಸ್ತಾವಿಸಿರುವಂತೆ, ನ್ಯಾಯಾಲಯವು ಹತ್ತು ಅಥವಾ ಹನ್ನೊಂದು ನ್ಯಾಯಾಧೀಶರ ಬಲವನ್ನು ಹೊಂದಿರಬೇಕು, ಒಂದು ಪೂರ್ಣ ನ್ಯಾಯಾಲಯ ಪೀಠದಿಂದ ತೀರ್ಪನ್ನು ಘೋಷಿಸುವುದು ಒಂದು ಅಧಿಕಾರಯುತ ಸಲಹೆಯೆಂದು ಪರಿಗಣಿಸಬಹುದಾಗಿದೆ. ಸಲಹೆಗಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಒಪ್ಪಿಸಿದ ವಿಷಯಗಳ ಅಗತ್ಯವನ್ನು ಒಂದು ಪೂರ್ಣ ನ್ಯಾಯ ಪೀಠದಿಂದ ಖಾತರಿಪಡಿಸಿಕೊಳ್ಳಬಹುದಾಗಿದೆ.

## III. ನ್ಯಾಯಾಲಯದ ಸಹಾಯಕ ಅಧಿಕಾರಗಳು:

೧೨. ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗುವ ಅಪೀಲುಗಳ ಸಂಬಂಧದಲ್ಲಿ ದಾಖಲೆಗಳನ್ನು ಸಿದ್ಧಪಡಿಸಲು ಹಾಗೂ ಅದು ಹೊರಡಿಸಿ ಡಿಕ್ರಿಗಳ ಜಾರಿಗಾಗಿ ಅವಕಾಶ ಕಲ್ಪಿಸುವ ರೀತಿಯಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ ೪೫ನೇ ಕ್ರಮಾದೇಶದಲ್ಲಿ ಇರುವಂಥಹುದೇ ರೀತಿಯಲ್ಲಿ, ಅದರ ಕಾರ್ಯವನ್ನು ಮತ್ತು ಉಪಬಂಧಗಳನ್ನು ವಿನಿಯಮಿಸುವ ಕಾರ್ಯವಿಧಾನಕ್ಕೆ ಸಂಬಂಧಿಸಿದ ನಿಯಮಗಳನ್ನು ರಚಿಸಲು, ೧೯೩೫ನೇ ಅಧಿನಿಯಮದ ೧೪ನೇ ಪ್ರಕರಣದ ಮೇರೆಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಪ್ರದಾನ ಮಾಡತಕ್ಕದ್ದು. ೧೯೩೫ನೇ ಅಧಿನಿಯಮದ ೨೧೯ನೇ ಪ್ರಕರಣದಲ್ಲಿ ಒಕ್ಕೂಟ ನ್ಯಾಯಾಲಯದ ಮೇಲೆ ಈಗ ವಿಧಿಸಲಾಗಿರುವ ನಿರ್ಬಂಧವನ್ನು ಮುಂದುವರಿಸುವುದು ಅವಶ್ಯವೆಂದು ನಮಗೆ ಕಂಡುಬಂದಿರುವುದಿಲ್ಲ. ಸರ್ವೋಚ್ಚ ನ್ಯಾಯಾಲಯವು ಪ್ರಿವಿ ಕೌನ್ಸಿಲ್‌ನ ಸ್ಥಾನವನ್ನು ತೆಗೆದುಕೊಂಡರೆ, ಅದಕ್ಕೆ ಸಾಧ್ಯವಿರುವಲ್ಲಿ ಅಂತಿಮ ತೀರ್ಪುಗಳನ್ನು ಮತ್ತು ಅಂತಿಮ ಡಿಕ್ರಿಗಳನ್ನು ಘೋಷಿಸಲು ಹಾಗೂ ಯಾವ ನ್ಯಾಯಾಲಯಗಳಿಂದ ಅಪೀಲನ್ನು ಸಲ್ಲಿಸಲಾಗಿದೆಯೋ ಆ ನ್ಯಾಯಾಲಯಗಳಿಗೆ ಮುಂದಿನ ವಿಚಾರಣೆಗಾಗಿ ಅಂಥ ಮುಂದಿನ ವಿಚಾರಣೆ ಅವಶ್ಯವೆಂದು ಪರಿಗಣಿಸಿದಲ್ಲಿ ವಿಷಯವನ್ನು ಹಿಂದಿರುಗಿಸುವುದಕ್ಕಾಗಿ ಅದಕ್ಕೆ ಅನುಮತಿ ನೀಡುವುದು ಸೂಕ್ತ. ಸರ್ವೋಚ್ಚ ನ್ಯಾಯಾಲಯಕ್ಕೆ ಕೆಲವೊಂದು ಅಂತರ್ನಿಹಿತ ಅಧಿಕಾರಗಳನ್ನು ನೀಡಿ, ೧೯೩೫ರ ಅಧಿನಿಯಮದ ೨೧೦ನೇ ಪ್ರಕರಣಕ್ಕೆ ಸಂವಾದಿಯಾಗಿರುವ ಉಪಬಂಧವನ್ನು ಸಹ ರಚಿಸಬೇಕು.

## IV. ಸಂವಿಧಾನ ಮತ್ತು ನ್ಯಾಯಾಲಯದ ನ್ಯಾಯಾಧೀಶರ ಸಂಖ್ಯೆ:

೧೩. ಸರ್ವೋಚ್ಚ ನ್ಯಾಯಾಲಯಕ್ಕೆ ಕನಿಷ್ಠಪಕ್ಷ ಎರಡು ವಿಭಾಗಗಳು ಇರಬೇಕಾದ ಅಗತ್ಯವಿದೆ ಎಂಬುದು ನಮ್ಮ ಆಲೋಚನೆಯಾಗಿದೆ. ಗೈರುಹಾಜರಿಯ ಸಂದರ್ಭಗಳು ಅಥವಾ ಇತರೆ ಅನಿರೀಕ್ಷಿತ ಪರಿಸ್ಥಿತಿಗಳಲ್ಲಿ ನ್ಯಾಯಾಧೀಶರ ಸೇವೆಗೆ ಅವಕಾಶ ಕಲ್ಪಿಸುವ ಸಲುವಾಗಿ, ಪ್ರತಿಯೊಂದು ವಿಭಾಗೀಯ ಪೀಠದಲ್ಲಿ ಐವರು ನ್ಯಾಯಾಧೀಶರು ಇರತಕ್ಕದ್ದು. ನ್ಯಾಯಾಲಯಗಳಿಗೆ ಮುಖ್ಯ ನ್ಯಾಯಮೂರ್ತಿಯವರ ಜೊತೆಗೆ ಹತ್ತು ಜನ ನ್ಯಾಯಾಧೀಶರೂ ಇರುವ ಅಗತ್ಯವಿದೆ ಎಂಬುದು ನಮ್ಮ ಹಾಗೂ ನ್ಯಾಯ ಪೀಠಗಳ ಅಭಿಪ್ರಾಯವಾಗಿದೆ. ಅಲ್ಲದೆ, ಅಪೀಲು ವಿಚಾರಣಾ ಅಧಿಕಾರ ವ್ಯಾಪ್ತಿಗೆ ಪ್ರಾಸಂಗಿಕವಾಗಿರುವ ಹಲವಾರು ಇತರ ವಿಷಯಗಳನ್ನು ಚರ್ಚಿಸಲು ನ್ಯಾಯಾಧೀಶರುಗಳಲ್ಲಿ ಒಬ್ಬರ ಅಗತ್ಯವಿದೆ. (ಪರಿಷ್ಕರಣಾ ಹಾಗೂ ನಿರ್ದೇಶಕ ಅಧಿಕಾರ ವ್ಯಾಪ್ತಿಯನ್ನೊಳಗೊಂಡು).

**V. ನ್ಯಾಯಾಧೀಶರ ಇರಬೇಕಾದ ಅರ್ಹತೆ ಮತ್ತು ನೇಮಕಾತಿ ವಿಧಾನ:**

೧೪. ಒಕ್ಕೂಟಕ್ಕೆ ಸೇರ್ಪಡೆಗೊಳ್ಳಬಹುದಾದ ರಾಜ್ಯಗಳಿಂದಲೂ ಸಹ ವರಿಷ್ಠ ನ್ಯಾಯಾಲಯಗಳ ಸರ್ವೋಚ್ಚ ನ್ಯಾಯಾಲಯದ ಸ್ಥಾನ ತುಂಬಲು ಅರ್ಹರೆಂದು ನ್ಯಾಯಾಧೀಶರನ್ನು, ಕಂಡುಬರಬಹುದಾದ ಸಾಧ್ಯತೆಯನ್ನು ಮನಗಂಡು ೧೯೩೫ರ ಅಧಿನಿಯಮದಲ್ಲಿರುವಂತೆ ಒಕ್ಕೂಟ ನ್ಯಾಯಾಲಯದ ನ್ಯಾಯಾಧೀಶರು ಹೊಂದಿರುವ ಅರ್ಹತೆಯನ್ನೇ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಿಗೂ ಗೊತ್ತುಪಡಿಸಬಹುದು. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳನ್ನು ನೇಮಕ ಮಾಡುವ ಅಧಿಕಾರವನ್ನು ಒಕ್ಕೂಟದ ರಾಷ್ಟ್ರಪತಿಯ ಮುಕ್ತ ವಿವೇಚನೆಗೆ ಬಿಡುವುದು ಯುಕ್ತವಲ್ಲವೆಂಬುದು ನಮ್ಮ ಅಭಿಪ್ರಾಯವಾಗಿದೆ. ಈ ಮುಂದಿನ ಎರಡು ವಿಧಾನಗಳಲ್ಲಿ ಒಂದನ್ನು ಅಳವಡಿಸಿಕೊಳ್ಳಬೇಕೆಂದು ನಾವು ಶಿಫಾರಸ್ಸು ಮಾಡುತ್ತೇವೆ. ಅದರಲ್ಲಿ ಒಂದು ವಿಧಾನದ ಪ್ರಕಾರ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಂದಿಗೆ ಸಮಲೋಚನೆ ನಡೆಸಿ (ಇಲ್ಲಿಯವರೆಗೂ, ಇದು ಕಿರಿಯ ನ್ಯಾಯಾಧೀಶರ ನೇಮಕಕ್ಕೆ ಸಂಬಂಧಿಸಿತ್ತು) ರಾಷ್ಟ್ರಪತಿ ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಹರು ಎಂದು ಅವರು ಪರಿಗಣಿಸಿದ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು ಮತ್ತು ಆ ನಾಮನಿರ್ದೇಶನವನ್ನು ಸಂವಿಧಾನ ಘಟಕಗಳ ಉಚ್ಚ ನ್ಯಾಯಾಲಯಗಳ ಕೆಲವು ಮುಖ್ಯ ನ್ಯಾಯಾಧೀಶರುಗಳನ್ನು ಹಾಗೂ ಕೇಂದ್ರ ಶಾಸನ ಸಭೆಯ ಎರಡೂ ಸದನಗಳ ಸದಸ್ಯರು ಮತ್ತು ಒಕ್ಕೂಟದ ಕೆಲವು ಕಾನೂನು ಅಧಿಕಾರಿಗಳನ್ನು ಒಳಗೊಂಡ ೧೧ ಜನರ ತಂಡದ ಪೈಕಿ ಕನಿಷ್ಠ ೭ ಸದಸ್ಯರಬಹುಮತದಿಂದ ಅಂಗೀಕರಿಸತಕ್ಕದ್ದು. ಮತ್ತೊಂದು ವಿಧಾನವೆಂದರೆ, ೧೧ ಜನರ ತಂಡವು, ಮೂರು ಹೆಸರುಗಳನ್ನು ಶಿಫಾರಸ್ಸು ಮಾಡತಕ್ಕದ್ದು, ರಾಷ್ಟ್ರಪತಿಯವರು ಮುಖ್ಯ ನ್ಯಾಯಮೂರ್ತಿಯೊಂದಿಗೆ ಸಮಾಲೋಚಿಸಿ ಅವರಲ್ಲಿ ಒಬ್ಬರನ್ನು ನ್ಯಾಯಾಧೀಶರನ್ನಾಗಿ ನೇಮಕ ಮಾಡಲು ಆಯ್ಕೆ ಮಾಡಬಹುದು. ಮುಖ್ಯ ನ್ಯಾಯಾಧೀಶರ ನೇಮಕದಲ್ಲಿಯೂ ಸಹ ಇದೇ ಕ್ರಮವನ್ನು ಅನುಸರಿಸತಕ್ಕದ್ದು, ಆದರೆ, ಈ ಸಂದರ್ಭದಲ್ಲಿ ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚನೆ ನಡೆಸುವುದನ್ನು ಹೊರತುಪಡಿಸಿ, ಇದೇ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು. ಈ ತಂಡವು, ಸ್ವತಂತ್ರವಾದ ಮತ್ತು ಸಮಾದೇಶಕ ತಂಡ ಎಂದು ಎರಡೂ ಆಗಿರುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಲು, ತಂಡವನ್ನು ಒಂದು ತಾತ್ಪೂರ್ತಿಕ ಅಂಗವೆಂದು ಖಚಿತಪಡಿಸತಕ್ಕದ್ದಲ್ಲ. ಆದರೆ, ಅದನ್ನು ಒಂದು ನಿರ್ದಿಷ್ಟ ವರ್ಷಗಳ ಅವಧಿಗೆ ನೇಮಕ ಮಾಡಬೇಕು ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

**VI. ನ್ಯಾಯಾಧೀಶರ ಹುದ್ದೆಯ ಪದಾವಧಿ ಮತ್ತು ಸಾಮಾನ್ಯ ಸೇವೆಗಳು:**

೧೫. ಪ್ರಸ್ತುತ ಸಂವಿದಾನದ ಅಧಿನಿಯಮದಡಿಯಲ್ಲಿ ಒಕ್ಕೂಟ ನ್ಯಾಯಾಲಯದ ನ್ಯಾಯಾಧೀಶರ ಹುದ್ದೆಯ ಪದಾವಧಿಯೇ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಪದಾವಧಿಯೂ ಆಗಿರುವುದು ಮತ್ತು ಅವರ ನಿವೃತ್ತಿಯ ವಯಸ್ಸು ಕೂಡ ಒಂದೇ ಆಗಿರುತ್ತದೆ (೭೫). ಶಾಸನಬದ್ಧ ನಿಯಮಗಳ ಮೂಲಕ, ಅವರ ಸಂಬಳ ಹಾಗೂ ನಿವೃತ್ತಿ ವೇತನವನ್ನು ಒದಗಿಸಲಾಗುತ್ತದೆ. ರಾಷ್ಟ್ರದ ಅತ್ಯುನ್ನತ ನ್ಯಾಯಾಲಯದಲ್ಲಿ ತಾತ್ಕಾಲಿಕ ನ್ಯಾಯಾಧೀಶರನ್ನು ನೇಮಕ ಮಾಡುವುದು ಅನಪೇಕ್ಷಣೀಯ. ತಾತ್ಕಾಲಿಕ ನ್ಯಾಯಾಧೀಶರು ಇರುವ ಬದಲು, ಮುಖ್ಯ ನ್ಯಾಯಾಧೀಶರು ಅಥವಾ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರ ತಂಡವು, ಕೆಲವು ತಾತ್ಪೂರ್ತಿಕ ನ್ಯಾಯಾಧೀಶರು ಇರುವಂಥ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬಹುದು. ಇದಕ್ಕೆ ಸಂಬಂಧಿಸಿದಂತೆ, ಕೆನಡಿಯನ್ ಸರ್ವೋಚ್ಚ ನ್ಯಾಯಾಲಯ ಅಧಿನಿಯಮದ ೩೦ನೇ ಪ್ರಕರಣದಲ್ಲಿ ಒಳಗೊಂಡಿರುವ ಕೆನಡಾದ ಆಚರಣೆಯ ಬಗ್ಗೆ ಗಮನ ಸೆಳೆಯಲು ಇಚ್ಛಿಸುತ್ತೇವೆ. ಆ ಪ್ರಕರಣವು ಹೀಗಿದೆ:-

"**೩೦. ತಾತ್ಪೂರ್ತಿಕ ನ್ಯಾಯಾಧೀಶರ ನೇಮಕ.**--- ತೆರವಾಗಿರುವ ಸ್ಥಾನದ ಅಥವಾ ಸ್ಥಾನಗಳ ಕಾರಣದಿಂದಾಗಿ ಅಥವಾ ಅನಾರೋಗ್ಯದಿಂದಾಗಿ ಗೈರುಹಾಜರಾಗಿರುವ ಅಥವಾ ರಜೆಯ ಮೇಲೆ ತೆರಳಿರುವ ಅಥವಾ ಶಾಸನಾತ್ಮಕವಾಗಿ ಪರಿಷತ್ತಿನ ಆದೇಶದಂತೆ (ಆರ್ಡರ್ ಇನ್ ಕೌನ್ಸಿಲ್) ವಹಿಸಿದ ಕರ್ತವ್ಯಗಳ

**V. ನ್ಯಾಯಾಧೀಶರ ಇರಬೇಕಾದ ಅರ್ಹತೆ ಮತ್ತು ನೇಮಕಾತಿ ವಿಧಾನ:**

೧೪. ಒಕ್ಕೂಟಕ್ಕೆ ಸೇರ್ಪಡೆಗೊಳ್ಳಬಹುದಾದ ರಾಜ್ಯಗಳಿಂದಲೂ ಸಹ ವರಿಷ್ಠ ನ್ಯಾಯಾಲಯಗಳ ಸರ್ವೋಚ್ಚ ನ್ಯಾಯಾಲಯದ ಸ್ಥಾನ ತುಂಬಲು ಅರ್ಹರೆಂದು ನ್ಯಾಯಾಧೀಶರನ್ನು, ಕಂಡುಬರಬಹುದಾದ ಸಾಧ್ಯತೆಯನ್ನು ಮನಗಂಡು ೧೯೩೫ರ ಅಧಿನಿಯಮದಲ್ಲಿರುವಂತೆ ಒಕ್ಕೂಟ ನ್ಯಾಯಾಲಯದ ನ್ಯಾಯಾಧೀಶರು ಹೊಂದಿರುವ ಅರ್ಹತೆಯನ್ನೇ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಿಗೂ ಗೊತ್ತುಪಡಿಸಬಹುದು. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳನ್ನು ನೇಮಕ ಮಾಡುವ ಅಧಿಕಾರವನ್ನು ಒಕ್ಕೂಟದ ರಾಷ್ಟ್ರಪತಿಯ ಮುಕ್ತ ವಿವೇಚನೆಗೆ ಬಿಡುವುದು ಯುಕ್ತವಲ್ಲವೆಂಬುದು ನಮ್ಮ ಅಭಿಪ್ರಾಯವಾಗಿದೆ. ಈ ಮುಂದಿನ ಎರಡು ವಿಧಾನಗಳಲ್ಲಿ ಒಂದನ್ನು ಅಳವಡಿಸಿಕೊಳ್ಳಬೇಕೆಂದು ನಾವು ಶಿಫಾರಸ್ಸು ಮಾಡುತ್ತೇವೆ. ಅದರಲ್ಲಿ ಒಂದು ವಿಧಾನದ ಪ್ರಕಾರ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚನೆ ನಡೆಸಿ (ಇಲ್ಲಿಯವರೆಗೂ, ಇದು ಕಿರಿಯ ನ್ಯಾಯಾಧೀಶರ ನೇಮಕಕ್ಕೆ ಸಂಬಂಧಿಸಿತ್ತು) ರಾಷ್ಟ್ರಪತಿ ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಹರು ಎಂದು ಅವರು ಪರಿಗಣಿಸಿದ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು ಮತ್ತು ಆ ನಾಮನಿರ್ದೇಶನವನ್ನು ಸಂವಿಧಾನ ಘಟಕಗಳ ಉಚ್ಚ ನ್ಯಾಯಾಲಯಗಳ ಕೆಲವು ಮುಖ್ಯ ನ್ಯಾಯಾಧೀಶರುಗಳನ್ನು ಹಾಗೂ ಕೇಂದ್ರ ಶಾಸನ ಸಭೆಯ ಎರಡೂ ಸದನಗಳ ಸದಸ್ಯರು ಮತ್ತು ಒಕ್ಕೂಟದ ಕೆಲವು ಕಾನೂನು ಅಧಿಕಾರಿಗಳನ್ನು ಒಳಗೊಂಡ ೧೧ ಜನರ ತಂಡದ ಪೈಕಿ ಕನಿಷ್ಠ ೭ ಸದಸ್ಯರಬಹುಮತದಿಂದ ಅಂಗೀಕರಿಸತಕ್ಕದ್ದು. ಮತ್ತೊಂದು ವಿಧಾನವೆಂದರೆ, ೧೧ ಜನರ ತಂಡವು, ಮೂರು ಹೆಸರುಗಳನ್ನು ಶಿಫಾರಸ್ಸು ಮಾಡತಕ್ಕದ್ದು, ರಾಷ್ಟ್ರಪತಿಯವರು ಮುಖ್ಯ ನ್ಯಾಯಮೂರ್ತಿಯೊಂದಿಗೆ ಸಮಾಲೋಚಿಸಿ ಅವರಲ್ಲಿ ಒಬ್ಬರನ್ನು ನ್ಯಾಯಾಧೀಶರನ್ನಾಗಿ ನೇಮಕ ಮಾಡಲು ಆಯ್ಕೆ ಮಾಡಬಹುದು. ಮುಖ್ಯ ನ್ಯಾಯಾಧೀಶರ ನೇಮಕದಲ್ಲಿಯೂ ಸಹ ಇದೇ ಕ್ರಮವನ್ನು ಅನುಸರಿಸತಕ್ಕದ್ದು, ಆದರೆ, ಈ ಸಂದರ್ಭದಲ್ಲಿ ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚನೆ ನಡೆಸುವುದನ್ನು ಹೊರತುಪಡಿಸಿ, ಇದೇ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು. ಈ ತಂಡವು, ಸ್ವತಂತ್ರವಾದ ಮತ್ತು ಸಮಾದೇಶಕ ತಂಡ ಎಂದು ಎರಡೂ ಆಗಿರುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಲು, ತಂಡವನ್ನು ಒಂದು ತಾತ್ಪೂರ್ತಿಕ ಅಂಗವೆಂದು ಖಚಿತಪಡಿಸತಕ್ಕದ್ದಲ್ಲ. ಆದರೆ, ಅದನ್ನು ಒಂದು ನಿರ್ದಿಷ್ಟ ವರ್ಷಗಳ ಅವಧಿಗೆ ನೇಮಕ ಮಾಡಬೇಕು ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

**VI. ನ್ಯಾಯಾಧೀಶರ ಹುದ್ದೆಯ ಪದಾವಧಿ ಮತ್ತು ಸಾಮಾನ್ಯ ಸೇವೆಗಳು:**

೧೫. ಪ್ರಸ್ತುತ ಸಂವಿದಾನದ ಅಧಿನಿಯಮದಡಿಯಲ್ಲಿ ಒಕ್ಕೂಟ ನ್ಯಾಯಾಲಯದ ನ್ಯಾಯಾಧೀಶರ ಹುದ್ದೆಯ ಪದಾವಧಿಯೇ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಪದಾವಧಿಯೂ ಆಗಿರುವುದು ಮತ್ತು ಅವರ ನಿವೃತ್ತಿಯ ವಯಸ್ಸು ಕೂಡ ಒಂದೇ ಆಗಿರುತ್ತದೆ (೬೫). ಶಾಸನಬದ್ಧ ನಿಯಮಗಳ ಮೂಲಕ, ಅವರ ಸಂಬಳ ಹಾಗೂ ನಿವೃತ್ತಿ ವೇತನವನ್ನು ಒದಗಿಸಲಾಗುತ್ತದೆ. ರಾಷ್ಟ್ರದ ಅತ್ಯುನ್ನತ ನ್ಯಾಯಾಲಯದಲ್ಲಿ ತಾತ್ಕಾಲಿಕ ನ್ಯಾಯಾಧೀಶರನ್ನು ನೇಮಕ ಮಾಡುವುದು ಅನಪೇಕ್ಷಣೀಯ. ತಾತ್ಕಾಲಿಕ ನ್ಯಾಯಾಧೀಶರು ಇರುವ ಬದಲು, ಮುಖ್ಯ ನ್ಯಾಯಾಧೀಶರು ಅಥವಾ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರ ತಂಡವು, ಕೆಲವು ತಾತ್ಪೂರ್ತಿಕ ನ್ಯಾಯಾಧೀಶರು ಇರುವಂಥ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬಹುದು. ಇದಕ್ಕೆ ಸಂಬಂಧಿಸಿದಂತೆ, ಕೆನಡಿಯನ್ ಸರ್ವೋಚ್ಚ ನ್ಯಾಯಾಲಯ ಅಧಿನಿಯಮದ ೩೦ನೇ ಪ್ರಕರಣದಲ್ಲಿ ಒಳಗೊಂಡಿರುವ ಕೆನಡಾದ ಆಚರಣೆಯ ಬಗ್ಗೆ ಗಮನ ಸೆಳೆಯಲು ಇಚ್ಛಿಸುತ್ತೇವೆ. ಆ ಪ್ರಕರಣವು ಹೀಗಿದೆ:-

"**೩೦. ತಾತ್ಪೂರ್ತಿಕ ನ್ಯಾಯಾಧೀಶರ ನೇಮಕ.**--- ತೆರವಾಗಿರುವ ಸ್ಥಾನದ ಅಥವಾ ಸ್ಥಾನಗಳ ಕಾರಣದಿಂದಾಗಿ ಅಥವಾ ಅನಾರೋಗ್ಯದಿಂದಾಗಿ ಗೈರುಹಾಜರಾಗಿರುವ ಅಥವಾ ರಜೆಯ ಮೇಲೆ ತೆರಳಿರುವ ಅಥವಾ ಶಾಸನಾತ್ಮಕವಾಗಿ ಪರಿಷತ್ತಿನ ಆದೇಶದಂತೆ (ಆರ್ಡರ್ ಇನ್ ಕೌನ್ಸಿಲ್) ವಹಿಸಿದ ಕರ್ತವ್ಯಗಳ

ನಿರ್ವಹಣೆಯಲ್ಲಿ ನಿರತರಾಗಿರುವ ಕಾರಣದಿಂದಾಗಿ ಅಥವಾ ಒಬ್ಬರು ನ್ಯಾಯಾಧೀಶ ಅಥವಾ ನ್ಯಾಯಾಧೀಶರನ್ನು, ಅನರ್ಹಗೊಳಿಸಿದ ಕಾರಣದಿಂದ, ನ್ಯಾಯಾಲಯದ ಯಾವುದೇ ಅಧಿವೇಶನವನ್ನು ನಡೆಸಲು ಅಥವಾ ಮುಂದುವರೆಸಲು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಕೋರಂ ಲಭ್ಯವಿಲ್ಲದಿದ್ದ ಸಂದರ್ಭದಲ್ಲಿ, ಅಂದಿನ ಎಕ್ಸ್‌ಚಕರ್ ನ್ಯಾಯಾಲಯದ ನ್ಯಾಯಾಧೀಶರಿಗೆ ಅವಶ್ಯವಾದ ಅವಧಿಯವರೆಗೆ ಅಥವಾ ಮೇಲೆ ಹೇಳಿದ ನ್ಯಾಯಾಲಯದ ನ್ಯಾಯಾಧೀಶರು ಓಟ್ಟಾವಾದಿಂದ ಅನುಪಸ್ಥಿತರಾಗಿರುವವರೆಗೆ ಅಥವಾ ಮುಖ್ಯ ನ್ಯಾಯಾಧೀಶರಿಂದ ಬರವಣಿಗೆಯಲ್ಲಿ ಹೆಸರಿಸಿರುವ ಪ್ರಾಂತೀಯ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಯಾವುದೇ ಕಾರಣದಿಂದ ಉಪಸ್ಥಿತರಿರಲು ಅಸಮರ್ಥರಾಗಿದ್ದಾಗ ಅಥವಾ ಯಾವುದೇ ಕಾರ್ಯನಿರ್ವಹಣಾ ಮುಖ್ಯ ನ್ಯಾಯಾಧೀಶರ ಅಥವಾ ಅಂತಹ ಪ್ರಾಂತೀಯ ನ್ಯಾಯಾಲಯದ ಕಿರಿಯ ನ್ಯಾಯಾಧೀಶರ ಅನುಪಸ್ಥಿತಿಯಲ್ಲಿ ಅವರಿಗೆ ಸಲ್ಲಿಸಿದ ಕೋರಿಕೆಯ ಮೇರೆಗೆ, ಮುಖ್ಯ ನ್ಯಾಯಾಧೀಶರು ಅಥವಾ, ಮುಖ್ಯ ನ್ಯಾಯಾಧೀಶರ ಅನುಪಸ್ಥಿತಿಯಲ್ಲಿ, ಕಿರಿಯ ನ್ಯಾಯಾಧೀಶರು, ಅವರಿಗೆ ಈ ರೀತಿ ಬರಹದಲ್ಲಿ ಮಾಡಿದ ಕೋರಿಕೆಯ ಮೇರೆಗೆ, ನ್ಯಾಯಾಲಯದ ಸ್ಥಾನಗಳಲ್ಲಿ ತಾತ್ಪೂರ್ತಿಕ ನ್ಯಾಯಾಧೀಶರಾಗಿ ಹಾಜರಿರಲು ಕೋರಬಹುದು.

**೪. ಕರ್ತವ್ಯಗಳು.**—ಯಾವ ಸಮಯದಲ್ಲಿ ಮತ್ತು ಯಾವ ಅವಧಿಗಾಗಿ ಅವರ ಉಪಸ್ಥಿತಿಯನ್ನು ಅಗತ್ಯಪಡಿಸಲಾಗಿದೆಯೋ; ಹಾಗೂ ಸರ್ವೋಚ್ಚ ನ್ಯಾಯಾಲಯದ ಉಪವೇಶನಗಳಲ್ಲಿ ಉಪಸ್ಥಿತವಿರುವುದಕ್ಕೆ ಯಾರನ್ನು ತನ್ನ ಪದದ ಇತರ ಕರ್ತವ್ಯಗಳಿಗೆ ಆದ್ಯತೆ ನೀಡಿ ಹಾಗೆ ಪದಾಂಕಿತಗೊಳಿಸಲಾಗಿದೆಯೋ ಹಾಗೆ ಉಪಸ್ಥಿತರಿರುವುದು ಆ ನ್ಯಾಯಾಧೀಶರ ಕರ್ತವ್ಯವಾಗಿರತಕ್ಕದ್ದು, ಮತ್ತು ಆ ರೀತಿಯಾಗಿ ಉಪಸ್ಥಿತರಿರುವಾಗ, ಸರ್ವೋಚ್ಚ ನ್ಯಾಯಾಲಯದ ಕಿರಿಯ ನ್ಯಾಯಾಧೀಶರ ಅಧಿಕಾರಗಳ ಮತ್ತು ವಿಶೇಷ ಹಕ್ಕುಗಳನ್ನು ಹೊಂದಿರತಕ್ಕದ್ದು ಮತ್ತು ಅವರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು."

೧೬. ನಾವು ಮಾಡಿದ ಎಲ್ಲಾ ಶಿಫಾರಸ್ಸುಗಳು ಸಂವಿಧಾನ ಅಧಿನಿಯಮದಲ್ಲಿ ಅವಕಾಶ ಪಡೆಯುವ ಅಗತ್ಯವಿಲ್ಲ. ಪ್ರಮುಖ ಲಕ್ಷಣಗಳನ್ನು ಮತ್ತು ಒಕ್ಕೂಟ ಶಾಸನಸಭೆಯು ಅಂಗೀಕರಿಸಬೇಕಾದ ಪ್ರತ್ಯೇಕ ನ್ಯಾಯಾಂಗ ಅಧಿನಿಯಮದಲ್ಲಿ ವಿವರವಾದ ಉಪಬಂಧಗಳನ್ನು ಸಂವಿಧಾನ ಅಧಿನಿಯಮದಲ್ಲಿ ಅಳವಡಿಸಬಹುದು. ಸರ್ವೋಚ್ಚ ನ್ಯಾಯಾಲಯದ ಪ್ರಕ್ರಿಯೆಯ ಸ್ವರೂಪವನ್ನು, ಉದಾಹರಣೆಗೆ, ಮೂಲಭೂತ ಹಕ್ಕುಗಳ ಜಾರಿಗೊಳಿಸುವಿಕೆಯನ್ನೂ ಸಹ ನ್ಯಾಯಾಂಗ ಅಧಿನಿಯಮದಲ್ಲಿ ಒದಗಿಸಬಹುದಾಗಿದೆ. ಇಂಗ್ಲೆಂಡ್‌ನಲ್ಲಿ ೧೯೩೮ರ ಶಾಸನದ ಮೂಲಕ ಮ್ಯಾಂಡಮಸ್, ಪ್ರೊಹಿಬಿಷನ್ ಮತ್ತು ಸರ್ಷಿಯಾರರೈಗಳಂಥ ವಿಶಿಷ್ಟಾಧಿಕಾರದ ರಿಟ್‌ಗಳನ್ನು ನಾವು ಎತ್ತಿ ತೋರಿಸಬಹುದಾಗಿದೆ. ಸಂವಾದಿ ಅಧಿಕಾರಗಳನ್ನು ಬದಲಾಯಿಸಲಾಗಿದೆ ಹಾಗೂ ಅಂಥ ಆದೇಶಗಳನ್ನು (ನ್ಯಾಯಾಡಳಿತದ ಇತರೆ ಉಪಬಂಧಗಳು) ಅಧಿನಿಯಮ, ೧೯೩೮ರ ೭-೧೦ನೇ ಪ್ರಕರಣವನ್ನು ನೋಡಿ) ಕೋರಿರುವ ಪ್ರಕರಣಗಳಲ್ಲಿ ಪ್ರಕ್ರಿಯೆಯನ್ನು ನಿಯಮಿಸುವ ನ್ಯಾಯಾಲಯದ ನಿಯಮಗಳನ್ನು ರಚಿಸಲು, ನ್ಯಾಯಾಂಗದ ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರ ನೀಡಲಾಗಿದೆ.

೧೭) ಪರಿಶೀಲನಾಂಶಗಳು ಕೇವಲ ಸಂವಿಧಾನ ಮತ್ತು ಸರ್ವೋಚ್ಚ ನ್ಯಾಯಾಲಯದ ಅಧಿಕಾರಗಳಿಗೆ ಸಂಬಂಧಿಸಿವೆ ಎಂಬುದು ನಮಗೆ ತಿಳಿದಿದೆ. ಆದ್ದರಿಂದ, ಸರ್ವೋಚ್ಚ ನ್ಯಾಯಾಲಯಕ್ಕೆ ಸಂಬಂಧಿಸಿದಂತೆ ನಮ್ಮ ಕೆಲವು ಸಲಹೆಗಳಲ್ಲಿ ನಾವು ಪ್ರಾಸಂಗಿಕವಾಗಿ ಘಟಕಗಳ ಉಚ್ಚ ನ್ಯಾಯಾಲಯಗಳನ್ನು ಉಲ್ಲೇಖಿಸಿದ್ದರೂ, ಅವುಗಳ ಬಗ್ಗೆ ನಾವು ಏನನ್ನು ಪ್ರಸ್ತಾಪಿಸಿರುವುದಿಲ್ಲ.

೧. ಎಸ್. ವರದಾಚಾರಿಯರ್.

೨. ಎ. ಕೃಷ್ಣಸ್ವಾಮಿ ಅಯ್ಯರ್.

೩. ಬಿ.ಎಲ್. ಮಿಟ್ಟರ್.

೪. ಕೆ.ಎಮ್. ಮುನ್ಷಿ
೫. ಬಿ.ಎನ್. ರಾವ್
ನವದೆಹಲಿ ೨೧ನೇ ಮೇ, ೧೯೪೭.

ರಹಸ್ಯ

**ಅನುಬಂಧ– 'ಬಿ'**

**ಸಂಖ್ಯೆ: ಸಿಎ/೬೩/ಸಂವಿಧಾನ/೪೭**

**ಭಾರತದ ಸಂವಿಧಾನ ರಚನಾ ಸಭೆ**

ಪರಿಷತ್ ಭವನ,
ದೆಹಲಿ, ೧೩ನೇ ಜುಲೈ ೧೯೪೭.

**ಇವರಿಂದ**
**ಪಂಡಿತ್ ಜವಾಹರಲಾಲ್ ನೆಹರು,**
ಅಧ್ಯಕ್ಷರು, ಒಕ್ಕೂಟ ಸಂವಿಧಾನ ಸಮಿತಿ.

**ಇವರಿಗೆ,**
ಅಧ್ಯಕ್ಷರು,
ಭಾರತ ಸಂವಿಧಾನ ರಚನಾ ಸಭೆ.

ಮಾನ್ಯರೆ,

೧. ೩೦ನೇ ಏಪ್ರಿಲ್ ೧೯೪೭ರ ಸಂವಿಧಾನ ರಚನಾ ಸಭೆಯ ನಿರ್ಣಯದ ಅನುಸಾರ ನೀವು ನೇಮಿಸಿದ ಸಮಿತಿಯ ಸದಸ್ಯರ ಪರವಾಗಿ, ಸಮಿತಿಯ ಶಿಫಾರಸ್ಸುಗಳನ್ನು ಒಳಗೊಂಡಿರುವ ಜ್ಞಾಪನ ಪತ್ರವನ್ನು ನಾನು ಸಲ್ಲಿಸಿದ್ದೇನೆ.

೨. ಸಮಿತಿಯು ಮತ್ತೊಮ್ಮೆ ೧೨ನೇ ಜುಲೈ ೧೯೪೭ರಂದು ಸಭೆ ಸೇರಿತ್ತು ಹಾಗೂ ಸದರಿ ಜ್ಞಾಪನ ಪತ್ರದಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಲು ನಿರ್ಧರಿಸಿತು. ಈ ಶಿಫಾರಸ್ಸುಗಳನ್ನು ಒಳಗೊಂಡಿರುವ ಪೂರಕ ವರದಿಯನ್ನು ಸಲ್ಲಿಸುವ ಗೌರವಕ್ಕೆ ನಾನು ಪಾತ್ರನಾಗಿದ್ದೇನೆ.

೩. ಯಾವುದೇ ಘಟಕದ ಹೆಸರನ್ನು ಬದಲಾಯಿಸಲು ಸಂಯುಕ್ತ ಸಂಸತ್ತಿಗೆ ಅಧಿಕಾರ ನೀಡುವ ಜ್ಞಾಪನಪತ್ರದ ೩ನೇ ಖಂಡವು, ಈ ಮುಂದಿನ ಹೆಚ್ಚಿನ ಉಪಖಂಡವನ್ನು ಒಳಗೊಳ್ಳಬೇಕು ಎಂಬುದು ಸಮಿತಿಯ ಅಭಿಪ್ರಾಯ. ಎಂದರೆ,–

"(ಇ) ಯಾವುದೇ ಘಟಕದ ಹೆಸರನ್ನು ಬದಲಾಯಿಸುವುದು."

೪. ರಾಜ್ಯಸಭೆಯ ಒಬ್ಬ ಸದಸ್ಯನು ಉಪರಾಷ್ಟ್ರಪತಿಯಾಗಿ ಚುನಾಯಿತನಾದರೆ, ಅಂತಹ ಸದಸ್ಯನು ತನ್ನ ಸ್ಥಾನವನ್ನು ತೆರವುಗೊಳಿಸಬೇಕು ಎಂಬುದನ್ನು ಸ್ಪಷ್ಟಪಡಿಸಲು ಜ್ಞಾಪನ ಪತ್ರದ IVನೇ ಭಾಗದ ೧ನೇ ಅಧ್ಯಾಯದ ೬ನೇ ಖಂಡದ (೨೧)ನೇ ಉಪಖಂಡಕ್ಕೆ ಈ ಮುಂದಿನವುಗಳನ್ನು ಸೇರಿಸತಕ್ಕದ್ದು ಎಂಬುದು ಸಮಿತಿಯ ಅಭಿಪ್ರಾಯವಾಗಿದೆ, ಅವುಗಳೆಂದರೆ:

"ಹಾಗೂ ಸಂಯುಕ್ತ ಸಂಸತ್ತಿನ ಒಬ್ಬ ಸದಸ್ಯನು ಉಪರಾಷ್ಟ್ರಪತಿಯಾಗಿ ಚುನಾಯಿತರಾದರೆ, ಅಂತಹ ಸದಸ್ಯತ್ವದ ಸ್ಥಾನವನ್ನು ಅವರು ತೆರವುಗೊಳಿಸತಕ್ಕದ್ದು."

೫. ಭಾರತೀಯ ಸಂವಿಧಾನ ಕುರಿತಾದ ಜ್ಞಾಪನಪತ್ರದ Xನೇ ಭಾಗಕ್ಕೆ ಬದಲಾಗಿ ಮುಂದಿನ ಭಾಗವನ್ನು ಪ್ರಸ್ಥಾಪಿಸತಕ್ಕದ್ದು ಎಂಬುದು ಸಹ ಸಮಿತಿಯ ಅಭಿಪ್ರಾಯವಾಗಿದೆ:—

## ಭಾಗ – X
## ಸಂವಿಧಾನದ ತಿದ್ದುಪಡಿ

ಸಂವಿಧಾನಕ್ಕೆ ತಿದ್ದುಪಡಿಯನ್ನು ಒಕ್ಕೂಟ ಸಂಸತ್ತಿನ ಯಾವುದೇ ಸದನದಲ್ಲಿ ಪ್ರಾರಂಭಿಸಬಹುದು ಮತ್ತು ಪ್ರತಿಯೊಂದು ಸದನದಲ್ಲಿ ಆ ಸದನದ ಒಟ್ಟು ಸದಸ್ಯರ ಬಹುಮತದಿಂದ ಹಾಗೂ ಆ ಸದನದಲ್ಲಿ ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಮೂರನೇ ಎರಡರಷ್ಟಕ್ಕೆ ಕಡಿಮೆ ಇರದಷ್ಟು ಸದಸ್ಯರು ತಿದ್ದುಪಡಿಯನ್ನು ಅಂಗೀಕರಿಸಿದರೆ, ಅದನ್ನು ರಾಷ್ಟ್ರಪತಿಯವರ ಸಮ್ಮತಿಗಾಗಿ ಮಂಡಿಸತಕ್ಕದ್ದು; ಮತ್ತು ಆ ರೀತಿಯಾಗಿ ನೀಡಿದ ಸಮ್ಮತಿಯ ಮೇರೆಗೆ ತಿದ್ದುಪಡಿಯು ಜಾರಿಗೆ ಬರತಕ್ಕದ್ದು.

ಪರಂತು, ಅಂಥ ತಿದ್ದುಪಡಿಯು, ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗೆ ಸಂಬಂಧಿಸಿದಂತೆ ಸಂವಿಧಾನದ ಯಾವುದೇ ಉಪಬಂಧಕ್ಕೆ ಎಂದರೆ,–

(ಎ) ಒಕ್ಕೂಟ ವಿಧಾಯೀ ಪಟ್ಟಿಯ ಯಾವುದೇ ಬದಲಾವಣೆಗೆ;

(ಬಿ) ಒಕ್ಕೂಟ ಸಂಸತ್ತಿನಲ್ಲಿನ ಘಟಕಗಳ ಪ್ರಾತಿನಿಧ್ಯಕ್ಕೆ; ಮತ್ತು

(ಸಿ) ಸರ್ವೋಚ್ಚ ನ್ಯಾಯಾಲಯದ ಅಧಿಕಾರಗಳಿಗೆ.

– ಸಂಬಂಧಪಟ್ಟಿದ್ದರೆ, ಒಕ್ಕೂಟ ರಾಜ್ಯಗಳ ಜನಸಂಖ್ಯೆಯ ಕನಿಷ್ಠ ಮೂರನೇ ಒಂದರಷ್ಟನ್ನು ಪ್ರತಿನಿಧಿಸುವ ಘಟಕಗಳನ್ನು ಹೊಂದಿರುವ, ಒಕ್ಕೂಟದ ಎಲ್ಲ ಘಟಕಗಳ ಜನಸಂಖ್ಯೆಯ ಬಹುಮತದ ಪ್ರಾತಿನಿಧ್ಯವಿರುವ ಘಟಕಗಳ ವಿಧಾನಮಂಡಲಗಳಿಂದ ಅನುಸಮರ್ಥನೆಗೊಳ್ಳುವ ಅವಶ್ಯಕತೆ ಇರುತ್ತದೆ.

**ವಿವರಣೆ:**– ಈ ಖಂಡದಲ್ಲಿರುವ "ಘಟಕ" ಎಂಬ ಪದಕ್ಕೆ, IVನೇ ಭಾಗದ ೧೪ನೇ ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವೇ ಇರತಕ್ಕದ್ದು. ಒಂದು ಘಟಕವು ರಾಜ್ಯಗಳ ಗುಂಪನ್ನು ಹೊಂದಿರುವಲ್ಲಿ, ಪ್ರಸ್ತಾವಿತ ತಿದ್ದುಪಡಿಯನ್ನು, ಆ ಗುಂಪಿನಲ್ಲಿರುವ ರಾಜ್ಯಗಳ ವಿಧಾನಮಂಡಲಗಳ ಬಹುಮತದಿಂದ ಅದನ್ನು ಅನುಸಮರ್ಥಿಸಲಾಗಿದ್ದರೆ, ಆ ಘಟಕದ ವಿಧಾನಮಂಡಲದಲ್ಲೂ ಅನುಸಮರ್ಥಿಸಲಾಗಿದೆ ಎಂದು ಭಾವಿಸತಕ್ಕದ್ದು."

ನಿಮ್ಮ ನಂಬುಗೆಯ,

**ಜವಾಹರಲಾಲ್ ನೆಹರು**